ಸಂವಾದ

ನವೆಂಬರ್ ೨೦೦೪
ರೂ. ೧೦



ಕಿಶನ್ ನೆನಪು

ಣಿಪುರದ ೋಲಾಹಲ

ಅಕ್ಷರವಾಗದ ಆತ್ಮಕಥಾನಕ

ಸಂವಾದ
ಮಾಸ ಪತ್ರಿಕೆ

ಸಂಪುಟ ೩   ಸಂಚಿಕೆ ೧
ನವೆಂಬರ್ ೨೦೦೪

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮ
ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು - ೫೬೦ ೦೯೧
✆ ೨೩೨೮೭೯೪೩ / ೯೪೪೮೦ ೪೮೩೦೬

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306

EDITOR :
INDUDHARA HONNAPURA

ಒಳಪುಟಗಳಲ್ಲಿ...

❑ ಪತ್ರಗಳು ೩
❑ ಮೇರಾ ಭಾರತ್ ಮಹಾನ್ ೪
❑ ಅಂತರಂಗ ೫
❑ ಮಣಿಪುರದ ಕೋಲಾಹಲ ೬
○ ಸುಜಾತ ಕುಮಟಾ
❑ ಝುನ್ ಝುಲಕ್ ೯
○ ಕೆ.ವಿ. ಸುಬ್ಬಣ್ಣ
❑ ಮಹಿಳಾ ರಾಜಕಾರಣದ ಅಮೂರ್ತತೆ ೧೦
○ ಡಾ|| ಶೈಲಜ ಹಿರೇಮಠ

❑ ಸಮಾಜವಾದಿ ಜಂಗಮ ಕಿಶನ್ ಪಟ್ನಾಯಕ್ ೧೪
○ ಪ್ರೊ|| ರವಿವರ್ಮಕುಮಾರ್
❑ ಭಯೋತ್ಪಾದನೆಯ ನಡುವೆ
ಬರಗೂರರ ಶಾಂತಿ... ೨೦
○ ಡಾ|| ಎಚ್.ಎಲ್. ಪುಷ್ಪ
❑ ಅಕ್ಷರವಾಗದ ಆತ್ಮಕಥಾನಕ ೨೮
○ ಡಾ|| ಕಾ.ವೆಂ. ಶ್ರೀನಿವಾಸಮೂರ್ತಿ

೨೨
ಚರ್ಚೆ
ಪರ್ಯಾಯ ರಾಜಕಾರಣ

1. ಪ್ರೊ|| ರವೀಂದ್ರ ರೇಶ್ಮೆ
2. ಕೋ. ಚೆನ್ನಬಸಪ್ಪ
3. ಡಿ.ಎಸ್. ನಾಗಭೂಷಣ
4. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು
5. ಜಂಬಣ್ಣ ಅಮರಚಿಂತ
6. ಮೋಹನ ನಾಗಮ್ಮನವರ
7. ಪ್ರೊ|| ಟಿ.ಎಸ್. ಲೋಹಿತಾಶ್ವ

❑ ಪೌರ ಕಾರ್ಮಿಕರ ಜಾಗತಿಕ ಗುತ್ತಿಗೆ ಯಾರಿಗೆ? ೩೨
○ ಅನು : ಡಿ.ಡೊಮಿನಿಕ್
❑ ದಲಿತ್ ಡೈರಿ :
ಸುದ್ದಿ ಕೊಠಡಿಗಳೆಂಬ ಪುರೋಹಿತರ ಅಡ್ಡೆಗಳು ೩೬
○ ಚಂದ್ರಭಾನ್ ಪ್ರಸಾದ್
❑ ಬಿಜೆಪಿ ಹಿಂದುತ್ವದಿಂದ
ದೂರ ಸರಿಯುತ್ತಿದೆಯೇ ? ೪೦
○ ಡಿ.ಎಂ. ಚಿಣ್ಣಪ್ಪ
❑ ಹೊಸ ಪುಸ್ತಕ ೪೧
❑ ವಿವೇಕಾನಂದರ ವಿಚಾರಗಳು ೪೨
○ ಜ.ಹೊ. ನಾರಾಯಣಸ್ವಾಮಿ

ಕವನಗಳು : ❑ ನಿರೀಕ್ಷೆ - ೮
❑ ನಡುರಸ್ತೆಯಲಿ ನಿಂತಿದೆ ಮಗು - ೨೭
❑ ಶರಣು ಶರಣೆನ್ನಿ - ೧೯
❑ ಕುಲಕದಿರು - ೩೧

ಮುಖಪುಟ ಕಲೆ: ಜಾನ್ ದೇವರಾಜ್ ವಿನ್ಯಾಸ: ರಾಥೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಗಾಂಧಿ; ಗ್ರಾಮ ಸಮಾಜದ ಗುಗ್ಗುವೇ?

ದಿವಂಗತ ಡಿ.ಆರ್. ನಾಗರಾಜ್ ಅವರು ಹಿಂದೆ ಬರೆದಿದ್ದ('೪೭ರ ಸ್ವಾತಂತ್ರ್ಯ : ಎರಡು ಸ್ವರ್ಗೀಯ ಸ್ವಗತಗಳು' ಎಂಬ ಶೀರ್ಷಿಕೆಯಲ್ಲಿ ಬರೆದಿದ್ದ) ಲೇಖನವೊಂದನ್ನು ನಿಮ್ಮ ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟಿಸಿದ್ದೀರಿ.

'ಗಾಂಧಿ ನಿಜವಾಗಿಯೂ ಶುದ್ಧ ಗ್ರಾಮ ಸಮಾಜದ ಗುಗ್ಗು ಎಂದು ಕಾಂಗ್ರೆಸ್, ಜನತಾದಳ, ಕಮ್ಯುನಿಸ್ಟ್, ಬಿಜೆಪಿಗಳಿಗೆ ಈಗ ಅರ್ಥವಾಗಿದೆ, ಮಿಸ್ಟರ್ ಗಾಂಧಿಯನ್ನು ತಾವು ಹೂತು ಹಾಕಿದ್ದೇವೆ ಎಂದು ಸಾರ್ವಜನಿಕವಾಗಿ ಘೋಷಿಸುವ ಧೈರ್ಯ ಅವಕ್ಕಿಲ್ಲ' ಎಂಬ ತಮ್ಮ ಅನಿಸಿಕೆಯನ್ನು ಡಿ.ಆರ್. ನಾಗರಾಜ್ ಈ ಲೇಖನದಲ್ಲಿ ಅಂಬೇಡ್ಕರ್ ಅವರ ಬಾಯಲ್ಲಿ ಆಡಿಸಿದ್ದಾರೆ.

'ಡಿ.ಆರ್.ನಾಗರಾಜ್ ಅವರು ಈ ಲೇಖನ ಬರೆದ ಕಾಲದಲ್ಲಿ ಗಾಂಧೀಜಿಯ ಬಗೆಗೆ ಇದೇ ಭಾವನೆಯನ್ನು ಹೊಂದಿದ್ದರು. ಕಾಲಕ್ರಮೇಣ ಅವರು ಗಾಂಧೀಜಿ ಬಗೆಗಿನ ಅಭಿಪ್ರಾಯಗಳನ್ನು ಬದಲಾಯಿಸಿಕೊಂಡಿದ್ದು ಅವರ ಮುಂದಿನ ದಿನಗಳ ಲೇಖನಗಳನ್ನು ಅವಲೋಕಿಸಿದಾಗ ಗೊತ್ತಾಗುತ್ತದೆ' ಎಂದು ಪ್ರೊ|| ಜಿ. ರಾಮಕೃಷ್ಣ ಅವರು ನನಗೆ ತಿಳಿಸಿದ್ದಾರೆ.

ಇನ್ನು ರಾಜಕೀಯ ಪಕ್ಷಗಳ ವಿಚಾರ. ಎಲ್ಲ ರಾಜಕೀಯ ಪಕ್ಷಗಳೂ ಗಾಂಧೀಜಿಯ ವಿಚಾರಗಳನ್ನು ಗಾಳಿಗೆ ತೂರಿವೆ; ಅವರ ವಿಚಾರಗಳನ್ನು ಹೂತು ಹಾಕಿವೆ ಎಂಬುದು ಸತ್ಯಸಂಗತಿ. ಪ್ರಾಮಾಣಿಕವಾಗಿ ಹೇಳಬೇಕಾದರೆ ಗಾಂಧಿ ವಿಚಾರ, ತತ್ವಗಳನ್ನು ಬಿಜೆಪಿ ಎಂದೂ ಅಂಗೀಕರಿಸಿದ್ದಿಲ್ಲ. ಕಮ್ಯುನಿಸ್ಟ್ ಪಕ್ಷ ತನ್ನದೇ ಸಿದ್ಧಾಂತಗಳನ್ನು ರೂಪಿಸಿಕೊಂಡಿರುವುದರಿಂದ ಅವರಿಗೂ ಗಾಂಧಿ ತತ್ವಗಳ ಬಗೆಗೆ ವಿಶ್ವಾಸವಿಲ್ಲವೆಂಬುದು ನಿಜ. ಆದರೆ ಕಮ್ಯುನಿಸ್ಟ್ ಸಿದ್ಧಾಂತದಲ್ಲಿ ಬಡತನ, ನಿರುದ್ಯೋಗ, ಶೋಷಣೆ, ಮತಾಂಧತೆ, ಆರ್ಥಿಕ ಸಾಮಾಜಿಕ ಅಸಮಾನತೆ ಇವುಗಳನ್ನು ಸಮಾಜದಿಂದ ಉಚ್ಚಾಟನೆ ಮಾಡಬೇಕೆಂಬ ಬಗೆಗೆ ಕಾತರತೆ ಇದೆ. ಇದನ್ನು ಸಾಧನೆ ಮಾಡುವ ಮಾರ್ಗದ ಬಗೆಗೆ ಗಾಂಧಿ ಸಿದ್ಧಾಂತ ಕಮ್ಯುನಿಸ್ಟ್ ಸಿದ್ಧಾಂತಗಳಿಗೆ ಭಿನ್ನತೆಗಳಿರಬಹುದಾದರೂ, ಈ ಮೂಲಭೂತ ಸಮಸ್ಯೆಗಳನ್ನು ಆದ್ಯತೆಯ ಮೇಲೆ ತೊಡೆದುಹಾಕಬೇಕೆಂಬುದರಲ್ಲಿ ಇವರಲ್ಲಿ ಭಿನ್ನಾಭಿಪ್ರಾಯ ಇಲ್ಲವೇ ಇಲ್ಲ.

ಆದರೆ ಡಿ.ಆರ್.ಎನ್ ಹೇಳಿರುವಂತೆ ಗಾಂಧೀಜಿ ಹಳ್ಳಿ ಗುಗ್ಗು ಎಂದು ಘೋಷಿಸುವ ದಾರ್ಷ್ಟ್ಯವನ್ನು ಕಾಂಗ್ರೆಸ್ಸೇ ಆಗಲಿ, ಜನತಾದಳವಾಗಲಿ ಖಂಡಿತ ಘೋಷಿಸುವ ಪಾಷಂಡಿತನವನ್ನು ತೋರಲಾರರು. ಗಾಂಧೀಜಿ ಅವರ, ಗ್ರಾಮೀಣ ಜನರ ಬಗೆಗಿನ ಕಾಳಜಿ ಅಪ್ಪಿಷ್ಟಲ್ಲ. ಭಾರತದ ಜನಸಂಖ್ಯೆಯ ಶೇ ೭೦-೮೦ ಜನ ಗ್ರಾಮೀಣ ವಾಸಿಗಳಾಗಿರುವುದರಿಂದ ಅವರ ಸಮಸ್ಯೆಗಳನ್ನು ಬಗೆಹರಿಸುವಿರಾದರೆ ಉಳಿದವರ ಸಮಸ್ಯೆಗಳನ್ನು ಬಗೆಹರಿಸುವುದು ಕಷ್ಟವಾಗದು ಎಂಬುದು ಅವರ ಅಭಿಪ್ರಾಯವಾಗಿತ್ತು. ಅವರ ಈ ಗ್ರಾಮೀಣ ಜನಪರವಾದ ಕಾಳಜಿಯನ್ನು, ಅವರ ಗುಗ್ಗೂತನ ಎಂದು ವಿಶ್ಲೇಷಿಸುವವರಿಗೆ ತಲೆ ಇದೆಯೇ ಎಂದು ಕೇಳಬೇಕಾದೀತು.

ಹಿಂದೊಮ್ಮೆ Illustrated weekly ಯಲ್ಲಿ ಹಾಸನದ ರಾಜಾರಾಯರು, ಕಾರಂತರನ್ನು ಕುರಿತು ಬರೆದ ಲೇಖನದಲ್ಲಿ 'Karant is no novelist' ಎಂದು ಅಪ್ಪಣೆ ಕೊಡಿಸಿದ್ದರು. ಈ ಪ್ರಸುತ್ತ ಲೇಖನದಲ್ಲಿ ಗಾಂಧೀಜಿಯನ್ನು ದಿವಂಗತ ಡಿ.ಆರ್. ಎನ್ ಹಳ್ಳಿ ಗುಗ್ಗು ಎಂದಿದ್ದಾರೆ. ವಿದ್ಯಾವಂತರು, ಚಿಂತನಪರರು ಎಂಬುವವರ ಹುಚ್ಚಾಟದ ಗೀಳು ಇದು. ಎಲ್ಲರೂ ಒಪ್ಪಿಕೊಂಡಿರುವ ದೊಡ್ಡವರನ್ನು, ಸಣ್ಣವರು ಎಂದು ಹೇಳಿ ಸಮಾಜದ ಪ್ರತಿಷ್ಠಿತರ ಗಮನವನ್ನೇ ತಮ್ಮ ಕಡೆಗೆ ಸೆಳೆದುಕೊಳ್ಳುವ ಅಲ್ಪತನ ಈ ಬಗೆಯ ಕಸರತ್ತಿನಲ್ಲಿ ಕಾಣುತ್ತದೆ. ಇದರಿಂದ ಜಗದ್ವಂದ್ಯರಾದ ಗಾಂಧೀಜಿಯಾಗಲಿ, · ಕಾರಂತರಾಗಲಿ ಅವರಿಗಿರುವ ಘನತೆಗೌರವಗಳಾಗಲೀ ಕುಗ್ಗುವುದಿಲ್ಲ. ಈ ರೀತಿ ಬರೆಯುವವರ ಅಪಕ್ವತೆಯನ್ನು ಅದು ಪ್ರದರ್ಶಿಸುತ್ತದೆ ಅಷ್ಟೆ.

ಎಚ್.ಎಸ್.ದೊರೆಸ್ವಾಮಿ, ಬೆಂಗಳೂರು

ಪತ್ರಾಗಾರ

ನಿರ್ಗತಿಕರ ಪರ ಶಕ್ತಿ 'ಸಂವಾದ'

ಗೌರವಾನ್ವಿತ 'ಸಂವಾದ' ಮಾಸ ಪತ್ರಿಕೆಯ ಸಂಪಾದಕರಾದ ತಮಗೆ ಯುವ ಕವಿಯ ತುಂಬು ಹೃದಯದ ನಮನಗಳು.

ಆತ್ಮೀಯರೇ 'ಸಂವಾದ' ಪತ್ರಿಕೆಯನ್ನು ನೋಡಲು ನಿರೀಕ್ಷೆಯಲ್ಲಿದ್ದ ನನಗೆ ಪತ್ರಿಕೆ ಓದಿದ ಮೇಲೆ ಮನಸ್ಸಿಗೆ ಸ್ವಲ್ಪ ನೆಮ್ಮದಿ ಸಿಕ್ಕಿತು. ಸೆಪ್ಟೆಂಬರ್ ತಿಂಗಳಲ್ಲಿ 'ಮೀಸಲಾತಿಯಿಂದ ಸರ್ಕಾರಿ ಆಡಳಿತದಲ್ಲಿ ದಕ್ಷತೆ ಕಡಿಮೆಯಾಗುತ್ತಿದೆಯೇ' ಎಂಬ ಲೇಖನ ತುಂಬ ಅರ್ಥಗರ್ಭಿತವಾಗಿದೆ. ಮೀಸಲಾತಿಯಿಂದ ಪ್ರತಿಭೆ ಹಾಳಾಗುತ್ತದೆ ಎಂದು ಬೊಬ್ಬೆ ಹೊಡೆಯುವ ನಾರಾಯಣಮೂರ್ತಿಗೆ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಬೇಕಾಗಿದೆ.

ಈ ನಿಟ್ಟಿನಲ್ಲಿ ತಾವು ನೀಡುತ್ತಿರುವ 'ಸಂವಾದ' ಮಾಸಪತ್ರಿಕೆ ಸಮಾಜದಲ್ಲಿರುವ ನೂರಾರು ನಿರ್ಗತಿಕರ ಪರ ಶಕ್ತಿಯಾಗಿ ಬೆಳೆಯಲಿ ಎಂದು ಆಶಿಸುವೆ.

ಕಾಗತಿ. ಪಿ. ನಾಗರಾಜಪ್ಪ, ಚಿಂತಾಮಣಿ

ವಿಚಾರವೋ? ಬುಲೆಟ್ಟೋ?

ಸ್ವಾಮಿ ವಿವೇಕಾನಂದರು ಈಗಲೂ ಪ್ರಸುತ್ತರು. ಅವರ ನುಡಿಗಳೆಲ್ಲವೂ ಬಂದೂಕಿನಿಂದ ಚಿಮ್ಮುವ ಬುಲೆಟ್‌ಗಳಿದ್ದಂತೆ. ಅವರ ಒಂದೊಂದೂ ಮಾತೂ ಮಹಾಕ್ರಾಂತಿಯನ್ನೇ ಉಂಟುಮಾಡುವಂತಿರುತ್ತವೆ.

ಈ ಬಾರಿ 'ಸಂವಾದ'ದಲ್ಲಿ ಪ್ರಕಟವಾದ 'ಕೆಲಸಕ್ಕೆ ಬಾರದ ವಿಶ್ವವಿದ್ಯಾಲಯ' ನಮ್ಮ ಶಿಕ್ಷಣಕ್ಕೆ ಹಿಡಿದ ಕನ್ನಡಿಯಾಗಿದೆ.

ಜಗನ್ನಾಥ, ಕಾರವಾರ



ಹಿಂಸೆಗೆ ಪ್ರೇರೇಪಿಸುವ ಧರ್ಮ ಧರ್ಮವೇ ?

ಮಾನ್ಯರೇ,

ಹಿಂಸೆಯನ್ನು ಪ್ರೇರೇಪಿಸುವ ಧರ್ಮ ಧರ್ಮವೇ ಅಲ್ಲ. ಕ್ರೂರಿಯನ್ನೂ ಸಾಧುವನ್ನಾಗಿ ಪರಿವರ್ತಿಸುವ ಧರ್ಮವೇ ನಿಜವಾದ ಧರ್ಮ. ಕುರುಕ್ಷೇತ್ರ ಯುದ್ಧದಲ್ಲಿ ಕೃಷ್ಣ ಅರ್ಜುನನನ್ನು ಯುದ್ಧ ಮಾಡಲು ಪ್ರೇರೇಪಿಸಿದ್ದು ಹಿಂಸೆಗೆ ನೀಡಿದ ಪ್ರಚೋದನೆಯೇ ಹೊರತು ಮತ್ತೇನೂ ಅಲ್ಲ.

ಪದ್ಮಾಲಯ ನಾಗರಾಜರ 'ಭಗವದ್ಗೀತೆ : ಕೆಲವು ಪ್ರಶ್ನೆಗಳು' ಲೇಖನದ ಸಾರವು ಸರ್ವಕಾಲಿಕ ಸತ್ಯ.

ರತ್ನ ಕೆ.ವಿ., ಬೆಂಗಳೂರು

ಭಾಷಾಂಧತೆ = ಧರ್ಮಾಂದತೆ

ಮಾನ್ಯ ಸಂಪಾದಕರೇ,

ಬಿ.ಕನಕರಾಜು ಅವರು ಬರೆದಿರುವ 'ಭಾಷೆ ಹಾಗೂ ಸಮಾಜ, ಕಾವೇರಿ ಹೋರಾಟದ ಹಿನ್ನೆಲೆಯಲ್ಲಿ' ಲೇಖನ ತುಂಬ ಚೆನ್ನಾಗಿತ್ತು.

'ಧರ್ಮದ ಹೆಸರಿನಲ್ಲಿ ಗಲಭೆಯೆಬ್ಬಿಸಿ ಜನರನ್ನು ಮೂಲಭೂತ ಸಮಸ್ಯೆಗಳತ್ತ ಗಮನಹರಿಸಬಿಡದೆ ಹೊಸ ಸಮಸ್ಯೆಯೊಂದನ್ನು ಸೃಷ್ಟಿಸುವುದು ಧಾರ್ಮಿಕ ಮೂಲಭೂತವಾದಿಗಳ ಅಜೆಂಡ. ಅದನ್ನೇ ನಮ್ಮ ಭಾಷಾಂಧರೂ ಮಾಡುತ್ತಿರುವುದು' ಎಂಬ ಲೇಖಕರ ಮಾತು ವಾಸ್ತವವನ್ನು ಎತ್ತಿ ತೋರಿಸುತ್ತದೆ.

ಕಾವೇರಿ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಕೊಳ್ಳದೆ ಕೆಲವು 'ಹೋರಾಟಗಾರರು' ಹೋರಾಟದ ನೆಪದಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವುದು ತೀರಾ ಶೋಚನೀಯ ಸಂಗತಿ. ಎಲ್ಲಿಯವರೆಗೂ ಇಂತಹವರಿರುತ್ತಾರೋ ಅಲ್ಲಿಯವರೆಗೆ ಸಮಸ್ಯೆಗಳು ಬಗೆಹರಿಯುವುದಿಲ್ಲ. ಆದ್ದರಿಂದ ಮೊದಲು ಇಂತಹವರನ್ನು ಗುರುತಿಸಿ, ತಕ್ಕ ಪಾಠ ಕಲಿಸಬೇಕಾಗಿದೆ.

ರಂಗಸ್ವಾಮಿ, ಮಂಡ್ಯ

ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ. ೧೦೦/-	ರೂ. ೩೦೦/-	ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ. ೨೦೦/-	ರೂ. ೫೦೦/-	ರೂ. ೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ. ೨೪೦/-	ರೂ. ೬೦೦/-	ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಅಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಒ. /ಡಿ.ಡಿ. ಮಾತ್ರ ಕಳುಹಿಸಬೇಕು.

ದನಿಯಿಲ್ಲದ ದಲಿತರ ಒಳ ಬೇಗುದಿ !

ಬೆದರಿಕೆಯ ತೂಗುಗತ್ತಿಯಡಿ ಕಸವನಹಳ್ಳಿ ದಲಿತರು

ಬೆಂಗಳೂರು ಅ. ೬- ಕೋಲಾರ ಜಿಲ್ಲೆಯ ಕಂಬಾಲಪಲ್ಲಿಗೂ ವರ್ತೂರು ಹೋಬಳಿಯ ಕಸವನಹಳ್ಳಿಗೂ ಗಾವುದ ದೂರ. ಆದರೆ ಮೂರ್‍ನಾಲ್ಕು ವರ್ಷದ ಹಿಂದೆ ಕಂಬಾಲಪಲ್ಲಿಯಲ್ಲಿ ನಡೆದ ಘಟನೆ ಈಗ ಕಸವನಹಳ್ಳಿ ದಲಿತರಿಗೆ ದುಃಸ್ವಪ್ನವಾಗಿ ಕಾಡುತ್ತಿದೆ!

ಈಗ ದಲಿತರು ಅಕ್ಷರಶಃ ಬೀದಿಗೆ ಬರುವ ಹಂತ ತಲುಪಿದ್ದಾರೆ. ಆದರೂ ಇದರ ವಿರುದ್ಧ ಧ್ವನಿಯೆತ್ತುವ ಸ್ಥಿತಿಯಲ್ಲಿ ಅವರಿಲ್ಲ. ಏಕೆಂದರೆ ಧ್ವನಿಯೆತ್ತಿದರೆ ಕಂಬಾಲಪಲ್ಲಿ ಘಟನೆ ಮರುಕಳಿಸೀತು ಎಂಬ ಬೆದರಿಕೆಯ ತೂಗುಕತ್ತಿ ಅವರ ಮೇಲಿದೆ.

'ಈ ಗ್ರಾಮದ ಬಹುತೇಕ ಪುರುಷರು ಭಯಭೀತರಾಗಿ ಗ್ರಾಮ ತೊರೆದಿದ್ದಾರೆ. ಮಹಿಳೆಯರು ಹಾಗೂ ಮಕ್ಕಳ ಮೇಲೆ ಹಲ್ಲೆ ಕೂಡ ನಡೆಸಲಾಗಿದೆ. ಗ್ರಾಮಕ್ಕೆ ಕುಡಿಯುವ ನೀರು ಪೂರೈಕೆ ಸ್ಥಗಿತಗೊಳಿಸಲಾಗಿದೆ. ಯಾರಾದರೂ ಬಾಯಿ ಬಿಟ್ಟರೆ ಕಂಬಾಲಪಲ್ಲಿ ರೀತಿಯಲ್ಲಿ ಬೆಂಕಿ ಹಚ್ಚಿ ಸಜೀವ ದಹನಗೊಳಿಸುತ್ತೇವೆ ಎಂಬ ಬೆದರಿಕೆಗಳೂ ಬಂದಿವೆ, ಎಂದು ಗ್ರಾಮಕ್ಕೆ ಭೇಟಿ ನೀಡಿದ್ದ ವರದಿಗಾರರಿಗೆ ದಲಿತ ಮಹಿಳೆಯರು ವಿವರಿಸಿದರು.

ಘಟನೆಯ ಸಾರಾಂಶ ಇಲ್ಲಿದೆ : '೧೯೫೬ರಲ್ಲಿ ಆಗಿನ ಸರ್ಕಾರ ಕಸವನಹಳ್ಳಿ ದಲಿತರಿಗೆ ೨೨ ಎಕರೆ ಗೋಮಾಳ ಜಮೀನನ್ನು ಮಂಜೂರು ಮಾಡಿತು. ಅನಂತರ ಅವರಿಗೆ ಜಮೀನಿನ ಹಕ್ಕು ಪತ್ರಗಳನ್ನೂ ವಿತರಿಸಿತು. ಅಂದಿನಿಂದ ೧೯೮೬ರವರೆಗೆ ಅಲ್ಲಿನ ದಲಿತರು ಕಂದಾಯ ಕಟ್ಟಿ ಜಮೀನನ್ನು ಉಳುಮೆ ಮಾಡಿ ಬೆಳೆ ತೆಗೆಯುತ್ತಾ ಬಂದರು. ಬಡತನದಿಂದಾಗಿ ೧೯೮೬ರ ನಂತರ ಕೆಲ ವರ್ಷಗಳ ಕಾಲ ಕಂದಾಯ ಪಾವತಿಸಲು ಸಾಧ್ಯವಾಗಲಿಲ್ಲ.'

'ವಿಚಿತ್ರವೆಂದರೆ, ೨೦೦೦ರಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರ ಯಾವುದೇ ಕಾರಣ ನೀಡದೆ, ದಲಿತರಿಗೆ ಮಂಜೂರು ಮಾಡಿದ್ದ ೨೨ ಎಕರೆ ಜಮೀನಿಗೆ ಸಂಬಂಧಿಸಿದ ಆದೇಶವನ್ನು ರದ್ದುಪಡಿಸಿತು. ಅದನ್ನು ಕಾನೂನುರೀತ್ಯ ದಲಿತರಿಗೆ ನೀಡಲಿಲ್ಲ. ಬದಲಾಗಿ ವೈದ್ಯಕೀಯ ಕಾಲೇಜು ಸ್ಥಾಪಿಸಲು ಖಾಸಗಿ ಸಂಸ್ಥೆಯೊಂದಕ್ಕೆ ನೀಡಿತು'. 'ಆ ಸಂಸ್ಥೆಯವರು ಸೋಮವಾರ ರಾತ್ರೋರಾತ್ರಿ ಜೆಸಿಬಿ ಯಂತ್ರಗಳನ್ನು ತಂದು ದಲಿತರ ಜಮೀನಿನಲ್ಲಿ ಬೆಳೆದಿದ್ದ ರಾಗಿ ಬೆಳೆಯನ್ನು ನಾಶ ಮಾಡಿದರು. ಕಟ್ಟಡ ನಿರ್ಮಿಸುವುದಕ್ಕೆ ಕಲ್ಲು ಮಣ್ಣು ತುಂಬಿಸಿದರು'.

'ಅನಂತರ ಮನೆ ಖಾಲಿ ಮಾಡಿಸಲು ಗುಂಪೊಂದು ದಲಿತರನ್ನು ಒತ್ತಾಯ ಮಾಡಿತು. ಪ್ರತಿರೋಧ ವ್ಯಕ್ತಪಡಿಸಿದವರ ಮೇಲೆ ಹಲ್ಲೆ ಕೂಡ ನಡೆಸಲಾಯಿತು. ಬೆಳೆ ಕಳೆದುಕೊಂಡಿರುವ ದಲಿತರು ಈಗ ಮನೆ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಮುಂದೇನು ಎಂಬ ಪ್ರಶ್ನೆ ? ನಾಳೆ ಏನಾದೀತು ಎಂಬ ಭೀತಿ ಅವರ ನಿದ್ರೆಯನ್ನು ಹಾಳು ಮಾಡಿದೆ' ಎಂದು ಮಹಿಳೆಯರು ಘಟನಾವಳಿಗಳನ್ನು ವಿವರಿಸಿದರು. ಸ್ಥಳದಲ್ಲಿ ಪೊಲೀಸರು ಮೊಕ್ಕಾಂ ಹೂಡಿದ್ದರೂ, ಅವರು ಖಾಸಗಿ ವೈದ್ಯಕೀಯ ಸಂಸ್ಥೆಯ ಪರವಾಗಿಯೇ ಕೆಲಸ ಮಾಡುತ್ತಿದ್ದಾರೆ ಎಂಬುದು ಅಲ್ಲಿನ ದಲಿತರ ದೂರು.

(ಪ್ರಜಾವಾಣಿ)



ತುತ್ತಿಗಾಗಿ ಹೆತ್ತ ಕಂದಮ್ಮನ ಮಾರಿದ ತಾಯಿ !

ರಾಂಚಿ ಸೆ. ೩೦- ರಾಜ್‌ಗಂಜ್‌ನ ಗಲ್ಲಿ ಕುಲ್ದಿ ನಿವಾಸಿಗಳಾದ ಮೀನಾದೇವಿ ಹಾಗೂ ಡಿ.ಆರ್.ಗುಪ್ತ ದಂಪತಿಗಳಿಗೆ ಕಿತ್ತು ತಿನ್ನುವ ಬಡತನ. ನಾಲ್ಕು ತಿಂಗಳ ಹಿಂದೆ ಮೀನಾ ಹೆಣ್ಣು ಮಗುವೊಂದನ್ನು ಹಡೆದಳು. ತಮ್ಮ ಹೊಟ್ಟೆ ಹೊರೆಯಲೇ ಪರದಾಡುತ್ತಿದ್ದಾಗ, ಮಗು ಅಕ್ಷರಶಃ ಹೊರೆಯಾಯಿತು. ತೆಲೋದಿ ಗ್ರಾಮದ ಶಿವಲಾಲ್ ಮಹಾಲಿ ಮತ್ತು ಆತನ ಪತ್ನಿ ಮಕ್ಕಳಿಲ್ಲದ ಕೊರತೆಯಿಂದ ಕೊರಗುತ್ತಿದ್ದರು. ಮಗು ಮಾರಲು ಮುಂದಾದ ಮೀನಾದೇವಿಗೆ ಈ ದಂಪತಿಗಳು ೯೦೦ ರೂ. ನೀಡುವುದಾಗಿ ಒಪ್ಪಿದರು. ಹಿಂದುಮುಂದು ನೋಡದೆ ಮೀನಾ ಮಗುವನ್ನು ಮಾರಿದಳು. 'ಕಿತ್ತು ತಿನ್ನುವ ಬಡತನ, ನನ್ನ ಮಗನಿಗೆ ಹುಷಾರಿಲ್ಲ, ಆದರೂ ಕೂಲಿ ಮಾಡುತ್ತಾನೆ. ಆತನಿಗೆ ಇದು ಎರಡನೇ ಮದುವೆ. ಮಗು ಹೆತ್ತ ನಂತರ ಸೊಸೆ ಮೀರಾ ಆರೋಗ್ಯವೂ ಹದಗೆಟ್ಟಿತು. ಕಷ್ಟದ ಮೇಲೆ ಕಷ್ಟ. ಜತೆಗೆ ಮೀರಾ ಚಿಕಿತ್ಸೆಗೆ ತುರ್ತಾಗಿ ಹಣ ಬೇಕಿತ್ತು. ಅದಕ್ಕೇ ಮಗು ಮಾರುವುದು ಅನಿವಾರ್ಯವಾಯಿತು' ಎಂದು ಮೀರಾಳ ಮಾವ ಎಸ್.ಆರ್. ಗುಪ್ತ ಸ್ಥಳೀಯ ಪತ್ರಿಕೆಯೊಂದರಲ್ಲಿ ಹೇಳಿಕೆ ನೀಡಿದ್ದರು. (ಪ್ರಜಾವಾಣಿ)

ಚಲಿಸುವ ರೈಲಿನಿಂದ ಮಹಿಳೆಯನ್ನು ಎಸೆದ ಪೇದೆಗಳು

ಪಟನಾ, ಅ. ೩- ಎರಡು ರೂಪಾಯಿ ಲಂಚ ನೀಡಲಿಲ್ಲ ಎಂಬ ಕಾರಣಕ್ಕೆ ಭಲಿದೇವಿ ಎಂಬ ದಲಿತ ಮಹಿಳೆಯನ್ನು ಚಲಿಸುತ್ತಿರುವ ರೈಲಿನಿಂದ ರೈಲ್ವೆ ಪೇದೆಗಳು ಸಿತಾಮರ್ಹಿ ನಿಲ್ದಾಣದ ಬಳಿ ಆಚೆಗೆಸೆದ ಘಟನೆ ಬಿಹಾರದಲ್ಲಿ ನಡೆದಿದೆ. ಮಹಿಳೆಯ ಕಾಲು ಮುರಿದಿದ್ದು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಿಹಾರ ರಾಜ್ಯದಲ್ಲಿ ಈ ಬಗೆಯ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿದ್ದು, ಮಹಿಳೆಯ ಮೇಲಿನ ದೌರ್ಜನ್ಯ ಮಿತಿಮೀರಿದೆ.

(ಸೂರ್ಯೋದಯ)

ದಲಿತರಿಗೆ ವಂಚನೆ : ಲಕ್ಷಾಂತರ ರೂ. ಗುಳುಂ

ತುಮಕೂರು, ಸೆ. ೨೬- ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸರ್ಕಾರಿ ಸ್ವಾಮ್ಯದ ಪರಿಶಿಷ್ಟ ಜಾತಿ ಅಭಿವೃದ್ಧಿ ನಿಗಮ ನೀಡಿದ ಲಕ್ಷಾಂತರ ರೂ.ನ್ನು ಫಲಾನುಭವಿಗಳ ಹೆಸರಿನಲ್ಲಿ ವಂಚಿಸಿರುವ ವ್ಯಕ್ತಿಯನ್ನು ಕ್ಯಾತ್ಸಂದ್ರ ಪೊಲೀಸರು ಬಂಧಿಸಿದ್ದಾರೆ.

ಘಟನೆ ವಿವರ : ೨೦೦೧ನೇ ಸಾಲಿನಲ್ಲಿ ಭಾರತೀಯ ಶೋಷಿತ ಸಮುದಾಯ ಟ್ರಸ್ಟ್ ಎಂಬ ಸರ್ಕಾರೇತರ ಸಂಸ್ಥೆ ನಗರದಲ್ಲಿ ತಲೆ ಎತ್ತಿದ್ದು, ಈ ಸಂಸ್ಥೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಮಹಿಳೆಯರಿಗಾಗಿ ತರಬೇತಿ ಮತ್ತು ಉದ್ಯೋಗ ನೀಡುವುದಾಗಿ ಸಾಕಷ್ಟು ಮಹಿಳೆಯರ ಹೆಸರನ್ನು ನೋಂದಯಿಸಿಕೊಂಡಿತ್ತು.

ಕೆಲ ದಿನಗಳ ಹಿಂದೆ ನಗರದ ಮಾಲಾ ಎಂಬುವವರಿಗೆ ಪರಿಶಿಷ್ಟ ಜಾತಿ ಅಭಿವೃದ್ಧಿ ನಿಗಮದಿಂದ ಪಡೆದಿರುವ ೧೫ ಸಾವಿರ ರೂ. ಸಾಲ ಹಿಂತಿರುಗಿಸುವಂತೆ ನೋಟೀಸ್ ಬಂತು.

ಗಾಬರಿಗೊಂಡ ಮಾಲಾ ನಿಗಮದ ಕಚೇರಿಗೆ ಹೋಗಿ ವಿಚಾರಿಸಿದಾಗ ೨೦೦೧ರಲ್ಲಿ ಸದರಿ ಮಹಿಳೆಗೆ ತರಬೇತಿ ಮತ್ತು ಉದ್ಯೋಗ ನೀಡುವ ಸಲುವಾಗಿ ಆಕೆಯ ಹೆಸರಿನಲ್ಲಿ ೧೪ ಸಾವಿರ ರೂ. ಸಾಲ ಮಂಜೂರು ಮಾಡಿದ್ದುದು ಬೆಳಕಿಗೆ ಬಂತು.

ಇದೇ ರೀತಿ ೬೦ ಮಹಿಳೆಯರಿಗೆ ತಲಾ ೧೫ ಸಾವಿರ ರೂ. ನಂತೆ ಸಾಲ ಮಂಜೂರಾತಿ ಮಾಡಿದ್ದು, ಇವರಿಗೆ ಭಾರತೀಯ ಶೋಷಿತ ಸಮುದಾಯ ಟ್ರಸ್ಟ್ ತರಬೇತಿ ನೀಡಲು ಮುಂದೆ ಬಂದ ಪರಿಣಾಮ ಸದರಿ ಟ್ರಸ್ಟ್‌ಗೆ ಹಣ ಸಂದಾಯವಾಗಿತ್ತು ಎಂದು ಹೇಳಲಾಗಿದೆ.

ಈ ಹಿನ್ನೆಲೆಯಲ್ಲಿ ಟ್ರಸ್ಟ್ ಅಧ್ಯಕ್ಷ ರಾಮಚಂದ್ರಪ್ಪ ಅವರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿದ್ದಾರೆ.

(ಸೂರ್ಯೋದಯ)

ದಲಿತರ ಬಣವಿಗಳಿಗೆ ಬೆಂಕಿ

ಕೊಪ್ಪಳ ಅ. ೧೦- ಸವರ್ಣೀಯ ಯುವತಿ ಮೇಲೆ ದಲಿತ ಯುವಕನೊಬ್ಬ ಅತ್ಯಾಚಾರ ಮಾಡಿದ್ದಾನೆಂಬ ಕಾರಣಕ್ಕಾಗಿ ರೊಚ್ಚಿಗೆದ್ದ ಸವರ್ಣೀಯರು ದಲಿತರ ಮೇಲೆ ತೀವ್ರ ಹಲ್ಲೆ ನಡೆಸಿ, ದಲಿತರ ಬಣವಿಗಳಿಗೆ ಬೆಂಕಿ ಹಚ್ಚಿರುವ ಘಟನೆ ಯಲಬುರ್ಗಾ ತಾಲ್ಲೂಕಿನ ವಣಗೇರಿ ಗ್ರಾಮದಲ್ಲಿ ನಡೆದಿದೆ.

(ಸಂಯುಕ್ತ ಕರ್ನಾಟಕ)

ಸಂಪಾದಕೀಯ



ಅಂತರಂಗ

ಕಿಶನ್ ಎಂಬ ಕಿಂದರಿ ಜೋಗಿ

ಕಿಶನ್ ನಮ್ಮ ನಡುವೆ ಇಲ್ಲ ಎಂದರೆ ನಂಬಲು ಸಾಧ್ಯವಾಗುತ್ತಲೇ ಇಲ್ಲ. ಅವರು ಮೊನ್ನೆ ತಾನೇ ನಮ್ಮೊಂದಿಗೆ ಮಾತಾಡಿದಂತಿದೆ. ಡಿ.ಆರ್.ನಾಗರಾಜ್ ನೆನಪಿನಲ್ಲಿ ಆಗಸ್ಟ್ ೨೨, ೨೦೦೪ರಂದು ನಡೆದ 'ಪರ್ಯಾಯ ರಾಜಕಾರಣ' ವಿಚಾರಗೋಷ್ಠಿಯಲ್ಲಿ ಸಮಾರೋಪ ಭಾಷಣ ಮಾಡಿದ್ದ ಕಿಶನ್, ಭಾಷಣದುದ್ದಕ್ಕೂ ಅತ್ಯಂತ ಉಲ್ಲಸಿತರಾಗಿದ್ದರು. ತಾವು ಜೀವಿತಾವಧಿಯಲ್ಲಿ ಕಾಣಲು ಬಯಸಿದ್ದ ಘಟನೆಯೊಂದು ತಮ್ಮ ಮುಂದೆಯೇ ರೂಪುಗೊಳ್ಳುತ್ತಿರುವುದಕ್ಕಾಗಿ ಅವರು ಸಂಭ್ರಮಗೊಂಡಿದ್ದರು. ನಾಡಿನ ಎರಡು ಜನಪರ ಚಳವಳಿಗಳು ಒಗ್ಗೂಡುವ ಪ್ರಯತ್ನ ಆರಂಭವಾಗಿದ್ದಕ್ಕೆ ಅವರು ಖುಷಿಗೊಂಡಿದ್ದರು. ಕರ್ನಾಟಕದಲ್ಲಿ ಆರಂಭಗೊಳ್ಳುತ್ತಿರುವ ಪರ್ಯಾಯ ರಾಜಕಾರಣದ ಪ್ರಕ್ರಿಯೆ ಇಡೀ ದೇಶಕ್ಕೆ ಮಾದರಿಯಾಗುತ್ತದೆ ಎಂದು ಹಾರೈಸಿದ್ದರು.

ಶ್ರಮ ಮತ್ತು ಅವಮಾನವನ್ನು ಉಂಡ ಸಮಾಜದ ಎರಡು ದುಡಿಯುವ ವರ್ಗಗಳನ್ನು ಒಂದುಗೂಡಿಸುವ ಮೂಲಕ ಪರ್ಯಾಯ ರಾಜಕಾರಣ ರೂಪಿಸುವುದು ಕಿಶನ್ ಅವರ ಬಹುಕಾಲದ ಕನಸಾಗಿತ್ತು. ಅದಕ್ಕಾಗಿ ಅವರು ದೇಶಾದ್ಯಂತ ಅಲೆದಾಡುತ್ತಿದ್ದರು. ಕಿಂದರಿ ಜೋಗಿಯಂತೆ ತಮ್ಮೊಂದಿಗೆ ಸದಾ ಯುವಕರ ಹಿಂಡೊಂದನ್ನು ಕಟ್ಟಿಕೊಂಡಿರುತ್ತಿದ್ದರು. ಕರ್ನಾಟಕಕ್ಕೆ ಬಂದರಂತೂ ಅವರ ಹಿಂದೆ ಸಮಾಜವಾದಿಗಳ ಒಂದು ದಂಡೇ ಇರುತ್ತಿತ್ತು.

ನಿರಂತರ ಆಶಾವಾದಿಯಾಗಿದ್ದ ಕಿಶನ್ ಅಪ್ಪಟ ಸಮಾಜವಾದಿ. ಬದುಕು, ಬರಹ, ಆಚಾರ, ವಿಚಾರ ಎಲ್ಲದರಲ್ಲೂ ನೂರಕ್ಕೆ ನೂರು ಸಮಾಜವಾದಿ. ಡಾ॥ ರಾಮ ಮನೋಹರ ಲೋಹಿಯಾ ಅವರ ನಿಜವಾದ ಉತ್ತರಾಧಿಕಾರಿ. ಭಾರತದ ಉದ್ದಗಲಕ್ಕೂ ಸಮಾಜವಾದಿ ಆಶಯಗಳನ್ನು ಹಂಚಿದ ಲೋಹಿಯಾರ ವಿಚಾರಗಳನ್ನು ಅವರಷ್ಟೇ ಸಮರ್ಥವಾಗಿ ಪ್ರತಿಪಾದಿಸಿದ ಏಕೈಕ ಹೋರಾಟಗಾರ. ಮಹಿಳೆಯರ, ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ ಹಾಗೂ ಆದಿವಾಸಿಗಳ ಅಭಿವೃದ್ಧಿಗಾಗಿ ನಿರಂತರ ಶ್ರಮಿಸಿದ ಚೈತನ್ಯ.

ಕರ್ನಾಟಕಕ್ಕೂ ಕಿಶನ್ ಅವರಿಗೂ ನಿರಂತರ ನಂಟು. ಅವರು ದೂರದ ಒರಿಸ್ಸಾದವರು ಎಂದು ನಮಗೆಂದೂ ಅನ್ನಿಸಲೇ ಇಲ್ಲ. ನಮ್ಮ ನೆರಮನೆಯ ಹಿರಿಯಣ್ಣನಂತೆ ಅವರು ನಮ್ಮೊಡನೇ ಇರುತ್ತಿದ್ದರು. ಕಾಗೋಡು ಸತ್ಯಾಗ್ರಹದ ಸಮಯದಲ್ಲಿ ಆರಂಭವಾದ ಅವರ ಕರ್ನಾಟಕದ ನಂಟು ಅವರ ಸಾವಿನ ಕಡೆ ದಿನಗಳವರೆಗೂ ಅಂಟಿಕೊಂಡೇ ಇತ್ತು. ಎಪ್ಪತ್ತರ ದಶಕದ ಸಮಾಜವಾದಿ ಚಳವಳಿ, ವಿಚಾರವಾದಿ ಚಳವಳಿಗಳ ಹಿಂದೆ ಕಿಶನ್ ಅವರ ವೈಚಾರಿಕ ಮಾರ್ಗದರ್ಶನ ಇತ್ತು. ದಲಿತ ಸಂಘರ್ಷ ಸಮಿತಿ ಹಾಗೂ ರೈತಸಂಘಗಳ ಹೋರಾಟದ ಹಿಂದೆ ಸದಾ ಕಿಶನ್ ಪ್ರಭಾವ ಇದ್ದೇ ಇರುತ್ತಿತ್ತು.

ಕಿಶನ್ ಹುಟ್ಟಿದ್ದು ಒರಿಸ್ಸಾದ ಕಾಳಹಂದಿಯಲ್ಲಿ. ೧೯೩೦ರ ಜೂನ್ ೩೦ ರಂದು ಜನಿಸಿದ ಕಿಶನ್ ತಮ್ಮ ೧೬ನೇ ವಯಸ್ಸಿಗೇ ಸಮಾಜ ಕಾರ್ಯ ಆರಂಭಿಸಿದರು. ೨೨ನೇ ವಯಸ್ಸಿನಲ್ಲೇ ಸಮಾಜವಾದಿ ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾದರು. ಲೋಹಿಯಾ ಆರಂಭಿಸಿದ್ದ 'ಮ್ಯಾನ್‌ಕೈಂಡ್' ಪತ್ರಿಕೆಯ ಸಹಸಂಪಾದಕರಾಗಿ ದುಡಿದರು. ಸಮಾಜವಾದಿ ಸಿದ್ಧಾಂತವನ್ನು ನಿಖರ ಶಬ್ದಗಳಲ್ಲಿ ವಿವರಿಸುವ - ಸಮಕಾಲೀನ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ವಿದ್ಯಮಾನಗಳನ್ನೂ ಸಮರ್ಥವಾಗಿ ವಿಶ್ಲೇಷಿಸುವ ಸಾಮರ್ಥ್ಯ ಬೆಳೆಸಿಕೊಂಡರು. ಕಿಶನ್ ಅವರ ಯಾವುದೇ ಬರಹ-ಭಾಷಣಗಳಲ್ಲಿ ಇದನ್ನು ಇಂದಿಗೂ ಸ್ಪಷ್ಟವಾಗಿ ಗುರುತಿಸಬಹುದು.

ಕಿಶನ್ ಮಾತಿಗೆ ನಿಂತರೆ ಎಂಥವರೂ ಏಕಾಗ್ರತೆಗೊಳಗಾಗುತ್ತಿದ್ದರು. ಅಷ್ಟು ನಿಖರ, ಸ್ಪಷ್ಟ, ವಿಚಾರಪೂರ್ಣ ಮಾತುಗಳು ಅವರಿಂದ ಬರುತ್ತಿದ್ದವು. ಅಷ್ಟೊಂದು ವೈಚಾರಿಕ-ಸೈದ್ಧಾಂತಿಕ ಸ್ಪಷ್ಟತೆ ಅವರಿಗಿರುತ್ತಿತ್ತು. ಅವರೆಂದೂ ತಮ್ಮ ಮಾತಿಗೆ ಭಾರಿ ಜನಸಮೂಹವನ್ನು ನಿರೀಕ್ಷಿಸುತ್ತಿರಲಿಲ್ಲ. ಎಷ್ಟೇ ಕಡಿಮೆ ಜನರಿದ್ದರೂ ಅವರು ಬೇಸರಿಸಿಕೊಳ್ಳುತ್ತಿರಲಿಲ್ಲ. ಸಮಾಜವಾದದ ಸಿಂಚನವನ್ನು ನಿರಂತರವಾಗಿ ಹರಿಸುತ್ತಲೇ ಇರುತ್ತಿದ್ದರು. ಗೆಳೆಯರ ಮನೆಗೆ ಊಟಕ್ಕೆ ಹೋದರೆ ಅಲ್ಲೂ ಒಂದು ತರಗತಿ ನಡೆಯುತ್ತಿತ್ತು. ಉತ್ಸಾಹಿ ಹೋರಾಟಗಾರರು ಸಿಕ್ಕಿದರಂತೂ ಕಿಶನ್‌ಗೆ ಹಬ್ಬದೂಟ ಆಗುತ್ತಿತ್ತು.

ಪ್ರಜಾಪ್ರಭುತ್ವದ ಅತ್ಯಂತ ಪ್ರಬಲ ಪ್ರತಿಪಾದಕರಾಗಿದ್ದ ಕಿಶನ್ ಎಂದೂ ಯಾರ ಮೇಲೂ ಒತ್ತಡ ಹೇರುತ್ತಿರಲಿಲ್ಲ. ಯಾರಾದರೂ ಯಾರ ಮೇಲಾದರೂ ಅಧಿಕಾರ ಪ್ರಯೋಗಿಸಿದರೆ ಅದನ್ನು ಸಹಿಸುತ್ತಲೂ ಇರಲಿಲ್ಲ. ನಿರಂತರ ಓದು, ಜಿಜ್ಞಾಸೆ ಅವರ ಅತ್ಯಂತ ಆಪ್ತ ಸಂಗಾತಿಗಳಾಗಿದ್ದವು. ಸಾಹಿತ್ಯ ಮತ್ತು ತತ್ವಶಾಸ್ತ್ರದಲ್ಲಿ ಅವರಿಗೆ ಆಸಕ್ತಿ ಇತ್ತು. ಬಹುತೇಕ ಎಲ್ಲ ಮಹತ್ವದ ಸಾಹಿತ್ಯ ಕೃತಿಗಳನ್ನು ಅವರು ಅಭ್ಯಾಸ ಮಾಡುತ್ತಿದ್ದರು. ದಲಿತ ಮತ್ತು ಆದಿವಾಸಿ ಜನಾಂಗದ ಕೆಲ ಲೇಖಕರ ಕೃತಿಗಳ ಬಗ್ಗೆ ವಿಶೇಷ ಒಲವು ತೋರುತ್ತಿದ್ದರು. ೧೨ನೇ ಶತಮಾನದ ಬಸವ ಚಳವಳಿ ಅವರನ್ನು ತುಂಬಾ ಆಕರ್ಷಿಸಿತ್ತು.

೧೯೬೨ರಲ್ಲಿ ಕಿಶನ್ ಸಮಾಜವಾದಿ ಪಕ್ಷದಿಂದ ಲೋಕಸಭೆಗೆ ಆಯ್ಕೆಯಾದರು. ರಾಮಮನೋಹರ ಲೋಹಿಯಾ ಮತ್ತು ಕಿಶನ್ ಅವರು ಲೋಕಸಭೆಯಲ್ಲಿ ಮಾತಿಗೆ ನಿಂತರೆ ನೆಹರೂ ಕಕ್ಕಾಬಿಕ್ಕಿಯಾಗುತ್ತಿದ್ದರು. ಸಮಾಜವಾದದ ವಿಕೃತ ರೂಪದಂತಿದ್ದ ನೆಹರೂ ಅವರ ದುರಾಡಳಿತವನ್ನು, ಅವರ ಜನವಿರೋಧಿ ನೀತಿಯನ್ನು ಈ ಇಬ್ಬರೂ ನಾಯಕರು ಎಳೆಎಳೆಯಾಗಿ ಬಿಡಿಸಿ ಇಡುತ್ತಿದ್ದರೆ ಇಡೀ ಲೋಕಸಭೆ ದಂಗಾಗಿ ನೋಡುತ್ತಿತ್ತಂತೆ.

ಸಮಾಜವಾದಿ ಚಳವಳಿಯನ್ನು ಕಟ್ಟುತ್ತಿದ್ದ ಕಾಲದಲ್ಲಿ ಒಮ್ಮೆ ಮಾತ್ರ ಲೋಕಸಭೆಗೆ ಆರಿಸಿ ಹೋದ ಕಿಶನ್ ಮತ್ತೆ ಚುನಾವಣೆಯಲ್ಲಿ ಗೆಲ್ಲಲು ಆಗಲೇ ಇಲ್ಲ. ಹಾಗಂತ ಅವರು ತಮ್ಮ ಪ್ರಯತ್ನಗಳನ್ನು ನಿಲ್ಲಿಸಲಿಲ್ಲ. ಮತ್ತಷ್ಟು ತೀವ್ರಗೊಳಿಸಿದರು. ಕಿಶನ್ ಕಟ್ಟಿ ಬೆಳೆಸಿದ ಸಮಾಜವಾದಿಗಳ ದಂಡು ಇಂದು ದೇಶದಾದ್ಯಂತ ಹಬ್ಬಿದೆ.

ಕಿಶನ್ ಅವರ ವೈಯಕ್ತಿಕ ಬದುಕು ಸರಳ. ವಾಸಿಸಲು ಸ್ವಂತ ಮನೆಯನ್ನೂ ಕೂಡ ಅವರು ಕಟ್ಟಿಕೊಳ್ಳಲಿಲ್ಲ. ಸ್ವಂತ ಜಾತಿಯ ಹೆಂಡತಿಯನ್ನು ಪಡೆದ ಕಾರಣಕ್ಕೆ ಮಕ್ಕಳನ್ನೂ ಮಾಡಿಕೊಳ್ಳಲಿಲ್ಲ. ಜೀವನ ನಿರ್ವಹಣೆಗಾಗಿ ಯಾರಲ್ಲೂ ಕೈಯೊಡ್ಡಲಿಲ್ಲ. ಶಿಕ್ಷಕಿಯಾಗಿದ್ದ ಪತ್ನಿ ವಾಣಿ ಅವರ ಸಂಬಳವೇ ಅವರಿಗೆ ಸಾಕಾಗುತ್ತಿತ್ತು. ಗಂಡನ ಹೋರಾಟಕ್ಕೆ ನಿರಂತರ ಚೈತನ್ಯ ನೀಡಿದವರು ವಾಣಿ.

ಸಕ್ರಿಯ ರಾಜಕಾರಣದಿಂದ ದೂರವಿದ್ದರೂ ಅತ್ಯಂತ ಜಾಗೃತ-ಚಿಂತನಶೀಲ ರಾಜಕಾರಣ ಮಾಡಿದವರು ಕಿಶನ್. ಪರ್ಯಾಯ ರಾಜಕಾರಣದ ಬಗ್ಗೆ ನನ್ನೊಂದಿಗೆ ಮಾತನಾಡುತ್ತಾ ಅವರು ಹೇಳಿದ್ದು ನನ್ನ ಕಿವಿಯಲ್ಲಿನ್ನೂ ಗುಣುಗುಣಿಸುತ್ತಿದೆ. 'ಇಡೀ ದೇಶ ನಿಮ್ಮತ್ತ ನೋಡುತ್ತಿದೆ. ನಿಮ್ಮ ಪ್ರಯತ್ನವನ್ನು ಯಾವ ಕಾರಣಕ್ಕೂ ನಿಲ್ಲಿಸಬೇಡಿ. ನಿಮ್ಮ ಪ್ರಯತ್ನಕ್ಕೆ ಎಂಥ ಶಕ್ತಿಗಳು ಅಡ್ಡ ಬಂದರೂ ಧೃತಿಗೆಡಬೇಡಿ. ನಾವೆಲ್ಲ ಸದಾ ನಿಮ್ಮೊಂದಿಗೇ ಇರುತ್ತೇವೆ.'

ಕಿಶನ್ ನೆನಪಿಗೆ ಅವರ ಕನಸನ್ನು ನನಸು ಮಾಡುವುದಕ್ಕಿಂತ ಬೇರಾವ ರೀತಿ ಗೌರವ ಸಲ್ಲಿಸಬಹುದು?

○ ಇಂದೂಧರ ಹೊನ್ನಾಪುರ

ವರ್ತಮಾನ

ಮಣಿಪುರ ಹಾಗೂ ನಾಗಾಲ್ಯಾಂಡಿನ ಜನತೆ ಇಂದು ತಾವು ಭಾರತದ ಪ್ರಜೆಗಳೇ ಅಲ್ಲವೇನೋ ಎನ್ನುವ ನಿರಾಶೆಯಲ್ಲಿ ದಿನದೂಡುತ್ತಿದ್ದಾರೆ. ಈಶಾನ್ಯ ಭಾಗದ ಜನತೆಗೆ ತಮ್ಮ ಮೇಲಾಗುತ್ತಿರುವ ಫ್ಯಾಸಿಸ್ಟ್ ಕಾರ್ಯಾಚರಣೆಯಿಂದಾಗಿ ಸಂವಿಧಾನಬದ್ಧವಾಗಿ ರಕ್ಷಣೆ ಇಲ್ಲದೆ ಬದುಕುತ್ತಿರುವ ಕೊರಗು ಕಾಡುತ್ತಿದೆ. ಮಣಿಪುರದಲ್ಲಿ ನಿಜವಾಗಿಯೂ ಸಮಸ್ಯೆ ಇರುವುದೆಂಬ ಎಚ್ಚರ ಸರ್ಕಾರಕ್ಕೆ ಮೂಡಿರುವುದೇನೋ ನಿಜ, ಆದರೆ ಸಶಸ್ತ್ರಪಡೆ ಎಂದಿನಂತೆ ತನ್ನ ಪಾಶವೀ ಕೃತ್ಯವನ್ನು ಮುಂದುವರೆಸಿದೆ. ಮೆರವಣಿಗೆಯನ್ನು ನಡೆಸುತ್ತಿದ್ದ ಜನತೆಯ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಲಾಗಿದೆ. ಮಾಧ್ಯಮಗಳು ಮೂಕಸಾಕ್ಷಿಗಳಾಗಿವೆ.

○ ಸುಜಾತ ಕುಮಟಾ

ಮಣಿಪುರದ ಕೋಲಾಹಲ

ಮಣಿಪುರ ಗುಡ್ಡಗಾಡಿನ ರಾಜ್ಯ ತನ್ನೆಲ್ಲಾ ಮಾನಸಿಕ ಯಾತನೆಯನ್ನು ತನ್ನ ಒಡಲಲ್ಲಿಯೆ ಅವಿತಿಟ್ಟುಕೊಂಡು ಹೊಮ್ಮಿಸಿದ್ದ ನಿಟ್ಟುಸಿರು ಇಂದು ಇಡೀ ದೇಶದಾದ್ಯಂತ ಕೋಲಾಹಲವನ್ನುಂಟುಮಾಡಿದೆ. ಕಾಯಬೇಕಾದ ಸೈನಿಕರೇ ಮುಗ್ಧ ನಾಗರಿಕರನ್ನು ರಾಕ್ಷಸರಂತೆ ದಂಡಿಸುವುದು ಹಾಗೂ ಅಮಾಯಕ ಹೆಣ್ಣುಮಕ್ಕಳನ್ನು ಗುಮಾನಿಯ ಮೇಲೆ ಎಳೆದುಕೊಂಡು ಹೋಗಿ ವಿಚಾರಣೆಯ ನೆವದಲ್ಲಿ ಅತ್ಯಾಚಾರ ನಡೆಸುವುದು ಮುಂದುವರೆದಿದೆ. ಅಷ್ಟಕ್ಕೂ ಇಷ್ಟೆಲ್ಲಾ ಅಧಿಕಾರ ಸೈನಿಕರಿಗೆ ಬಂದಿರುವುದಾದರೂ ಹೇಗೆ?

೧೯೪೨ ರಂದು ಬ್ರಿಟಿಷರು AFSPA ರೀತಿಯ ಕಾಯ್ದೆಯೊಂದನ್ನು ಜಾರಿಗೊಳಿಸಿತ್ತು. ಆದರೆ ೧೯೫೮ನೇ ಇಸವಿಯಿಂದು ಸರ್ಕಾರ ಅಸ್ಸಾಂ ಮತ್ತು ಮಣಿಪುರಕ್ಕೆ ಸಂಬಂಧಪಟ್ಟಂತೆ AFSPA ವನ್ನು ಜಾರಿಗೊಳಿಸಿತು. ಈಶಾನ್ಯ ರಾಜ್ಯಗಳಿಗೆಲ್ಲ ಈ ಕಾಯ್ದೆ ಅನ್ವಯಿಸುವಂತಾಯಿತು. ನಾಗಾ ರಾಷ್ಟ್ರೀಯವಾದ ಉದ್ಭವವಾದ ಸಂದರ್ಭದಲ್ಲಿ ಮಣಿಪುರ ಸಂಪೂರ್ಣವಾಗಿ ಸೇನೆಯ ನಿಯಂತ್ರಣಕ್ಕೊಳಪಟ್ಟಿತು. ಆ ಸಂದರ್ಭದಲ್ಲಿ ಈ ಕ್ರೂರ ಕಾನೂನನ್ನು ಸಂವಿಧಾನ ಬಾಹಿರ ಎಂದು ಜನತೆ ವಿರೋಧಿಸಿತ್ತು. ಒಂದು ಪ್ರದೇಶ 'ಗಲಭೆ ಪೀಡಿತ' ಅಥವಾ 'Disturbed Area' ಎಂದು ಘೋಷಿಸಿದ ನಂತರ ಯಾವುದೇ ಕಾರಣಕ್ಕೂ ಈ ಕಾಯ್ದೆಯನ್ನು ಪುನರ್ ವಿಮರ್ಶೆ ಮಾಡಲು ಬರುವುದಿಲ್ಲ. ಆ ಕಾರಣದಿಂದ ೧೯೫೮ರಿಂದ ಇಂದಿನವರೆಗೂ ಈ ಕ್ರೂರ ವ್ಯವಸ್ಥೆ ಜಾರಿಯಲ್ಲಿದೆ. ಈ ಕಾಯ್ದೆ ಸೇನೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ.

ಈ ಕಾಯ್ದೆಯ ಪ್ರಕಾರ ಮಣಿಪುರದಂತಹ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಹೆಸರಿನಲ್ಲಿ ಗುಂಡುಹಾರಿಸುವ ಹಾಗೂ ಪ್ರಾಣಾಂತಿಕವಾಗಿ ಹಲ್ಲೆ ಮಾಡುವ ಅಧಿಕಾರವನ್ನು ಪಡೆದಿದೆ.

೧. ಐದಕ್ಕಿಂತ ಹೆಚ್ಚು ಜನ ಗುಂಪುಗೂಡದಂತೆ ಸೇನೆ ಎಚ್ಚರ ವಹಿಸುತ್ತದೆ.

೨. ವಾರೆಂಟ್ ಇಲ್ಲದೆ ಸೆರೆಹಿಡಿಯುವುದು. ಯಾವುದೇ ವ್ಯಕ್ತಿಯ ಚಲನವಲನಗಳ ಮೇಲೆ ಸೇನೆಗೆ ಗುಮಾನಿ ಬಂದರೆ ಆತನನ್ನು ತನ್ನಿಷ್ಟದಂತೆ ಬಂಧಿಸಬಹುದು.

೩. ಯಾವುದೇ ರೀತಿಯ ಆಯುಧಗಳನ್ನು ಬಳಸುವ ಬಗ್ಗೆ ಅನುಮಾನವಿದ್ದರೆ ಅದನ್ನು ನಾಶಪಡಿಸುವುದು.

೪. ವಾರೆಂಟ್ ಇಲ್ಲದೆಯೆ ಅನುಮಾನ ಬಂದ ಪ್ರದೇಶದಲ್ಲಿ ಸರ್ಚ್ ಮಾಡುವ ಅಧಿಕಾರವನ್ನು ಪಡೆದಿದೆ. ಸೆಕ್ಷನ್ ೩ರ ಪ್ರಕಾರ ರಾಜ್ಯದಲ್ಲಿ ಚುನಾಯಿತ ಸರ್ಕಾರವಿದ್ದರೂ ಕೂಡ ಕೇಂದ್ರ ಸರ್ಕಾರವು ಅಂತಹ ರಾಜ್ಯವನ್ನು 'Disturbed Area' ಎಂದು ಘೋಷಿಸಬಹುದು. ಸೆಕ್ಷನ್ ೪ ರ ಪ್ರಕಾರ ಒಬ್ಬ ಹವಲ್ದಾರನೂ ಕೂಡ 'ಗುಮಾನಿ'ಯಿರುವ ವ್ಯಕ್ತಿಗಳನ್ನು ಕೊಲ್ಲಬಹುದು. ದೈಹಿಕ ತಪಾಸಣೆ ಮಾಡಬಹುದು. ಪುರುಷರು ಮಹಿಳೆಯರ ಮಲಗುವ ಕೋಣೆ ಪ್ರವೇಶಿಸಿ ಅವರನ್ನು ತಪಾಸಣೆ ನಡೆಸುವುದಲ್ಲದೆ 'ಅನುಮಾನಾಸ್ಪದವಾದ' ಕಟ್ಟಡಗಳನ್ನು ನಾಶಮಾಡಬಹುದಾಗಿದೆ.

ಸೆಕ್ಷನ್ ೬ರ ಪ್ರಕಾರ ಸೇನೆಯ ಯಾವುದೇ ಕೃತ್ಯವನ್ನು ರಾಜ್ಯ ಸರ್ಕಾರ ಪ್ರಶ್ನಿಸುವ ಅಧಿಕಾರವನ್ನು ಹೊಂದಿರುವುದಿಲ್ಲ. ಈ ವರ್ಷದ ಜನವರಿಯಿಂದ ಮಾರ್ಚ್ ಅವಧಿಯಲ್ಲಿ ಸುಮಾರು ೧೯ ಜನರನ್ನು ಅವರ ಗ್ರಾಮಗಳಿಂದ ಕೆಲವರನ್ನು ಅವರ ಮನೆಗಳಿಗೆ ನುಗ್ಗಿ ವಿಚಾರಣೆಗೆ ತೆಗೆದುಕೊಂಡು ಹೋದ ಸೇನೆ ಅವರನ್ನು ಪುನಃ ಕಳಿಸಿದ್ದು ಶವಗಳಾಗಿ. ಇದರಲ್ಲಿ ಜುಲೈ ೧೧ರ ಬೆಳಗ್ಗೆ ತಂಜಮ್ ಮನೋರಮಾಳನ್ನು ಎಳೆದೊಯ್ದು ಸೇನೆ ಆಕೆಯ ಮೇಲೆ ಅತ್ಯಾಚಾರವೆಸಗಿ ಬಂದೂಕಿನಿಂದ ಕೊಂದು ಯಾವುದೋ ರಸ್ತೆಯ ಅಂಚಿನಲ್ಲಿ ಅವಳ ಶವವನ್ನು ಎಸೆದಿತ್ತು.

ತಂಜಮ್ ಮನೋರಮಾಳ ಘಟನೆ ಇಡೀ ರಾಜ್ಯದ ಜನತೆಯ ಸ್ವಾಭಿಮಾನವನ್ನು ಸಾಮೂಹಿಕವಾಗಿ ಮೀಟಿತು. ನಗರದ, ಗ್ರಾಮದ

ಜನತೆ ೧೯೫೮ರ ಸಶಸ್ತ್ರ ಪಡೆಯ ವಿಶೇಷ ಅಧಿಕಾರವನ್ನು ವಿರೋಧಿಸಿ ಬೃಹತ್ ಪ್ರತಿಭಟನೆಯನ್ನು ಕೈಗೊಂಡಿತು. ಈ ಹಿಂದೆಯೂ ಅನೇಕ ಮನೋರಮಾಗಳು ಸೈನ್ಯದ ಕ್ರೌರ್ಯಕ್ಕೆ ಹಾಗೂ ಅತ್ಯಾಚಾರಕ್ಕೆ ಒಳಗಾಗಿದ್ದರು. ಮಾನವ ಹಕ್ಕಿನ ಉಲ್ಲಂಘನೆ ನಿರಂತರವಾಗಿ ನಡೆಯುತ್ತಲೇ ಇದೆ. ರಾಜ್ಯದಲ್ಲಿ ಸದ್ಯದ ಪರಿಸ್ಥಿತಿ ತೀರಾ ನಿರಾಶಾದಾಯಕವಾಗಿದೆ, ಮಣಿಪುರದ ಜನತೆ ತಮ್ಮ ತಾಯ್ನೆಲದಲ್ಲಿಯೆ ಎರಡನೆ ದರ್ಜೆಯ ಪ್ರಜೆಗಳಾಗಿದ್ದಾರೆ.

ಮಣಿಪುರದ ಜನತೆ ಹಾಗೂ ನಾಗಾಲ್ಯಾಂಡಿನ ಜನತೆ ಇಂದು ತಾವು ಭಾರತದ ಪ್ರಜೆಗಳೇ ಅಲ್ಲವೇನೋ ಎನ್ನುವ ನಿರಾಶೆಯಲ್ಲಿ ದಿನದೂಡುತ್ತಿದ್ದಾರೆ. ಈಶಾನ್ಯ ಭಾಗದ ಜನತೆಗೆ ತಮ್ಮ ಮೇಲಾಗುತ್ತಿರುವ ಫ್ಯಾಸಿಸ್ಟ್ ಕಾರ್ಯಾಚರಣೆಯಿಂದಾಗಿ ತಾವು ಸಂವಿಧಾನಬದ್ಧವಾಗಿ ರಕ್ಷಣೆ ಇಲ್ಲದೆ ಬದುಕುತ್ತಿರುವ ಕೊರಗು ಕಾಡುತ್ತಿದೆ.

ಇತ್ತೀಚೆಗೆ ೧೭ ಅಸ್ಸಾಂ ರೈಫಲಿನ ಮುಖ್ಯ ಕಚೇರಿಯ ಮುಂದೆ ಮೈರಾ ಪೈಬಿಯ ಮಹಿಳೆಯರು ನಡೆಸಿದ ಪ್ರತಿಭಟನೆ ಎಂಥವರನ್ನು ಬೆಚ್ಚಿಸುವಂತಿತ್ತು. ಮಧ್ಯಮ ವರ್ಗದ ಗೌರವಾನ್ವಿತ ಕುಟುಂಬದ ಮಧ್ಯ ವಯಸ್ಸಿನ ಹೆಂಗಸರು ಸಂಪೂರ್ಣ ನಗ್ನರಾಗಿ ಬನ್ನಿ ನಮ್ಮ ಮೇಲೆ ಅತ್ಯಾಚಾರ ಮಾಡಿ, ನಮ್ಮ ಮಾಂಸವನ್ನು ತೆಗೆದುಕೊಳ್ಳಿ ಎನ್ನುವ ಕೂಗು ಇಡೀ ಭಾರತವನ್ನೇ ತಲ್ಲಣಗೊಳ್ಳುವಂತೆ ಮಾಡಿದೆ. ಇದು ಮಣಿಪುರದ ಸಮಸ್ಯೆಗೆ ಒಂದು ಹೊಸ ಆಯಾಮವನ್ನು ನೀಡಿತು. ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವ ಭಾರತದ ಜನತೆ ತನ್ನೆಲ್ಲಾ ರಾಜಕೀಯ, ತಾತ್ವಿಕ, ಧಾರ್ಮಿಕ ಹಾಗೂ ಪ್ರಾದೇಶಿಕ ಭೇದವನ್ನು ಮರೆತು ಮಣಿಪುರದ ಈ ಘಟನೆಯನ್ನು ಖಂಡಿಸಿದೆ.

ಜುಲೈ ೧೧ರ ಬೆಳಗ್ಗೆ ತಂಜಮ್ ಮನೋರಮಾಳನ್ನು ಎಳೆದೊಯ್ದು ಸೇನೆ ಆಕೆಯ ಮೇಲೆ ಅತ್ಯಾಚಾರವೆಸಗಿ ಬಂದೂಕಿನಿಂದ ಕೊಂದು ಯಾವುದೋ ರಸ್ತೆಯ ಅಂಚಿನಲ್ಲಿ ಅವಳ ಶವವನ್ನು ಎಸೆದಿತ್ತು. ತಂಜಮ್ ಮನೋರಮಾಳ ಘಟನೆ ಇಡೀ ರಾಜ್ಯದ ಜನತೆಯ ಸ್ವಾಭಿಮಾನವನ್ನು ಸಾಮೂಹಿಕವಾಗಿ ಮೀಟಿತು. ನಗರದ, ಗ್ರಾಮದ ಜನತೆ ೧೯೫೮ರ ಸಶಸ್ತ್ರ ಪಡೆಯ ವಿಶೇಷ ಅಧಿಕಾರವನ್ನು ವಿರೋಧಿಸಿ ಬೃಹತ್ ಪ್ರತಿಭಟನೆಯನ್ನು ಕೈಗೊಂಡಿತು. ಈ ಹಿಂದೆಯೂ ಅನೇಕ ಮನೋರಮಾಗಳು ಸೈನ್ಯದ ಕ್ರೌರ್ಯಕ್ಕೆ ಹಾಗೂ ಅತ್ಯಾಚಾರಕ್ಕೆ ಒಳಗಾಗಿದ್ದರು. ಮಾನವ ಹಕ್ಕಿನ ಉಲ್ಲಂಘನೆ ನಿರಂತರವಾಗಿ ನಡೆಯುತ್ತಲೇ ಇದೆ. ರಾಜ್ಯದಲ್ಲಿ ಸದ್ಯದ ಪರಿಸ್ಥಿತಿ ತೀರಾ ನಿರಾಶಾದಾಯಕವಾಗಿದೆ, ಮಣಿಪುರದ ಜನತೆ ತಮ್ಮ ತಾಯ್ನೆಲದಲ್ಲಿಯೆ ಎರಡನೆ ದರ್ಜೆಯ ಪ್ರಜೆಗಳಾಗಿದ್ದಾರೆ.

ಇಂದು ಮಣಿಪುರದ ಜನತೆ ಎಂದಿಗಿಂತಲೂ ಹೆಚ್ಚು ಸಂಘಟಿತರಾಗಿ ಮೆರವಣಿಗೆ ನಡೆಸಿ ಭಾರತ ದೇಶದ ಆತ್ಮಸಾಕ್ಷಿಯನ್ನು ಬಡಿದೆಬ್ಬಿಸಲು ಸಿದ್ಧರಾಗಿದ್ದಾರೆ. ಇಂತಹ ಸನ್ನಿವೇಶದಲ್ಲಿಯೆ ಸರ್ಕಾರ ಎಚ್ಚೆತ್ತುಕೊಂಡಿದೆ. ಈಗ ಮಣಿಪುರದಲ್ಲಿ ನಿಜವಾಗಿಯೂ ಸಮಸ್ಯೆ ಇರುವುದೆಂಬ ಎಚ್ಚರ ಸರ್ಕಾರಕ್ಕೆ ಮೂಡಿರುವುದೇನೋ ನಿಜ, ಆದರೆ ಸಶಸ್ತ್ರ ಪಡೆ ಎಂದಿನಂತೆ ತನ್ನ ಪಾಶವೀ ಕೃತ್ಯವನ್ನು ಮುಂದುವರೆಸಿದೆ. ಮೆರವಣಿಗೆಯನ್ನು ನಡೆಸುತ್ತಿದ್ದ ಜನತೆಯ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಲಾಯಿತು. ಮಾಧ್ಯಮಗಳು ಮೂಕಸಾಕ್ಷಿಗಳಾಗಬೇಕಾಯಿತು.

ಕೇಂದ್ರ ರಕ್ಷಣಾ ಸಚಿವರಿಂದ ಮಣಿಪುರದ ಮುಖ್ಯ ಮಂತ್ರಿಗಳಿಗೆ ಸದಾ ಎಚ್ಚರಿಕೆಯ ಕರಗಂಟೆ ಬರುತ್ತದೆ. ಆ ಪ್ರಕಾರ ಬೆಳೆಯುತ್ತಿರುವ ಜನಪರ ಚಳವಳಿಗಳನ್ನು ಮಟ್ಟಹಾಕಬೇಕು, ಇಲ್ಲದಿದ್ದರೆ ಕೇಂದ್ರ ಸರ್ಕಾರವೇ ಆ ಕಾರ್ಯವನ್ನು ಮಾಡಬೇಕಾಗುತ್ತದೆ. ಪ್ರಜಾಸರ್ಕಾರ ನೇಮಕಾವಸ್ಥೆಯ ಪ್ರಭುತ್ವವಾಗಿ ರಾಜಕಾರಣಿಗಳು ನಿರಂತರವಾಗಿ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದರಲ್ಲಿಯೆ ನಿರತರಾಗಿದ್ದಾರೆ. ಸದ್ಯ ನಡೆಯುತ್ತಿರುವ ಹೋರಾಟವನ್ನು ರಾಷ್ಟ್ರೀಯ ಭದ್ರತಾ ಕಾಯ್ದೆಯ ಅಡಿಯಲ್ಲಿ ನಿಯಂತ್ರಿಸಲಾಗುತ್ತಿದೆ.

ಪ್ರಗತಿಪರ ಸಂಘಟನೆಗಳನ್ನು ನಿಷೇಧಿಸಿರುವುದಲ್ಲದೆ ಅನೇಕ ನಾಯಕರುಗಳನ್ನು ಬಂಧಿಸಲಾಗುತ್ತಿದೆ. ಮಣಿಪುರದಲ್ಲಿ ನಡೆಯುತ್ತಿರುವ ಘಟನೆಗಳನ್ನು ಪ್ರಚಾರ ಮಾಡದಂತೆ ಮಾಧ್ಯಮಗಳನ್ನು ನಿರ್ಬಂಧಿಸಲಾಗಿದೆ. ಸರ್ಕಾರ ತನ್ನದೇ ಮಾಧ್ಯಮದಲ್ಲಿ ಮಣಿಪುರದ ಬಗ್ಗೆ ಸುಳ್ಳು ಸುದ್ದಿಯನ್ನು ಹಬ್ಬಿಸಲು ಹವಣಿಸಿದೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿಯಂತ್ರಿಸಿದೆ. ಭಾರತದ ಇತರೆ ಜನತೆ ಮಣಿಪುರದ ಜನತೆಯನ್ನು ಗುಮಾನಿಯಿಂದ ನೋಡುವಂತಹ ವಾತಾವರಣ ಸೃಷ್ಟಿ ಮಾಡಲಾಗುತ್ತಿದೆ.

ನಿವೃತ್ತ ಆರ್ಮಿ ಜನರಲ್ ಒಬ್ಬರು ಪ್ರಮುಖ ದಿನಪತ್ರಿಕೆಯ ಸಂಪಾದಕೀಯದಲ್ಲಿ ಬರೆದ ಲೇಖನವೊಂದು ಮಣಿಪುರದ ಸಮಸ್ಯೆಗೆ ಹೊಸದೊಂದು ತಾರ್ಕಿಕ ಆಯಾಮವನ್ನು ನೀಡಿದೆ. ಆ ಪ್ರಕಾರ ರಾಜಕೀಯ ಸಮಸ್ಯೆಗೆ ರಾಜಕೀಯ ಪರಿಹಾರ ನೀಡಬೇಕು. ಅವರು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳನ್ನೆ ಈ ಸಮಸ್ಯೆಗೆ ಕಾರಣಕರ್ತರು ಎಂದಿದ್ದಾರೆ. ಮಣಿಪುರದ 'ಅನಾಥ' ಸ್ಥಿತಿಗೆ ಸರ್ಕಾರಗಳೆ ಜವಾಬ್ದಾರಿ ಹೊರಬೇಕು. ಆಂತರಿಕ ಸಮಸ್ಯೆಯ ಸಂದರ್ಭದಲ್ಲಿ ಸೇನೆಯನ್ನು ಕೇವಲ ನಿಗದಿತ ಅವಧಿಗೆ ಮಾತ್ರ ಬಳಸಿಕೊಳ್ಳಬೇಕು. ಸೇನೆ ಆಂತರಿಕ ಸಮಸ್ಯೆಯಲ್ಲಿ ಹಸ್ತಕ್ಷೇಪ ನಡೆಸಬಾರದು. ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಯಾಗಿ ಪರಿಗಣಿಸಬಾರದು. ಬ್ರಿಟಿಷ್ ಆಡಳಿತದ ಪಳೆಯುಳಿಕೆಯಾದ AFSPA ದಂತಹ ವಸಾಹತುಶಾಹಿ ಮಾದರಿ ಆಳ್ವಿಕೆಯನ್ನು ಸಂಪೂರ್ಣವಾಗಿ ತೆರವುಗೊಳಿಸಬೇಕು.

ಕೇಂದ್ರ ಸರ್ಕಾರ ಹಾಗೂ ಕೆಲವು ರಾಜಕೀಯ ಪಕ್ಷಗಳು ಮಣಿಪುರದ ಬೆಳವಣಿಗೆಗಳು ರಾಷ್ಟ್ರೀಯ 'ಏಕತೆ ಹಾಗೂ ಪ್ರಾದೇಶಿಕ ಐಕ್ಯತೆಗೆ' ಭಂಗ ತರುವಂತಿದೆ ಎಂದು ಸಾರುತ್ತಿವೆ. ಭದ್ರತೆಯ ಹೆಸರಿನಲ್ಲಿ ಮಹಿಳೆಯರ ಸಾಮೂಹಿಕ ಅತ್ಯಾಚಾರ ನಡೆಸಿ ಜನತೆಯನ್ನು ಹೆದರಿಸಲಾಗುತ್ತಿದೆ. ಕಲೆಕ್ಟಿವ್ ಫೈನ್ಸ್ ಮತ್ತು ಕಲೆಕ್ಟಿವ್ ಫನೀಷ್‌ಮೆಂಟ್ ಹೆಸರಿನಲ್ಲಿ ಗ್ರಾಮಗಳನ್ನು ಸುಡಲಾಗುತ್ತಿದೆ. ಸಮುದಾಯಗಳನ್ನು ಒಡೆದು ಆಳುವ ಮೂಲಕ ಪರಸ್ಪರ ಸಂಶಯದ ವಾತಾವರಣ ನಿರ್ಮಾಣವಾಗಿದೆ.

ಭಾರತದ ಸೇನೆ 'Counter insargency'ಯ ಬಗ್ಗೆ ವಿಯೆಟ್ನಾಂ ಯುದ್ಧದ ಸಂದರ್ಭದಲ್ಲಿ ಅಮೆರಿಕಾದಿಂದ ತರಬೇತಿ ಪಡೆದಿತ್ತು. ಕೇಂದ್ರದ ಯುಪಿಎ ಸರ್ಕಾರವೂ ಕೂಡ ಮಣಿಪುರದ ಸಮಸ್ಯೆಗೆ ಸೂಕ್ತ ಪರಿಹಾರ ನೀಡಲು ಮುಂದಾಗುತ್ತಿಲ್ಲ. ಈಶಾನ್ಯ ಭಾಗದ ಜನತೆಯ ಹಾಗೂ ಮಣಿಪುರದ ಯಾವುದೇ ರಾಜಕೀಯ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ನೀಡಲು ಮುಂದಾಗಿಲ್ಲ. ಪಾರ್ಲಿಮೆಂಟಿನಲ್ಲಿ ಮಣಿಪುರದ ಜನತೆಯಿಂದ ಮುಂದಿಟ್ಟ ಬೇಡಿಕೆಗಳ ಬಗ್ಗೆ ಚರ್ಚೆ ನಡೆಸಲೂ ಮುಂದಾಗದ ಕೇಂದ್ರ ಸರ್ಕಾರ AFSPA ದ ಮುಂದುವರಿಕೆಯ ಬಗ್ಗೆಯೂ ಯಾವುದೇ ಸಮರ್ಥನೆ ನೀಡಲು ಮುಂದಾಗಲಿಲ್ಲ. ಎಡಪಂಥೀಯ ಪಕ್ಷಗಳು ಪರೋಕ್ಷವಾಗಿ 'ದೇಶದ ಐಕ್ಯತೆಗಾಗಿ' ಸೇನೆ ಅನಿವಾರ್ಯ ಎಂದು ಹೇಳುವುದರಿಂದ ಜನತೆಯ ಮೇಲೆ ಫ್ಯಾಸಿಸ್ಟ್ ಶಕ್ತಿಗಳ ಪ್ರಹಾರ ಹಿಂಸೆ ಮುಂದುವರೆದಿದೆ. ಯುಪಿಎ ಸರ್ಕಾರ ಕೂಡ ಹಿಂದಿನ ಎನ್‌ಡಿಎ ಸರ್ಕಾರದ ದಾಟಿಯನ್ನೇ ಮುಂದುವರೆಸಿದೆ.

ಈಗ ಅಸ್ಸಾಂ ಜನತೆಯು ಸರ್ಕಾರದ ಮುಂದಿಟ್ಟಿರುವ ಬೇಡಿಕೆಗಳು ಪ್ರಮುಖವಾಗಿ 'AFSPA'ಯನ್ನು ಹಿಂತೆಗೆದುಕೊಳ್ಳುವುದು, ರಾಷ್ಟ್ರೀಯ ರಕ್ಷಣಾ ಕಾಯ್ದೆಯ ಹೆಸರಿನಲ್ಲಿರುವ ವಿವಿಧ ರೀತಿಯ ಕಾನೂನುಗಳು, ಸಶಸ್ತ್ರ ಪಡೆಯನ್ನು ತೆಗೆದುಹಾಕುವುದು, ಇದುವರೆಗೆ ಬಂಧಿಸಲಾಗಿರುವ ಹೋರಾಟಗಾರರನ್ನು ಬಿಡುಗಡೆ ಮಾಡುವುದು ಹಾಗೂ ಪ್ರಗತಿಪರ ಸಂಘಟನೆಗಳ ಮೇಲಿನ ನಿಷೇಧಾಜ್ಞೆಯನ್ನು ತೆಗೆದುಹಾಕುವುದು, ರಾಷ್ಟ್ರೀಯ ಐಕ್ಯತೆ ಹಾಗೂ ಪ್ರಾದೇಶಿಕ ಏಕತೆಯ ಕಲ್ಪನೆಯನ್ನು ತಿರಸ್ಕರಿಸುವ ಭಾರತದ ಪ್ರಜೆಗಳೆಲ್ಲರ ಐಕ್ಯತೆಯ ಪರವಾಗಿದೆ.

ಅಂದು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಪ್ರದರ್ಶಿಸಲಾದ ವಿಡಿಯೋ ಚಿತ್ರ ಎಂತಹ ಕಲ್ಲು ಹೃದಯದವರನ್ನು ಕರಗಿಸುವಂತಿತ್ತು. ಸೇನೆ ಮಹಿಳೆಯರ ಮೇಲಿನ ಅತ್ಯಾಚಾರವನ್ನು ಸಂಘಟಿತ ಹೋರಾಟದ ವಿರುದ್ಧದ ಅಸ್ತ್ರವೆಂದು ಭಾವಿಸಿದೆ. ಮೇಲ್ವರ್ಗದ ಜನತೆಯ ಕೈಗೆ ಅತ್ಯಾಚಾರದಂತಹ ಕ್ರಿಯೆ ರಾಜಕೀಯ ಅಸ್ತ್ರವಾಗುತ್ತಿದೆ. ಹೋರಾಟ ನಡೆಸುವ ಬಹುಸಂಖ್ಯಾತ ಶೋಷಿತರನ್ನು ಹತ್ತಿಕ್ಕಲು ಮೇಲ್ವರ್ಗದ, ಯಥಾಸ್ಥಿತಿವಾದಿಗಳು ಬಳಸುತ್ತಿರುವ ಪ್ರಬಲ ಅಸ್ತ್ರ. ಸೇನೆ ಮಹಿಳೆಯರ ಮೇಲೆ ನಡೆಸುತ್ತಿರುವ

ದೌರ್ಜನ್ಯದ ಬಗ್ಗೆ ಸಾಕಷ್ಟು ವರದಿಗಳು ಪ್ರಕಟವಾಗಿದೆ. ಸರ್ಕಾರ ಇದುವರೆಗೆ ಯಾರನ್ನೂ ತಪ್ಪಿತಸ್ಥರೆಂದು ಪರಿಗಣಿಸಿಲ್ಲ. ಸರ್ಕಾರದ ಮೌನ ಸೇನೆಗೆ ಸಮ್ಮತಿ ಸೂಚಕವಾಗಿದೆ.

ಶಾಲಾ ಕಾಲೇಜುಗಳು ಸರಿಯಾಗಿ ಕಾರ್ಯನಿರ್ವಹಿಸದ ಕಾರಣ ಅಲ್ಲಿಯ ವಿದ್ಯಾರ್ಥಿಗಳು ಭಾರತದ ಇತರೆ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಅಮಾಯಕ ಜನತೆ, ವಿದ್ಯಾರ್ಥಿಗಳನ್ನು ರಾಕ್ಷಸರಂತೆ ಹಿಂಸಿಸುವ ಸೇನೆಯನ್ನು ಹಿಂದಕ್ಕೆ ಪಡೆಯಿರಿ ಎನ್ನುವ ಮಣಿಪುರದ ಒಂಟಿ ಧ್ವನಿಗೆ ಇಂದು ದೇಶಾದ್ಯಂತ ಪ್ರಗತಿಪರರ ಬೆಂಬಲ ದೊರೆಯುತ್ತಿದೆ.

ರಾಷ್ಟ್ರದ ಭದ್ರತೆ ಮತ್ತು ಏಕತೆಯ ದೃಷ್ಟಿಯಿಂದ ಸೇನೆಯನ್ನು ಹಿಂದೆ ಪಡೆಯಲು ಇಚ್ಛಿಸದ ಸರ್ಕಾರ ಮಾನವೀಯತೆಯ ದೃಷ್ಟಿಯಿಂದ ಕಾನೂನು ಜಾರಿಗೆ ಬಂದಿರುವ ಬಗ್ಗೆ ಎಚ್ಚರವಹಿಸಬೇಕಾಗಿದೆ. ತಮ್ಮ ಸಹೋದರಿಯರ ಮಾನಭಂಗವನ್ನು ಕಂಡು ಮೌನವಾಗಿ ಮರುಗಿದ ಕೆಲವು ತಾಯಂದಿರು ಬತ್ತಲಾಗಿ ನಡೆಸಿದ ಹೋರಾಟಕ್ಕೊಂದು ಬಯಲಾದರು ದೊರೆಯಬೇಕು.

ಸರ್ಕಾರದ ಮೌನ ಸೇನೆಗೆ ಸಮ್ಮತಿ ಸೂಚಕವಾಗಿದೆ. ಶಾಲಾ ಕಾಲೇಜುಗಳು ಸರಿಯಾಗಿ ಕಾರ್ಯನಿರ್ವಹಿಸದ ಕಾರಣ ಅಲ್ಲಿಯ ವಿದ್ಯಾರ್ಥಿಗಳು ಭಾರತದ ಇತರೆ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಅಮಾಯಕ ಜನತೆ, ವಿದ್ಯಾರ್ಥಿಗಳನ್ನು ರಾಕ್ಷಸರಂತೆ ಹಿಂಸಿಸುವ ಸೇನೆಯನ್ನು ಹಿಂದಕ್ಕೆ ಪಡೆಯಿರಿ ಎನ್ನುವ ಮಣಿಪುರದ ಒಂಟಿ ಧ್ವನಿಗೆ ಇಂದು ದೇಶಾದ್ಯಂತ ಪ್ರಗತಿಪರರ ಬೆಂಬಲ ದೊರೆಯುತ್ತಿದೆ. ರಾಷ್ಟ್ರದ ಭದ್ರತೆ ಮತ್ತು ಏಕತೆಯ ದೃಷ್ಟಿಯಿಂದ ಸೇನೆಯನ್ನು ಹಿಂದೆ ಪಡೆಯಲು ಇಚ್ಛಿಸದ ಸರ್ಕಾರ ಮಾನವೀಯತೆಯ ದೃಷ್ಟಿಯಿಂದ ಕಾನೂನು ಜಾರಿಗೆ ಬಂದಿರುವ ಬಗ್ಗೆ ಎಚ್ಚರವಹಿಸಬೇಕಾಗಿದೆ. ತಮ್ಮ ಸಹೋದರಿಯರ ಮಾನಭಂಗವನ್ನು ಕಂಡು ಮೌನವಾಗಿ ಮರುಗಿದ ಕೆಲವು ತಾಯಂದಿರು ಬತ್ತಲಾಗಿ ನಡೆಸಿದ ಹೋರಾಟಕ್ಕೊಂದು ಬಯಲಾದರು ದೊರೆಯಬೇಕು.

ಪಾಕಿಸ್ತಾನದ ಜೊತೆಗೆ ಮಾತುಕತೆಗೆ ಸಿದ್ಧವಾಗಿರುವ ಸರ್ಕಾರ ತನ್ನೊಡಲ ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಕಡೆ ಮುಂದಾಗಬೇಕು. ಮಣಿಪುರದ ಸ್ಥಿತಿ, ಜಮ್ಮು ಮತ್ತು ಕಾಶ್ಮೀರಕ್ಕಿಂತ ಭಿನ್ನ ಎಂಬುದು ಹೋರಾಟಗಾರರ ವಾದ. ಸುಂದರ ನಿಸರ್ಗದ ಬೆಟ್ಟಗುಡ್ಡಗಳಲ್ಲಿ ವಾಸಿಸುವ ವಿವಿಧ ಬುಡಕಟ್ಟುಗಳ, ಸಂಸ್ಕೃತಿಯ, ಭಾಷೆ, ಧರ್ಮದ ಈ ಜನ ದೇಶದ 'ಬಹುಮುಖಿ' ಸಂಸ್ಕೃತಿಯ ಪ್ರತೀಕವಾಗಿದ್ದಾರೆ. ಈ ಬಗ್ಗೆ ಹೆಚ್ಚಿನ ಬೆಂಬಲವನ್ನು ಮಣಿಪುರದ ಬೆಂಗಳೂರಿನ ವಿದ್ಯಾರ್ಥಿಗಳು ಬಯಸುತ್ತಿದ್ದಾರೆ. ಅವರ ಹೋರಾಟದ ಸಾಗರಕ್ಕೆ ಮತ್ತಷ್ಟು ನದಿಗಳು ನೆರವಾಗಬೇಕೆಂಬ ಹಂಬಲ. □

ಅನುಭವದ ಗಣಿಯಿಂದ

ಹಸಿವು - ಅಸ್ಪೃಶ್ಯತೆ ಮತ್ತು ಅವಮಾನ ಮನುಷ್ಯನ ಅಂತಃಶಕ್ತಿಯನ್ನು ಉಡುಗಿಸಿ ಅವನನ್ನು ನಿಸ್ತೇಜನನ್ನಾಗಿಸುವ ಸಾಮಾಜಿಕ ದುರಂತಗಳು. ಇಪ್ಪತ್ತೊಂದನೆ ಶತಮಾನದ ವೈಜ್ಞಾನಿಕ ಯುಗದಲ್ಲಿ ಕೂಡ ಭಾರತೀಯ ಸಮಾಜ ಇವುಗಳಿಂದ ಹೊರಬರಲು ಸಾಧ್ಯವಾಗಿಲ್ಲ. ಬಡತನ ಮತ್ತು ಸಾಮಾಜಿಕ ಅಸಮಾನತೆಗಳ ಕಾರಣದಿಂದಲೇ ಭಾರತದಲ್ಲಿ ಪ್ರತಿಭೆಗಳನ್ನು ಗುರುತಿಸಲೂ ಸಾಧ್ಯವಾಗುತ್ತಿಲ್ಲ.

ಹಸಿವು ದಾರುಣವಾದುದಾದರೆ, ಅಸ್ಪೃಶ್ಯತೆ ಅಮಾನವೀಯವಾದುದು. ಅಸ್ಪೃಶ್ಯರಲ್ಲದ ಕೆಲವು ಕೆಳಜಾತಿಗಳ ಅಪಮಾನ ಕೂಡ ಕಡಿಮೆಯಾದದ್ದೇನಲ್ಲ.

ನಮ್ಮ ನಡುವಿನ ಹಲವಾರು ಅಸಮಾನ್ಯ ಪ್ರತಿಭೆಗಳು, ಸಾಹಿತಿ-ಕಲಾವಿದರು- ಮೊದಲ ತಲೆಮಾರಿನ ಶಿಕ್ಷಿತರು ಇಂಥ ಅಸಮಾನತೆಗಳನ್ನು ಉಂಡು ಬೆಳೆದವರೇ ಆಗಿದ್ದಾರೆ. ಇಂಥ ನೋವುಗಳ ಅನುಭವ ಕಥಾನಕಗಳನ್ನು 'ಸಂವಾದ' ವಿಶೇಷಾಂಕಕ್ಕಾಗಿ ಆಹ್ವಾನಿಸುತ್ತದೆ. ದಯಮಾಡಿ ಒಂದು ಸಾವಿರ ಪದಗಳಿಗೆ ಮೀರದಂತೆ ನಿಮ್ಮ ಅನುಭವಗಳನ್ನು ನಮಗೆ ಬರೆದು ಕಳುಹಿಸಿ. ಭಾಷೆ-ಶೈಲಿಯ ಬಗೆಗೆ ತಲೆಕೆಡಿಸಿಕೊಳ್ಳಬೇಡಿ. ನಿಮಗೆ ಅನಿಸಿದ ಹಾಗೆ ನಿಮ್ಮದೇ ಭಾಷೆ-ಶೈಲಿ ಇರಲಿ.

ನಿಮ್ಮ ಬರಹ ನಮಗೆ ತಲುಪಬೇಕಾದ ದಿನಾಂಕ ನವೆಂಬರ್ ೩೦, ೨೦೦೪

ವಿಳಾಸ : ಸಂಪಾದಕರು, 'ಸಂವಾದ' ಮಾಸ ಪತ್ರಿಕೆ, ೬೩, ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ, ಮಾಗಡಿ ರಸ್ತೆ, ಬೆಂಗಳೂರು - ೫೬೦ ೦೯೧



ನಿನ್ನೆಯಷ್ಟೇ ಕಳೆದುಹೋಯಿತು
ಸ್ವತಂತ್ರ
ಜಾಗತೀಕರಣದ ಮುಷ್ಟಿಯಲ್ಲಿ ಪರತಂತ್ರದ ಉಬ್ಬೆಗದಲಿ
ನಮ್ಮ ಶಿಲುಬೆ ನಾವು ಹೊತ್ತು
ಬೀಗುತ್ತಿದ್ದೇವೆ ತೂಗುತ್ತಿದ್ದೇವೆ
ವೇದಿಕೆಗಳಲ್ಲಿ ಬಾಲಬಡುಕರ ನಡುವೆ
ಹಸಿವು ಹಾಹಾಕಾರದ ಸುತ್ತು
ನ್ಯಾಯದ ತಕ್ಕಡಿಯಷ್ಟೂ ತೂತು
ಪ್ರೀತಿ ಹರೆಯವಿಲ್ಲಿ
ತಲ್ಲಣದ ಸಂತೆಯಲ್ಲಿ
ಜೂಜು ಕುದುರೆ
ಆಚರಿಸಿದ್ದೇವೆ ನಾವೂ... ಆತಂಕದ ಮೊಟ್ಟೆಗಳಾಗಿ
ಸ್ವತಂತ್ರ - ೫೮
ನಿಜ ಹೆರುವ ವಯಸ್ಸಲ್ಲ.. ಇದು
ಪರಿಪಕ್ವತೆಗೀಗ ಸುಮುಹೂರ್ತ
ಅರಸಬೇಕಿದೆ ಆಲದ ನೆರಳಲ್ಲಿ
ಸಾಂತ್ವನದ ಒಂದು ನಿಶ್ಚಿಂತ ತಾಣ
ಭವಿಷ್ಯದ ಕನಸುಗಳಷ್ಟೂ ಕಾಯುತಿವೆ
ಗರಿಬಿಚ್ಚಿ ನೆಗೆಯಲಿಕೆ
ಭೂಗೋಳದ ಪರಿಧಿಯಲಿ
ಸುಪ್ತ ಸಮಾಧಿ ಸ್ಥಿತಿಯಲ್ಲಿ

○ ದೇವಿಕಾ ನಾಗೇಶ್

ಝೆನ್

ಅವಲೋಕನ ಕಥೆ ಪ್ರಸಂಗ ಸಂವಾದ ಒಗಟು ಮುಂಡಿಗೆಗಳು

○ಕೆ.ವಿ. ಸುಬ್ಬಣ್ಣ



ಸುರಿದು ಬಾ, ಖಾಲಿಯಾಗಿರಬೇಡ

ಜೋಶು ಎಂಬ ಗುರು, ಝೆನ್ ಬಗ್ಗೆ ಕಲಿಯಲು ತೊಡಗಿದ್ದೇ ತನ್ನ ಅರವತ್ತನೆಯ ವರ್ಷದಲ್ಲಿ. ಎಂಬತ್ತನೆಯ ವರ್ಷದಲ್ಲಿ ಆತನಿಗೆ ಜ್ಞಾನೋದಯವಾಯ್ತು. ಅದರಿಂದ ಮುಂದೆ, ಆತ ನಲವತ್ತು ವರ್ಷಗಳ ಕಾಲ ಗುರುವಾಗಿ ಬೋಧಿಸುತ್ತಿದ್ದ ಎಂದು ಹೇಳುತ್ತಾರೆ.



ಒಮ್ಮೆ ಒಬ್ಬ ವಿದ್ಯಾರ್ಥಿ, ವೃದ್ಧನಾದ ಜೋಶುನ ಹತ್ತಿರ ಬಂದು ಹೀಗೆ ಪ್ರಶ್ನೆ ಮಾಡಿದ- 'ಗುರುವೇ, ನಾವು ನಮ್ಮ ಮನಸ್ಸನ್ನು ಶೂನ್ಯಗೊಳಿಸಿಕೊಳ್ಳಬೇಕು ಎಂದು ನೀವು ಬೋಧಿಸುತ್ತೀರಿ. ನನ್ನ ಮನಸ್ಸಿನಲ್ಲಿ ಏನೂ ಇಲ್ಲವಲ್ಲ, ನಾನೇನು ಮಾಡಲಿ?'

'ಹೊರಗೆ ಎಸೆದುಬಿಡು' ಎಂದ ಜೋಶು.

'ಏನೂ ಇಲ್ಲವಲ್ಲ ಗುರುವೇ, ಇಲ್ಲದ್ದನ್ನು ಹೊರಗೆ ಎಸೆಯುವುದು ಹೇಗೆ?' ಎಂದು ಆತ ಮತ್ತೆ ಪ್ರಶ್ನಿಸಿದ.

ಜೋಶು ಗುಡುಗಿದ-

'ಹೊರಗೆ ಎಸೆಯಲಿಕ್ಕಾಗದಿದ್ದರೆ, ಒಯ್ದು ಹೊರಗೆ ಇಟ್ಟು ಬಾ. ಹೊರಕ್ಕೆ ಅಟ್ಟಿ ಬಾ. ಹೋಗಿ ಹೊರಗೆ ಸುರಿದು ಬಾ. ಏನು ಮಾಡಿದರೂ ಸರಿಯೆ. ಹೀಗೆ, ಮನಸ್ಸಿನಲ್ಲಿ ಏನೂ ಇಲ್ಲದೆ ಖಾಲಿಯಾಗಿ ಮಾತ್ರ ನನ್ನ ಎದುರಲ್ಲಿ ನಿಂತುಕೊಂಡಿರಬೇಡ.'

ಶೋಕ ಹರ್ಷ

ಚು ಆಂಗ್ ತ್ಸುನ ಹೆಂಡತಿ ಸತ್ತಳು. ಸುತ್ತ ಇದ್ದವರೆಲ್ಲ ಶೋಕ ಆಚರಿಸುತ್ತಿದ್ದರು. ಚು ಆಂಗ್ ತ್ಸು ಮಾತ್ರ, ಹೊರಗೆ ಅಂಗಳದಲ್ಲಿ ತಾಳ ಬಾರಿಸಿಕೊಂಡು ಕುಣಿಯತೊಡಗಿದ್ದ.



ಅಲ್ಲಿದ್ದ ಆತನ ಶಿಷ್ಯನೊಬ್ಬನಿಗೆ ತಡೆಯಲಿಕ್ಕಾಗಲಿಲ್ಲ, ಕೇಳಿದ. 'ಗುರುವೇ, ದೀರ್ಘಕಾಲ ಜೊತೆಯಲ್ಲಿ ಬಾಳಿದ ಜೀವ ಮೃತಗೊಂಡಿರುವಾಗ ನೀವು ಶೋಕಿಸುವುದು ಬಿಟ್ಟು ಹರ್ಷದಿಂದ ಉನ್ಮತ್ತರಾದಂತೆ ಕುಣಿಯುತ್ತಿದ್ದೀರಲ್ಲ' ಎಂದ.

ಚು ಆಂಗ್ ತ್ಸು ಹೇಳಿದ-

'ಹೌದಪ್ಪಾ, ಆದರೆ, ಹೇಮಂತ ಹೋಗಿ ಈಗಷ್ಟೇ ವಸಂತ ಬಂದಿದೆಯಲ್ಲ, ಗಿಡಗಳ ತುಂಬ ಹೂವರಳಿ ನಿಂತಿದೆಯಲ್ಲ, ಅದಕ್ಕಾಗಿ ಕುಣಿಯಬೇಕಲ್ಲವೆ?'

ಕಾಲು-ದಾರಿ

ಅವನೊಬ್ಬ ಗುರು. ಸಾಧು. ಪರ್ವತದ ಮೇಲೆ ವಾಸಮಾಡಿಕೊಂಡಿದ್ದ. ಒಬ್ಬ ಭಿಕ್ಷು ಆತನ ಹತ್ತಿರ ಬಂದು, 'ದಾರಿ ಯಾವುದು ಸ್ವಾಮಿ?' ಎಂದು ಪ್ರಶ್ನೆ ಮಾಡಿದ.

'ಪರ್ವತ ತ- ಬಾ ಸುಂದರವಾಗಿದೆಯಯ್ಯಾ' ಎಂದು ಗುರು.

'ನಾನು ಪರ್ವತದ ಬಗ್ಗೆ ಕೇಳಲಿಲ್ಲ, ದಾರಿಯ ಬಗ್ಗೆ ಕೇಳಿದೆ, ಸ್ವಾಮಿ' ಎಂದು ಭಿಕ್ಷು ನಿವೇದಿಸಿಕೊಂಡ.

'ಪರ್ವತವನ್ನು ಉತ್ತರಿಸಿ ಆಚೆ ಹೋಗುವತನಕ ದಾರಿ ಸಿಕ್ಕುವುದಿಲ್ಲ ಮಗನೇ' ಎಂದ, ಗುರು.



ಊಹುಂ ಮುಂಡಿಗೆ

ಒಬ್ಬ ಭಿಕ್ಷು, ಗುರು ಜೋಶುನ ಹತ್ತಿರ ಬಂದು ಹೀಗೆ ಪ್ರಶ್ನೆ ಮಾಡಿದ-

'ಹೇಳಿ ಗುರುವೇ, ಒಂದು ನಾಯಿಯಲ್ಲೂ ಬುದ್ಧ ಸ್ವರೂಪ ಇರುತ್ತದೆಯೇ ? ಅಥವಾ ಇಲ್ಲವೋ?'

ಅದಕ್ಕೆ ಜೋಶು ಉತ್ತರ -'ಊ-ಹುಂ'

ಮುಂದೆ, 'ಊ-ಹುಂ' ಎನ್ನುವುದು ಪ್ರಸಿದ್ಧ 'ಮುಂಡಿಗೆ' ಯೆನಿಸಿಕೊಂಡಿತು.

ಪಂದ್ಯದ ಕಂಬಗಳು

ಒಬ್ಬ ರಾಜ್ಯಾಧಿಕಾರಿ, ಝೆನ್ ಶಿಷ್ಯನಾಗಿ ನಿತ್ಯವೂ ಗುರುವಿನ ಬಳಿಗೆ ಹೋಗುತ್ತಿದ್ದ. ಒಂದು ದಿನ ಆತ ಬರುವುದು ತಡವಾಯ್ತು. 'ಪೋಲೊ (ಕುದುರೆ-ಚೆಂಡು) ಪಂದ್ಯವನ್ನು ನೋಡುತ್ತ ನಿಂತೆ. ತಡವಾಗಿಬಿಟ್ಟಿತು' ಎಂದು ಗುರುವಿಗೆ ವಿವರಣೆ ಹೇಳಿದ.

ಆಮೇಲೆ, ಗುರು-ಶಿಷ್ಯರಲ್ಲಿ ಹೀಗೆ ಪ್ರಶ್ನೋತ್ತರಗಳು ನಡೆದವು-

'ಆಟ ಚೆನ್ನಾಗಿತ್ತೆ?'

'ಚೆನ್ನಾಗಿತ್ತು'

'ಆಟವಾಡುತ್ತಿದ್ದವರು ದಣಿದರೆ?'

'ಹೌದು.'

'ಕುದುರೆಗಳು ದಣಿದವೆ?'

'ಹೌದು.'

'ಗುರುತಿನ ಮರದ ಕಂಬಗಳು ದಣಿದವೆ?'

ಈ ಪ್ರಶ್ನೆಗೆ ಮಾತ್ರ ಆತನಿಗೆ ಉತ್ತರ ಹೊಳೆಯಲಿಲ್ಲ. ಏನೂ ಹೇಳದೆ, ಗುರುವಿಗೆ ಬಾಗಿ ನಮಸ್ಕರಿಸಿ ಅಲ್ಲಿಂದ ಹೊರಟುಹೋದ. ಆ ರಾತ್ರಿಯೆಲ್ಲ ಯೋಚಿಸುತ್ತ ನಿದ್ರೆಯಿಲ್ಲದೆ ತೊಳಲಿದ. ಬೆಳಕು ಹರಿಯುವಾಗ ಆತನಿಗೆ ಉತ್ತರ ಹೊಳೆದಿತ್ತು. ನೇರ ಗುರುವಿನ ಬಳಿಗೆ ಧಾವಿಸಿದ. ಈತನನ್ನು ಕಂಡಕೂಡಲೇ ಗುರು, ಮತ್ತೆ ಪ್ರಶ್ನೆ ಹಾಕಿದ-

'ಮರದ ಕಂಬಗಳು ದಣಿದಿದ್ದವೆ?'

ಶಿಷ್ಯ, ಈಗ ನಿಸ್ಸಂದೇಹದಿಂದ ಉತ್ತರಿಸಿದ-

'ಹೌದು ಗುರುವೇ, ದಣಿದಿದ್ದವು.'

(ಮುಂದೆ, ಈ ಪ್ರಸಂಗವನ್ನು ವ್ಯಾಖ್ಯಾನಿಸಿದ ಒಬ್ಬ ಗುರು ಹೀಗೆ ಹೇಳುತ್ತಾನೆ-

'ನಿಜ, ಕಂಬಗಳು ದಣಿದಿರದಿದ್ದರೆ, ಎಲ್ಲಿಯೂ ದಣಿವು ಎಂಬುದೇ ಇರುತ್ತಿರಲಿಲ್ಲ.')



ಮಹಿಳಾ ರಾಜಕಾರಣದ ಅಮೂರ್ತತೆ

ಮಹಿಳೆ

ಮೇಲ್ಮುಖ ಬೆಳವಣಿಗೆಯ ಅದಮ್ಯ ಆಸೆ ಹೊತ್ತ ಮಹಿಳೆಯರಿಗೆ ತಮ್ಮದೇ ಆದ ರಾಜಕಾರಣವನ್ನು ರೂಪಿಸಿಕೊಳ್ಳುವ ಆಸೆಯಿದೆ. ಆದರೆ ಪರ್ಯಾಯ ರಾಜಕಾರಣಗಳಾವುವೂ ಮಹಿಳೆಯ ಈ ಬೇಡಿಕೆಗಳಿಗೆ ಪೂರಕವಾಗಿ, ತೀವ್ರವಾಗಿ ಪ್ರತಿಕ್ರಿಯಿಸುವ ಉದ್ದೇಶವನ್ನು ಹೊಂದಿಲ್ಲ. ಪರ್ಯಾಯ ರಾಜಕಾರಣಗಳೊಂದಿಗೆ ಕೈಜೋಡಿಸಿ, ಆ ರಾಜಕಾರಣಗಳಿಗೆ ವಿಸ್ತಾರವಾದ ಆಯಾಮವನ್ನು ಮತ್ತು ತಳಹದಿಯನ್ನು ನಿರ್ಮಿಸಲು ಹೋದಾಗಲೊಮ್ಮೆ ಅವಳು ತನ್ನ ಹಿತಾಸಕ್ತಿಗಳನ್ನು ಬಲಿಕೊಡಬೇಕಾಗುತ್ತದೆ. ಮಹಿಳಾ ರಾಜಕಾರಣವು ಆಯಾ ರಾಜಕಾರಣದ ಭಾಗವಾಗಿಯೇ ಮುಚ್ಚಿ ಹೋಗುತ್ತಿದೆ.

○ ಡಾ॥ ಶೈಲಜ ಹಿರೇಮಠ

ಮಹಿಳೆಯರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮಾಡುವ ರಾಜಕಾರಣವನ್ನು ಮಹಿಳಾ ರಾಜಕಾರಣ ಎಂದು ನಿರ್ವಚಿಸಿಕೊಳ್ಳಲಾಗಿದೆ. ಮಹಿಳೆಯರು ಆರ್ಥಿಕ ಅವಕಾಶಗಳನ್ನು, ಸಾಮಾಜಿಕ ಅವಕಾಶಗಳನ್ನು ಮತ್ತು ನಾಗರಿಕ ಹಕ್ಕುಗಳೆಲ್ಲವನ್ನು ಪಡೆದುಕೊಳ್ಳಲು ನಡೆಸುವ ಪ್ರಯತ್ನಗಳು ಮಹಿಳಾ ರಾಜಕಾರಣಗಳಾಗಿವೆ. ಮಹಿಳೆಯರ ಕುರಿತು ಸಮಾಜವು ಅನುಸರಿಸುತ್ತಿದ್ದ ದಮನ ತಂತ್ರಗಳನ್ನು ಬಯಲುಗೊಳಿಸುವತ್ತ ಮಹಿಳಾ ರಾಜಕಾರಣವು ಆಸಕ್ತವಾಗಿರುತ್ತದೆ.

ರಾಜಕಾರಣಗಳು ಎರಡು ನೆಲೆಗಳಲ್ಲಿ ಪ್ರಕಟಗೊಳ್ಳಬಹುದು; ವ್ಯಕ್ತಿಗತ ನೆಲೆಯಲ್ಲಿರಬಹುದು ಅಥವಾ ಸಾಮೂದಾಯಿಕ ನೆಲೆಯಲ್ಲಿರಬಹುದು. ದಲಿತರು, ಕಾರ್ಮಿಕರು ಒಡೆಯನ ಮೇಲಿನ ಸಿಟ್ಟನ್ನು ಆತನಿಗೆ ಕಾಣದಂತೆ ಕ್ಯಾಕರಿಸಿ ಉಗಿಯುವ ಮೂಲಕ ಇಲ್ಲವೆ ಆತನ ಬೆನ್ನನ್ನು ದುರುಗುಟ್ಟಿ ನೋಡುವ ಮೂಲಕ ವ್ಯಕ್ತಪಡಿಸಿರಬಹುದು. ಅಥವಾ ಇನ್ನ್ಯಾರೋ ನಿಮ್ಮನ್ನು ಹೀಗೆ ಬಯ್ಯುತ್ತಿದ್ದರು ಎಂದು ವಾಚಾಮಗೋಚರವಾಗಿ ಆತನನ್ನು ಪರೋಕ್ಷವಾಗಿ ಜರಿಯಬಹುದು. ಗೃಹಿಣಿಯರು ಅಡುಗೆಗೆ ಹೆಚ್ಚು ಉಪ್ಪು ಹಾಕುವ ಮೂಲಕ, ಪಾತ್ರೆ ಪಗಡೆಗಳನ್ನು ಜೋರಾಗಿ ಕುಕ್ಕರಿಸುವ ಮುಖಾಂತರ ಇಲ್ಲವೆ ಮೌನದ ಮೂಲಕ ಅಥವಾ ಮೊನಚಾದ ಮಾತುಗಳ ಮೂಲಕ ಪುರುಷರಿಗೆ ಪ್ರತಿರೋಧವನ್ನು ಒಡ್ಡಬಹುದು. ಹೀಗೆ ವ್ಯಕ್ತಿಗತ ನೆಲೆಯಲ್ಲಿ ಶಾಬ್ದಿಕ ರೂಪದಲ್ಲಿ ಮತ್ತು ಅಶಾಬ್ದಿಕ ರೂಪದಲ್ಲಿ ಪ್ರಕಟಗೊಳ್ಳುವ ರಾಜಕಾರಣವನ್ನು ಒಂದೆಡೆ ಸೇರಿಸಿ ಸಾಮೂದಾಯಿಕ ರಾಜಕಾರಣವಾಗಿ ಗುರುತಿಸಿ ಚರ್ಚಿಸಬಹುದು.

ಆದರೆ ಈ ಬಗೆಯ ಅಧ್ಯಯನಗಳು ಇದುವರೆಗೆ ನಡೆದಿಲ್ಲ, ಇನ್ನಷ್ಟೆ ಪ್ರಾರಂಭಗೊಳ್ಳಬೇಕು. ಆದರೆ ಈ ಲೇಖನದಲ್ಲಿ ನಾನು ಸಾಮೂದಾಯಿಕ ನೆಲೆಯಲ್ಲಿ ಪ್ರಕಟಗೊಳ್ಳುವ ಮಹಿಳಾ ರಾಜಕಾರಣದ ಕುರಿತು ಚರ್ಚಿಸಿರುವೆ. ಈ ಚರ್ಚೆಯನ್ನು ಒಟ್ಟು ನಾಲ್ಕು ನೆಲೆಗಳಲ್ಲಿ ವಿಸ್ತರಿಸಿಕೊಂಡಿರುವೆ. ಅವುಗಳೆಂದರೆ: ೧. ಪರ್ಯಾಯ ರಾಜಕಾರಣಗಳಲ್ಲಿ ಮಹಿಳೆಯರು ೨. ಮಹಿಳೆಯರಲ್ಲಿನ ಭಿನ್ನತೆಗಳು ೩. ಭೌಗೋಳಿಕವಾಗಿ ಹಂಚಿ ಹೋದವರು ೪. ಪಿತೃ ಪ್ರಧಾನ ಕುಟುಂಬಗಳಲ್ಲಿ ಮಹಿಳೆಯರು. ಇವುಗಳನ್ನು ಒಂದೊಂದಾಗಿ ಚರ್ಚಿಸಲಾಗಿದೆ.

೧. ಪರ್ಯಾಯ ರಾಜಕಾರಣಗಳಲ್ಲಿ ಮಹಿಳೆ : ಪರ್ಯಾಯ ರಾಜಕಾರಣಗಳಲ್ಲಿ ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು, ಒಬಿಸಿಗಳು, ರೈತರು, ಪರಿಸರ ವಾದಿಗಳು, ಕಾರ್ಮಿಕರು ಎಲ್ಲರೂ ಬರುತ್ತಾರೆ. ಇವರೆಲ್ಲರು ಮಾಡುವ ರಾಜಕಾರಣಗಳು ಪರ್ಯಾಯ ರಾಜಕಾರಣಗಳಾಗಿವೆ.

ರೈತ ರಾಜಕಾರಣವು ಇಡೀ ಹಳ್ಳಿಯನ್ನೆ ತನ್ನ ಚಟುವಟಿಕೆಯ ಕೇಂದ್ರವಾಗಿಸಿಕೊಳ್ಳುತ್ತದೆ. ಯಾವಾಗಲೂ ಸಮಗ್ರ ಹಳ್ಳಿಯ ಮೇಲೆ ಆಡಳಿತಾತ್ಮಕ ನಿಯಂತ್ರಣ ಸಾಧಿಸುವತ್ತ ಕ್ರಿಯಾಶೀಲವಾಗಿರುತ್ತದೆ. ಈ ಪ್ರಕ್ರಿಯೆಯು ಯಜಮಾನ್ಯ ನಡವಳಿಕೆಯನ್ನು ಪ್ರತಿಪಾದಿಸುತ್ತದೆಯಾದ್ದರಿಂದ ಅದರಲ್ಲಿ ಮೇಲ್ಜಾತಿ ಮತ್ತು ಮೇಲ್ವರ್ಗದ ಪುರುಷರ ಯಜಮಾನ್ಯ ನಡವಳಿಕೆಯ ಸಂಸ್ಕಾರದ ವಾಸನೆಯಿದೆ. ಹೀಗಾಗಿ ಈ ರಾಜಕಾರಣದ ಬಗ್ಗೆ ಮಹಿಳೆಯರು ಮತ್ತು ದಲಿತರು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಯಾಕೆಂದರೆ ಶತಮಾನಗಳಿಂದಲೂ ದಲಿತರು ಮತ್ತು ಮಹಿಳೆಯರು ಯಜಮಾನ್ಯ ನಡವಳಿಕೆಯಿಂದಾಗಿ ಭಯದಿಂದ ತತ್ತರಿಸಿಹೋಗಿದ್ದಾರೆ. ಮಹಿಳಾ ರಾಜಕಾರಣವು ಅವಿಭಜಿತ ಹಳ್ಳಿಯನ್ನು ವಿಚಾರ ಮತ್ತು ಕ್ರಿಯೆಗಳ ಅಧಿಕೃತ ರಾಜಕೀಯ ಎನ್ನುವುದನ್ನು ನಿರಾಕರಿಸುತ್ತದೆ. ಹಾಗಾಗಿ ರೈತ ರಾಜಕಾರಣದಲ್ಲಿದ್ದುಕೊಂಡು ಮಹಿಳೆಗೆ ಮಹಿಳಾ ರಾಜಕಾರಣವನ್ನು ಮಾಡಲಾಗುವುದಿಲ್ಲ.

ಎಲ್ಲ ಬಗೆಯ ಸಂಪನ್ಮೂಲಗಳನ್ನು ಹಳ್ಳಿಯ ಉಪಯೋಗಕ್ಕಾಗಿ ತೆರೆದಿಡಲು ಪರಿಸರ ರಾಜಕಾರಣವು ಒತ್ತಾಯಿಸುತ್ತದೆ. ಮಹಿಳಾ ರಾಜಕಾರಣವಾಗಲಿ, ದಲಿತ ರಾಜಕಾರಣವಾಗಲಿ, ಒಬಿಸಿ ರಾಜಕಾರಣವಾಗಲಿ ತಮ್ಮನ್ನು ತಾವು ಸಶಕ್ತಗೊಳಿಸಿಕೊಳ್ಳುವುದಕ್ಕೆ ಪ್ರಥಮ ಆದ್ಯತೆ ನೀಡುತ್ತವೆ. ಪರಿಸರ ವಾದಿಗಳಂತೆ ಇಡೀ ಹಳ್ಳಿಯನ್ನು ಒಂದು ಎಂದು

ಒಪ್ಪಿಕೊಳ್ಳುವುದರಿಂದ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಯೋಚಿಸಬೇಕಿದೆ. ಯಾವುದೇ ರಾಜಕಾರಣದಲ್ಲಾಗಲಿ ಅದು ಒತ್ತಾಯಿಸುವ ತತ್‌ಕ್ಷಣದ ಬೇಡಿಕೆ ಮತ್ತು ಅದರಿಂದ ಉಂಟಾಗಬಹುದಾದ ದೂರಗಾಮಿ ಪರಿಣಾಮಗಳ ಬಗ್ಗೆ ಆಲೋಚಿಸಬೇಕು.

ಡಿಆರ್‌ಎನ್ ಅವರು ತಮ್ಮ ಉರಿಚಮ್ಮಾಳಿಗೆ ಕೃತಿಯಲ್ಲಿ ಹೇಳುವಂತೆ ದಲಿತ ರಾಜಕಾರಣವು 'ಗಂಡು ಹೆಣ್ಣಿನ ಸಂಬಂಧದ ಸೂಕ್ಷ್ಮ ಆಯಾಮಗಳ ಬಗ್ಗೆ ಸಮಾಜವನ್ನು ಅಮಾನವೀಯ ಮತ್ತು ಸಂವೇದನ ರಹಿತವನ್ನಾಗಿಸಿದ ನಿಯಮಗಳ ವಿರುದ್ಧ ಹೋರಾಟವನ್ನು ಆರಂಭಿಸಿತು. ಆದ್ದರಿಂದಲೇ ದಲಿತ ಕಾರ್ಯಕರ್ತರು ಅಂತರ್ಜಾತಿ ಮದುವೆಗಳಿಗೆ ಪ್ರೋತ್ಸಾಹವನ್ನು ನೀಡಿದರು.' ಹೀಗೆ ದಲಿತ ರಾಜಕಾರಣವು ಜಾತಿ ಶ್ರೇಣೀಕರಣಗಳನ್ನು ಮುರಿದು ಹಾಕಲು ಪ್ರಯತ್ನಿಸಿತು. ಆದರೆ ದಲಿತ ರಾಜಕಾರಣವು ಪಿತೃಪ್ರಧಾನ ಕೌಟುಂಬಿಕ ಚೌಕಟ್ಟನ್ನು ಪ್ರಶ್ನಿಸಲಿಲ್ಲ. ಹಿಂದೂ ಸಮಾಜದಲ್ಲಿನ ಜಾತಿಯೊಂದಿಗೆ ಹೆಣೆಯಲ್ಪಟ್ಟ ನ್ಯಾಯ ಪರಿಕಲ್ಪನೆಯನ್ನು ಪ್ರಶ್ನಿಸಿದ ದಲಿತ ರಾಜಕಾರಣವು ಜಾತಿ ಮತ್ತು ವರ್ಗಕ್ಕೆ ಅನುಗುಣವಾಗಿ ಸೃಷ್ಟಿಸಿದ ಲಿಂಗಶ್ರೇಣಿಕರಣವನ್ನು ಕೂಡ ಪ್ರಶ್ನೆಗೀಡುಮಾಡಿತು. ಆದರೆ ಸ್ವಜಾತಿಯಲ್ಲಿನ ಲಿಂಗಶ್ರೇಣೀಕರಣವನ್ನು ಯಥಾವತ್ತಾಗಿ ಒಪ್ಪಿಕೊಂಡಿತು.

ಪರ್ಯಾಯ ರಾಜಕಾರಣಗಳು ಮಹಿಳೆಯರ ಮೇಲೆ ಅಪಾರ ಪ್ರಮಾಣದ ನೈತಿಕ ಜವಾಬ್ದಾರಿಯನ್ನು ಹೊರಿಸಿರುತ್ತವೆ. ದಲಿತ ರಾಜಕಾರಣವಾಗಿರಬಹುದು, ಒಬಿಸಿ ರಾಜಕಾರಣವಾಗಿರಬಹುದು ಇವುಗಳು ಜಾತಿ ಮತ್ತು ವರ್ಗಕ್ಕನುಸಾರವಾಗಿ ಸಂಪತ್ತು ಹಾಗೂ ಅಧಿಕಾರ ಕೇಂದ್ರೀಕೃತಗೊಳ್ಳುವುದನ್ನು ವಿರೋಧಿಸುತ್ತವೆ. ಅವುಗಳು ಕೆಳ ಸಮುದಾಯಗಳಿಗೂ ಹರಿದು ಬರಬೇಕೆಂದು ಒತ್ತಾಯಿಸುತ್ತವೆ. ಸಂಪತ್ತು, ಆಸ್ತಿ, ಸಾಮಾಜಿಕ ಮತ್ತು ರಾಜಕೀಯ ಅಧಿಕಾರಗಳು ವಿಕೇಂದ್ರೀಕರಣಗೊಳ್ಳುವುದನ್ನು ಪ್ರತಿಪಾದಿಸುವ ಈ ಪರ್ಯಾಯ ರಾಜಕಾರಣಗಳು ಆಸ್ತಿ ಮತ್ತು ಅಧಿಕಾರದಂತಹ ಸಂಗತಿಗಳು ಮಹಿಳೆಯರವರೆಗೆ ವಿಸ್ತರಿಸಿಕೊಳ್ಳುವುದರ ಕುರಿತು ಜಾಣಮೌನ ತಾಳುತ್ತವೆ. ಪರೋಕ್ಷವಾಗಿ ಈ ಪರ್ಯಾಯ ರಾಜಕಾರಣಗಳು ಸಂಪತ್ತು, ಅಧಿಕಾರ, ಆಸ್ತಿ ಇವುಗಳು ಪುರುಷ ಕೇಂದ್ರಿತವಾದವುಗಳು ಎಂದು ಒಪ್ಪಿಕೊಳ್ಳುತ್ತವೆ. ಹೀಗಾಗಿ ಮಹಿಳೆ ದಲಿತ ಇಲ್ಲವೆ ಒಬಿಸಿ ರಾಜಕಾರಣದಲ್ಲಿದ್ದುಕೊಂಡು ಮಹಿಳಾ ರಾಜಕಾರಣವನ್ನು ಮಾಡಲಾಗುವುದಿಲ್ಲ. ಅವಳು ಆ ಪರ್ಯಾಯ ರಾಜಕಾರಣಗಳ ಕನ್ನಡಿಯಾಗಿ ಕೆಲಸ ಮಾಡಬೇಕಾಗುತ್ತದೆ.

ಪರ್ಯಾಯ ರಾಜಕಾರಣಗಳೆಲ್ಲವೂ ಪುರುಷ ಮುಖಂಡತ್ವದಲ್ಲಿಯೇ ರೂಪ ಪಡೆದುಕೊಂಡು ಕ್ರಿಯಾಶೀಲವಾಗಿರುವುದರಿಂದ ಅವುಗಳಲ್ಲಿ ಪುರುಷ ಪ್ರಭಾವ ಢಾಳಾಗಿ ಇದೆ. ಈ ಪ್ರಭಾವವು ಪುರುಷ ವರ್ಚಸ್ಸನ್ನು ಹೇಳುತ್ತಿರುತ್ತದೆ. ಪುರುಷರ ವರ್ಚಸ್ಸು ಮಹಿಳೆಯನ್ನು ಶೋಷಿಸುವ ವ್ಯವಸ್ಥೆಯ ಭಾಗವಾಗಿದೆ. ಪರ್ಯಾಯ ರಾಜಕಾರಣಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಕಾರ್ಯಕರ್ತರಿದ್ದಾರೆ. ಆದರೂ ಈ ಪರ್ಯಾಯ ರಾಜಕಾರಣಗಳಾವುವೂ ಮಹಿಳಾ ರಾಜಕಾರಣಗಳಾಗಲಿಲ್ಲ.

ಪರ್ಯಾಯ ರಾಜಕಾರಣಗಳೆಲ್ಲವೂ ತಮ್ಮ ರಾಜಕಾರಣದಲ್ಲಿರುವ ಮಹಿಳೆಯರನ್ನು ಪಕ್ಷದ ಧೋರಣೆಗಳ ಚೌಕಟ್ಟಿನಲ್ಲಿಯೇ ಕಾರ್ಯ ನಿರ್ವಹಿಸಬೇಕೆಂದು ಒತ್ತಾಯಿಸುತ್ತವೆ. ಇವುಗಳಲ್ಲಿ ಮಹಿಳಾ ಧುರೀಣರ ಸಂಖ್ಯೆ ಬೆರಳೆಣಿಕೆಯಷ್ಟು. ಪಕ್ಷದ ಕಾರ್ಯಚಟುವಟಿಕೆಗಳನ್ನು ನಿರ್ಣಯಿಸುವ ಪ್ರಕ್ರಿಯೆಯಲ್ಲಿ ಮಹಿಳೆಯ ಸಂಖ್ಯೆ ಮತ್ತಷ್ಟೂ ಕಡಿಮೆ ಇರುತ್ತದೆ. ಹೀಗಾಗಿ ಪರ್ಯಾಯ ರಾಜಕಾರಣಗಳಲ್ಲಿ ಮಹಿಳಾ ರಾಜಕಾರಣಗಳನ್ನು ರೂಪಿಸಿಕೊಳ್ಳಲಾಗುವುದಿಲ್ಲ.

ಪರ್ಯಾಯ ರಾಜಕಾರಣಗಳು ಮಹಿಳೆಯರನ್ನು ಪಾನ್‌ಗಳಾಗಿ ಬಳಸುತ್ತವೆ. ಈ ರಾಜಕಾರಣಗಳಲ್ಲಿ ಮಹಿಳೆಯರು ಪುರುಷ ಉದ್ದೇಶಗಳಿಗೆ ಬೆಂಬಲ ಕೊಡುವುದಕ್ಕಷ್ಟೆ ಬಳಕೆಗೊಳ್ಳುತ್ತಾರೆ. ಮಹಿಳೆಯರು ಆಯಾ ರಾಜಕಾರಣಗಳ ಭಾಗವಾಗಿಯೆ ಕೆಲಸ ನಿರ್ವಹಿಸುವ ಒತ್ತಡದಲ್ಲಿರುತ್ತಾರೆ. ಇಂತಹ ಒತ್ತಡದಲ್ಲಿರುವ ಮಹಿಳೆಯರಿಗೆ ಪರ್ಯಾಯ ರಾಜಕಾರಣದಲ್ಲಿದ್ದುಕೊಂಡು ಮಹಿಳಾ ರಾಜಕಾರಣವನ್ನು ರೂಪಿಸಿಕೊಳ್ಳುವುದು ಹೇಗೆ ಸಾಧ್ಯವಾಗುತ್ತದೆ? ಪರ್ಯಾಯ ರಾಜಕಾರಣಗಳಲ್ಲಿದ್ದುಕೊಂಡೇ ತಾವು ಕೆಲಸ ನಿರ್ವಹಿಸುತ್ತಿರುವ ರಾಜಕಾರಣಗಳಿಗಿಂತ ಭಿನ್ನವಾಗಿ, ಪುರುಷರಿಗಿಂತ ಭಿನ್ನವಾಗಿ ಮಹಿಳಾ ರಾಜಕಾರಣವನ್ನು ಕಟ್ಟಿಕೊಳ್ಳಲು ಸಾಧ್ಯವಾಗುವುದೆ?

ಫಿಲಿಪೈನ್ಸ್, ಥಾಯ್‌ಲ್ಯಾಂಡ್ ದೇಶಗಳಲ್ಲಿನ ಪರ್ಯಾಯ ರಾಜಕಾರಣಗಳಲ್ಲಿರುವ ಪುರುಷರು ತಮ್ಮ ಮಹಿಳೆಯರಿಗೆ 'ಸ್ತ್ರೀ-ಪುರುಷ ಇವರಿಬ್ಬರಲ್ಲಿನ ಅಂತರಕ್ಕೆ ಅಂತಹ ಮಹತ್ವವನ್ನು ಕೊಡಬೇಡಿ. ಹೀಗೆ ಮಾಡುವುದರಿಂದ ಪಕ್ಷದ ಏಕತೆಗೆ ಧಕ್ಕೆ ಉಂಟಾಗುತ್ತದೆ' ಎಂದರು. ಪಾಶ್ಚಾತ್ಯ ದೇಶಗಳಲ್ಲಿ ಮಹಿಳೆಯರು ತಮ್ಮ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಕೆಲವು ಶರತ್ತುಗಳನ್ನು ಇಟ್ಟುಕೊಂಡು ಪರ್ಯಾಯ ರಾಜಕಾರಣಗಳಲ್ಲಿ ಕೆಲಸ ಮಾಡಲು ಬಯಸಿದರು.

ಇದರಿಂದಾಗಿ ಅಲ್ಲಿನ ಮಹಿಳೆಯರು ಸಮಾಜ ಪರಿವರ್ತನೆಯ ಮುಖ್ಯ ರಾಜಕಾರಣದಲ್ಲಿ ಭಾಗವಹಿಸುತ್ತಿಲ್ಲ ಎನ್ನುವ ಆರೋಪವನ್ನು ಎದುರಿಸಬೇಕಾಯಿತು. ವಹಿಸಿದ ಕೆಲಸವನ್ನು ನಿಭಾಯಿಸಿಕೊಂಡು ಹೋಗುತ್ತಿದ್ದ ಮಹಿಳೆಯರು ತಮ್ಮ ಅಸ್ತಿತ್ವದ ಕುರಿತು ಆತ್ಮವಿಶ್ವಾಸದಿಂದ ಮಂಡಿಸತೊಡಗಿದಾಗ ಆತಂಕಕ್ಕೆ ಒಳಗಾದರು. ಅದಕ್ಕಾಗಿ ಅವರನ್ನು ಪಕ್ಷ ದ್ರೋಹಿಗಳೆಂದು ಕರೆದರು. ಹೀಗೆ ಪುರುಷರ ವರ್ಚಸ್ಸನ್ನು ಪ್ರಶ್ನಿಸಿದವರನ್ನು ಪಕ್ಷದಲ್ಲಿ ಒಡಕು ಹುಟ್ಟಿಸುವವರು ಎನ್ನುವಂತೆ ಪ್ರತಿಬಿಂಬಿಸಲಾಗುತ್ತದೆ. ಪರ್ಯಾಯ ರಾಜಕಾರಣಗಳು ಮಹಿಳೆಯರ ಹಿತವನ್ನು ಕುರಿತು ಹೆಚ್ಚಿನ ಆಸಕ್ತಿಯನ್ನು ತೋರುವುದಿಲ್ಲ.

ಪರ್ಯಾಯ ರಾಜಕಾರಣಗಳು ಮಹಿಳೆಯರನ್ನು ಪಾನ್‌ಗಳಾಗಿ ಬಳಸುತ್ತವೆ. ಈ ರಾಜಕಾರಣಗಳಲ್ಲಿ ಮಹಿಳೆಯರು ಪುರುಷ ಉದ್ದೇಶಗಳಿಗೆ ಬೆಂಬಲ ಕೊಡುವುದಕ್ಕಷ್ಟೆ ಬಳಕೆಗೊಳ್ಳುತ್ತಾರೆ. ಮಹಿಳೆಯರು ಆಯಾ ರಾಜಕಾರಣಗಳ ಭಾಗವಾಗಿಯೆ ಕೆಲಸ ನಿರ್ವಹಿಸುವ ಒತ್ತಡದಲ್ಲಿರುತ್ತಾರೆ. ಇಂತಹ ಒತ್ತಡದಲ್ಲಿರುವ ಮಹಿಳೆಯರಿಗೆ ಪರ್ಯಾಯ ರಾಜಕಾರಣದಲ್ಲಿದ್ದುಕೊಂಡು ಮಹಿಳಾ ರಾಜಕಾರಣವನ್ನು ರೂಪಿಸಿಕೊಳ್ಳಲು ಹೇಗೆ ಸಾಧ್ಯವಾಗುತ್ತದೆ? ಪರ್ಯಾಯ ರಾಜಕಾರಣಗಳಲ್ಲಿದ್ದುಕೊಂಡೇ ತಾವು ಕೆಲಸ ನಿರ್ವಹಿಸುತ್ತಿರುವ ರಾಜಕಾರಣಗಳಿಗಿಂತ ಭಿನ್ನವಾಗಿ, ಪುರುಷರಿಗಿಂತ ಭಿನ್ನವಾಗಿ ಮಹಿಳಾ ರಾಜಕಾರಣವನ್ನು ಕಟ್ಟಿಕೊಳ್ಳಲು ಸಾಧ್ಯವಾಗುವುದೆ? ಎಲ್ಲಾ ಪರ್ಯಾಯ ರಾಜಕಾರಣಗಳು ನೈತಿಕತೆಯ ಕುರಿತು ರೂಪಿಸಿಕೊಂಡ ದೃಷ್ಟಿಕೋನಗಳು ಪುರುಷ ಪ್ರಧಾನವಾದವುಗಳು. ಹೀಗಾಗಿ ಈ ರಾಜಕಾರಣಗಳು ಪರ್ಯಾಯ ನಿಯಮಗಳನ್ನು ರೂಪಿಸುತ್ತಿದ್ದರೂ, ಪುನರ್ ಮೌಲೀಕರಣಕ್ಕೆ ಒಳಗುಮಾಡುತ್ತಿದ್ದರೂ ಇವುಗಳು ಆಯಾ ರಾಜಕಾರಣಗಳಲ್ಲಿನ ಪುರುಷ ಹಿತಾಸಕ್ತಿಗಳನ್ನು ಕಾಪಾಡುತ್ತಿರುತ್ತವೆ.

ಪರ್ಯಾಯ ರಾಜಕಾರಣಗಳು ಮಹಿಳಾ ಸಮಸ್ಯೆಗಳನ್ನು ತೀವ್ರವಾಗಿ ಪರಿಗಣಿಸಿಲ್ಲ. ಕೆಲವು ಸಂದರ್ಭಗಳಲ್ಲಿ ಮಹಿಳಾ ಸಮಸ್ಯೆಗಳನ್ನು ನೋಡಲಾಗಿದೆಯಾದರೂ ಅದು ಧಾರ್ಮಿಕ ದೃಷ್ಟಿಕೋನದ ಪರಿಧಿಗೆ ಸೀಮಿತವಾಗಿದೆ. ಅಂದರೆ ಹೆಂಡತಿ, ತಾಯಿ, ಮಗಳು ಹೀಗೆ ಪರಂಪರೆಯ ಮಾದರಿಗಳಲ್ಲಿಯೇ ಮಹಿಳೆಯನ್ನು ಕಾಣಲಾಯಿತು. ಪರ್ಯಾಯ ರಾಜಕಾರಣಗಳು ಮಹಿಳೆಯನ್ನು ಮಾನದ ಪ್ರತೀಕವಾಗಿ ಪರಿಭಾವಿಸುತ್ತವೆ. ಹೀಗೆ ಮಾನದ ಪ್ರತೀಕವಾಗಿ ಪರಿಭಾವಿಸುವ ಪ್ರಕ್ರಿಯೆ ಮಹಿಳೆಯನ್ನು ಆಸ್ತಿಯನ್ನಾಗಿಯೇ ಪರಿಗಣಿಸಿದ ಸತ್ಯವನ್ನು ಹೇಳುತ್ತದೆ. ಆದರೆ ಸಾಂಸ್ಕೃತಿಕ ಚೌಕಟ್ಟುಗಳಿಂದ ಬಿಡಿಸಿಕೊಳ್ಳಲು ಹವಣಿಸುವ ಮಹಿಳೆಯರ ಬೇಡಿಕೆಗಳು ಭೌತಿಕವಾಗಿವೆ.

ಮೇಲ್ಮುಖ ಬೆಳವಣಿಗೆಯ ಅದಮ್ಯ ಆಸೆ ಹೊತ್ತ ಮಹಿಳೆಯರಿಗೆ ತಮ್ಮದೇ ಆದ ರಾಜಕಾರಣವನ್ನು ರೂಪಿಸಿಕೊಳ್ಳುವ ಆಸೆಯಿದೆ. ಆದರೆ ಪರ್ಯಾಯ ರಾಜಕಾರಣಗಳಾವುವೂ ಮಹಿಳೆಯ ಈ ಬೇಡಿಕೆಗಳಿಗೆ ಪೂರಕವಾಗಿ, ತೀವ್ರವಾಗಿ ಪ್ರತಿಕ್ರಿಯಿಸುವ ಉದ್ದೇಶವನ್ನು ಹೊಂದಿಲ್ಲ. ಪರ್ಯಾಯ ರಾಜಕಾರಣಗಳೊಂದಿಗೆ ಕೈಜೋಡಿಸಿ, ಆ ರಾಜಕಾರಣಗಳಿಗೆ ವಿಸ್ತಾರವಾದ ಆಯಾಮವನ್ನು ಮತ್ತು ತಳಹದಿಯನ್ನು ನಿರ್ಮಿಸಲು ಹೋದಾಗಲೊಮ್ಮೆ ಅವಳು ತನ್ನ ಹಿತಾಸಕ್ತಿಗಳನ್ನು ಬಲಿಕೊಡಬೇಕಾಗುತ್ತದೆ. ಮಹಿಳಾ ರಾಜಕಾರಣವು ಆಯಾ ರಾಜಕಾರಣದ ಭಾಗವಾಗಿಯೇ ಮುಚ್ಚಿಹೋಗುತ್ತದೆ. ಹೀಗಾಗಿ ಈ ಎಲ್ಲಾ ರಾಜಕಾರಣಗಳಲ್ಲಿ ಮಹಿಳೆ ಎನ್ನುವ ವರ್ಗೀಕರಣವನ್ನು ಪ್ರತ್ಯೇಕವಾಗಿ ರೂಪಿಸಲು ಸಾಧ್ಯವಾಗಲೇ ಇಲ್ಲ. ಇವುಗಳಲ್ಲಿ ಕೆಲವೆಡೆ ಮಹಿಳೆಯರು ಹಂಚಿಹೋಗಿದ್ದಾರೆ, ಮತ್ತೆ ಕೆಲವೆಡೆ ಹೂತು ಹೋಗಿದ್ದಾರೆ.

ಇಂತಹ ರಾಜಕಾರಣಗಳಿಂದ ಮಹಿಳೆಯರನ್ನು ಹೊರತೆಗೆದು ಮಹಿಳಾ ರಾಜಕಾರಣವನ್ನು ರೂಪಿಸಲು ಸಾಧ್ಯವಾಗುವುದಾ? ಹೀಗೆ ಮಾಡಬೇಕಿದ್ದರೆ ಈಗಾಗಲೇ ಬೇರೆ ರಾಜಕಾರಣಗಳ ಭಾಗವಾಗಿರುವ ಮಹಿಳೆಯರನ್ನು ಹೊರತೆಗೆಯಬೇಕಾ? ಹೊರ ತೆಗೆಯುವುದೆಂದರೆ ಹೇಗೆ ತೆಗೆಯಬೇಕು? ಮಹಿಳೆಯರು ಈ ರಾಜಕಾರಣಗಳಿಂದ ಸಂಪೂರ್ಣವಾಗಿ ಸಂಬಂಧಗಳನ್ನು ಕಳಚಿಕೊಳ್ಳಬೇಕಾ? ಅಥವಾ ಅಲ್ಲೆ ಇದ್ದು ಮಹಿಳಾ ರಾಜಕಾರಣವನ್ನು ರೂಪಿಸುವ ಸಾಧ್ಯತೆಯನ್ನು ನಿರ್ಮಿಸಿಕೊಳ್ಳಬೇಕಾ ? ಈ ಪ್ರಶ್ನೆಗಳಿಗೆ ಖಚಿತ ಸ್ವರೂಪದ ಉತ್ತರಗಳನ್ನು ಕಂಡುಕೊಳ್ಳುವುದು ಕಷ್ಟದ ಕೆಲಸ.

ಯಾವುದನ್ನು ಮಹಿಳಾ ಸಮಸ್ಯೆಗಳು ಎಂದು ಹೇಳಲಾಗುತ್ತಿವೆಯೋ ಅದು ದಲಿತ ಮಹಿಳೆಯದ್ದಾಗಿರಬಹುದು, ಅಲ್ಪಸಂಖ್ಯಾತ ಮಹಿಳೆಯದ್ದಾಗಿರಬಹುದು, ರೈತ ಮಹಿಳೆಯದ್ದಾಗಿರಬಹುದು -ಅವುಗಳು ಆಯಾ ವ್ಯವಸ್ಥೆಯ ಪುರುಷ

ಪ್ರಧಾನ ಲೋಕದ ಸಮಸ್ಯೆಗಳು ಕೂಡ ಆಗಿವೆ. ಈ ಎಲ್ಲಾ ಸಮಸ್ಯೆಗಳು ಲಿಂಗಸಮಾನತೆಯಿಂದ ಹುಟ್ಟಿದವುಗಳು. ಇದಕ್ಕೆ ಪುರುಷ ಪ್ರಧಾನ ಮೌಲ್ಯಗಳ ಪ್ರಾಬಲ್ಯವೇ ಕಾರಣ. ಹೀಗಾಗಿ ಪರ್ಯಾಯ ರಾಜಕಾರಣದಲ್ಲಿರುವ ಮಹಿಳೆಯರು ರಾಜಕಾರಣ ಮಾಡಬೇಕೆಂದರೆ, ಅವರ ಲೋಕದ ಪುರುಷರ ವಿರುದ್ಧವೂ ಮಾಡಬೇಕಾಗುತ್ತದೆ.

ಹಾಗಂತ ಮಹಿಳೆಯರು ಈಗಾಗಲೆ ತೊಡಗಿಸಿಕೊಂಡಿರುವ ರಾಜಕಾರಣಗಳಿಂದ ಹೊರಬಂದು ಪ್ರತ್ಯೇಕ ರಾಜಕಾರಣವನ್ನು ರೂಪಿಸಿಕೊಳ್ಳುವುದು ಎಷ್ಟರ ಮಟ್ಟಿಗೆ ಸಮರ್ಥನೆಯನ್ನು ಪಡೆದುಕೊಳ್ಳುತ್ತದೆ ? ತಮ್ಮ ಜನಾಂಗವು ಇಲ್ಲವೆ ಸಮುದಾಯವು ಅಸ್ತಿತ್ವಕ್ಕಾಗಿ ಹೋರಾಡುತ್ತಿದ್ದಾಗ ಮಹಿಳಾ ರಾಜಕಾರಣದ ಪ್ರತ್ಯೇಕತೆ ಎಷ್ಟರ ಮಟ್ಟಿಗೆ ಉಚಿತವೆನಿಸುತ್ತದೆ? ಪಟ್ಟಭದ್ರ ಸಾಮಾಜಿಕ ಶಕ್ತಿಗಳ ವಿರುದ್ಧದ ಹೋರಾಟದಲ್ಲಿ ಮಹಿಳೆಯರ ಬೆಂಬಲ ಅಗತ್ಯವಾಗಿರುತ್ತದೆ.

ಈ ಪರ್ಯಾಯ ರಾಜಕಾರಣಗಳು ಮಹಿಳಾ ಬೆಂಬಲವನ್ನು ಅಪೇಕ್ಷಿಸುವುದು ಇವತ್ತಿನ ಸಾಮಾಜಿಕ ಅನಿವಾರ್ಯವೂ ಹೌದು. ಹಾಗಂತ ಅವಳು ಪರ್ಯಾಯ ರಾಜಕಾರಣಗಳ ಒಳಗಡೆ ಇದ್ದರೆ ಪಿತೃಪ್ರಧಾನ ವ್ಯವಸ್ಥೆಯ ಬಳಲುಗಳಾದ ಇವುಗಳಲ್ಲಿ ಮಹಿಳಾ ರಾಜಕಾರಣವನ್ನು ರೂಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹಾಗೆಂದರೆ ಮಹಿಳೆ ದ್ವಿಮುಖ ಹೋರಾಟವನ್ನು ನಡೆಸಬೇಕಾ? ಅಂದರೆ ಪರ್ಯಾಯ ರಾಜಕಾರಣ ಮಾಡುತ್ತಲೆ ಮಹಿಳಾ ರಾಜಕಾರಣವನ್ನು ಮಾಡಲು ಸಾಧ್ಯವಾಗುವುದಾ? ಅದು ಹೇಗೆ ಸಾಧ್ಯ? ಇದು ಮತ್ತೆ ಮಹಿಳೆಗೆ ಹೊರೆಯಾಗುವುದಿಲ್ಲವೆ? ಅಲ್ಲದೆ ಪರ್ಯಾಯ ರಾಜಕಾರಣಗಳೊಂದಿಗೆ ಮಹಿಳಾ ರಾಜಕಾರಣವು ಒಂದಾಗಲು ನಿರಾಕರಿಸುತ್ತದೆ. ಅಷ್ಟೆ ಅಲ್ಲ ಮಹಿಳೆ ಎರಡೂ ರಾಜಕಾರಣಗಳ ಭಾಗವಾಗಿ ಸಮಾನ ದೃಷ್ಟಿಕೋನವನ್ನು ರೂಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಎರಡೂ ರಾಜಕಾರಣಗಳ ಭಾಗವಾಗಿ ಮಹಿಳೆಯರಿಗೆ ತಮ್ಮ ಶಕ್ತಿ, ಪ್ರಭಾವಗಳನ್ನು ವಿಸ್ತರಿಸಿಕೊಳ್ಳಲಾಗುವುದಿಲ್ಲ. ತಮ್ಮ ತಮ್ಮ ಅನನ್ಯತೆಯನ್ನು ರೂಪಿಸಿಕೊಳ್ಳಲಾಗುವುದಿಲ್ಲ. ಮಹಿಳೆಯರು ತಮ್ಮ ಅಸ್ತಿತ್ವವನ್ನು ಸಮರ್ಥಿಸಬೇಕಾದರೆ ಅನನ್ಯತೆಯ ಹುಡುಕಾಟವನ್ನು ನಡೆಸಬೇಕಿದೆ. ಹೀಗಾಗಿ ಅನನ್ಯತೆಗೆ ತುಂಬ ಮಹತ್ವವಿದೆ. ಏಕಕಾಲದಲ್ಲಿ ಎರಡೆರಡು ರಾಜಕಾರಣಗಳನ್ನು ಮಾಡುತ್ತ ಎರಡೂ ರಾಜಕಾರಣಗಳ ಭಾಗವಾಗಿ ತಮ್ಮ ತಮ್ಮ ಅನನ್ಯತೆಯನ್ನು ರೂಪಿಸಿಕೊಳ್ಳಲು ಹೇಗೆ ಸಾಧ್ಯವಾಗುತ್ತದೆ? ಅದಕ್ಕಾಗಿಯೇ ಮಹಿಳಾ ರಾಜಕಾರಣವು ಅಮೂರ್ತವಾಗಿ ಉಳಿದಿದೆ.

೨. ಮಹಿಳೆಯಲ್ಲಿನ ಭಿನ್ನತೆಗಳು : ಮಹಿಳೆ ಎಂದರೆ ಯಾರು, ಯಾರನ್ನು ಮಹಿಳೆ ಎಂದು ಕರೆಯಬೇಕು ಎಂಬ ಜಿಜ್ಞಾಸೆ ಪ್ರಮುಖವಾದುದು. ಜೈವಿಕ ಸಂಗತಿಯನ್ನು ಆಧಾರವಾಗಿಟ್ಟುಕೊಂಡು ಮಹಿಳೆಯರನ್ನು ಒಂದು ಘಟಕವಾಗಿ ಪರಿಭಾವಿಸಬಹುದಾ? ಮಹಿಳೆಯರು ಒಂದೇ ಲಿಂಗಕ್ಕೆ ಸೇರಿದವರು ಎನ್ನುವ ಕಾರಣಕ್ಕಾಗಿ ಅವರಲ್ಲಿ ಸಮಾನ ಅಂಶಗಳಿವೆ ಎಂದು ಹೇಳಲಾಗುವುದಿಲ್ಲ. ಈ ಮಹಿಳೆಯರೊಳಗಡೆಯೆ ಅನೇಕ ಅಸಮಾನತೆಗಳಿವೆ. ಜಾತಿಯ ಅಸಮಾನತೆಯಿದೆ, ವರ್ಗ ಅಸಮಾನತೆಯಿದೆ, ವರ್ಣ ಅಸಮಾನತೆಯಿದೆ, ಧರ್ಮ ಅಸಮಾನತೆಯಿದೆ, ಪ್ರಾದೇಶಿಕ ಅಸಮಾನತೆಯಿದೆ, ಶೈಕ್ಷಣಿಕ ಅಸಮಾನತೆಯಿದೆ, ಹೀಗೆ ಮಹಿಳೆಯರ ಒಳಗಡೆಯೆ ಅನೇಕ ಅಸಮಾನತೆಗಳು ಕಂಡುಬರುತ್ತವೆ. ಈ ಅಸಮಾನತೆಗಳು ಮಹಿಳೆ-ಮಹಿಳೆಯರ ಮಧ್ಯದಲ್ಲಿ ಅಗಾಧ ಕಂದರಗಳನ್ನು ಸೃಷ್ಟಿಸಿದೆ.

ಭಾರತದಲ್ಲಿ ಪಿತೃಪ್ರಧಾನ ವ್ಯವಸ್ಥೆ ಎನ್ನವುದು ಆಯಾ ಜಾತಿ, ಆಯಾ ಧರ್ಮ, ಆಯಾ ಸಮುದಾಯಕ್ಕನುಸಾರವಾಗಿ ಭಿನ್ನವಾಗಿವೆ. ಹೀಗಾಗಿ ಭಾರತದಲ್ಲಿನ ಪಿತೃಪ್ರಧಾನ ವ್ಯವಸ್ಥೆಗೆ ಏಕರೂಪವಿಲ್ಲ, ಹಾಗೂ ಏಕ ಸಂರಚನೆಯಿಲ್ಲ. ಆಯಾ ಜಾತಿ, ಆಯಾ ಧರ್ಮದ ನೆಲೆಯಲ್ಲಿಯೇ ಪಿತೃ ಪ್ರಧಾನ ವ್ಯವಸ್ಥೆಯ ಹುನ್ನಾರಗಳನ್ನು ಅರ್ಥಮಾಡಿಕೊಂಡು ಮಹಿಳಾ ರಾಜಕಾರಣವನ್ನು ರೂಪಿಸಿಕೊಳ್ಳಬೇಕಿದೆ. ಎಲ್ಲ ಮಹಿಳೆಯರು ತುಳಿತಕ್ಕೆ ಒಳಗಾದವರು ನಿಜ. ಹಾಗಂತ ಎಲ್ಲ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳನ್ನು ಒಂದೇ ನೆಲೆಯಲ್ಲಿಟ್ಟು ಚರ್ಚಿಸಿ ಪರಿಹಾರಗಳನ್ನು ಕಂಡುಕೊಳ್ಳಲಾಗುವುದಿಲ್ಲ.

ಭಾರತವು ಜಾತಿ ಶ್ರೇಣೀಕರಣವುಳ್ಳ, ಧರ್ಮ ಶ್ರೇಣೀಕರಣವುಳ್ಳ ಸಮಾಜವಾಗಿದೆ. ಆಯಾ ಜಾತಿಗಳು ಮತ್ತು ಜಾತಿಗನುಸಾರವಾಗಿರುವ ಲಿಂಗಸಂಬಂಧಗಳು ಪುರುಷ-ಪುರುಷರಲ್ಲಿ, ಪುರುಷ-ಮಹಿಳೆಯರಲ್ಲಿ ಪರಸ್ಪರ ಅಪನಂಬಿಕೆಗಳನ್ನು ಮತ್ತು ಭಯಗಳನ್ನು ಸೃಷ್ಟಿಸಿವೆ. ಹೀಗೆ ಸೃಷ್ಟಿಗೊಂಡ ಪರಸ್ಪರ ಅಪನಂಬಿಕೆಗಳು, ಭಯಗಳು ಮೂರ್ತ ಹಾಗೂ ಅಮೂರ್ತ ನೆಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತವೆ. ಜಾತಿ ನಿಷ್ಠವಾದ, ಧರ್ಮ ನಿಷ್ಠವಾದ ಭಾರತದಲ್ಲಿ ವೈದಿಕ ಮಹಿಳಾ ರಾಜಕಾರಣ, ಶೂದ್ರ ಮಹಿಳಾ ರಾಜಕಾರಣ, ದಲಿತ ಮಹಿಳಾ ರಾಜಕಾರಣ, ಕ್ರಿಶ್ಚಿಯನ್ ಮಹಿಳಾ ರಾಜಕಾರಣ, ಮುಸ್ಲಿಂ ಮಹಿಳಾ ರಾಜಕಾರಣ ಇವುಗಳೆಲ್ಲವೂ ಪ್ರತ್ಯೇಕವಾಗಿ ರೂಪಪಡೆದುಕೊಳ್ಳಬೇಕಿದೆ.

ಜಾತಿಗನುಸಾರವಾಗಿ, ಧರ್ಮಕ್ಕನುಸಾರವಾಗಿ ಮಹಿಳೆಯ ಮೇಲೆ ನಡೆಯುವ ಶೋಷಣೆಯ ಸ್ವರೂಪಗಳು ಭಿನ್ನವಾಗಿವೆ. ಎಲ್ಲ ಜಾತಿಯ, ಎಲ್ಲ ಧರ್ಮಗಳ ಮಹಿಳೆಯರ ಸಮಸ್ಯೆಗಳನ್ನು ಜೊತೆಗೂಡಿಸಿ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಲಾಗುವುದಿಲ್ಲ. ಜಾತಿಗನುಸಾರವಾಗಿ, ಧರ್ಮಕ್ಕನುಸಾರವಾಗಿ, ನಮ್ಮ ನಮ್ಮ ಶೋಷಿತ ಸ್ವರೂಪಗಳು ಸಂರಚನೆಗೊಂಡಿವೆ. ಹೀಗಾಗಿ ಜಾತಿಗನುಗುಣವಾಗಿರುವ ಭಿನ್ನ ಭಿನ್ನ ಸಂರಚನೆಯಲ್ಲಿ ನಾವು ಕೇವಲ ಮಹಿಳೆಯರಾಗಿರುವುದಿಲ್ಲ, ಶೂದ್ರ ಮಹಿಳೆಯಾಗಿ, ವೈದಿಕ ಮಹಿಳೆಯಾಗಿ, ದಲಿತ ಮಹಿಳೆಯಾಗಿ, ಕ್ರಿಶ್ಚಿಯನ್ ಮಹಿಳೆಯಾಗಿ, ಜೈನ್ ಮಹಿಳೆಯಾಗಿ ಅಸ್ತಿತ್ವದಲ್ಲಿರುತ್ತೇವೆ. ನಮ್ಮ ಮೇಲಿನ ಪ್ರತಿಯೊಂದು ಶೋಷಣೆಗಳ ವಿವರಣೆಯೂ ನಮ್ಮ ಸಾಮಾಜಿಕ ಸ್ಥಿತಿಗತಿಗಳನ್ನು ಹೇಳುತ್ತಿರುತ್ತವೆ. ಅದಕ್ಕಾಗಿಯೇ ಮಹಿಳೆಯರಾದ ನಾವುಗಳು ನಮ್ಮ ನಮ್ಮ ಜಾತಿ ಮತ್ತು ಧರ್ಮಕ್ಕನುಸಾರವಾಗಿ ರಾಜಕಾರಣವನ್ನು ಪ್ರತ್ಯೇಕ ಪ್ರತ್ಯೇಕವಾಗಿ ರೂಪಿಸಿಕೊಳ್ಳಬೇಕಿದೆ. ಹೀಗಾದಾಗ ಅಖಂಡವಾದ ಮಹಿಳಾ ರಾಜಕಾರಣವು ಮೂರ್ತಗೊಳ್ಳುವುದು ಹೇಗೆ ಸಾಧ್ಯ? ಧರ್ಮ ಮತ್ತು ಜಾತಿಗನುಗುಣವಾಗಿರುವ ಸಾಂಸ್ಕೃತಿಕ ವಿರೂಪಗಳು ಅಖಂಡವಾದ ಮಹಿಳಾ ರಾಜಕಾರಣ ಮೂರ್ತಗೊಳ್ಳುವಂತೆ ನೋಡಿಕೊಂಡಿವೆ.

೩. ಭೌಗೋಳಿಕವಾಗಿ ಹಂಚಿ ಹೋದವರು : ಪರ್ಯಾಯ ರಾಜಕಾರಣಗಳು ಒಂದು ನಿರ್ದಿಷ್ಟ ಭೌಗೋಳಿಕ ಚೌಕಟ್ಟನ್ನು ಆಧರಿಸಿಯೇ ರೂಪ ಪಡೆದುಕೊಂಡಿರುತ್ತವೆ. ಆದರೆ ಮಹಿಳಾ ರಾಜಕಾರಣಗಳಿಗೆ ನಿರ್ದಿಷ್ಟ ಭೌಗೋಳಿಕ ಚೌಕಟ್ಟು ಇಲ್ಲ. ಯಾಕೆಂದರೆ ಮಹಿಳೆ ವಿಶ್ವವ್ಯಾಪಿಯಾಗಿ ಹಂಚಿಹೋಗಿದ್ದಾಳೆ. ವಿಶ್ವವ್ಯಾಪಿಯಲ್ಲಿ ರೂಪ ಪಡೆದುಕೊಂಡ ಎಲ್ಲಾ ರಾಜಕಾರಣಗಳ ಭಾಗವಾಗಿಯೂ ಹಂಚಿ ಹೋಗಿದ್ದಾಳೆ. ಸಾಮಾಜಿಕವಾಗಿ ವಿಸ್ತರಿಸಿಕೊಳ್ಳಲು ಅವಕಾಶವಿಲ್ಲದ ಮಹಿಳೆಯು ಸೀಮಿತ ಭೌಗೋಳಿಕ ಚೌಕಟ್ಟಿನಲ್ಲಿ ಮತ್ತು ಸೀಮಿತ ಜನರ ಸಂಪರ್ಕದಲ್ಲಿ ಇರುವವಳು. ಸಾಮಾಜಿಕವಾಗಿ ವಿಸ್ತರಿಸಿಕೊಂಡ ಮಹಿಳೆಯರು ವಿವಾಹ ಹಾಗೂ ಕೌಟುಂಬಿಕ ಸಂಬಂಧಗಳ ಕಾರಣಗಳಿಂದಾಗಿ ಭೌಗೋಳಿಕ ಅವರು ನಡೆಸಿರಬಹುದಾದ ಪ್ರಯಾಣವೂ ಸೀಮಿತವಾಗಿದೆ.

ಅದು ಅಲ್ಲದೆ ಒಂದೇ ಊರಿನಲ್ಲಿರುವ ಮಹಿಳೆಯರು ಆ ಊರಿನೊಳಗಡೆಯೇ ಸೃಷ್ಟಿಗೊಂಡ ಊರು-ಕೇರಿಗಳ ಕಂದಕದಿಂದಾಗಿ ಒಬ್ಬರಿಗೊಬ್ಬರು ಸಂಧಿಸಲು ಸಾಧ್ಯವಾಗುತ್ತಿಲ್ಲ. ಒಂದು ಪುಟ್ಟ ಊರಿನಲ್ಲಿಯೇ ಊರು-ಕೇರಿಗಳೆಂಬ ಎರಡು ಜಗತ್ತುಗಳು ಸೃಷ್ಟಿಗೊಂಡಿವೆ. ಹೀಗಾಗಿ ಊರಿನ ಮಹಿಳೆ ಕೇರಿಯ ಮಹಿಳೆಗೆ, ಕೇರಿಯ ಮಹಿಳೆ ಊರಿನ ಮಹಿಳೆಗೆ ಅಪರಿಚಿತವಾಗಿಯೇ ಉಳಿದಿರುವಳು. ಹೀಗೆ ಸ್ಥಾನಿಕವಾಗಿ, ಪ್ರಾದೇಶಿಕವಾಗಿ ಛಿದ್ರವಿಚ್ಛಿದ್ರಗೊಂಡ ಮಹಿಳೆಯರೆಲ್ಲರೂ ಭೌಗೋಳಿಕ ನೆಲೆಯಲ್ಲಿ ಒಂದಾಗಿ ಮಹಿಳಾ ರಾಜಕಾರಣವನ್ನು ಕಟ್ಟಿಕೊಳ್ಳಲು ಹೇಗೆ ಸಾಧ್ಯ? ಒಬ್ಬ ಮಹಿಳೆ ಇನ್ನೊಬ್ಬ ಮಹಿಳೆಯ ಜೊತೆ ಬಾಂಧವ್ಯ ಬೆಳೆಸಲು, ಸಂಪರ್ಕ ಹೊಂದಲು ಸಾಧ್ಯವಾಗುವುದಾದರೂ ಹೇಗೆ? ಅದಕ್ಕಾಗಿಯೇ ಮಹಿಳಾ ರಾಜಕಾರಣವು ಅಮೂರ್ತವಾಗಿಯೇ ಉಳಿದಿದೆ.

೪. ಪಿತೃ ಪ್ರಧಾನ ಕುಟುಂಬಗಳಲ್ಲಿ ಮಹಿಳೆಯರು : ಪಾಶ್ಚಾತ್ಯ ಮಹಿಳೆಯರು ತಮ್ಮ ರಾಜಕಾರಣಗಳಿಂದಾಗಿ ಮಹಿಳೆ-ಮಹಿಳೆಯರ ಮಧ್ಯೆಯಲ್ಲಿಯೇ ವರ್ಣ-ವರ್ಗದಿಂದ ಉಂಟಾದ ಸಾಮಾಜಿಕ ಹಾಗೂ ಆರ್ಥಿಕ ಅಂತರವನ್ನು ಸಾಧ್ಯವಾದಷ್ಟು ಕಡಿಮೆ ಮಾಡಿಕೊಳ್ಳಲು ಪ್ರಯತ್ನ ನಡೆಸಿರುವರು. ಪಾಶ್ಚಾತ್ಯ ಮಹಿಳೆಯರ ಈ ರಾಜಕಾರಣಗಳನ್ನು ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಯಥಾವತ್ತಾಗಿ ಸ್ವೀಕರಿಸಲಾಗುವುದಿಲ್ಲ. ಏಕೆಂದರೆ ಭಾರತೀಯ ಮಹಿಳೆಯರ

ಒಂದೇ ಊರಿನಲ್ಲಿರುವ ಮಹಿಳೆಯರು ಆ ಊರಿನೊಳಗಡೆಯೇ ಸೃಷ್ಟಿಗೊಂಡ ಊರು-ಕೇರಿಗಳ ಕಂದಕದಿಂದಾಗಿ ಒಬ್ಬರಿಗೊಬ್ಬರು ಸಂಧಿಸಲು ಸಾಧ್ಯವಾಗುತ್ತಿಲ್ಲ. ಒಂದು ಪುಟ್ಟ ಊರಿನಲ್ಲಿಯೇ ಊರು-ಕೇರಿಗಳೆಂಬ ಎರಡು ಜಗತ್ತುಗಳು ಸೃಷ್ಟಿಗೊಂಡಿವೆ. ಹೀಗಾಗಿ ಊರಿನ ಮಹಿಳೆ ಕೇರಿಯ ಮಹಿಳೆಗೆ, ಕೇರಿಯ ಮಹಿಳೆ ಊರಿನ ಮಹಿಳೆಗೆ ಅಪರಿಚಿತವಾಗಿಯೇ ಉಳಿದಿರುವಳು. ಹೀಗೆ ಸ್ಥಾನಿಕವಾಗಿ, ಪ್ರಾದೇಶಿಕವಾಗಿ ಛಿದ್ರವಿಚ್ಛಿದ್ರಗೊಂಡ ಮಹಿಳೆಯರೆಲ್ಲರೂ ಭೌಗೋಳಿಕ ನೆಲೆಯಲ್ಲಿ ಒಂದಾಗಿ ಮಹಿಳಾ ರಾಜಕಾರಣವನ್ನು ಕಟ್ಟಿಕೊಳ್ಳಲು ಹೇಗೆ ಸಾಧ್ಯ? ಒಬ್ಬ ಮಹಿಳೆ ಇನ್ನೊಬ್ಬ ಮಹಿಳೆಯ ಜೊತೆ ಬಾಂಧವ್ಯ ಬೆಳೆಸಲು, ಸಂಪರ್ಕ ಹೊಂದಲು ಸಾಧ್ಯವಾಗುವುದಾದರೂ ಹೇಗೆ? ಅದಕ್ಕಾಗಿಯೇ ಮಹಿಳಾ ರಾಜಕಾರಣವು ಅಮೂರ್ತವಾಗಿಯೇ ಉಳಿದಿದೆ.

ಮಧ್ಯದಲ್ಲಿ ವರ್ಣಭೇದಗಳು, ಜಾತಿಭೇದಗಳು ಮಾತ್ರ ಇಲ್ಲ. ಒಂದೇ ಜಾತಿಗೆ ಸೇರಿದ, ಒಂದೇ ಧರ್ಮಕ್ಕೆ ಸೇರಿದ, ಒಂದೇ ವರ್ಗಕ್ಕೆ ಸೇರಿದ, ಒಂದೇ ಕುಟುಂಬಕ್ಕೆ ಸೇರಿದ ಮಹಿಳೆಯರ ಮೇಲೆ ಭಾರತದಲ್ಲಿನ ಪಿತೃಪ್ರಧಾನ ವ್ಯವಸ್ಥೆಯು ಅನೇಕ ತಾರತಮ್ಯಗಳನ್ನು ಸೃಷ್ಟಿಸಿದೆ. ಅತ್ತೆಯನ್ನು ಸೊಸೆಯ ವಿರುದ್ಧವಾಗಿ, ಸೊಸೆಯನ್ನು ಅತ್ತೆಯ ವಿರುದ್ಧವಾಗಿ; ಅತ್ತಿಗೆಯನ್ನು ನಾದಿನಿಯ ವಿರುದ್ಧವಾಗಿ, ನಾದಿನಿಯನ್ನು ಅತ್ತಿಗೆ ವಿರುದ್ಧವಾಗಿ ಎತ್ತಿ ಕಟ್ಟಲಾಗಿದೆ. ಹಾಗೆಯೇ ತಾಯಿಯನ್ನು ಬಂಜೆಯ ವಿರುದ್ಧವಾಗಿ, ಮುತ್ತೈದೆಯನ್ನು ವಿಧವೆಯ ವಿರುದ್ಧವಾಗಿ, ಮದುವೆಯಾದವಳನ್ನು ಮದುವೆಯಾಗದವಳ ವಿರುದ್ಧವಾಗಿ ಎತ್ತಿ ಕಟ್ಟಿದೆ. ಒಂದೇ ಕುಟುಂಬದೊಳಗಿರುವ ಮಹಿಳೆಯರ ಒಳಗಿನ ಈ ಬಗೆಯ ಶ್ರೇಣೀಕರಣಗಳು ಅವರನ್ನು ಪರಸ್ಪರ ದೂರ ಇಟ್ಟಿವೆ.

ಹೀಗೆ ಒಂದೇ ಕುಟುಂಬದೊಳಗಡೆಯೇ ಮಹಿಳೆಯರು ವಿಘಟಿತವಾಗಿ ಉಳಿಯುವುದಕ್ಕೆ ಅನೇಕ ಕಾರಣಗಳು ಇವೆ. ಕುಟುಂಬ ಸಂಸ್ಥೆಗಳು ಹೊಂದಾಣಿಕೆಯ ಹೆಸರಿನಲ್ಲಿ -ಹೊಂದಾಣಿಕೆಯ ಅಪೇಕ್ಷೆಯು ಕೂಡ ಪುರುಷ ಹಿತಾಸಕ್ತಿಗನುಗುಣವಾಗಿ ರೂಪಪಡೆದುಕೊಂಡಿರುತ್ತದೆ. ಪುರುಷರನ್ನು ಗೆಲ್ಲುವ ಪ್ರಯತ್ನಕ್ಕೆ ಹೆಚ್ಚು ಮಹತ್ವ ಕೊಡುತ್ತವೆ. ಪುರುಷನನ್ನು ಕುಟುಂಬದ ಕರ್ತೃವಾಗಿಯೇ ಗುರುತಿಸಲಾಗಿದೆ. ಅವನು ಕುಟುಂಬಕ್ಕೆ ಅನ್ನ, ಬಟ್ಟೆ ಒದಗಿಸುವವನು, ರಕ್ಷಿಸುವವನು ಎಂದೇ ನಂಬಲಾಗಿದೆ. ಸ್ತ್ರೀ ಆಶ್ರಿತಳಾಗಿಯೇ ಗುರುತಿಸಲ್ಪಟ್ಟಿದ್ದರಿಂದ ಆಶ್ರಯ ಕೊಡುವವನ ಒಲವಿನ ಸಂಪಾದನೆಗಾಗಿ ಒಂದೇ ಕುಟುಂಬದೊಳಗಿನ ಮಹಿಳೆ-ಮಹಿಳೆಯರಲ್ಲಿಯೇ ಸ್ಪರ್ಧೆ ಏರ್ಪಡುವಂತೆ ಮಾಡಿದೆ. ಪಿತೃ ಪ್ರಧಾನ ವ್ಯವಸ್ಥೆಯು ಒಂದೇ ಕುಟುಂಬಕ್ಕೆ ಸೇರಿದ ಮಹಿಳೆಯರೊಳಗೆ ಶ್ರೇಣೀಕರಣಗಳನ್ನು ಮಾಡಿ ತಾರತಮ್ಯವನ್ನು ಸೃಷ್ಟಿಸಿದೆ. ಇಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರು ಜಾತಿಯನ್ನು, ವರ್ಣವನ್ನು, ಧರ್ಮವನ್ನು, ವರ್ಗವನ್ನು, ಪ್ರದೇಶವನ್ನು ಮೀರಿ ಒಂದಾಗುವ ಮಾತು ಬಹಳ ದೂರದ್ದಾಯಿತು. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರೆಲ್ಲ ಒಗ್ಗಟ್ಟಾಗಿ ರಾಜಕಾರಣ ಮಾಡುವುದು ಎಲ್ಲಿ ಬಂತು? ಅದು ಹೇಗೆ ಸಾಧ್ಯ?

ಮಹಿಳೆಯರಲ್ಲಿ ಕೆಲವರು ಮೇಲ್ಮುಖ ಬೆಳವಣಿಗೆಯೊಂದಿಗೆ ಸಮೀಕರಣಗೊಂಡಿದ್ದಾರೆ. ಈ ಪ್ರಕ್ರಿಯೆಯು ಮಹಿಳಾ ಸಮುದಾಯದಲ್ಲಿ ಆಶಾವಾದವನ್ನು ಹುಟ್ಟುಹಾಕುತ್ತದೆ. ಈ ಆಶಾವಾದವು ಇಡೀ ಮಹಿಳಾ ಸಮುದಾಯಗಳಿಗೆ ಮೋಡಿಯಾಗಿ ಆವರಿಸಿಕೊಂಡಿದೆ. ಈ ಮೋಡಿಯು ವಾಸ್ತವ ಸಂಗತಿಗಳನ್ನು ಹೇಳುತ್ತಿರುವಂತೆ ಅನೇಕ ಭ್ರಮೆಗಳನ್ನು ಸೃಷ್ಟಿಸುತ್ತದೆ. ಔದ್ಯೋಗೀಕರಣದಲ್ಲಿ, ಸಾರ್ವಜನಿಕ ಉನ್ನತ ಹುದ್ದೆಗಳಲ್ಲಿ, ರಾಜಕಾರಣದಲ್ಲಿರುವ ಮಹಿಳೆಯರು ಇತರ ಮಹಿಳೆಯರಿಗೆ ಅನುಕರಣೀಯ ಮಾದರಿಗಳಾಗುತ್ತಾರೆ. ಮಹಿಳೆಯರ ಇಂತಹ ಅನುಕರಣೀಯ ಮಾದರಿಗಳು ಅಲ್ಪಸಂಖ್ಯಾತವಾಗಿದ್ದರೂ ಮಹಿಳೆ ಅಭಿವೃದ್ಧಿ ಹೊಂದಿದ್ದಾಳೆ ಎನ್ನುವ ಭ್ರಮೆಯನ್ನು ಹುಟ್ಟು ಹಾಕುತ್ತಿರುತ್ತವೆ. ಅದೂ ಅಲ್ಲದೆ ಅಲ್ಪಸಂಖ್ಯೆಯಲ್ಲಿರುವ ಇಂತಹ ಮಹಿಳಾ ಮಾದರಿಗಳು ಎಲ್ಲ ಮಹಿಳೆಯರಿಗೂ ಅನುಕರಿಸಲು ಸಾಧ್ಯವಾಗುವುದಿಲ್ಲ. ಎಲ್ಲಿಯವರೆಗೆ ಸಮಾಜವು ರಚನಾತ್ಮಕವಾಗಿ ಬದಲಾವಣೆಗೊಳ್ಳುವುದಿಲ್ಲವೋ ಅಲ್ಲಿಯವರೆಗೆ ಮಹಿಳಾ ರಾಜಕಾರಣವು ಮೂರ್ತಗೊಳ್ಳಲು ಸಾಧ್ಯವಾಗುವುದೇ ಇಲ್ಲ.

ಮಹಿಳೆಯರು ರಾಜಕಾರಣವನ್ನು ಮಾಡುವಾಗ ನಿರಂತರವಾಗಿ ವಿರೋಧಾಭಾಸದ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಅವರು ತಮ್ಮ ಹಿತಾಸಕ್ತಿಗಳನ್ನು ಸಮರ್ಥಿಸುವಾಗಲೆಲ್ಲಾ ಅಸಮರ್ಥನೀಯ ಭಾವನೆಗಳನ್ನು ಎದುರಿಸುತ್ತಿರುತ್ತಾರೆ. ತನ್ನನ್ನು ನಡೆಸಿಕೊಳ್ಳುವ ರೀತಿ ಮತ್ತು ನೋಡುವ ರೀತಿ ಇವೆರಡೂ ನೈತಿಕವಾಗಿ ಮತ್ತು ಕಾನೂನು ಬದ್ಧವಾಗಿ ತಪ್ಪು ಎನ್ನುವುದನ್ನು ಈ ಪಿತೃಪ್ರಧಾನ ವ್ಯವಸ್ಥೆಗೆ ಮನವರಿಕೆ ಮಾಡಿಕೊಡಬೇಕಿದೆ. ಈ ಹೊಸ ನೈತಿಕ ಪ್ರಜ್ಞೆಯನ್ನು ಸೃಷ್ಟಿಸಬೇಕಾದ ಜವಾಬ್ದಾರಿ ಪ್ರತಿಯೊಬ್ಬ ಮಹಿಳೆಯ ಮೇಲಿದೆ. ಇದು ಅಷ್ಟು ಸುಲಭದ ಕೆಲಸವಲ್ಲ. ಯಾವ ಪಿತೃಪ್ರಧಾನ ವ್ಯವಸ್ಥೆ ಮಹಿಳಾ ಹಿತಾಸಕ್ತಿಗಳನ್ನು ಕಡೆಗಣಿಸುತ್ತಿದೆಯೋ, ವಿರೋಧಿಸುತ್ತಿದೆಯೋ ಅದೇ ವ್ಯವಸ್ಥೆಯಿಂದ ಒಪ್ಪಿಗೆ ತೆಗೆದುಕೊಳ್ಳುವುದು ಮಹಿಳಾ ರಾಜಕಾರಣದ ಯಶಸ್ಸಿನ ದೃಷ್ಟಿಯಿಂದ ಬಹಳ ಮಹತ್ವಪೂರ್ಣವಾದದ್ದು.

ಮಹಿಳಾ ರಾಜಕಾರಣವನ್ನು ಮಾಡುವ ಅವಸರದಲ್ಲಿ ಸಾಂಪ್ರದಾಯಿಕ ಸಮಾಜದ ಎಲ್ಲ ಸಂಬಂಧಗಳ ಕೊಂಡಿಗಳಿಂದ ಕಳಚಿಕೊಳ್ಳುವುದು ಅಷ್ಟು ಸರಿಯಲ್ಲ. ಹೀಗೆ ಮಾಡುವುದರಿಂದ ಮಹಿಳೆ ಮತ್ತಷ್ಟು ಅಂಚಿಗೆ ತಳ್ಳಲ್ಪಡುತ್ತಾಳೆ. ಈ ಪ್ರಕ್ರಿಯೆ ಮಹಿಳಾ ರಾಜಕಾರಣದ ತೀವ್ರತೆಯನ್ನು ಹೇಳುವಂತೆಯೇ ಅವರ ಸೋಲಿನ ಸ್ಥಿತಿಯನ್ನು ನಿರೂಪಿಸುತ್ತದೆ.

ಮಹಿಳಾ ರಾಜಕಾರಣವನ್ನು ಮಾಡುವ ಅವಸರದಲ್ಲಿ ಸಾಂಪ್ರದಾಯಿಕ ಸಮಾಜದ ಎಲ್ಲ ಸಂಬಂಧಗಳ ಕೊಂಡಿಗಳಿಂದ ಕಳಚಿಕೊಳ್ಳುವುದು ಅಷ್ಟು ಸರಿಯಲ್ಲ. ಹೀಗೆ ಮಾಡುವುದರಿಂದ ಮಹಿಳೆ ಮತ್ತಷ್ಟು ಅಂಚಿಗೆ ತಳ್ಳಲ್ಪಡುತ್ತಾಳೆ. ಈ ಪ್ರಕ್ರಿಯೆ ಮಹಿಳಾ ರಾಜಕಾರಣದ ತೀವ್ರತೆಯನ್ನು ಹೇಳುವಂತೆಯೇ ಅವರ ಸೋಲಿನ ಸ್ಥಿತಿಯನ್ನು ನಿರೂಪಿಸುತ್ತದೆ.

ಶೂದ್ರರ, ದಲಿತರ ಐತಿಹಾಸಿಕ ಕಲ್ಪನೆಗಳು ಮಹಿಳೆಯರಿಗೆ ತಮ್ಮದೇ ಆದ ಇತಿಹಾಸವನ್ನು ಕಟ್ಟಿಕೊಳ್ಳಲು ಹಾಗೂ ಬೆಳೆಸಲು ಪ್ರೇರೇಪಿಸಿದವು. ಮಾತೃ ಪ್ರಧಾನ ಪರಿಕಲ್ಪನೆ ಮತ್ತು ಮಾತೃ ದೇವತೆಗಳ ಕುರಿತು ರೂಪಿಸಿದ ಸಿದ್ಧಾಂತಗಳು ಮಹಿಳೆಯರು ಹಿಂದೆಂದೂ ಅನುಭವಿಸದಿದ್ದ ಅಧಿಕಾರದ ಚರಿತ್ರೆಯನ್ನು ಕಟ್ಟಿಕೊಟ್ಟವು. ಹೀಗೆ ಮಹಿಳೆಯರು ಕಟ್ಟಿಕೊಂಡ ಚರಿತ್ರೆಯಲ್ಲಿ ಅನೇಕ ದ್ವಂದ್ವಗಳು ಹಾಗೂ ವಿರೋಧಾಭಾಸಗಳು ಇವೆ. ಮಹಿಳೆಯರ ಕುರಿತಿರುವ ಇಂತಹ ಸೈದ್ಧಾಂತಿಕ ಮಿಥ್‌ಗಳು ಬಹಳ ದಿನಗಳವರೆಗೆ ಗೀಳಾಗಿ ಉಳಿಯಲಿಲ್ಲ. ನಾವು ಯಾರು, ನಮ್ಮ ಸ್ಥಿತಿಗೆ ಕಾರಣಗಳೇನು ಎನ್ನುವ ಪ್ರಶ್ನೆಗಳು ಮಹತ್ವವನ್ನು ಪಡೆದುಕೊಳ್ಳುತ್ತಿವೆ.

ಮಹಿಳೆಗೆ ಪರ್ಯಾಯ ಬದುಕೆಂಬುದು ಇಲ್ಲ. ಒಂದು ವೇಳೆ ಪರ್ಯಾಯ ಬದುಕನ್ನು ರಚಿಸಿಕೊಳ್ಳಲು ಪ್ರಯತ್ನಿಸಿದರೆ, ಅವಳು ಬಂಧನಗಳಿಂದ ಬಿಡುಗಡೆಗೊಳ್ಳುವಳು ನಿಜ. ಆದರೆ ಅವಳನ್ನಾಧರಿಸಿದ ವಿವಾಹ, ಕುಟುಂಬದಂಥ ಸಾಮಾಜಿಕ ಸಂಸ್ಥೆಗಳು ಸಡಿಲಗೊಳ್ಳುವುವು. ಇದು ಮಹಿಳೆಗೆ ಲಾಭವನ್ನು ತರುತ್ತದೆಂದು ಹೇಳಲಾಗುವುದಿಲ್ಲ.

ವಿವಾಹ, ಕುಟುಂಬದಂತಹ ಸಂಸ್ಥೆಗಳು ಶಿಥಿಲಗೊಳ್ಳುವುದರಿಂದ ಮಹಿಳೆಯ ಬದುಕು ದುರಂತಮಯವಾಗಬಹುದು. ಏಕೆಂದರೆ ಅವಳ ಜೈವಿಕ ಸಂರಚನೆಯೇ ಹಾಗಿದೆ. ವಿವಾಹ ಚೌಕಟ್ಟಿಗೆ ಸಿಲುಕದ ಹೆಣ್ಣಿನೊಂದಿಗೆ ಸಂಬಂಧ ಹೊಂದಲು ಹಾತೊರೆಯುವ ಆಧುನಿಕ ಮನಸ್ಸಿನ ಪುರುಷರಿಗೇನೂ ಬರವಿಲ್ಲ. ಇದು ಯಾರಿಗೆ ಲಾಭವನ್ನು ತಂದುಕೊಡುತ್ತದೆ, ಯಾರಿಗೆ ನಷ್ಟವನ್ನುಂಟುಮಾಡುತ್ತದೆ ಎನ್ನುವುದು ಬಹಳ ಸ್ಪಷ್ಟವಾಗಿಯೇ ಕಾಣಿಸುತ್ತದೆ. ಪರ್ಯಾಯ ಬದುಕಿಗೆ ಅವಕಾಶವಿಲ್ಲದ ಮಹಿಳೆ ಮಾಡುವ ರಾಜಕಾರಣವು ಮೂರ್ತಗೊಳ್ಳುವುದಾದರೂ ಹೇಗೆ ಸಾಧ್ಯ? ಇಂತಹ ಅನೇಕ ಕಾರಣಗಳಿಂದಾಗಿ ಮಹಿಳಾ ರಾಜಕಾರಣವು ಏಕೀಕೃತ ಘಟಕವಾಗಿ ರೂಪುಗೊಳ್ಳಲು ಸಾಧ್ಯವಾಗುತ್ತಿಲ್ಲ.

ಸಮಾಜದಲ್ಲಿ ಮಹಿಳೆಯರು ಎರಡನೆಯ ದರ್ಜೆಯ ಪ್ರಜೆಗಳಾಗಿ ಗುರುತಿಸಿಕೊಳ್ಳಬಾರದು. ಅವಳ ಮೇಲೆ ಯಾವುದೇ ಶೋಷಣೆ ನಡೆಯಕೂಡದು. ಈ ನಿಟ್ಟಿನಲ್ಲಿ ಮಹಿಳೆಯರು ರಾಜಕಾರಣ ಮಾಡಬೇಕಿದೆ. ಅದು ಹೇಗೆ ಮಾಡಬೇಕು ಎಂಬುದು ಇನ್ನು ಯಾರಿಗೂ ಸ್ಪಷ್ಟವಾಗಿಲ್ಲ. ಆದರೂ ಅದನ್ನು ಸ್ಪಷ್ಟ ಪಡಿಸಿಕೊಳ್ಳುವುದರತ್ತ ಮಹಿಳೆಯರ ಪ್ರಯತ್ನಗಳು ಸಾಗಿವೆ.

ಅಕಾಡೆಮಿಕ್ ವಲಯದಲ್ಲಿ ಮಹಿಳಾ ರಾಜಕಾರಣವು ಅಮೂರ್ತವಾಗಿ ಸಿದ್ಧಾಂತದ ರೂಪದಲ್ಲಿ ಅಮೂರ್ತವಾಗಿ ರೂಪ ಪಡೆದುಕೊಳ್ಳುತ್ತಿದೆ. ಅಮೂರ್ತವಾಗಿಯಾದರೂ ಮಹಿಳಾ ರಾಜಕಾರಣವು ಸಮಾಜದಲ್ಲಿನ ತಮ್ಮನ್ನು ಕುರಿತ ಕುರುಡು ನಂಬಿಕೆಗಳನ್ನು ಮತ್ತು ತಮಗಾದ ಅನ್ಯಾಯಗಳನ್ನು ಪ್ರಶ್ನಿಸುತ್ತಿದೆ. ಬದುಕಿನಲ್ಲಿ ಹೊಸ ಹೊಸ ರೂಪಗಳನ್ನು ರೂಪಿಸಿಕೊಳ್ಳುವುದರತ್ತ ಒಲವು ತೋರುತ್ತಿದೆ. ಪುರುಷ ಪ್ರಧಾನ ವ್ಯವಸ್ಥೆಗಳಲ್ಲಿನ ಭೀಕರ ನ್ಯೂನತೆಗಳನ್ನು ಬಯಲಿಗೆಳೆಯುವತ್ತ ಮಹಿಳಾ ರಾಜಕಾರಣವು ಕ್ರಿಯಾಶೀಲವಾಗಿದೆ. ಮಹಿಳಾ ರಾಜಕಾರಣವನ್ನು ಮೂರ್ತಗೊಳಿಸಲು ನಾವು ಯಾವ ದಿಕ್ಕಿನಲ್ಲಿ ಸಾಗಬೇಕು, ಎಂತಹ ಪ್ರಯತ್ನಗಳನ್ನು ಮಾಡಬೇಕು ಎನ್ನುವ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದುಕೊಂಡಿವೆ. ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಅಷ್ಟು ಸುಲಭವಲ್ಲ. ಇವುಗಳಿಗೆ ಸುಲಭವಾದ ಉತ್ತರಗಳಿಲ್ಲ. ಅದಕ್ಕಾಗಿ ನಾವಿನ್ನೂ ಉತ್ತರಗಳನ್ನು ಹುಡುಕುವ ಪ್ರಯತ್ನದಲ್ಲಿಯೇ ಇದ್ದೇವೆ. ಅಮೂರ್ತವಾಗಿಯಾದರೂ ಪರ್ಯಾಯ ರಾಜಕಾರಣಗಳ ಭಾಗವಾಗಿಯೇ ಇದ್ದೇವೆ. □

ಪ್ರಕಟಣೆ

ಹೋರಾಟದ ಹಾಡುಗಳಿಗೆ ಆಹ್ವಾನ

ಕರ್ನಾಟಕದಲ್ಲಿ ದಲಿತ ಚಳವಳಿಗೆ ಮೂರು ದಶಕಗಳು ತುಂಬುತ್ತಿರುವ ಈ ಸಂದರ್ಭದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಡಾ|| ಬಿ.ಎಂ. ಪುಟ್ಟಯ್ಯನವರು ಹೋರಾಟದ ಹಾಡುಗಳನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಯೋಜನೆ ಹಾಕಿಕೊಂಡಿದ್ದಾರೆ.

ಹಸಿವು-ಅವಮಾನಗಳನ್ನು ಅನುಭವಿಸುತ್ತ ಮತ್ತು ಧಿಕ್ಕರಿಸುತ್ತ, ಅಲ್ಲಿಂದಲೇ ಸಿಡಿದು ಬಂದ, ನೋವು-ಹಿಂಸೆಗಳಲ್ಲಿ ಕೊಳೆಯುತ್ತ ಮತ್ತು ತಿರಸ್ಕರಿಸುತ್ತ ಅಲ್ಲಿಂದಲೇ ಅರಳಿ ಬಂದ ಹಾಡುಗಳು ಇಂದು ಒಂದು ಕಡೆ ಸಿಗದೆ ಚೆಲ್ಲಾಪಿಲ್ಲಿಯಾಗಿ ಹೋಗಿವೆ. ಇಂತಹ ಹೋರಾಟದ ಹಿನ್ನೆಲೆಯಲ್ಲಿ ರೂಪುಗೊಂಡ ಹಾಡುಗಳನ್ನು ಹೊಂದಿರುವ ಆಸಕ್ತರು ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿಕೊಡುವಂತೆ ಅವರು ಕೋರಿದ್ದಾರೆ.

ಡಾ|| ಬಿ.ಎಂ. ಪುಟ್ಟಯ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬, ಹೊಸಪೇಟೆ ತಾಲ್ಲೂಕು



ಸಮಾಜವಾದಿ ಜಂಗಮ
ಕಿಶನ್ ಪಟ್ನಾಯಕ್

ಅಗಲಿಕೆ

ಕಿಶನ್‌ಜೀಯವರು ಸ್ನೇಹಿತ, ತತ್ವಜ್ಞಾನಿ, ಚಿಂತಕ ಹಾಗೂ ಸದಾ ಆಶಾವಾದಿ. ಸಮಾಜವಾದಿ ಆದರ್ಶಗಳ ನಿರಂತರ ಹರಿವಿನ ನಾಯಕ. ಕಳೆದ ನಾಲ್ಕು ದಶಕಗಳಲ್ಲಿ ಅವರು ರಾಜ್ಯಾದ್ಯಂತ ನೂರಾರು ಮುಖಂಡರಿಗೆ, ಸಾವಿರಾರು ಯುವಕ, ಯುವತಿಯರಿಗೆ, ಮಾರ್ಗದರ್ಶಿಯಾಗಿ ನಡೆದುಬಂದಿದ್ದಾರೆ. ಹಲವಾರು ಚಳವಳಿಗಳಿಗೆ, ನೂರಾರು ಸಂಘಟನೆಗಳಿಗೆ, ಸಂಘ ಸಂಸ್ಥೆಗಳಿಗೆ ಚೈತನ್ಯ ತುಂಬಿ ಕರ್ನಾಟಕಕ್ಕೆ ಹೊಸ ರೂಪು ನೀಡಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಉತ್ತರ ಮತ್ತು ದಕ್ಷಿಣ ಭಾರತದ ನಡುವೆ ಕಿಶನ್‌ಜೀ ಸಂಪರ್ಕ ಸೇತುವಾಗಿ ಹಲವಾರು ಚಳವಳಿಗಳನ್ನು ರಾಷ್ಟ್ರೀಯ ಗೊಳಿಸಿದ್ದಾರೆ. ಇಂತಹ ಕಿಶನ್‌ಜಿಯವರ ಕಣ್ಮರೆ ರಾಜ್ಯವೇ ಏಕೆ ರಾಷ್ಟ್ರಕ್ಕೇ ತುಂಬಲಾರದ ನಷ್ಟ

○ ಪ್ರೊ॥ ರವಿವರ್ಮ ಕುಮಾರ್

ರೈತರು ಮತ್ತು ದಲಿತರು ಒಟ್ಟಿಗೆ ಕಲೆತು ಒಂದು ಕಾರ್ಯಕ್ರಮ ಆಯೋಜಿಸಿದ್ದಾರೆ ಎಂದು ಕೇಳಿದಾಗ ಅತ್ಯಂತ ಭಾವುಕರಾಗಿ ಮಾತನಾಡಿದವರೆಂದರೆ ದಿ॥ ಕಿಶನ್ ಪಟ್ನಾಯಕ್. 'ಅದು ನನ್ನ ಬಹಳ ದಿನದ ಕನಸು. ಅದನ್ನು ನನಸಾಗುವಂತೆ ಮಾಡಿದ ನಿಮಗೆ ಧನ್ಯವಾದಗಳು. ಮುಂದೆ ಬೆಳೆಯುವ ಈ ಎರಡೂ ಶಕ್ತಿಗಳ ಒಡನಾಟಕ್ಕೆ ಈ ಕಾರ್ಯಕ್ರಮ ನಾಂದಿಯಾಗಲಿ' ಎಂದು ಹರಸಿದರು. ಸಂದರ್ಭ ಪ್ರೊ॥ ನಂಜುಂಡಸ್ವಾಮಿಯವರ ಶ್ರದ್ಧಾಂಜಲಿ ಸಭೆ. ಈ ಬಗ್ಗೆ ಅವರ ಬದ್ಧತೆ ಎಂಥದೆಂದರೆ ದಿಲ್ಲಿ/ಪಾಟ್ನಾಗಳಲ್ಲಿ ಪೂರ್ವಯೋಜಿತ ಕಾರ್ಯಕ್ರಮವಿದ್ದಾಗ್ಯೂ ಅವರು ಈ ಸಭೆಗೆ ಬಂದಿದ್ದರು. ಅಂತಹ ಕನಸನ್ನು ಕಂಡ ಕಿಶನ್‌ಜಿಯವರು ಸೆಪ್ಟೆಂಬರ್ ೨೭ರಂದು ಕೊನೆಯುಸಿರೆಳೆದರು. ಅವರಿಗೆ ನಾವು ಕೊಡಬಹುದಾದ ಶ್ರದ್ಧಾಂಜಲಿ ಎಂದರೆ ಅವರ ಕನಸನ್ನು ನನಸಾಗುವಂತೆ ಮಾಡುವುದು; ರೈತರು ಮತ್ತು ದಲಿತರನ್ನು ಒಂದೇ ವೇದಿಕೆಯಡಿ ತರುವುದಕ್ಕಿಂತಲೂ ಪ್ರಮುಖವಾಗಿ ಒಬ್ಬರಿಗೊಬ್ಬರು ಸೋದರರಾಗಿ ಒಡನಾಡಿಗಳಾಗಬಹುದು.

ದಲಿತ ರೈತರ ಐಕ್ಯತೆಯ ಮೂಲಕ ಪರ್ಯಾಯ ರಾಜಕಾರಣದ ಕನಸು ಕಾಣುತ್ತಿದ್ದ ಕಿಶನ್‌ಜಿಯವರು ಹೃದಯಾಂತರಾಳದಲ್ಲಿ ಅದನ್ನು ಬಯಸುತ್ತಲೇ ಕೆಲವು ವಿಚಾರಗಳ ಬಗ್ಗೆ ತುಂಬಾ ತಲೆಕೆಡಿಸಿಕೊಂಡಿದ್ದರು. ಸಮಾಜವಾದಿಗಳೇ ಈ ಎರಡೂ ಚಳವಳಿಗಳನ್ನು ಮುನ್ನಡೆಸಿದ್ದುದರ ಬಗ್ಗೆ ಹೆಮ್ಮೆ ಪಟ್ಟರೂ ಅವುಗಳ ಮಾರ್ಗ ಮತ್ತು ಗುರಿಗಳಲ್ಲಿ ಸೈದ್ಧಾಂತಿಕ ಸ್ಪಷ್ಟತೆಯ ಕೊರತೆಯ ಬಗ್ಗೆ ಆತಂಕಕ್ಕೊಳಗಾಗುತ್ತಿದ್ದರು. ಈ ಬಗ್ಗೆ ಅವರ ತುಡಿತವನ್ನು ಅವರ ಮಾತುಗಳಲ್ಲೇ ಹೇಳುವುದುತ್ತಮ:

'ರೈತ ಚಳವಳಿ ಮತ್ತು ದಲಿತ ಚಳವಳಿಗಳು ಹೋರಾಟಗಳಷ್ಟೇ. ಅವು ಸೈದ್ಧಾಂತಿಕ ಚಳವಳಿಗಳಲ್ಲ. ಇಡೀ ಸಮಾಜದ ಬಗ್ಗೆ ಯಾವುದೇ ಸಮಗ್ರ ಚಿಂತನೆ ನಡೆಸಿದವುಗಳಲ್ಲ.

ರೈತಸಂಘ ಸೈದ್ಧಾಂತಿಕವಾಗಿ ಉತ್ತಮವೆಂದು ಹೇಗೆ ಹೇಳುತ್ತೀರಿ? ಹೋರಾಟಕ್ಕೆ ರೈತರ ಸಮಸ್ಯೆಯನ್ನು ಮಾತ್ರ ಆಯ್ದುಕೊಂಡಿರಿ. ಅದು ಒಳ್ಳೆಯದೇ. ಆದರೆ ಅದಕ್ಕೊಂದು ಸೈದ್ಧಾಂತಿಕ ರೂಪ ಕೊಡುವಲ್ಲಿ ವಿಫಲವಾದಿರಿ. ಉದಾಹರಣೆಗೆ ಸಮಾಜದ ಇತರೆ ವರ್ಗಗಳ ಬಗ್ಗೆ, ಜಮೀನಿಲ್ಲದ ಕೃಷಿ ಕಾರ್ಮಿಕರ ಬಗ್ಗೆ, ಮಧ್ಯಮವರ್ಗದಲ್ಲಿ ಹಿಂದುಳಿದ ವರ್ಗಗಳ ಬಗ್ಗೆ, ನಿರುದ್ಯೋಗದ ಬಗ್ಗೆ ರಾಷ್ಟ್ರದಲ್ಲಿ ರೂಪಿಸಬೇಕಾದ ಆರ್ಥಿಕ ವ್ಯವಸ್ಥೆ ಬಗ್ಗೆ ನೀವು ಚಿಂತನೆ ಮಾಡಲಿಲ್ಲ. ಆದ್ದರಿಂದ ಇದು ಸಮಾಜವಾದಿ ಚಳವಳಿಗೆ ಸಮನಾಗಲಿಲ್ಲ. ಸಮಾಜವಾದಿ ಚಳವಳಿಗೆ ಒಂದು ಒಳ್ಳೆಯ ಪೂರಕ ಚಳವಳಿಯಾಗಿದ್ದರೂ ಕೃಷಿ ಕಾರ್ಮಿಕರ ಸಮಸ್ಯೆಯನ್ನು ಪರಿಗಣಿಸದೇ ಇದ್ದುದರಿಂದ ಸೈದ್ಧಾಂತಿಕವಾಗಿ ಅದು ಅಪೂರ್ಣ ಕಾರ್ಯಕ್ರಮವಾಯಿತು.

ರೈತ ಚಳವಳಿ ಆರೋಗ್ಯಕರ ಸೈದ್ಧಾಂತಿಕ ಚೌಕಟ್ಟು ಪಡೆಯಬೇಕೆಂದರೆ ಕೃಷಿ ಕಾರ್ಮಿಕರ ಮತ್ತು ಇಡೀ ಗ್ರಾಮೀಣ ಜನತೆಯ ಅಭ್ಯುದಯಕ್ಕೆ ಪ್ರಾಮುಖ್ಯತೆ ನೀಡಲೇಬೇಕು. ಮತ್ತು ಸಣ್ಣ ಹಿಡುವಳಿದಾರರ ಮತ್ತು ದೊಡ್ಡ ರೈತರ ಭಿನ್ನತೆಯನ್ನು ಗುರುತಿಸಬೇಕು. ಈಗಲೂ ಸಹ ಇವುಗಳ ಬಗ್ಗೆ ಚಿಂತನೆ ನಡೆಸಿಲ್ಲ. ರೈತಸಂಘಟನೆ ಇಬ್ಭಾಗವಾಗಿದ್ದರೂ ಸಹ ಎರಡೂ ಬಣಗಳು ಜಮೀನಿರುವವರ ಬಗ್ಗೆ ಆಸಕ್ತವಾಗಿದ್ದು ಸಣ್ಣ

ದಲಿತ ರೈತರ ಐಕ್ಯತೆಯ ಮೂಲಕ ಪರ್ಯಾಯ ರಾಜಕಾರಣದ ಕನಸು ಕಾಣುತ್ತಿದ್ದ ಕಿಶನ್‌ಜಿಯವರು ಅದು ಕಾರ್ಯರೂಪಕ್ಕೆ ಬರುತ್ತಿರುವಾಗ ನಮ್ಮ ನಡುವೆ ಇಲ್ಲದಿರುವುದಕ್ಕೆ 'ಸಂವಾದ' ವಿಷಾದಿಸುತ್ತದೆ.

ಹಿಡುವಳಿದಾರರ ಬಗ್ಗೆ ಕಾಳಜಿ ತೋರಿಸಿಲ್ಲ; ದಲಿತರ ಕೃಷಿ ಕಾರ್ಮಿಕರ ಸಮಸ್ಯೆಗೆ ಸ್ಪಂದಿಸಿಲ್ಲ. ಆದ್ದರಿಂದ ರೈತ ಹೋರಾಟ ಒಳ್ಳೆಯ ಹೋರಾಟವೇ ಆಗಿದ್ದರೂ ಸಹ ಕ್ರಾಂತಿಕಾರಕವಾದ ಸೈದ್ಧಾಂತಿಕ ಚಳವಳಿಯಾಗಲಿಲ್ಲ. ಹಾಗಾಗಿ ಅದು ಸಮಾಜವಾದಿ ಚಳವಳಿಗೆ ಪರ್ಯಾಯವಂತೂ ಅಲ್ಲ.

ಅದೇ ರೀತಿ ಡಿಎಸ್‌ಎಸ್ ದಲಿತರ ಹಿತಕಾಯುವ ಟ್ರೇಡ್ ಯೂನಿಯನ್ ಆಯಿತೇ ಹೊರತು ಯಾವುದೇ ಸೈದ್ಧಾಂತಿಕ ರಾಜಕಾರಣವನ್ನು ಹುಟ್ಟಿಹಾಕಲಿಲ್ಲ. ದಲಿತರಿಗೆ ಪ್ರಮುಖ ಸ್ಥಾನಮಾನ ನೀಡುವ, ದಲಿತರನ್ನು ಪಾತ್ರಧಾರಿಗಳಾಗಿ ಕಾಣುವ ಭಾರತೀಯ ಆರ್ಥಿಕ ವ್ಯವಸ್ಥೆ ಅಥವಾ ನಮಗೆ ಆದರ್ಶಪ್ರಾಯವಾದ ಒಂದು ಸಾಮಾಜಿಕ-ಸಾಂಸ್ಕೃತಿಕ ಸ್ವರೂಪದ ಬಗ್ಗೆ ಡಿಎಸ್‌ಎಸ್ ಚಿಂತಿಸಲೇ ಇಲ್ಲ. ಒಂದು ಸಮಗ್ರವಾದ ಕಾರ್ಯಸೂಚಿಯನ್ನು ಸಿದ್ಧಪಡಿಸುವುದಾಗಿ ಡಿಎಸ್‌ಎಸ್ ಹೇಳುತ್ತಲೇ ಬಂದಿದೆ. ಪದೇ ಪದೇ ಚರ್ಚಿಸಿದರೇ ಹೊರತು ಒಂದು ಕರಡು ಕಾರ್ಯಸೂಚಿಯನ್ನೂ ಸಿದ್ಧಪಡಿಸಲಿಲ್ಲ. ಹಾಗಾಗಿ ಡಿಎಸ್‌ಎಸ್‌ನ ಶ್ರೇಷ್ಠ ಹೆಗ್ಗಳಿಕೆ ಎಂದರೆ ದಲಿತರ ಮೇಲಿನ ದೌರ್ಜನ್ಯವನ್ನು ಖಂಡಿಸಿದ್ದು - ಆ ಕೆಲಸವನ್ನು ಸಮರ್ಥವಾಗಿ ತಮ್ಮ ಎಲ್ಲಾ ಬಲ ಪ್ರಯೋಗ ಮಾಡಿ ತೋರಿಸಿದ್ದಾರೆ. ಇದೇ ಡಿಎಸ್‌ಎಸ್‌ನ ಪ್ರಮುಖ ಸಾಧನೆ. ಆದರೆ ಇತರೆ ವಿಷಯಗಳಲ್ಲಿ ಒಂದು ಗಟ್ಟಿಯಾದ ಸೈದ್ಧಾಂತಿಕ ನೆಲೆಗಟ್ಟನ್ನು ರೂಪಿಸಲೇ ಇಲ್ಲ. ಸಮಾಜವಾದಿ ಹಿನ್ನೆಲೆಯಿಂದ ಬಂದ ನಾಯಕತ್ವವಿದ್ದಾಗ್ಯೂ ಸಹ ಭೂಮಿಯ ಬಗ್ಗೆಯೇ ಆಗಲಿ ಕ್ಯಾಪಿಟಲಿಸಂ ಬಗ್ಗೆಯಾಗಲೀ ಒಂದು ಸ್ಪಷ್ಟ ನೀತಿಯನ್ನೇ ರೂಪಿಸಲಿಲ್ಲ.

ಇವೆರಡೂ ಚಳವಳಿಗಳು ರಚನಾತ್ಮಕವಾಗಿ ಬೆಳೆದಿದ್ದಲ್ಲಿ ಒಂದು ವಿಶಾಲವಾದ ಸಮಾಜವಾದಿ ಚಳವಳಿಯಾಗಿ ಬೆಸೆಯಬಹುದಾಗಿತ್ತು. ರೈತಸಂಘವನ್ನೇ ಆಗಲಿ, ಡಿಎಸ್‌ಎಸ್ ಆಗಲಿ ಸಮಾಜವಾದಿ ಪಕ್ಷದ ಅಂಗಸಂಸ್ಥೆಗಳನ್ನ ಮಾಡಲು ಪ್ರಯತ್ನಿಸಿದ್ದರೆ ತಪ್ಪಾಗುತ್ತಿತ್ತು. ಆದರೆ ಸಮಾಜವಾದಿ ಪಕ್ಷ ಮತ್ತು ಅದರ ರಾಜಕಾರಣದಲ್ಲಿ ಒಂದು ವಿಶಾಲ ತಳಹದಿಯ ಸಾಮಾಜಿಕ ಮತ್ತು ಆರ್ಥಿಕ ಚಳವಳಿಗಳಾಗಿ ಡಿಎಸ್‌ಎಸ್ ಮತ್ತು ರೈತಸಂಘ ಪೂರಕವಾಗಿ ಬೆಳೆಯಬಹುದಿತ್ತು. ಈ ಗಂಭೀರ ವೈಫಲ್ಯಕ್ಕೆ ಪ್ರಮುಖವಾಗಿ ಸಮಾಜವಾದಿ ನಾಯಕರು ಎರಡನೆಯದಾಗಿ ಈ ಸಂಘಟನೆಗಳಲ್ಲಿದ್ದ ವ್ಯಕ್ತಿಗಳು ಕಾರಣ'.

ಹೀಗೆಯೇ ವಿಶ್ಲೇಷಿಸಿ ರಚನಾತ್ಮಕ ಸಲಹೆಗಳನ್ನು ನಮ್ಮ ಮುಂದೆ ಇಡುತ್ತಿದ್ದ ಕಿಶನ್‌ಜಿಯವರ ಸಾವು ರಾಜ್ಯವೇ ಏಕೆ ರಾಷ್ಟ್ರಕ್ಕೇ ತುಂಬಲಾರದ ನಷ್ಟ.

ಆದರ್ಶ ಜೀವಿ

೧೯೩೦ರ ಜೂನ್ ೩೦ರಂದು ಕಾಳಹಂದಿ ಸಂಸ್ಥಾನದ ಅಧಿಕಾರಿಯ ಮಗನಾಗಿ ಹುಟ್ಟಿದ ಕಿಶನ್‌ಜಿಯವರು ೧೬ನೇ ವಯಸ್ಸಿಗೇ ಸ್ವಾತಂತ್ರ ಚಳವಳಿಗೆ ಧುಮುಕಿದರು; ಮಹಾರಾಜನ ವಿರುದ್ಧವೇ ತಿರುಗಿಬಿದ್ದವರು. ೧೯೫೧ರಲ್ಲಿ ವಿಧ್ಯುಕ್ತವಾಗಿ ಸಮಾಜವಾದಿ ಪಕ್ಷಕ್ಕೆ ಸದಸ್ಯರಾದರು. ಸತ್ಯಾಗ್ರಹದಲ್ಲಿ ಜೈಲು ಸೇರಿದ್ದ ಕಿಶನ್‌ಜಿ ಪಕ್ಷದ ಸಿದ್ಧಾಂತಕ್ಕೆ ಕಟ್ಟುಬಿದ್ದು ಜಾಮೀನಿನ ಮೇಲೆ ಹೊರಬರದೆ ಜೈಲಿನಿಂದಲೇ ಸ್ಪರ್ಧಿಸಿ ಗೆದ್ದು ೧೯೬೭ರಲ್ಲಿ ಸಂಬಾಲಪುರ ಕ್ಷೇತ್ರದಿಂದ ಲೋಕಸಭಾ ಸದಸ್ಯರಾದರು. ಅಪ್ಪಟ ಗಾಂಧಿವಾದಿಯಾಗಿ, ಜೀವನಪರ್ಯಂತ ಖಾದಿಧಾರಿಗಳಾಗಿ ಸರಳ ಜೀವನ ನಡೆಸಿದ ಕಿಶನ್ ಸಾವನ್ನಪ್ಪಿದಾಗ ಅವರಿಗೊಂದು ಗುಡಿಸಲೂ ಇರಲಿಲ್ಲ. ಇಡೀ ಜೀವನವನ್ನೇ ಸಾರ್ವಜನಿಕ ಚಟುವಟಿಕೆಗೆ

ಲೋಹಿಯಾ & ಕಿಶನ್‌ಜೀ



ಲೋಹಿಯಾ ಜೀವಿತ ಕಾಲದಲ್ಲಿ ಅವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದ ಕಿಶನ್‌ಜೀಯವರು ಲೋಹಿಯಾ ಗತಿಸಿದ ನಂತರ ಸಮಾಜವಾದಿ ಚಳವಳಿಯ ಏಳು ಬೀಳುಗಳ ನಡುವೆಯೂ ಸಮಾಜವಾದದ ಬಾವುಟವನ್ನು ನಿರಂತರವಾಗಿ ಹಾರಿಸುತ್ತಾ ಬಂದ ಪ್ರಚಂಡ ನಾಯಕ. ಎಲ್ಲಾ ಲೋಹಿಯಾವಾದಿಗಳು ಅಧಿಕಾರ ಲಾಲಸೆಗೆ ತುತ್ತಾಗಿ ಸಮಾಜವಾದಿ ಚಳವಳಿಯನ್ನೇ ಬಲಿಕೊಟ್ಟರೆ ಕಿಶನ್‌ಜೀಯವರು ಮಾತ್ರ ಲೋಹಿಯಾ ವಾದದ ಏಕೈಕ ವಾರಸುದಾರನಂತೆ ದೇಶದ ಉದ್ದಗಲಕ್ಕೆ ಸಂಚರಿಸಿ ಸಮಾನತೆಯ ಹರಿಕಾರನಾಗಿ ಮೆರೆದರು. ಜೆಪಿಯವರ ನಿಕಟವರ್ತಿಯಾಗಿ ಕರ್ನಾಟಕ, ಬಿಹಾರ, ಉತ್ತರ ಪ್ರದೇಶ, ಆಂಧ್ರಪ್ರದೇಶ, ಕೇರಳ, ತಮಿಳುನಾಡು, ಮಧ್ಯ ಪ್ರದೇಶ, ಒರಿಸ್ಸಾ ಮತ್ತು ದಿಲ್ಲಿಯಲ್ಲೂ ಸಂಪೂರ್ಣ ಕ್ರಾಂತಿ ಆಂದೋಲನವನ್ನು ಸಂಘಟಿಸಿದ ರೂವಾರಿ.

ಸಮಾಜವಾದಿ ಯುವಜನಸಭಾ, ಲೋಹಿಯಾ ವಿಚಾರಮಂಚ್, ನವನಿರ್ಮಾಣ ಕ್ರಾಂತಿ, ಸಮತಾ ಸಂಘಟನೆ, ಸಮಾಜವಾದಿ ಜನ ಪರಿಷದ್, ನರ್ಮದಾ ಬಚಾವೋ ಆಂದೋಲನ, ಜನಪರ ಚಳವಳಿಗಳ ರಾಷ್ಟ್ರೀಯ ಮೋರ್ಚಾ ಮುಂತಾದ ಹತ್ತಾರು ಸಂಘಟನೆಗಳ ಮುಂಚೂಣಿಯಲ್ಲಿದ್ದ ಅವರು ಲೋಹಿಯಾರವರ ಮೆಚ್ಚಿನ ಪತ್ರಿಕೆಯಾದ 'ಮ್ಯಾನ್‌ಕೈಂಡ್' ಪತ್ರಿಕೆಯ ಸಂಪಾದಕರಾಗಿಯೂ ದುಡಿದರು. ೧೯೭೭ರಲ್ಲಿ 'ಸಾಮಾಯಿಕ ವಾರ್ತಾ' ಮಾಸ ಪತ್ರಿಕೆಯನ್ನು ಪ್ರಾರಂಭಿಸಿ ಕೊನೆಯವರೆಗೂ ಅದರ ಸಂಪಾದಕರಾಗಿದ್ದರು.

ಅವರ ಪ್ರಖರ ಲೇಖನಿಗಳಿಂದ ಬಂದ ಪುಸ್ತಕಗಳಲ್ಲಿ ಮುಖ್ಯವಾದವು:

೧. ವಿಕಲ್ಪಹೀನ್ ನಯೀದುನಿಯಾ ೨. ಮೂಲಭೂತವಾದ ಮತ್ತು ರಾಷ್ಟ್ರಹಿತ ೩. ಹೆಣ್ಣಿಗೇನು ಬೇಕು - ಸ್ವಾತಂತ್ರ್ಯವೋ, ಸಮಾನತೆಯೋ? ೪. ನಿರುದ್ಯೋಗ ಸಮಸ್ಯೆ ಮೂಲ ಮತ್ತು ಪರಿಹಾರ ೫. ಭಾರತ್ ಶೂದ್ರೋಂಕ ಹೋಗಾ (ಭಾರತ ಶೂದ್ರರಿಗೇ ಸೇರಬೇಕು)

ಮೀಸಲಿಟ್ಟಿದ್ದ ಕಿಶನ್‌ಜಿಯವರು ದೇಶದ ಉದ್ದಗಲಕ್ಕೆ ಸಂಚರಿಸಿ ಸಮಾಜವಾದಿ ಚಳವಳಿಯನ್ನು ಸಂಘಟಿಸಿದ್ದರು.

ಉತ್ತರ ದಕ್ಷಿಣದ ನಡುವೆ ಸೇತುವೆಯಾಗಿದ್ದ ಕಿಶನ್‌ಜಿಯವರಿಗೆ ಕರ್ನಾಟಕದ ಬಗ್ಗೆ ವಿಶೇಷ ಮಮತೆ. ಕಳೆದ ೪೦ ವರ್ಷಗಳಿಂದ ನಿರಂತರ ಒಡನಾಟವಿಟ್ಟುಕೊಂಡಿದ್ದರು. ಎಂತಹ ನಿರಾಶಾದಾಯಕ ಪರಿಸ್ಥಿತಿಯಲ್ಲೂ ಎದೆಗುಂದದ ಕಿಶನ್‌ಜಿ ನಿರಂತರ ಆಶಾವಾದಿ. ರೈತ ಮತ್ತು ದಲಿತರ ಚಳವಳಿಗಳ ಒಡನಾಟ, ಪರ್ಯಾಯ ರಾಜಕಾರಣದ ಚಿಂತನೆ ಮತ್ತು ಇತ್ತೀಚಿನ ಚುನಾವಣೆಗಳಲ್ಲಿ ಕೋಮುವಾದಿಗಳು ಮಣ್ಣು ಮುಕ್ಕಿದ್ದು ಕಿಶನ್‌ಜಿಯವರನ್ನು ಚೇತೋಹಾರಿಯಾಗಿಸಿತ್ತು.

ಪ್ರಖರ ಲೋಹಿಯಾ ವಾದಿ

೧೯೫೬ರ ವೇಳೆಗೆ ಡಾ|| ರಾಮ ಮನೋಹರ ಲೋಹಿಯಾರವರು ಸಮಾಜವಾದಿ ಚಳವಳಿಯ ಮುಂಚೂಣಿಯಲ್ಲಿದ್ದರು. ನೆಹರೂ ಅವರಿಗೆ ಹತ್ತಿರವಾಗುತ್ತಿದ್ದ ಅಶೋಕ ಮೆಹ್ತಾ ಅವರನ್ನು ತೀವ್ರವಾಗಿ ವಿರೋಧಿಸಿದ್ದರು. ಜಾತಿಯವರ ಬೆಂಬಲಗಳಿಸಿದ್ದ ಅಶೋಕ ಮೆಹ್ತಾ ಸಮಾಜವಾದೀ ಚಳವಳಿಗೇ ಮಾರಕವಾಗುವಂತಹ ಒಡನಾಟವನ್ನು ಕಾಂಗ್ರೆಸ್ ಪಕ್ಷದೊಂದಿಗೆ ಬೆಳೆಸಿಕೊಂಡಿದ್ದರು. ಕಟ್ಟಾ ಸಮಾಜವಾದಿಗಳ ಕಣ್ಮಣಿಯಾಗಿದ್ದ ಲೋಹಿಯಾ ಬೇರೆಯವರ ದೃಷ್ಟಿಯಲ್ಲಿ ಅಷ್ಟೇ ವಿವಾದಾಸ್ಪದ ವ್ಯಕ್ತಿಯಾಗಿದ್ದರು.

ಪ್ರಖರವಾದ ಸಮಾಜವಾದಿ ಚಿಂತನೆ, ನಿಸ್ವಾರ್ಥ ನಾಯಕತ್ವ, ವೈಚಾರಿಕ ಸ್ಪಷ್ಟತೆ ಎಲ್ಲಕ್ಕಿಂತ ಹೆಚ್ಚಾಗಿ ಪ್ರಚಂಡ ವಾಗ್ಮಿ ಕಿಂದರಿಜೋಗಿಯಂತೆ ಯುವಪೀಳಿಗೆಯನ್ನು ಆಕರ್ಷಿಸಿದ್ದರು. ಬಿಡುವಿಲ್ಲದ ಕ್ರಾಂತಿಕಾರಕ ಹೋರಾಟಗಳ ಮೂಲಕ ದೇಶದ ಮೂಲೆ ಮೂಲೆಗಳಲ್ಲಿ ಸಮಾಜವಾದಿ ಚಳವಳಿಯ ಪತಾಕೆ ಹಾರಿಸಿದ್ದರು. 'ನೆಹರೂ ಸಮಾಜವಾದಕ್ಕೆ' ಮನಸೋತಿದ್ದ ಅಶೋಕ ಮೆಹ್ತಾ 'ಹಿಂದುಳಿದ ಆರ್ಥಿಕ ವ್ಯವಸ್ಥೆಯ ಅನಿವಾರ್ಯಗಳು' ಎಂಬ ಚಿಂತನೆಯಲ್ಲಿ ಆಳುವ ಕಾಂಗ್ರೆಸ್ ಮತ್ತು ವಿರೋಧ ಪಕ್ಷದ ಸಮಾಜವಾದಿಗಳಿಗೂ ನಡುವೆ ಒಂದು 'ಸ್ನೇಹ ಸೇತು' (area of agreement) ಇರಬೇಕೆಂದು ಹೇಳಿದ್ದರು. ತೀವ್ರ ಆರ್ಥಿಕ ಪ್ರಗತಿಗೆ ಸಹಕಾರ ಅನಿವಾರ್ಯ ಎಂಬ ನವ ಹೇಳಿ ಅಶೋಕ ಮೆಹ್ತಾ ನೆಹರೂ ಜೊತೆ ಕೈಜೋಡಿಸಲು ಮುಂದಾಗಿದ್ದರು. ಲೋಹಿಯಾ, ನೆಹರೂ ಸಮಾಜವಾದವನ್ನು 'ನರಸತ್ತ ಸಮಾಜವಾದ' ಎಂದು ಛೇಡಿಸಿ ಸಹಕಾರದ ಸಲಹೆಯ ವಿರುದ್ಧ ಸಿಡಿದೆದ್ದರು. ಪರಿಣಾಮವಾಗಿ ಲೋಹಿಯಾರನ್ನು ಪಕ್ಷದಿಂದ ಉಚ್ಛಾಟಿಸಲಾಯಿತು.

ಅದೇ ಸಮಯದಲ್ಲಿ ಜಾತಿ ರಾಜಕೀಯ ಸನ್ಯಾಸ ಸ್ವೀಕರಿಸಿ 'ಗಾಂಧೀ ಮಠ' ಎಂದು ಲೋಹಿಯಾ ಅಣಕಿಸುತ್ತಿದ್ದ ಸರ್ವೋದಯಕ್ಕೆ ವಾಲಿದರು. ಈ ಸಂದರ್ಭವನ್ನು ಕ್ರಿಯಾತ್ಮಕವಾಗಿ ಬಳಸಿದ ಲೋಹಿಯಾ ಅತ್ಯಂತ ಸುಭದ್ರ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಸಮಾಜವಾದಿ ಪಕ್ಷವನ್ನು ಸಂಘಟಿಸಿ ೧೯೫೬ರಲ್ಲಿ ಅದರ ಸ್ಥಾಪನಾ ಸಮಾವೇಶವನ್ನು ಹೈದರಾಬಾದ್‌ನಲ್ಲಿ ನಡೆಸಿದರು. ಅದೇ ಕಿಶನ್‌ಜಿಯವರ ಪ್ರಥಮ ಲೋಹಿಯಾ ಭೇಟಿ. ಅಂಜುತ್ತಲೇ ಕೆಲ ನಿಮಿಷಗಳ ಕಾಲ ಲೋಹಿಯಾರೊಡನೆ ಕಿಶನ್‌ಜಿ ಮಾತನಾಡಿದ್ದರು. ಕಿಶನ್‌ಜಿಗೆ ಆಶ್ಚರ್ಯ ಕಾದಿತ್ತು. ಒಂದೆರಡು ತಿಂಗಳುಗಳಲ್ಲೇ ರಬಿರಾಯ್‌ರವರ ಮೂಲಕ ಕಿಶನ್‌ಜಿಗೆ ಕರೆ ಬಂತು. Mankind ಪತ್ರಿಕೆಯ ಬಳಗಕ್ಕೆ ಕಿಶನ್‌ಜಿಯ ಸೇರ್ಪಡೆ. ೧೨.೧೦.೧೯೬೭ರಲ್ಲಿ ಲೋಹಿಯಾ ಮರಣದವರೆಗೆ ಅವರಿಬ್ಬರ ಸ್ನೇಹ, ಒಡನಾಟ ಮತ್ತು ಚಿಂತನೆ ಸರ್ವಕಾಲಿಕ.

ಕರ್ನಾಟಕದಲ್ಲಿ ಕಿಶನ್ ಪಟ್ನಾಯಕ್

ಕರ್ನಾಟಕಕ್ಕೂ - ಕಿಶನ್ ಪಟ್ನಾಯಕ್‌ರಿಗೂ ಎಡಬಿಡದ ನಂಟು. ಕರ್ನಾಟಕದ ಸತ್ಯಾಗ್ರಹಗಳ ಮಕುಟ ಮಣಿಯಂತಿರುವ ಗೇಣಿದಾರರ ಹಕ್ಕುಗಳ ಒತ್ತಾಯದ ಭೂ ಸುಧಾರಣೆ ಚಳವಳಿಯಾದ ಕಾಗೋಡು ಸತ್ಯಾಗ್ರಹದ ಸಮಯದಲ್ಲೇ ಸುಮಾರು ನಲವತ್ತು ವರ್ಷಗಳಷ್ಟು ಹಿಂದೆಯೇ ಕಿಶನ್‌ಜೀ ಕರ್ನಾಟಕಕ್ಕೆ ಕಾಲಿರಿಸಿದರು. ಕಾಗೋಡು ಸತ್ಯಾಗ್ರಹದಲ್ಲಿ ಡಾ॥ ಲೋಹಿಯಾರವರ ಬಂಧನದ ತರುವಾಯದಲ್ಲೇ ಕಾಗೋಡಿಗೆ ಕಾಲಿಟ್ಟ ಕಿಶನ್‌ಜೀ ಕರ್ನಾಟಕದ ಸಮಾಜವಾದಿ ನಾಯಕ ಬೆಂಕಿಯುಂಡೆಯಂತಹ ಶಾಂತವೇರಿ ಗೋಪಾಲಗೌಡರ ಜೊತೆ ಸುತ್ತಾಡಿ ಗೇಣಿದಾರರನ್ನು ಹುರಿದುಂಬಿಸಿದರು. ಅಂದಿನಿಂದ ಇಂದಿನವರೆಗೂ ಕರ್ನಾಟಕದ ಪ್ರತಿಯೊಂದು ಪ್ರಜಾಸತ್ತಾತ್ಮಕ ಸುಧಾರಣಾ ಚಳವಳಿಗಳ ಜೊತೆ ಜೊತೆಯಲ್ಲಿ ಮಾರ್ಗದರ್ಶಿ ಚೇತನವಾಗಿ ಕಿಶನ್‌ಜೀ ಸಾಗಿ ಬಂದಿದ್ದಾರೆ.

ಕಳೆದ ನಾಲ್ಕು ದಶಕಗಳಲ್ಲಿ ಅವರು ರಾಜ್ಯಾದ್ಯಂತ ನೂರಾರು ಮುಖಂಡರಿಗೆ, ಸಾವಿರಾರು ಯುವಕ, ಯುವತಿಯರಿಗೆ ಸಮಾಜವಾದೀ ಚಳವಳಿಯ ಸಾರವನ್ನು ಉಣಬಡಿಸಿ ಚೈತನ್ಯ ತುಂಬಿದ್ದಾರೆ. ಕರ್ನಾಟಕದ ಸಮಾಜವಾದಿ ಚಳವಳಿಯ ಮಾರ್ಗದುದ್ದಕ್ಕೂ ಸಮಾಜವಾದಿ ಸಂಘಟನೆಗಳ ಏಳುಬೀಳುಗಳಲ್ಲಿ ಮಾರ್ಗದರ್ಶಿಯಾಗಿ ನಡೆದು ಬಂದಿದ್ದಾರೆ. ಹಲವಾರು ಚಳವಳಿಗಳಿಗೆ, ನೂರಾರು ಸಂಘಟನೆಗಳಿಗೆ, ಸಂಘ ಸಂಸ್ಥೆಗಳಿಗೆ ಚೈತನ್ಯ ತುಂಬಿ ಕರ್ನಾಟಕಕ್ಕೆ ಹೊಸ ರೂಪು ನೀಡಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಉತ್ತರ ಮತ್ತು ದಕ್ಷಿಣ ಭಾರತದ ನಡುವೆ ಕಿಶನ್‌ಜೀ ಸಂಪರ್ಕ ಸೇತುವಾಗಿ ಹಲವಾರು ಚಳವಳಿಗಳನ್ನು ರಾಷ್ಟ್ರೀಯಗೊಳಿಸಿದ್ದಾರೆ.

ಕಿಶನ್‌ಜೀಯವರು ಸ್ನೇಹಿತ, ತತ್ವಜ್ಞಾನಿ, ಚಿಂತಕ ಹಾಗೂ ಸದಾ ಆಶಾವಾದಿ. ಸಮಾಜವಾದಿ ಆದರ್ಶಗಳ ನಿರಂತರ ಹರಿವಿನ ನಾಯಕ. ಜಾತಿ ವಿನಾಶ ಕಾರ್ಯಕ್ರಮಕ್ಕೆ ಬಲವಾದ ಚಾಲನೆ ನೀಡಿದವರೇ ಕಿಶನ್ ಪಟ್ನಾಯಕ್ ಎಂದರೂ ತಪ್ಪೇನಿಲ್ಲ. ಜಾತಿ ಸಮ್ಮೇಳನಗಳ ಕಡು ವಿರೋಧಿಯಾಗಿದ್ದ ಕಿಶನ್‌ಜೀ ಅಂತರ್ಜಾತಿಯ ವಿವಾಹಗಳಿಗೆ ಸದಾ ಉತ್ತೇಜನ ನೀಡುತ್ತಿದ್ದರು. ಸಾವಿರಾರು ಅಂತರ್ಜಾತಿಯ ವಿವಾಹಗಳಿಗೆ ಇವರೇ ವೈಯಕ್ತಿಕವಾಗಿ ಮುಂದೆ ನಿಂತು ವಧು-ವರರನ್ನು ಹರಸಿದ್ದಾರೆ. ಈ ಮದುವೆಗಳು ಸರಳ ಹಾಗೂ ಸ್ವಾಭಿಮಾನದ ಸಂಕೇತಗಳಷ್ಟೇ ಆಗಿರದೆ ಪುರೋಹಿತಶಾಹಿಯ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಮೀರಿ ನಿಂತಿದ್ದವು.

ರಾಜ್ಯದಲ್ಲಿ ಕನ್ನಡ ಅಧಿಕೃತ ಆಡಳಿತ ಭಾಷೆಯಾಗುವಲ್ಲಿ ಕೂಡ ಇವರ ಒತ್ತಾಸೆಯಿತ್ತು. ತಮ್ಮ ತಮ್ಮ ಮಾತೃ ಭಾಷೆಯಲ್ಲಿಯೇ ಬರವಣಿಗೆ ಮಾಡಬೇಕೆಂದು ಇವರು ಮಹಿಳೆಯರು, ದಲಿತರು ಮತ್ತು ಹಿಂದುಳಿದವರಿಗೆ ನೀಡಿದ ಪ್ರೋತ್ಸಾಹ ಕರ್ನಾಟಕದಲ್ಲಿ ನವ್ಯ, ಬಂಡಾಯ ಮತ್ತು ದಲಿತ ಸಾಹಿತ್ಯಗಳಿಗೆ ಉತ್ತೇಜನ ನೀಡಿದ್ದಷ್ಟೇ ಅಲ್ಲ; ಹಲವಾರು ಪ್ರಗತಿಪರ ಚಳವಳಿಗಳಿಗೆ ಮತ್ತು ಪತ್ರಿಕೆಗಳು ಜನ್ಮ ತಳೆಯಲು ಕಾರಣವಾಯಿತು.

ಆರ್ಥಿಕ ಉದಾರೀಕರಣ ಅಸಂವಿಧಾನಿಕ. ಇದು ಜನ ವಿರೋಧಿ ಎನ್ನುವುದನ್ನು ಕಿಶನ್‌ಜೀ ಬಲವಾಗಿ ಪ್ರತಿಪಾದಿಸುತ್ತಾ ಉದಾರೀಕರಣವನ್ನು ವಿರೋಧಿಸುತ್ತಲೇ ಬಂದರು. ಆರ್ಥಿಕ ಉದಾರೀಕರಣದ ಕೆಡುಕುಗಳ ಬಗ್ಗೆ ನೂರಾರು ಕಾರ್ಯಾಗಾರ, ಅಧ್ಯಯನ ಶಿಬಿರಗಳಲ್ಲಿ ಇವರು ಭಾಷಣ ಮಾಡಿ ತಮ್ಮ ಪ್ರಖರ ಚಿಂತನೆಯಿಂದ ಬೆಳಕು ಚೆಲ್ಲಿದ್ದಾರೆ. ನೂರಾರು ಲೇಖನಗಳನ್ನು ಬರೆದಿದ್ದಾರೆ. ಇತ್ತೀಚೆಗೆ ಆಗಸ್ಟ್‌ನಲ್ಲಿ ತಮ್ಮ ಭಾಷಣವೊಂದರಲ್ಲಿ ಕಿಶನ್ ಸಾರ್ವಜನಿಕ ಹಿತದೃಷ್ಟಿಯಿಂದ ರಾಷ್ಟ್ರದಲ್ಲಿ ಆರ್ಥಿಕ ತುರ್ತು ಪರಿಸ್ಥಿತಿಯನ್ನು ಘೋಷಿಸಿ ಆರ್ಥಿಕ ಪುನರ್‌ರಚನೆಗೆ ನಾಂದಿ ಹಾಡಬೇಕೆಂದು ಬಲವಾಗಿ ಒತ್ತಾಯಿಸಿದ್ದರು. ಸಂವಿಧಾನದ ೩೬೦ನೇ ವಿಧಿಯನ್ನು ಬಳಸಿ ಇಂತಹ ತುರ್ತು ಪರಿಸ್ಥಿತಿಯನ್ನು ಜಾರಿಗೊಳಿಸುವ ರಾಷ್ಟ್ರಪತಿಗಳ ಅಧಿಕಾರ ಮೂಲೆಗುಂಪಾಗಿದೆ, ಮತ್ತು ಜನವಿರೋಧಿಯಾಗಿರುವುದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ ಎಂದು ತೋರಿಸಿದರು.

ಕಿಶನ್ ಪಟ್ನಾಯಕ್ ಅವರೊಂದಿಗೆ ಮೇಧಾ ಪಾಟ್ಕರ್ ಮತ್ತು ಪ್ರೊ॥ ರವಿವರ್ಮಕುಮಾರ್

ಲಿಂಗಭೇದದ ವಿರುದ್ಧ ಇವರು ಸದಾ ಕಿಡಿಕಾರುತ್ತಿದ್ದರು. ಮಹಿಳಾ ಸಮಾನತೆಯ ಬಗೆಗಿನ ಇವರ ವಿಚಾರಧಾರೆ ನಿಖರವಾಗಿತ್ತು. ಇದು ಮಹಿಳಾ ಚಳವಳಿಗಾರರಲ್ಲಿ ಸ್ಫೂರ್ತಿಯ ಚಿಲುಮೆಯನ್ನು ಉಕ್ಕಿಸುತ್ತಿತ್ತು. ಸಾಮಾನ್ಯವಾಗಿ ವಿವಾಹಿತ ಪುರುಷರಲ್ಲಿ ಅಪರೂಪವೆನಿಸುವ ಇವರ ಮಹಿಳಾ ಸಮಾನತೆಯ ಕಾಳಜಿ ಜಾತಿ ಮತ್ತು ಮತಗಳ ಎಲ್ಲೆಯನ್ನು ಮೀರಿ, ಎಲ್ಲರನ್ನು ಆವರಿಸಿಕೊಳ್ಳುತ್ತಿತ್ತು. ಹಿಂದುಳಿದ ಜಾತಿಗಳಲ್ಲಿನ ಮಹಿಳೆಯರ ಅನಕ್ಷರತೆ ಬಗ್ಗೆ ಕಿಶನ್‌ಜೀ ಬಹಳ ಅಸಂತುಷ್ಟರಾಗಿದ್ದರು. ಸಮಾಜದ ಅಭಿವೃದ್ಧಿಗೆ ಮಹಿಳಾ ಸಾಕ್ಷರತೆ ಅಡಿಪಾಯ ಎನ್ನುವುದನ್ನು ಇವರು ಬಲವಾಗಿ ನಂಬಿದ್ದರು.

ಕಿಶನ್‌ಜೀ ಬಹುಮುಖಿ ಸಂಸ್ಕೃತಿಯ ಪ್ರತಿಪಾದಕರಾಗಿದ್ದರು. ಒಮ್ಮೆ ಸಮತಾ ವಿದ್ಯಾಲಯದ ಆವರಣದಲ್ಲಿ ಸಸ್ಯಾಹಾರ ಸೇವನೆ ಪದ್ಧತಿಯ ಬಗ್ಗೆ ಚರ್ಚೆ ನಡೆಯುತ್ತಿತ್ತು. ಕಿಶನ್‌ಜೀ, ಅಧ್ಯಯನ ಶಿಬಿರದಲ್ಲಿ ಮಾಂಸಾಹಾರವನ್ನು ಬಡಿಸುವುದು ಸರಿಯಲ್ಲ ಎಂದು ಬಲವಾಗಿ ವಾದ ಮಂಡಿಸಿದರು. ಈ ಲೇಖಕರು ಇದನ್ನು ಅಷ್ಟೇ ಬಲವಾಗಿ ಖಂಡಿಸಿ, ಇದು ಶಾಲೆಯ ಮಕ್ಕಳ ಮನಸ್ಸಿನಲ್ಲಿ ಬ್ರಾಹ್ಮಣತ್ವದ ಬೀಜವನ್ನು ಬಿತ್ತಿದಂತೆ ಆಗುತ್ತದೆ. ಅಲ್ಲದೆ ನಮ್ಮದಲ್ಲದ ಸಸ್ಯಾಹಾರ ಸಂಸ್ಕೃತಿಯನ್ನು ನಮ್ಮ ಮಕ್ಕಳ ಮೇಲೆ ಹೇರಿದಂತಾಗುತ್ತದೆ ಎಂದು ಪ್ರತಿಪಾದಿಸಿದರು. ಕಿಶನ್‌ಜೀ ಇದಕ್ಕೆ ಸಮ್ಮತಿಸಲಿಲ್ಲ. ಚರ್ಚೆ ಅಪೂರ್ಣವಾಗಿ ಉಳಿಯಿತು.

ಇದಾದ ನಂತರ ಕಿಶನ್‌ಜೀ ಒರಿಸ್ಸಾಗೆ ತೆರಳಿದರು. ಭುವನೇಶ್ವರ ರೈಲ್ವೇ ನಿಲ್ದಾಣದಲ್ಲಿ ಇಳಿಯುತ್ತಿದ್ದಂತೆಯೆ ಅವರು ಒಂದು ಪತ್ರವನ್ನು ಬರೆದು ನನಗೆ ರವಾನಿಸಿದರು. ಅದರಲ್ಲಿ ಅವರು 'ನಾನು ಮರಳಿ ಒರಿಸ್ಸಾಗೆ ತೆರಳುವವರೆಗೂ ರೈಲಿನಲ್ಲಿ ಇದೇ ವಿಚಾರವನ್ನು ಮತ್ತೆ ಮತ್ತೆ ಚಿಂತಿಸಿದೆ. ಹೀಗೆ, ಒಬ್ಬರ ಮೇಲೆ ಅವರದಲ್ಲದ ಆಚಾರವನ್ನು ಹೇರುವುದು ಸರಿಯಲ್ಲ. ಅವರವರ ಆಚಾರಗಳನ್ನು ನಾವು ಪರಸ್ಪರ ಗೌರವಿಸಬೇಕು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪುರಾತನ ಜನ ಸಮುದಾಯಗಳಿಗೆ ಅವರವರ ಆಚಾರಗಳನ್ನು ಅನುಸರಿಸಲು ಸ್ವಾತಂತ್ರ್ಯ ನೀಡುವ ಮೂಲಕವೇ ಬಹುಮುಖಿ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಸಾಧ್ಯ ಎನ್ನುವುದನ್ನು ನಾನು ಈಗ ನಂಬಿದ್ದೇನೆ' ಎಂದು ಬರೆದಿದ್ದರು.

ಕಿಶನ್‌ಜೀ ಇತ್ತೀಚೆಗೆ ಪರ್ಯಾಯ ರಾಜಕಾರಣದ ಬಗ್ಗೆ ಗಂಭೀರವಾಗಿ ಪ್ರತಿಪಾದಿಸುತ್ತಿದ್ದರು. ರೈತರು ಮತ್ತು ದಲಿತರನ್ನು ಒಂದುಗೂಡಿಸಿ ರಾಜಕೀಯ ಪಕ್ಷ ಸ್ಥಾಪಿಸಲು ನಾವು ನಡೆಸುತ್ತಿರುವ ಪ್ರಯತ್ನಗಳ ಸಂದರ್ಭದಲ್ಲಿ ಅವರು ಹಲವಾರು ಸಮಾಲೋಚನಾ ಸಭೆಗಳಲ್ಲಿ ಭಾಗವಹಿಸಿದ್ದರು. ರಾಷ್ಟ್ರೀಯ ಪಕ್ಷಗಳು ಇರಕೂಡದು. ಇನ್ನು ಮುಂದೆ ಏನಿದ್ದರೂ ಪ್ರಾಂತೀಯ ಪಕ್ಷಗಳದ್ದೇ ಪ್ರಾಬಲ್ಯವಿರಬೇಕು ಎನ್ನುವುದನ್ನು ಅವರು ಒಪ್ಪಿಕೊಂಡಿದ್ದರು. ಸಾಮೂಹಿಕ ನಾಯಕತ್ವವೇ ಪ್ರಧಾನವಾಗಿರುವ ನಮ್ಮ ರಾಜಕೀಯ ಚಿಂತನೆಗೆ ಅವರು ಸಮ್ಮತಿಸಿದ್ದರು. ಹೈಕಮಾಂಡ್ ಆಳ್ವಿಕೆಗೆ ಇವರ ವಿರೋಧವಿತ್ತು. ಪ್ರತಿ ಕ್ಷೇತ್ರದಲ್ಲೂ ಅಭ್ಯರ್ಥಿಯನ್ನು ಅಲ್ಲಿನ ಜನರು, ಕಾರ್ಯಕರ್ತರೇ ಆಯ್ಕೆ ಮಾಡಬೇಕು ಎನ್ನುವುದಕ್ಕೆ ಅವರ ಸಹಮತಿಯಿತ್ತು. (೧೮ನೇ ಪುಟಕ್ಕೆ)

ಅರಸೊತ್ತಿಗೆಗಿಂತ ಬಂಧನವೇ ಲೇಸು !

ಬಲು ಅಪರೂಪ ಸುಂದರೇಶ್ ಶಾಮಣ್ಣ ಜೋಡಿ. ಅವರದು ಎಲ್ಲವನ್ನೂ ಮರೆಸಬಲ್ಲಂತಹ ಮೋಡಿ. ಜೈಲಿನಲ್ಲಿದ್ದರೂ ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತಿದ್ದರು. ತುರ್ತು ಪರಿಸ್ಥಿತಿಯಲ್ಲಿ ಬಂಧನದ ವಾರೆಂಟ್ ತಪ್ಪಿಸಿ ತಲೆಮರೆಸಿ ಕೃಷ್ಣಪ್ರಸಾದ ಎಂಬ ಹೆಸರಿನಲ್ಲೂ ಕರ್ನಾಟಕಕ್ಕೆ ಬಂದಿಳಿದ ಕಿಶನ್ ಜೀ ಆತಿಥ್ಯದ ಜವಾಬ್ದಾರಿ ನನ್ನ ಮೇಲೆ ಬಿತ್ತು. ಕರ್ನಾಟಕದಲ್ಲಿ ಪ್ರಚಂಡ ಜೆ.ಪಿ. ಚಳವಳಿಯ ಭರವಸೆ ಮೂಡಿಸಿದ್ದ ಹಿನ್ನೆಲೆಯಲ್ಲಿ ತುರ್ತು ಪರಿಸ್ಥಿತಿ ವಿರುದ್ಧ ಸಮರ ಸಾರಲು ನಮ್ಮಲ್ಲಿಗೆ ಬಂದಿದ್ದರು. ಆ ವೇಳೆಗಾಗಲೇ ನವ ನಿರ್ಮಾಣ ಕ್ರಾಂತಿ ಹೋರಾಟಕ್ಕೆ ವಿರಾಮ ನೀಡಿ ಜೆ.ಪಿ. ಚಳವಳಿಯನ್ನು ಕಟ್ಟಿಟ್ಟಿತ್ತು. ಮೈಸೂರು ಬಿ.ಎನ್. ಶ್ರೀರಾಮರ ಮನೆಯಲ್ಲಿರಿಸಿ ಆರೋಗ್ಯ ತಪಾಸಣೆ ಮಾಡಿದ ಮೇಲೆ ತೇಜಸ್ವಿಯವರ ಚಿತ್ರಕೂಟದಲ್ಲಿ ಬಿಡಾರ. ಕಡಿದಾಳ್ ಶಾಮಣ್ಣನವರ ಭಗವತೀ ಕರೆಗೆ ವರ್ಗಾವಣೆ. ಕಿಶನ್ ಜೀಯವರ ಆರೋಗ್ಯ ಸುಧಾರಣೆ ಹೆಸರಿನಲ್ಲಿ ಪ್ರತಿದಿನ ಹಬ್ಬದೂಟ. ಅಸ್ತಮಾಕ್ಕೆ ಒಳ್ಳೆಯದೆಂದು ದಿನನಿತ್ಯ ನಾಟೀ ಕೋಳಿಗಳೇ ನಮಗಾಹಾರ. ಈ ಒಂದು ತಿಂಗಳಿನಲ್ಲಿ ತಿಂದಿರುವಷ್ಟು ಹಬ್ಬದೂಟ ನಾನಿಡೀ ಜೀವಮಾನದಲ್ಲೇ ತಿಂದಿಲ್ಲವೆಂದರು ಕಿಶನ್ ಜೀ. ನಂತರ ಅಶೋಕಪುರದ ಎನ್.ಡಿ. ಸುಂದರೇಶ್ ತೋಟಕ್ಕೆ ಹೋದೆವು. ಅಲ್ಲಿ ಮತ್ತದೇ ಹಬ್ಬದೂಟ ಮತ್ತು ಸುಂದರೇಶ್ ಶಾಮಣ್ಣ ಜೋಡಿಯಿಂದ ಮನರಂಜನೆ. ಒಂದು ರಾತ್ರಿ ಎರಡು ಗಂಟೆಯವರೆಗೂ ಗೋಷ್ಠಿ ನಡೆಯಿತು. ಹೊಟ್ಟೆ ಹುಣ್ಣಾಗುವಷ್ಟು ನಕ್ಕು ಮಲಗಿದೆವು. ಬೆಳಗ್ಗೆ ೬ ಗಂಟೆಗೆ ಕಿಶನ್ ಜೀ ನನ್ನನ್ನು ಎಬ್ಬಿಸಿದರು. ತುಂಬಾ ಸಿಟ್ಟಾಗಿದ್ದರು. ಅವರ ಹಾಸಿಗೆ ತೆಗೆದುಕೊಂಡು ಹೊರನಡೆದೇಬಿಟ್ಟರು. ಕೇಳಿದ್ದಕ್ಕೆ 'ತುರ್ತು ಪರಿಸ್ಥಿತಿಯಲ್ಲಿ ಇಂತಹ ಆತಿಥ್ಯ ಪಡೆಯುವುದಕ್ಕಿಂತ ಹೊರನಡೆದು ಬಂಧನವಾಗುವುದು ಲೇಸು' ಎಂದರು. ಕರ್ನಾಟಕದಿಂದ ಹೊರನಡೆದ ಕೆಲವೇ ದಿನಗಳಲ್ಲಿ ಬಂಧನಕ್ಕೊಳಗಾದರು.

ಮೀಸಲಾತಿ ಮತ್ತು ಜಾತಿವಿನಾಶ

ಕಿಶನ್ ಜಿಯವರ ಸಭೆಯಲ್ಲಿ ಒಮ್ಮೆ ಪ್ರಧಾನವಾಗಿ ಬಂದ ಚರ್ಚೆ ಮೀಸಲಾತಿಯು ಜಾತಿವಿನಾಶಕ್ಕೆ ದಾರಿಯೋ ಎಂಬ ಬಗ್ಗೆ ಆ ಸನ್ನಿವೇಶದಲ್ಲಿ ಕರ್ನಾಟಕದ 'ಮಾನವ ಮಂಟಪ' ಅಂತರ್ಜಾತಿ / ಅಂತರ್‌ಧರ್ಮ ವಿವಾಹಿತ ವೇದಿಕೆಯಡಿಯಲ್ಲಿ ಸಮಾವೇಶ ಸೇರಿದ್ದ ದಂಪತಿಗಳಲ್ಲಿ ಶೇ೯೦ ದಂಪತಿಗಳಲ್ಲಿ ಒಬ್ಬರಾದರೂ ಮೀಸಲಾತಿಯ ಫಲಾನುಭವಿಗಳು ಎಂಬ ಮಾಹಿತಿ ಗಮನಕ್ಕೆ ತಂದು ಹೇಗೆ ಮೀಸಲಾತಿ ಜಾತಿಜಾತಿಗಳ ನಡುವೆ ಸಮಾನತೆ ಸಾಧಿಸಲು ಸಹಕಾರಿಯಾಗಿದೆ ಎಂದು ತಿಳಿಸಿದೆ. ಕಿಶನ್ ಜಿ ಸಂತೋಷಪಟ್ಟರು. ಆದರೆ ಅವರ ತಳಮಳವನ್ನು ತೋಡಿಕೊಂಡರು. ಮೊದಲನೆಯದಾಗಿ ೧೦೧ ಜಾತಿಗಳಿರುವ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿನ ಜಾತಿಜಾತಿಗಳಲ್ಲಿ (ವಿಶೇಷವಾಗಿ ಎಡಗೈ ಮತ್ತು ಬಲಗೈ ಜಾತಿಗಳ ನಡುವೆ) ಅಂತರ್ಜಾತಿ ಮದುವೆಗಳು ಹೆಚ್ಚಬೇಕು. ಅದಕ್ಕಿಂತಲೂ ಮುಖ್ಯವಾಗಿ ಅಂತರ್ಜಾತಿ/ ಅಂತರಧರ್ಮದ ಮದುವೆಗಳು ಹೆಣ್ಣೋ ಗಂಡೋ ಮತ್ತೊಂದು ಜಾತಿಯಲ್ಲಿ ವಿಲೀನವಾಗುವ ಕ್ರಿಯೆಯಾಗದೆ ಜಾತಿ ರಹಿತ ಸಮಾಜದ ಬೀಜಾಂಕುರಕ್ಕೆ ಕಾರಣವಾಗಬೇಕು. ಅಂತಹ ಮದುವೆಯ ಮಕ್ಕಳಿಗೆ ಸರ್ಕಾರಿ ಸೇವೆಗೆ ನೇರ ಪ್ರವೇಶ ಮತ್ತು ಅವರುಗಳನ್ನು ಜಾತ್ಯಾತೀತ ಶಿಶುಗಳೆಂದು ಪರಿಗಣಿಸಬೇಕು. ಆಗ ಮಾತ್ರ ಮೀಸಲಾತಿ ಮತ್ತು ಅಂತರ್ಜಾತಿ ವಿವಾಹಗಳಿಗೆ ಒಂದು ಅರ್ಥ ಬರುತ್ತೆ ಎಂದು ವಿವರಿಸಿದರು.

ಮಾತಿಗೆ ನಿಂತರೆ ನಿರರ್ಗಳ ಚಿಂತನೆಯ ಜಲಧಾರೆ

ಊಟವನ್ನೂ ಅಗಿಯದ ಕ್ರಾಂತಿಕಾರಿಗಳು

ಒಮ್ಮೆ ಕಿಶನ್ ಜೀಯವರಿಗೆ ರಾಗಿ ಗೊತ್ತೇ ಎಂದು ಕೇಳಿದೆ. ಗೊತ್ತೆಂದರು, ಆದರೆ ಎಂದೂ ರುಚಿ ನೋಡಿಲ್ಲವೆಂದು ಒಪ್ಪಿಕೊಂಡರು. ಅಂದೇ ನಮ್ಮಮ್ಮ ಕಿಶನ್ ಜೀಯವರನ್ನೂ ನಂಜುಂಡಸ್ವಾಮಿಯವರೊಂದಿಗೆ ಊಟಕ್ಕೆ ಕರೆದಿದ್ದರು. ಬಿಸಿ ಬಿಸಿ ಮುದ್ದೆಯನ್ನು ಬಡಿಸಿದರು. ಕಿಷನ್ ಜೀ ಇಷ್ಟಪಟ್ಟು ಇಡಿಸಿಕೊಂಡರೂ ಅದನ್ನು ತಿನ್ನುವುದು ಗೊತ್ತಿರಲಿಲ್ಲ. ಬಹಳ ಪ್ರಯತ್ನದ ನಂತರ ಯಶಸ್ವಿಯಾಗಿ ಗುಳುಂ ಅಂತ ನುಂಗಿದರು. ಏನೋ ಜ್ಞಾನೋದಯವಾದಂತೆ ನುಡಿದರು 'ಕರ್ನಾಟಕದಲ್ಲಿ ಏಕೆ ಸಮಾಜವಾದಿ ಚಳವಳಿ ಯಶಸ್ವಿಯಾಗಿಲ್ಲ ಅಂತ ನನಗೆ ಗೊತ್ತಾಯ್ತು'. ನಾವೆಲ್ಲಾ ಏಕೆ ಎಂದು ಕೇಳಿದ್ದಕ್ಕೆ ಅವರ ಉತ್ತರ, 'ಊಟವನ್ನೂ ಅಗಿಯದೇ ನುಂಗುವ ನೀವು ವ್ಯೆನೋವು ಮಾಡಿಕೊಂಡು ಕ್ರಾಂತಿ ಮಾಡುತ್ತೀರೆಂದು ಹೇಗೆ ನಂಬುವುದು' ಎಂದು ಅವರೇ ಬಿದ್ದೂ ಬಿದ್ದು ನಕ್ಕರು.

ಬರುವಾಗ ಬೆತ್ತಲೆ, ಹೋಗುವಾಗ ಬೆತ್ತಲೆ

ಕಿಶನ್ ಜೀ ಸರಳತೆ ಮತ್ತು ಪ್ರಾಮಾಣಿಕತೆಗೆ ಇನ್ನೊಂದು ಹೆಸರು. ೨೨ನೇ ವಯಸ್ಸಿನಲ್ಲಿಯೇ (ಸಮಾಜವಾದೀ) ಪೂರ್ಣಾವಧಿ ಪಕ್ಷದ ಕಾರ್ಯಕರ್ತರಾದರು. ೩೨ನೇ ವಯಸ್ಸಿಗೆ ಲೋಕಸಭಾ ಸದಸ್ಯರಾದರೂ ತೀರಾ ಇತ್ತೀಚಿನವರೆಗೆ ಪಿಂಚಣಿಯನ್ನೇ ಪಡೆದಿರಲಿಲ್ಲ. ಗೆಳೆಯರ ಒತ್ತಾಯದ ಮೇರೆಗೆ, ಆರೋಗ್ಯ ಮತ್ತು ಹಣಕಾಸಿನ ಸ್ಥಿತಿ ತೀರಾ ಬಿಗಡಾಯಿಸಿದ ಮೇಲೆ ನಿವೃತ್ತಿ ವೇತನ ತೆಗೆದುಕೊಂಡರು. ಶಿಕ್ಷಕಿಯಾಗಿರುವ ಪತ್ನಿ ವಾಣಿಯವರ ವೇತನದ ಮೇಲೆ ಈ ದಂಪತಿಗಳು ಜೀವಿಸಿದ್ದರು.

ಮುವತ್ತು ವರ್ಷಗಳಿಗೂ ಮೀರಿದ ಒಡನಾಟವಿದ್ದಾಗ್ಯೂ ನನಗೇ ತಿಳಿಯದಿದ್ದ ಸತ್ಯ ಅವರ ಅಣ್ಣ ತಮ್ಮಂದಿರೆಲ್ಲಾ ದೊಡ್ಡ ಹುದ್ದೆಗಳನ್ನು ಅಲಂಕರಿಸಿದ್ದ ಶ್ರೀಮಂತರುಗಳಾಗಿದ್ದರು. ಕಿಶನ್ ಜೀಯವರ ತಂದೆ ಕಾಲ್ಹಂಡಿ ರಾಜ್ಯದ ಪ್ರಮುಖ ಕಂದಾಯ ಅಧಿಕಾರಿಯಾಗಿದ್ದರು. ೫ ಜನ ಸಹೋದರರು ಮತ್ತು ೪ ಜನ ಸೋದರಿಯರ ತುಂಬು ಕುಟುಂಬದಲ್ಲಿ ಕಿಶನ್ ಜೀ ೧೯೩೦ರ ಜೂನ್ ೩೦ರಂದು ಜನಿಸಿದ್ದರು. ಇವರ ಅಣ್ಣ ಗಿರಿಜಾ ಪ್ರಸಾದ್ ಪಟ್ನಾಯಕ್, ಇವರಿಗಿಂತ ಎರಡು ವರ್ಷ ದೊಡ್ಡವರು. ಇವರ ತಮ್ಮ ಜಗನ್ನಾಥ ಪಟ್ನಾಯಕ್‌ರವರೂ ಮಾಜಿ ಸಂಸದರು ಹಾಗೂ ಪ್ರಭಾವೀ ಕಾಂಗ್ರೆಸ್ ಧುರೀಣ ಮತ್ತು ಮಾಜಿ ಮಂತ್ರಿ. ಅವರೆಲ್ಲರಲ್ಲಿ ಒಬ್ಬಂಟಿಗರು ಕಿಶನ್ ಜೀ, ಅವರು ಗುರು ಲೋಹಿಯಾರಂತೆ, ಒಂದು ಗುಡಿಸಲೂ ಇರದಿದ್ದ ಜೋಗಿ.

ನಮಗೇಕೆ ಮಕ್ಕಳು ಬೇಡ

ಕಿಶನ್ ದಂಪತಿಗಳಿಗೆ ಮಕ್ಕಳಿಲ್ಲ. ಆದರೂ ಅವರ ಮನೆ ತುಂಬ ಯಾವಾಗಲೂ ಮಕ್ಕಳಿರುತ್ತಿದ್ದರು. ಮಕ್ಕಳ ಬಗ್ಗೆ ನಿಮ್ಮ ಚಿಂತನೆ ಏನು ಎಂದು ಒಮ್ಮೆ ಕೇಳಿದೆ. 'ನಾನೂ ನನ್ನ ಹೆಂಡತಿ ಇಬ್ಬರೂ ಒಂದೇ ಜಾತಿಗೆ ಸೇರಿರುವುದರಿಂದ ಮಕ್ಕಳಾದರೆ ಒಂದು ಜಾತಿಯ ಸದಸ್ಯತ್ವ ಹೆಚ್ಚಿಸಿದಂತಾಗುತ್ತದೆ. ಆ ಕಾರಣ ಮಕ್ಕಳು ಬೇಡವೆಂದು ತೀರ್ಮಾನಿಸಿದ್ದೇನೆ. ವಾಣಿ ಇದಕ್ಕೆ ಒಪ್ಪಿದ್ದಾಳೆ' ಎಂದು ಹೆಂಡತಿಯ ಸಮ್ಮುಖದಲ್ಲೇ ನುಡಿದರು. ದೇಶದ ಎಲ್ಲಾ ಮಕ್ಕಳೂ ನಮ್ಮ ಮಕ್ಕಳೇ ಎನ್ನುವುದು ಅವರ ನಂಬಿಕೆಯಾಗಿತ್ತು.

(೧೬ ರ ಪುಟದಿಂದ)

ದಲಿತರು ಮತ್ತು ರೈತರ ಒಗ್ಗೂಡುವಿಕೆಯ ಬಗ್ಗೆ ಕಿಶನ್‌ಜೀ ಬಹಳ ಕುತೂಹಲ ವ್ಯಕ್ತಪಡಿಸಿದ್ದರು. ಈ ನಿಟ್ಟಿನಲ್ಲಿ ಅವರ ಪ್ರಯತ್ನಗಳ ಮೂಲಕ ರಾಜ್ಯದಲ್ಲಿ ನೂತನ ಸಾಮಾಜಿಕ-ಆರ್ಥಿಕ ಚಿಂತನೆಗಳಿಂದ ಒಡಗೂಡಿದ, ಪ್ರಗತಿಪರ, ಜನಾಧಾರಿತ, ವಿಕೇಂದ್ರೀಕೃತ ರಾಜಕೀಯ ಸಂಘಟನೆಯನ್ನು ಹುಟ್ಟುಹಾಕುವ ಕಾರ್ಯ ಭರದಿಂದ ಸಾಗುತ್ತಿತ್ತು.

ಕಿಶನ್‌ಜೀಯವರ ಇತ್ತೀಚಿನ ಚಿಂತನೆಯೆಂದರೆ; ಖಾಸಗಿ ವಲಯದಲ್ಲಿ ದಲಿತರಿಗೆ, ಆದಿವಾಸಿಗಳಿಗೆ, ಹಿಂದುಳಿದ ಜಾತಿಯವರಿಗೆ ಮತ್ತು ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲು ಹೋರಾಟ ರೂಪಿಸುವುದಾಗಿತ್ತು. ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿದ್ದ ಕಿಶನ್‌ಜೀ ಇತ್ತೀಚಿನ ಖಾಸಗೀಕರಣದ ಪರಿಣಾಮದಿಂದಾಗಿ ಮೀಸಲಾತಿ ವರ್ಗದಲ್ಲಿದ್ದವರಿಗೆ

ಕಿಶನ್‌ಜೀಯವರ ಇತ್ತೀಚಿನ ಚಿಂತನೆಯೆಂದರೆ; ಖಾಸಗಿ ವಲಯದಲ್ಲಿ ದಲಿತರಿಗೆ, ಆದಿವಾಸಿಗಳಿಗೆ, ಹಿಂದುಳಿದ ಜಾತಿಯವರಿಗೆ ಮತ್ತು ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲು ಹೋರಾಟ ರೂಪಿಸುವುದಾಗಿತ್ತು. ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿದ್ದ ಕಿಶನ್‌ಜೀ ಇತ್ತೀಚಿನ ಖಾಸಗೀಕರಣದ ಪರಿಣಾಮದಿಂದಾಗಿ ಮೀಸಲಾತಿ ವರ್ಗದಲ್ಲಿದ್ದವರಿಗೆ ಅವಕಾಶಗಳು ಕಡಿಮೆಯಾಗುತ್ತಿರುವುದರ ಬಗ್ಗೆ ಬಹಳ ಆತಂಕಗೊಂಡಿದ್ದರು.

ಅವಕಾಶಗಳು ಕಡಿಮೆಯಾಗುತ್ತಿರುವುದರ ಬಗ್ಗೆ ಬಹಳ ಆತಂಕಗೊಂಡಿದ್ದರು. ಕರ್ನಾಟಕದಲ್ಲಿ ಹಾವನೂರು ವರದಿ ಮತ್ತು ಕೇಂದ್ರದಲ್ಲಿ ಮಂಡಲ್ ವರದಿ ಅನುಷ್ಠಾನಗೊಳ್ಳುವ ಸಂದರ್ಭಗಳಲ್ಲಿ ಇವುಗಳಿಗೆ ಬೆಂಬಲ ವ್ಯಕ್ತಪಡಿಸುವವರೇ ವಿರಳವಾಗಿದ್ದಾಗ ಕಿಶನ್‌ಜೀ ತಮ್ಮ ಮುಕ್ತ ಬೆಂಬಲ ವ್ಯಕ್ತಪಡಿಸಿದ್ದರು. ಇದು ಹಿಂದುಳಿದ ಜಾತಿಗಳ ಬಗ್ಗೆ ಅವರಿಗಿದ್ದ ಕಾಳಜಿಯ ಪ್ರತೀಕವಾಗಿತ್ತು.

ಇತರೆಡೆಗಳಲ್ಲಿದ್ದ ಸಮಾಜವಾದಿಗಳು ಚಂಚಲತೆಯಿಂದ ಇದ್ದಾಗಲೂ ಸಹ ಕಿಶನ್‌ಜೀಯವರ ಸಾಮಾಜಿಕ ನ್ಯಾಯದ ಬದ್ಧತೆ ಅಚಲವಾಗಿತ್ತು. ಮೀಸಲಾತಿಯ ಪ್ರಯೋಜನ ಪಡೆದ ಫಲಾನುಭವಿಗಳು ಜಾತಿ ವಿನಾಶದ ವಿರುದ್ಧ ಹೋರಾಡಲು ಉತ್ಸಾಹ ತೋರದಿರುವ ಬಗ್ಗೆ ಕಿಶನ್‌ಜೀಯವರಲ್ಲಿ ವ್ಯಾಕುಲತೆಯಿತ್ತು. ದಲಿತರು, ಆದಿವಾಸಿಗಳು ಮತ್ತು ಹಿಂದುಳಿದ ಜಾತಿಗಳಲ್ಲಿ ಒಳಪಂಗಡಗಳಲ್ಲಿಯೇ ಅಂತರ್ಜಾತೀಯ ಮದುವೆಗಳು ನಡೆಯದಿರುವ ಬಗ್ಗೆ ಅವರು ವ್ಯಗ್ರತೆಯಿಂದ ಇದ್ದರು.

ಕಿಶನ್‌ಜೀಯಿಂದ ಸ್ಫೂರ್ತಿ ಪಡೆದ ನಾಯಕರು

ಸಾಮಾಜಿಕ ಬದಲಾವಣೆಯಲ್ಲಿ ಪ್ರಮುಖರಾಗಿ ಮೆರೆದ ಹಲವಾರು ಮುಖಂಡರುಗಳಿಗೆ ಕಿಶನ್‌ಜೀ ಸ್ಫೂರ್ತಿಯಾಗಿದ್ದರು. ಕಿಶನ್‌ಜೀಯವರ ಸ್ವಾರ್ಥರಹಿತ ಅರ್ಪಣ ಮನೋಭಾವ, ಪ್ರಾಮಾಣಿಕ ಪ್ರಯತ್ನ ಮತ್ತು ಕ್ರಿಯಾನಿಷ್ಠತೆಯ ಪ್ರಭಾವಕ್ಕೊಳಗಾಗಿ ಈ ಮುಖಂಡರುಗಳು ಬೆಳೆದು ಪೂರ್ಣ ಪ್ರಮಾಣದ ನಾಯಕರಾಗಿ ಬೆಳಗಿದರು. ನಾಯಕರಾಗಿ ಬೆಳೆದ ನಂತರವೂ ಸಹ ಸಲಹೆ, ಮಾರ್ಗದರ್ಶನಗಳಿಗಾಗಿ ಅವರು ಕಿಶನ್‌ಜೀಯವರ ಕಡೆಗೆ ಕಣ್ಣು ಹಾಯಿಸುತ್ತಿದ್ದುದು ಕಿಶನ್‌ಜೀಯವರ ದಾರ್ಶನಿಕ ಪ್ರಭೆಗೆ ಸಂಕೇತವಾಗಿತ್ತು.

ಕರ್ನಾಟಕದ ರೈತ ಚಳವಳಿಯ ನೇತಾರರಾದ ದಿವಂಗತ ಪ್ರೊ|| ಎಂ. ನಂಜುಂಡಸ್ವಾಮಿ, ಎನ್.ಡಿ. ಸುಂದರೇಶ್ ಮತ್ತು ಕಡಿದಾಳ್ ಶಾಮಣ್ಣ ಅನುಸೂಯಮ್ಮ, ಮಂಜುನಾಥ ದತ್ತ, ವೆಂಕಟೇಶ್‌ಮೂರ್ತಿ, ಕೆ.ಎಸ್. ಪುಟ್ಟಣ್ಣಯ್ಯ ಇವರೆಲ್ಲರೂ ಕಿಶನ್ ಪಟ್ನಾಯಕ್‌ರ ಕಟ್ಟಾ ಅನುಯಾಯಿಗಳು.

ದಲಿತ ಚಳವಳಿಯ ಮುಖಂಡರುಗಳಾದ ದಿವಂಗತ ಪ್ರೊ||ಬಿ. ಕೃಷ್ಣಪ್ಪ ದೇವನೂರು ಮಹಾದೇವ, ಚಂದ್ರಪ್ರಸಾದ್ ತ್ಯಾಗಿ, ಪ್ರೊ|| ಗೋವಿಂದಯ್ಯ, ಇಂದೂಧರ ಹೊನ್ನಾಪುರ, ಡಾ|| ಸಿದ್ದಲಿಂಗಯ್ಯ, ಪ್ರೊ|| ಕೆ.ಬಿ.ಸಿದ್ದಯ್ಯ, ಭಕ್ತರಾಮೇಗೌಡ, ರುದ್ರಪ್ಪ ಹನಗವಾಡಿ, ಕೋಲಾರ ವೆಂಕಟೇಶ್ ಇವರುಗಳೂ ಸಹ ಕಿಶನ್‌ಜೀಯವರ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಮನಸೋತವರು.

ಸಮಾಜವಾದಿ ಚಳವಳಿಯ ಪ್ರತಿಪಾದಕರಾದ ಪೂರ್ಣಚಂದ್ರ ತೇಜಸ್ವಿ, ಪ್ರೊ|| ಬಿ.ಎನ್. ಶ್ರೀರಾಮ್, ಪ್ರೊ||ಚಂದ್ರಶೇಖರ ಪಾಟೀಲ್, ಪ್ರೊ|| ಸಿದ್ದಲಿಂಗಪಟ್ಟಣಶೆಟ್ಟಿ ದಿವಂಗತ ಪ್ರೊ|| ಡಿ.ಆರ್. ನಾಗರಾಜ್, ಪಿ. ಲಂಕೇಶ್ ಇವರುಗಳು ಸಹ ಕಿಶನ್‌ಜೀಯವರ ಸಾಮಿಪ್ಯದಿಂದ ಸ್ಫೂರ್ತಿ ಪಡೆದವರೇ ಆಗಿದ್ದಾರೆ.

ಬಂಡಾಯ ಸಾಹಿತ್ಯದ ಬರಗೂರು ರಾಮಚಂದ್ರಪ್ಪ ಕಾಳೇಗೌಡ ನಾಗವಾರ, ನಟರಾಜ್ ಹುಳಿಯಾರ್ ಇವರಿಗೂ ಕಿಶನ್‌ಜೀ ಅಚ್ಚುಮೆಚ್ಚಿನ ನಾಯಕರಾಗಿದ್ದರು. ಇವರಲ್ಲದೆ ಕರ್ನಾಟಕದ ಪ್ರಗತಿಪರ ಚಿಂತಕರುಗಳ ಬೃಹತ್ ಪಡೆಯೇ ಕಿಶನ್‌ಜೀಯವರ ಸಮಾಜವಾದಿ ಪ್ರಭೆಯ ಬೆಳಗಿನಲ್ಲಿ ತಮ್ಮ ಬದುಕನ್ನು ರೂಪಿಸಿಕೊಂಡಿದ್ದಾರೆ. ಕರ್ನಾಟಕದ ಸಾಮಾಜಿಕ ಸಾಹಿತ್ಯಕ ಮತ್ತು ರಾಜಕೀಯ ಕ್ಷೇತ್ರಗಳ ಪ್ರಮುಖರು ಇವರ ಜೊತೆ ಒಡನಾಟ ಹೊಂದಿದ್ದರು.

ಕಿಶನ್‌ಜೀಯವರ ಕಣ್ಮರೆ ನಿಜಕ್ಕೂ ಕರ್ನಾಟಕದ ಸಮಾಜವಾದಿ ಚಳವಳಿಗೆ ತುಂಬಲಾರದ ನಷ್ಟ. ಕಿಶನ್‌ಜೀ ಭೌತಿಕವಾಗಿ ನಮ್ಮಿಂದ ಕಣ್ಮರೆಯಾದರೂ ಅವರ ಪ್ರಖರ ವಿಚಾರಧಾರೆ ನಮ್ಮಲ್ಲಿ ಸದಾ ಬೆಳಗುತ್ತಿರುತ್ತದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೯೪೩ / ೯೪೪೪೮೦೪೪೩೦೭

ಶರಣು ಶರಣೆನ್ನಿರಿ

ಡಾ|| ಎಲ್. ಬಸವರಾಜು

ಶರಣು ಶರಣೆನ್ನುತ್ತ ಬಾಗಿ
ಪಾದ ಮುಟ್ಟಲು ಹೋಗಿ-
ಇಬ್ಬರ ತಲೆ ತಾಗಿ
ಬುದ್ಧಿ ಬರುತ್ತದೆ-
ಆ ಬುದ್ಧಿಯಲ್ಲೇ ಬುದ್ಧನಿದ್ದಾನೆ
ಬಸವನಿದ್ದಾನೆ
ಜಗಜೀವನರಾಮ
ಬಾಬಾ ಅಂಬೇಡ್ಕರರಿದ್ದಾರೆ!
ಬನ್ನಿ ಸ್ವಾಮಿ
ಮುಟ್ಟಿ
ಬೆಚ್ಚಗಿದೆಯಲ್ಲವಾ ?
ಮಡಿಯುಟ್ಟಿರುವೆನೆಂದು
ನಾಚಬೇಡಿ
ನಿಸ್ಸಂಕೋಚವಾಗಿ ಮುಟ್ಟಿ
ತೋಬೆಚ್ಚಗಿದೆಯಲ್ಲವಾ ?
ನಿಮ್ಮ ಮಕ್ಕಳು ಮರಿಯನ್ನು
ಮುಟ್ಟಿದಾಗ ಇದ್ದಂತೆಯೇ
ನಚ್ಚಗಿದೆಯಲ್ಲವಾ ?
ಸ್ವಾಮಿ,
ನೀವು ನಿಮ್ಮ ಆ ಕಾಣದ ಸ್ವಾಮಿಯ ಪಾದಮುಟ್ಟಿ
ಶರಣೆನ್ನುತ್ತೀರಲ್ಲಾ
ಆ ದೇವರ ಪಾದವಿಷ್ಟು ಬೆಚ್ಚಗಿರುವುದಾ
ಸ್ವಾಮಿ,
ನೀವು ಯಾವತ್ತಾದರೂ
ಶಿವನ ವಿಷ್ಣುವಿನ ಬ್ರಹ್ಮನ
ಆ ಯಾವುದೇ ದೇವರ
ಸಾಕ್ಷಾತ್ ಪಾದವನ್ನಾದರೂ ಮುಟ್ಟಿದ್ದೀರಾ ?
ಇಲ್ಲ!
ನಿಜ ಹೇಳುತ್ತೀದ್ದೀರಿ
ಸ್ವಾಮಿ,
ಅವರೆಲ್ಲಾ ಅಸ್ಪೃಶ್ಯರು
ಅವರ ಪಾದ ಯಾರಿಗೂ ಸಿಕ್ಕುವುದಿಲ್ಲ-
ಸಿಕ್ಕಿದರೂ
ಅದು ಲೋಹದ ಪಾದ
ಕಲ್ಲಿನ ಪಾದ
ಮರದ ಪಾದ!
ಮುಟ್ಟಿದರೆ
ಎಷ್ಟೂ ಬೆಚ್ಚಗಿರುವುದಿಲ್ಲ
ಇಲ್ಲ ಇಲ್ಲ!
ಅಲ್ಲಿ ಬಿಸಿರಕ್ತದ ಸಂಚಾರವಿರುವುದಿಲ್ಲ



ಎದೆ ಮಿಡಿಯುವುದಿಲ್ಲ!
ಆದರೂ
ಆ ದೇವರ ಪಾದ ಹುಡುಕಿಕೊಂಡು
ಆ ಸೇತು ಹಿಮಾಚಲ ಅಲೆಯುತ್ತೀರ!
ಇಲ್ಲೇ
ನೀವಿರುವ ಊರಲ್ಲೇ
ಬೀದಿ ಬೀದಿಯಲ್ಲೇ
ಇನ್ನೂ ಹತ್ತಿರ
ನಿಮ್ಮ ಅಕ್ಕ ಪಕ್ಕದ ಮನೆಯಲ್ಲೇ
ಆ ಅಸ್ಪೃಶ್ಯ ದೇವರು
ಸ್ಪೃಶ್ಯವಾಗಿ ದೃಶ್ಯವಾಗಿ ಬಂದಿದ್ದಾನೆ!
ಅವನೇ ರಕ್ತಮಾಂಸದ ದೇವರು
ಎಲ್ಲರನ್ನೂ ಕಾಯುವ ದೇವರು-
ಎದೆಯೂ ಎದೆಗಾರಿಕೆಯೂ
ಇರುವ ದೇವರ ದೇವರು!
ಶರಣೆನ್ನಿ-
ಕಾಲು ಮುಟ್ಟಬೇಡಿ
ಕೈಹಿಡಿದು ಕುಲುಕಿ
ಕುಶಲ ಕೇಳಿ ಶರಣೆನ್ನಿರಿ-
ಅವನು ಶರಣು ಶರಣೆನ್ನುತ್ತಾನೆ!
ಅದು ಭುಕ್ತಿಗೆ ಭಕ್ತಿಯಲ್ಲ
ಭಕ್ತಿಗೆ ಭಕ್ತಿ
ಸರ್ವೋತ್ಕೃಷ್ಟ ಸಮರಸ ಭಕ್ತಿ
ಅದೇ ಆತ್ಮ ಶಕ್ತಿ
ಅದೇ -
ಜನ್ಮಜನ್ಮಾಂತರ ದಾಸ್ಯದಿಂದ ಮುಕ್ತಿ!
ಅವನು
ಹತ್ತು ಸಾವಿರ ವರ್ಷದಿಂದ
ಕಾದಿದ್ದಾನೆ -
ಇನ್ನು ಕಾಯಿಸಬೇಡಿ -
ಕಾಲ ಒಂದೇ ಸಮನಾಗಿರುವುದಿಲ್ಲ
ಬಿಟ್ಟ ಹಗ್ಗ ಬಹಳ ಉದ್ದವಾಯಿತು
ಅದು ನೇಣಾದೀತು
ಇನ್ನೂ ಕ್ಯಾಣವೇ ಬೇಡ!
ಶರಣೆನ್ನಿ -
ಸಪ್ತ ಧಾತುಗಳಲ್ಲೂ
ಮಾರ್ಮೊಳಗಲಿ ಈ ಸಲ
ಶರಣು ಶರಣೆಂದು
ಏಳು ಸಲ!

ಅವಲೋಕನ

ಬುದ್ಧ, ಗಾಂಧಿಯನ್ನು ಒಳಗೊಂಡಂತೆ ಜಗತ್ತಿನ ಎಲ್ಲಾ ದಾರ್ಶನಿಕರು ಅಹಿಂಸೆಯ ಮೂಲಕ ಹಿಂಸೆಯನ್ನು ಗೆಲ್ಲುವ ಸಾಧ್ಯತೆಯನ್ನು ಕಂಡುಕೊಂಡರು. ಆದರೆ ಇಂದು ಹಲವು ಸಮಸ್ಯೆಗಳ ನಡುವಿನ ಜನರ ಬದುಕು ಹಿಂದಿನವರು ಕಂಡುಕೊಂಡಂತೆ ಬುದ್ಧ ಗಾಂಧಿಯರ ತತ್ವದ ಮೇಲಷ್ಟೇ ನಿಂತು ನೆಮ್ಮದಿಯನ್ನು ಕಾಣಲಾಗುತ್ತಿಲ್ಲ. ಈ ದಾರ್ಶನಿಕರನ್ನು ಒಳಗೊಂಡಂತೆ ಮತ್ಯಾವುದೋ ಅಗತ್ಯ ಅವರಿಗೆ ಅವಶ್ಯಕವಾಗಿ ದೊರಕಬೇಕಿದೆ. ಈ ಎಲ್ಲರ ಅಗತ್ಯದ ಶೋಧನೆಯೇ 'ಶಾಂತಿ' ನಡೆಸುವ ಹೋರಾಟವಾಗಿದೆ.

○ ಡಾ॥ಎಚ್.ಎಲ್.ಪುಷ್ಪ

ಭಯೋತ್ಪಾದನೆಯ ನಡುವೆ ಬರಗೂರರ ಶಾಂತಿ...

'ಸಿದ್ಧ ಅರ್ಥಗಳ ಮೀರಿದ ಬುದ್ಧ
ನಿದ್ದೆ ಹಾದಿಯಲಿ ಹಗಲನು ಗೆದ್ದ
ಹೆಜ್ಜೆಯಿಟ್ಟ ಕಡೆ ಬೆಳಕು ಚಿಮ್ಮಿತು
ಲಜ್ಜೆಗೆಟ್ಟ ನೆಲ ನೀತಿ ಕಲಿಯಿತು'

ಯುದ್ಧ, ಭಯೋತ್ಪಾದನೆ, ಹಿಂಸೆಯೆಂದರೆ ಕೇವಲ ಕತ್ತಿ ಗುಂಡು, ಬಾಂಬು ಮಂತಾದ ಅಸ್ತ್ರಗಳಿಂದಲೇ ಸಂಭವಿಸುವಂಥದ್ದು ಎಂಬ ಮಾತು ಸರಿಯಾದುದಲ್ಲ. 'ಕೊಲ್ಲುವ, ಕಾಡುವ' ಮನಸ್ಥಿತಿ ಯಾರ್‍ಯಾರಿಗಿದೆಯೋ ಅವರೆಲ್ಲರೂ ಭಯೋತ್ಪಾದಕರೇ. ಮನುಷ್ಯ-ಮನುಷ್ಯರ ನಡುವಣ ಪ್ರೀತಿಯ ಮುಂದೆ ಉಳಿದೆಲ್ಲವೂ ಕ್ಷುಲ್ಲಕ ಎಂದು ಭಾವಿಸಿ ಯಾರು ಸದ್ದಿಲ್ಲದೆ ಮನುಕುಲಕ್ಕಾಗಿ ದುಡಿಯುತ್ತಾರೋ ಅವರೇ ಶಾಂತಿದೂತರು. ಶಾಂತಿ ಮತ್ತು ಭಯೋತ್ಪಾದನೆಯ ನಡುವೆ ನಡೆಯುವ ತೀವ್ರವಾದ ಘರ್ಷಣೆಯೇ ಪ್ರೊ॥ಬರಗೂರು ರಾಮಚಂದ್ರಪ್ಪನವರ ಇತ್ತೀಚೆಗಿನ ಹೊಸ ಚಲನಚಿತ್ರ 'ಶಾಂತಿ'ಯ ಮುಖ್ಯವಸ್ತು.

ಈಗಾಗಲೇ ಚಲನಚಿತ್ರ ಮಾಧ್ಯಮಕ್ಕೆ ಚಿತ್ರಕಥೆ, ಸಂಭಾಷಣೆ, ಹಾಡುಗಳ ಮೂಲಕ ಪರಿಚಿತವಾಗಿರುವ ಬರಗೂರರು ಅಧ್ಯಾಪಕರಾಗಿ, ಬಂಡಾಯ ಸಾಹಿತ್ಯ-ಸಂಸ್ಕೃತಿಯ ಸಂಘಟನೆಯ ಸಂಘಟಕರಾಗಿ ಪ್ರಸಿದ್ಧರಾಗಿದ್ದಾರೆ. ಬಂಡಾಯದ ಮತ್ತೊಬ್ಬ ಪ್ರಸಿದ್ಧ ಕವಿ ರಂಜಾನ್‌ದರ್ಗಾರವರ ಪ್ರಣಾಳಿಕೆ ಕವಿತೆಯ 'ಬಂದೂಕಿನ ಬಾಯಲ್ಲಿ ಗುಬ್ಬಿ ಗೂಡು ಕಟ್ಟುತ್ತದೆ' ಎಂಬ ಸಾಲುಗಳನ್ನು ಬಹುವಾಗಿ ಮೆಚ್ಚಿಕೊಂಡವರು ಆಗಿದ್ದಾರೆ. ಸಾಹಿತ್ಯ ಹಾಗೂ ಬದುಕಿನುದ್ದಕ್ಕೂ ಬದ್ಧತೆಯನ್ನು ಪ್ರತಿಪಾದಿಸುತ್ತಾ ಬಂದ ಬರಗೂರರು ಹಿಂಸೆಯ ಪ್ರತಿರೂಪವಾದ ಬಂದೂಕಿನ ಬಾಯಲ್ಲಿ ಗುಬ್ಬಿಯೊಂದು ಗೂಡುಕಟ್ಟುವ ಕನಸನ್ನು ತಮ್ಮ ಸಾಹಿತ್ಯ, ಸಂಘಟನೆಗಳಲ್ಲಿ ಕಂಡವರು. ಸಾಂಸ್ಕೃತಿಕ ಹೋರಾಟಗಳ ಮುಂಚೂಣಿಯಲ್ಲಿದ್ದವರಿಗೆ ಮಾತ್ರ ಇಂದಿನ ಪಲ್ಲಟಗೊಂಡ ಕಲ್ಪನೆಗಳಾದ ರಾಜಕೀಯ ಮತ್ತು ದೇಶಭಕ್ತಿ ಪ್ರಶ್ನಾರ್ಹವಾದ ಸಂಗತಿಗಳಾಗುತ್ತವೆ. ಸಾಹಿತ್ಯ, ಸಿನಿಮಾ, ನಾಟಕದಂತಹ ಮಾಧ್ಯಮಗಳಿಗೆ ತಕ್ಕಂತೆ ಸಮಸ್ಯೆಯ ಸ್ವರೂಪವನ್ನು ಚಿತ್ರಿಸುವ ರೀತಿಯೂ ಬೇರೆಯದೇ ಆಗಿರುತ್ತದೆ.

'ಹಿಂಸೆ, ಭಯೋತ್ಪಾದನೆ' - ಇವು ಇತ್ತೀಚೆಗಿನ ರಾಜಕೀಯ ಕಳೆಗಳಲ್ಲ. ನಮ್ಮ ಚರಿತ್ರೆಯ ಜೊತೆ, ಜೊತೆಗೇ ಬೆಳೆದು ಬಂದ ಸಮಾಜ ನಿರೀಕ್ಷಿಸದಿದ್ದರೂ ತಮ್ಮ ಅಸ್ತಿತ್ವ ಪಡೆದುಕೊಂಡ ಸತ್ಯ ಸಂಗತಿಗಳು. ವೈಜ್ಞಾನಿಕವಾಗಿ, ವ್ಯಾವಹಾರಿಕವಾಗಿ ದೇಶವೊಂದು ಪ್ರಗತಿಸಾಧಿಸುತ್ತಿದ್ದಂತೆ ತನಗೇ ಅರಿವಿಲ್ಲದಂತೆ ತನ್ನ ಒಡಲಲ್ಲಿ ಹಿಂಸಾಸ್ವರೂಪವನ್ನು ಬಚ್ಚಿಟ್ಟುಕೊಂಡಿರುತ್ತದೆ. ಶಾಂತಿಯ ಕಲ್ಪನೆಗಳನ್ನು ಕಾಡುವ, ಶಾಂತಿಯೆಂಬ ಬಿಳಿಯ ಪಾರಿವಾಳದ ರೆಕ್ಕೆ ಪುಕ್ಕಗಳನ್ನು ಮುರಿಯಲೆತ್ನಿಸುವ ಭಯೋತ್ಪಾದಕರ ವ್ಯರ್ಥ ಪ್ರಯತ್ನ, ಸಾರ್ವಕಾಲಿಕವಾಗಿ ಶಾಂತಿಗೇ ಜಯವೆಂಬ ಸರಳ ಸತ್ಯವನ್ನು ವಿಶೇಷವಾಗಿ ಹಿಡಿದಿಡುವ ಪ್ರಯತ್ನ ಈ ಚಲನಚಿತ್ರದಲ್ಲಿದೆ.

'ಶಾಂತಿ' ಶಾಂತಿಗಾಗಿ ಎಲ್ಲರೂ ಕಾಣುವ ಕನಸೂ ಹೌದು. ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಭಯೋತ್ಪಾದಕರ ವಿರುದ್ಧ ನಡೆಸುವ ಕಲಾವಿದೆಯೊಬ್ಬಳ ಏಕಾಂಗಿ ಹೋರಾಟವೂ ಹೌದು. ಕಲಾವಿದರಿಗೂ, ಭಯೋತ್ಪಾದಕರಿಗೂ ಎಲ್ಲಿಂದೆಲ್ಲಿಯ ಸಂಬಂಧ ಎಂಬ ಪ್ರಶ್ನೆ ಮೂಡಬಹುದಾದರೂ, ಈ ಪ್ರಶ್ನೆ ಬಿಡಿಸುವುದೇ ಚಲನಚಿತ್ರದ ಉದ್ದೇಶವಾಗಿದೆ.

'ಕವಿತೆ, ಕಲೆ, ಭಯೋತ್ಪಾದನೆ' - ಒಂದಕ್ಕೊಂದು ಬೆಸೆಯಲ್ಪಟ್ಟಿರುವ ಈ ಚಿತ್ರದ ಹೆಗ್ಗಳಿಕೆ ಉದ್ದಕ್ಕೂ ಒಂದೇ ಒಂದು ಪಾತ್ರವನ್ನು ಒಳಗೊಂಡಿರುವುದು. ಚಿತ್ರದ ನಾಯಕಿ ತನ್ನನ್ನು ಗುರುತಿಸಿಕೊಳ್ಳುವುದು 'over sensational' ಎಂದು. ವಿಶ್ವಸಂಸ್ಥೆ ನಡೆಸಲಿರುವ ಶಾಂತಿ ಸಮ್ಮೇಳನದಲ್ಲಿ ಶಾಂತಿ ಆಹ್ವಾನಿತ ಕಲಾವಿದಳು. ಈ ಸಮ್ಮೇಳನಕ್ಕಾಗಿ ವಿಶೇಷ ಕಲಾಕೃತಿಗಳನ್ನು ರಚಿಸಬೇಕಾಗಿದ್ದು ಅದಕ್ಕೆ ತಾಯಿ ಮಾಡಿದ ಏರ್ಪಾಡಿನಂತೆ ಶಾಂತಿ ಮಡಿಕೇರಿಯ ಸುತ್ತಮುತ್ತಲಿನ ಶಾಂತ ಪರಿಸರಕ್ಕೆ ಬರುತ್ತಾಳೆ. ಆರಂಭದ ದೃಶ್ಯದಲ್ಲಿ ಬುದ್ಧನ ಅಡಿದಾವರೆಗಳಲ್ಲಿ ಪ್ರಾರ್ಥಿಸುತ್ತಿರುವ ಶಾಂತಿ ಅಂತ್ಯದ ದೃಶ್ಯದಲ್ಲೂ ಬುದ್ಧನ ಅಡಿದಾವರೆಗಳಲ್ಲಿ ಪ್ರಾರ್ಥಿಸುತ್ತಿರುವಂತೆಯೇ ಚಿತ್ರ ಅಂತ್ಯವಾಗುವುದು ಸಾಂಕೇತಿಕವಾಗಿ ಬಂದಿದೆ.

'ಇದು ನಿಮ್ಮ ಮನೆ, ನಾನು ನಿಮ್ಮ ಮನೆಯವನು, ಅಭಿಮಾನಿ' ಎಂದು ಸಂಕೋಚವಿಲ್ಲದೆ ಪರಿಚಯಿಸಿಕೊಳ್ಳುವ ಸಂಗ್ರಾಮ ಕೊನೆಯವರೆಗೂ ತನ್ನನ್ನು ಶಾಂತಿಯ ಅಭಿಮಾನಿ, ಹಿತಚಿಂತಕನಾಗಿಯೇ ಗುರುತಿಸಿಕೊಳ್ಳುತ್ತಾನೆ. ಆರಂಭದಲ್ಲಿನ ಅತಿಥಿಗೃಹದ ಮೇಲ್ವಿಚಾರಕನಾದ ಸಂಗ್ರಾಮನ ಮಾತುಕತೆಗಳು, ಸ್ನಾನದ ದೃಶ್ಯಗಳು, ಕಾಫಿ ಕುಡಿಯುವಿಕೆ ಚಿತ್ರದ ದಿಕ್ಕನ್ನು ತಪ್ಪಿಸುತ್ತಿವೆ ಎನಿಸುವಷ್ಟರಲ್ಲೇ ಕಲಾವಿದೆ ಶಾಂತಿಯ ಮನಸ್ಥಿತಿಯನ್ನು ಹದಗೊಳಿಸುತ್ತಾ ಹೋಗುತ್ತವೆ. 'ಸ್ನಾನ'ವೆಂಬ ಕ್ರಿಯೆ ನಗರದಿಂದ ಬಂದ ಶಾಂತಿಯ ಮನಸ್ಸಿನ ಮಲಿನತೆಯನ್ನು ತೊಳೆದು ಪ್ರಕೃತಿಯ ಸ್ನಿಗ್ಧ ಸೌಂದರ್ಯ ತುಂಬುವಂತೆ ಬದಲಾಗುತ್ತದೆ. ಕಲಾಕೃತಿಗಳ ರಚನೆಗೆ ತೊಡಗುವ ಮೊದಲೇ ಶಾಂತಿಯ ಶಾಂತತೆಯನ್ನು ಕದಡುವ ಕಾರಣವಿಲ್ಲದ ಘಟನೆಗಳು ನಡೆಯುತ್ತವೆ. ರಾತ್ರಿ ಕರೆಂಟ್ ಹೋದಾಗ ಕೊಠಡಿಯ ಬಾಗಿಲು ಬಡೆವ ಕವಿ ಹಾಗೂ ಅವನ ಕವಿತೆಯ ಸಾಲುಗಳು, ರಾಜಕಾರಣಿ ಹಾಗೂ ಅವನ ಉಡಾಳ ಮಾತುಗಳು ಪರಿಚಿತವಾಗಿರಬಹುದಾದ ಕವಿ ಹಾಗೂ ರಾಜಕಾರಣಿಗಳನ್ನು ತಕ್ಷಣವೇ ನೆನಪಿಗೆ ತರುತ್ತವೆ. ಇದ್ದಕ್ಕಿದ್ದಂತೆಯೇ ಶಾಂತಿಯ ಮನಸ್ಸನ್ನು ಕದಡುವ ಕಿರಿಕಿರಿಗಳು, ಭಯೋತ್ಪಾದಕರ ಫೋನಿನ ಕರೆಗಳು ಆರಂಭವಾಗುತ್ತವೆ.

ವಿಶ್ವಸಂಸ್ಥೆಯ ಶಾಂತಿ ಸಮ್ಮೇಳನಕ್ಕೆ ಬರುವ ಕಲಾವಿದರಿಗೆ ಸಹಾಯಕರಾಗಿ ಮೂವರನ್ನು ತಮ್ಮ ಜೊತೆ ಕರೆತರಲು ಅವಕಾಶವಿರುತ್ತದೆ. ಈ ವಿಷಯದ ಜಾಡು ಹಿಡಿದು ತಮ್ಮನ್ನು ಸಹಾಯಕರಂತೆ ವಿಶ್ವಸಂಸ್ಥೆಗೆ ಕರೆದೊಯ್ಯಲು ಭಯೋತ್ಪಾದಕರು ಶಾಂತಿಯ ಮೇಲೆ ಒತ್ತಡ ತರುತ್ತಾರೆ. ಅದಕ್ಕೆ ಅವಳು ಒಪ್ಪುವವರೆಗೂ ಅಪರಿಚಿತವಾದ ಪಾಳುಬಿದ್ದ ಕಟ್ಟಡವೊಂದರಲ್ಲಿ ಬಂಧನದಲ್ಲಿರಿಸಿ ಮಧ್ಯವರ್ತಿಯಾಗಿ ಸಂಗ್ರಾಮನನ್ನು ಬಳಸಿಕೊಳ್ಳುತ್ತಾರೆ.

ಅತಿಥಿಗೃಹದಲ್ಲಿ ಶಾಂತಿಯ ಏಕಾಂತದ ಸಂಗಾತಿಯಾಗಿದ್ದ ಪಾರಿವಾಳ ಪಾಳುಬಿದ್ದ ಕೊಡಗು ದೊರೆಗಳ ಅರಮನೆಯಲ್ಲಿ ಅವಳ ಜೊತೆ ಸೇರುತ್ತದೆ. ಶಾಂತಿ ಸ್ವಾತಂತ್ರ್ಯ ಕೊಟ್ಟರೂ ಅವಳನ್ನು ತೊರೆದು ಹೋಗದ ಪಾರಿವಾಳ ಅವಳಷ್ಟೇ ಅಸಹಾಯಕ ಹಾಗೂ ಏಕಾಂಗಿಯಾಗಿದೆ. ಶಾಂತಿಯ ಸಂಕೇತವಾದ ಪಾರಿವಾಳ ಅವಳ ಹೋರಾಟಕ್ಕೆ ಇನ್ನಷ್ಟು ಪುಷ್ಟಿ ಕೊಡುತ್ತದೆ. ಯಾವ ಕಾರಣಕ್ಕಾಗಿ ಮತ್ತು ಹೇಗೆ ಸಂಗ್ರಾಮ ಭಯೋತ್ಪಾದಕರ ಹಿಡಿತದಲ್ಲಿರಬೇಕಾಗಿದೆ ಎಂಬುದು ಸ್ಪಷ್ಟವಾಗದಿದ್ದರೂ ಅವನು ಭಯೋತ್ಪಾದಕರ ಜೊತೆಯಲ್ಲಿದ್ದೂ ಶಾಂತಿಯ ಪರವಾಗಿದ್ದನು. ಅವನ ಶಾಂತಿ ಮತ್ತು ಸಂಗ್ರಾಮ ಒಂದಾದರೆ ಎಂಬ ಕಲ್ಪನೆಯೇ ಅರ್ಥಪೂರ್ಣವಾದುದು. ಹೀಗಾಗಿ ಈ ಚಿತ್ರದಲ್ಲಿನ 'ಶಾಂತಿ' ಎನ್ನುವ ಹೆಣ್ಣು, 'ಸಂಗ್ರಾಮ' ಎನ್ನುವ ಗಂಡು ಇಬ್ಬರೂ ಜೀವಿಗಳಲ್ಲ, ಶಾಂತಿಯ ಅಸ್ತಿತ್ವದ ಹೋರಾಟಕ್ಕೆ ತೊಡಗಿದ ತತ್ವಗಳು. ಭಯೋತ್ಪಾದಕರ ಒತ್ತಡ, ಪೀಡನೆ ಹೆಚ್ಚಾದಷ್ಟು ಶಾಂತಿ ಗಟ್ಟಿಯಾಗುತ್ತ ಹೋಗುತ್ತಾಳೆ. ಹೆಣ್ಣು ಅಬಲೆ, ಒಂಟಿಯಾಗಿ ಹೋರಾಡಲಾರಳು ಎನ್ನುವ ಸಿದ್ಧಕಲ್ಪನೆಗಿಂತ ಭಿನ್ನವಾಗಿ ಸಾಮಾಜಿಕ ಕಳಕಳಿಯನ್ನುಳ್ಳ ಶಾಂತಿ, ಮೌನಿಯಾದರೂ ಬಲವಾದ ಹೋರಾಟ ನಡೆಸುತ್ತಾಳೆ. ಮಡಿಕೇರಿಯ ಶಾಂತ ಪರಿಸರದಲ್ಲೂ ಭಯೋತ್ಪಾದಕರ ಹಿಡಿತದಲ್ಲಿ ಸಿಕ್ಕ ಶಾಂತಿಯ ಒಂಟಿ ಹೋರಾಟ ತೀವ್ರವಾದಂತೆ ಅದು ಸಾರ್ವಜನಿಕವಾಗುತ್ತದೆ.

ಶಾಂತಿಯ ಕಲ್ಪನೆಗೂ, ಸಮರದ ಕಲ್ಪನೆಗೂ ಅಗಾಧವಾದ ಅಂತರವಿದ್ದರೂ ಇಂದಿನ ಹಿಂಸಾಭರಿತ ಜಗತ್ತಿನಲ್ಲಿ ಸಮರದ ಸಖ್ಯ ಸಾಧಿಸಿದ ಶಾಂತಿ ಬದಲಾದ ಶಾಂತಿಯ ಸ್ವರೂಪವನ್ನು ಕಟ್ಟಿಕೊಡುತ್ತಾಳೆ. ಅನ್ನದ ಜೊತೆಗೆ ಸಮರನಿಂದ ಪಡೆದ ಪಿಸ್ತೂಲು ಅವಳ ಅಸ್ತಿತ್ವ, ಜೀವ ಕಾಪಾಡುವ ಆಹಾರವಾಗುತ್ತದೆ. ಬಹಳ ಯೋಚನೆಯ ನಂತರ ಪಿಸ್ತೂಲಿನ ಅನಿವಾರ್ಯತೆ ಕಂಡುಕೊಳ್ಳುವ ಶಾಂತಿಯ ವರ್ತನೆ ಜಾಗತಿಕ ಮಟ್ಟದ ಶಾಂತಿಸ್ಥಾಪನೆಯಲ್ಲಿ, ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಸಮರದ ಅಸ್ತಿತ್ವವನ್ನು ಎತ್ತಿ ಹಿಡಿಯುತ್ತದೆ. ಬದುಕುವುದಕ್ಕಾಗಿ ಒಂದು ಕೈಯಲ್ಲಿ ಹಿಡಿದ ಅನ್ನ, ಇನ್ನೊಂದು ಕೈಯಲ್ಲಿ ಹಿಡಿದ ಪಿಸ್ತೂಲು ಒಮ್ಮೆಲೇ ಹಲವು ಪ್ರಶ್ನೆಗಳನ್ನು ಮೂಡಿಸುತ್ತದೆ.

'ಬುದ್ಧ, ಗಾಂಧಿ'ಯನ್ನು ಒಳಗೊಂಡಂತೆ ಜಗತ್ತಿನ ಎಲ್ಲಾ ದಾರ್ಶನಿಕರು ಅಹಿಂಸೆಯ ಮೂಲಕ ಹಿಂಸೆಯನ್ನು ಗೆಲ್ಲುವ ಸಾಧ್ಯತೆಯನ್ನು ಕಂಡುಕೊಂಡರು. ಆದರೆ ಇಂದು ಹಲವು ಸಮಸ್ಯೆಗಳ ನಡುವಿನ ಜನರ ಬದುಕು ಹಿಂದಿನವರು ಕಂಡುಕೊಂಡಂತೆ 'ಬುದ್ಧ, ಗಾಂಧಿ'ಯರ ತತ್ವದ ಮೇಲಷ್ಟೇ ನಿಂತು ನೆಮ್ಮದಿಯನ್ನು ಕಾಣಲಾಗುತ್ತಿಲ್ಲ. ಈ ದಾರ್ಶನಿಕರನ್ನು ಒಳಗೊಂಡಂತೆ ಮತ್ತಾವುದೋ ಅಗತ್ಯ ಅವರಿಗೆ ಅವಶ್ಯಕವಾಗಿ ದೊರಕಬೇಕಿದೆ. ಈ ಎಲ್ಲರ ಅಗತ್ಯದ ಶೋಧನೆಯೇ ಶಾಂತಿ ನಡೆಸುವ ಹೋರಾಟವಾಗಿದೆ.

'ಹಿಂಸೆ, ಭಯೋತ್ಪಾದನೆ' - ಇವು ಇತ್ತೀಚೆಗಿನ ರಾಜಕೀಯ ಕಳೆಗಳಲ್ಲ. ನಮ್ಮ ಚರಿತ್ರೆಯ ಜೊತೆ, ಜೊತೆಗೇ ಬೆಳೆದು ಬಂದ, ಸಮಾಜ ನಿರೀಕ್ಷಿಸದಿದ್ದರೂ ತಮ್ಮ ಅಸ್ತಿತ್ವ ಪಡೆದುಕೊಂಡ ಸತ್ಯ ಸಂಗತಿಗಳು. ವೈಜ್ಞಾನಿಕವಾಗಿ, ವ್ಯಾವಹಾರಿಕವಾಗಿ ದೇಶವೊಂದು ಪ್ರಗತಿ ಸಾಧಿಸುತ್ತಿದ್ದಂತೆ ತನಗೇ ಅರಿವಿಲ್ಲದಂತೆ ತನ್ನ ಒಡಲಲ್ಲಿ ಹಿಂಸಾಸ್ವರೂಪವನ್ನು ಬಚ್ಚಿಟ್ಟುಕೊಂಡಿರುತ್ತದೆ. ಶಾಂತಿಯ ಕಲ್ಪನೆಗಳನ್ನು ಕಾಡುವ, ಶಾಂತಿಯೆಂಬ ಬಿಳಿಯ ಪಾರಿವಾಳದ ರೆಕ್ಕೆ ಪುಕ್ಕಗಳನ್ನು ಮುರಿಯಲೆತ್ನಿಸುವ ಭಯೋತ್ಪಾದಕರ ವ್ಯರ್ಥ ಪ್ರಯತ್ನ, ಸಾರ್ವಕಾಲಿಕವಾಗಿ ಶಾಂತಿಗೇ ಜಯ ಎಂಬ ಸರಳ ಸತ್ಯವನ್ನು ವಿಶೇಷವಾಗಿ ಹಿಡಿದಿಡುವ ಪ್ರಯತ್ನ ಈ ಚಲನಚಿತ್ರದಲ್ಲಿದೆ.

ಸುಮಾರು ಎರಡು ಗಂಟೆಗಳ ಈ ಚಲನಚಿತ್ರದಲ್ಲಿ ಕಥೆ ಪ್ರಧಾನವಲ್ಲ, ಪಾತ್ರಗಳೂ ಪ್ರಧಾನರಲ್ಲ. ಶಾಂತಿಯನ್ನು ಹುಡುಕಿಬಂದ 'ಶಾಂತಿ' ಎನ್ನುವ ಕಲಾವಿದೆ ಅಶಾಂತವಾದ ವಾತಾವರಣದಲ್ಲಿ ಬಿಡುಗಡೆಗಾಗಿ ನಡೆಸುವ ಹೋರಾಟ ಏಕಾಂಗಿಯೊಬ್ಬಳ ಹೋರಾಟ ಮಾತ್ರವಾಗಿರದೆ, ಸಮುದಾಯದ ಹೋರಾಟವೂ ಆಗಿದೆ. ಎಲ್ಲಾ ಕಲೆಗಳ ಅಂತಿಮ ಉದ್ದೇಶವಾದರೂ ಏನು? ಶಾಂತಿ ನೆಮ್ಮದಿಯನ್ನು ಪಡೆಯುವುದು. ಈ ಶಾಂತಿಯೇ ಅದುಮಿಡಲ್ಪಟ್ಟರೆ ಜನಸಾಮಾನ್ಯರ ಬದುಕು ಎತ್ತ ಸಾಗಬೇಕು? –ಈ ಪ್ರಶ್ನೆಯನ್ನು ಸ್ವಲ್ಪ ಭಾರವೆನಿಸಿದರೂ ಬೌದ್ಧಿಕ ಮಟ್ಟದಲ್ಲಿ ಬಿಡಿಸುವ ಪ್ರಯತ್ನ ಈ ಚಿತ್ರದಲ್ಲಿ ಮಾಡಲಾಗಿದೆ.

ಶಾಂತಿಯ ಹೋರಾಟದಲ್ಲಿ ಕೈಜೋಡಿಸಿದರೂ ಸಮರ ಭಯೋತ್ಪಾದಕರ ಜೊತೆಯಲ್ಲಿರುವವನು. ಶಾಂತಿಯ ಪರವಾದ ಅವನ ನಿಲುವನ್ನು ತಿಳಿದ ಭಯೋತ್ಪಾದಕರು ಸಮರದ ಪ್ರತಿರೂಪವಾದ ಸಮರನನ್ನು ಹತ್ಯೆ ಮಾಡುತ್ತಾರೆ. ಅವನು ಸತ್ತರೂ ಅವನು ಶಾಂತಿಗೆ ಕೊಟ್ಟ ಪಿಸ್ತೂಲಿನಲ್ಲಿ ಸಮರ ಜೀವಂತವಾಗಿದ್ದಾನೆ. ಈ ಸನ್ನಿವೇಶ ಶಾಂತಿಯನ್ನು ಕಾಪಾಡುವಲ್ಲಿ ಹಿಂಸೆಯ ಅನಿವಾರ್ಯತೆಯನ್ನು ಎತ್ತಿ ಹಿಡಿಯುತ್ತದೆ. ಶಾಂತಿಯಾದರೂ ತನ್ನನ್ನು ಬೆನ್ನಟ್ಟಿ ಬರುವ ಭಯೋತ್ಪಾದಕರಿಂದ ತಪ್ಪಿಸಿಕೊಳ್ಳಲು ಅನಿವಾರ್ಯವಾಗಿ ಪಿಸ್ತೂಲನ್ನು ಬಳಸಲೇಬೇಕಾಗುತ್ತದೆ. ಈ ಪರಿಸ್ಥಿತಿ ಮೌಲ್ಯಗಳನ್ನು ಕಾಪಾಡಿಕೊಳ್ಳುವಲ್ಲಿ ಹಿಡಿದ ದಾರಿಯ ಶುದ್ಧತೆಯ ಬಗ್ಗೆ ಹಲವು ಪ್ರಶ್ನೆಗಳನ್ನು ಸಹಜವಾಗಿಯೇ ಎತ್ತುತ್ತದೆ.

'ಬೆಂಕಿ, ಸೂರ್ಯ'ದಂತಹ ಸಮಸ್ಯಾಪ್ರಧಾನ ಚಿತ್ರಗಳಲ್ಲಿ ಅಸಹಾಯಕ, ಅತೃಪ್ತ ಹೆಣ್ಣುಗಳ ಹೋರಾಟ ಚಿತ್ರಿಸಿದ ಬರಗೂರರು 'ಶಾಂತಿ' ಎಂಬ ಹೆಣ್ಣನ್ನು 'ಶಾಂತಿಯ' ಪ್ರತಿರೂಪವಾಗಿಸಿ, ಏಕಮಾತ್ರ ಪಾತ್ರವಾಗಿರಿಸಿ ಸಿದ್ಧಪಡಿಸಿದ ವಿಶೇಷ ಪ್ರಯೋಗವಿದಾಗಿದೆ. ರಂಗಭೂಮಿಯಲ್ಲಿ ನಾಟಕದುದ್ದಕ್ಕೂ ಏಕವ್ಯಕ್ತಿ ಅಭಿನಯಗಳು ಈಗಾಗಲೇ ದಾಖಲೆ ಸೃಷ್ಟಿಸಿವೆ. ಚಲನಚಿತ್ರರಂಗದಲ್ಲಿ 'ನಾಯಕಿ' ಮಾತ್ರವೇ ಪ್ರಧಾನವಾದ 'ಶಾಂತಿ' ದಾಖಲೆಯನ್ನು ಸೃಷ್ಟಿಸಬಲ್ಲ ಹೊಸ ರೀತಿಯ ಪ್ರಯೋಗವಾಗಿದೆ. ಚಲನಚಿತ್ರದುದ್ದಕ್ಕೂ ನಾಯಕಿ ತನ್ನ ಮಾತಿನೊಂದಿಗೇ ತಾನೇ ಮುಖಾಮುಖಿಯಾಗುವ, ಮುಖವಿಲ್ಲದ ಧ್ವನಿಗಳಿಗೆ ಎದುರಾಗುವ ತಂತ್ರವಿದ್ದು ಶಾಂತಿಯ ಪರಿಕಲ್ಪನೆಗಳಲ್ಲಿನ ವೈರುಧ್ಯಗಳ ವಿಶ್ಲೇಷಣೆಗಳನ್ನು ಹಿಡಿಯುವ ಪ್ರಯತ್ನವನ್ನು ಗಂಭೀರವಾಗಿ ಮಾಡಲಾಗಿದೆ.

ಈ ಸರಳ, ಸಹಜ ಚಿತ್ರದಲ್ಲಿ ವಿಶೇಷವಾದ ಉಡುಗೆ, ತೊಡುಗೆಗಳಿಲ್ಲದೆ, ಮೇಕಪ್‌ನ ಸಹಾಯವಿಲ್ಲದೆ ಪ್ರಬುದ್ಧ ನಟಿ ಭಾವನಾ ಸಹಜ ಅಭಿನಯದಿಂದಲೇ ಗೆಲ್ಲುತ್ತಾರೆ. ಕ್ಷಣಕ್ಷಣಕ್ಕೂ ಬದಲಾಗುವ ಮನಸ್ಸಿನ ಭಾವನೆಗಳು, ಶಾಂತಿ - ಅಶಾಂತಿಯ ಕಲ್ಪನೆಗಳು, ಪಾರಿಯೊಂದಿಗೆ ನಡೆಸುವ ಆಪ್ತ ಸಂಭಾಷಣೆ ಚಲನಚಿತ್ರದ ಪ್ಲಸ್ ಪಾಯಿಂಟ್‌ಗಳಾಗಿವೆ. ಮುಖಗಳಿಲ್ಲದ ಧ್ವನಿಗಳು, 'ವ್ಯಾನ್, ಕಾರ್'ಗಳೇ ಮನುಷ್ಯರಾಗುವುದು, ಚಹರೆಗಳಿಲ್ಲದ ಧ್ವನಿಗಳು ಶಾಂತಿಯನ್ನು ಕದಡುವ ಹಿಂಸಾರೂಪಿಗಳಾಗಿವೆ. ಮುಖಹೀನ ಭಯೋತ್ಪಾದಕರ ಹಿಡಿತದಿಂದ ಪಾರಾದ 'ಶಾಂತಿ' ಮತ್ತೆ ಸೇರುವುದು ಬುದ್ಧನ ಅಡಿದಾವರೆಗಳಲ್ಲೇ. ಎಂದಿಗಿಂತಲೂ ಇಂದು ಬುದ್ಧ ಹೆಚ್ಚು ಪ್ರಸ್ತುತನಾಗುತ್ತಿರುವ ಸಂದರ್ಭದಲ್ಲಿ ಬುದ್ಧನನ್ನು ಕುರಿತ ಕಲಾಕೃತಿಗಳ, ಬುದ್ಧನ ಧ್ಯಾನದಲ್ಲಿ ತೊಡಗಿದ ನಾಯಕಿ ಅರ್ಥಪೂರ್ಣವಾಗಿ ಕಂಡುಬರುತ್ತಾರೆ.

ಆದವಾನಿ ವಾಗರಾಜ್ ಅವರ ಸಮರ್ಥ ಛಾಯಾಗ್ರಹಣದಲ್ಲಿ ಮಡಿಕೇರಿಯ ಸುತ್ತಮುತ್ತಲಿನ ಸ್ಥಳಗಳಾದ ಬೈಲುಕುಪ್ಪೆ, ನಾ ಪೊಕ್ಲು, ನಾಲ್ಕು ನಾಡು ಪರಿಸರದ ಸುಂದರ ನಿಸರ್ಗ, ಬರಗೂರರ ಅರ್ಥಪೂರ್ಣ ಹಾಡುಗಳು, ಬಿಗಿ ಕಳೆದುಕೊಳ್ಳದ ಸಂಭಾಷಣೆ, ಸಮರ್ಥ ನಿರ್ದೇಶನ - ಈ ಚಿತ್ರವನ್ನು ಕಮರ್ಷಿಯಲ್ ಚಿತ್ರಗಳ ಗುಂಪಿಗೆ ಸೇರಿಸದೆ ಸಹಜವಾಗಿಯೇ ಕಲಾತ್ಮಕ ಚಿತ್ರಗಳ ಗುಂಪಿಗೆ ಸೇರಿಸುತ್ತದೆ. ಕಲಾತ್ಮಕ ಚಿತ್ರಗಳು ತಮ್ಮ ವಸ್ತು ಹಾಗೂ ಸಾಂಕೇತಿಕತೆಯಿಂದಾಗಿ ಸುಲಭವಾಗಿ ಅರ್ಥಬಿಟ್ಟುಕೊಡುವುದಿಲ್ಲ. ಆ ಸಾಂಕೇತಿಕ ಧ್ವನಿಗಳಿಗೆ ಯಾರು ಸ್ಪಂದಿಸಬಲ್ಲರೋ ಅವರು ಈ ಚಿತ್ರಗಳಿಗೆ ಹತ್ತಿರವಾಗುತ್ತಾರೆ. ಸಹಜವಾಗಿಯೇ ಇಂತಹ ಚಿತ್ರಗಳಿಗೆ ಒದಗುವ ಪ್ರೇಕ್ಷಕರಿಗೆ ಚಿತ್ರದ ಭಾಷೆ ಮತ್ತು ಸಾಂಕೇತಿಕತೆಯ ಬಗ್ಗೆ ಪ್ರಾಥಮಿಕ ಅರಿವು ಇರಲೇಬೇಕಾಗುತ್ತದೆ.

ಸಂಪೂರ್ಣವಾಗಿ ಬೌದ್ಧಿಕ ವಸ್ತುವನ್ನುಳ್ಳ, ಭಯೋತ್ಪಾದನೆಯಂತಹ ಸಮಸ್ಯೆಯನ್ನು ಹಿಂಸೆ, ಕೊಲೆಪಾತಕತನವಿಲ್ಲದೆಯೇ ಸಾಂಕೇತಿಕವಾಗಿ ಚಿತ್ರಿಸಿದ ಹಿರಿಮೆ ಈ ಚಿತ್ರಕ್ಕಿದೆ. ಜನಸಾಮಾನ್ಯನೂ ದಿನನಿತ್ಯ ಇಂತಹ ಒತ್ತಡಗಳ ಮಧ್ಯೆಯೇ ಬದುಕುತ್ತಿರುವವನಾದ್ದರಿಂದ ಬಳಸಲಾಗಿರುವ ಸಾಂಕೇತಿಕತೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಕಷ್ಟವಾಗಲಾರದು. 'ಬುದ್ಧ, ಶಾಂತಿ, ಬಿಳಿ ಪಾರಿವಾಳ'-ದಂತಹ ಚಿತ್ರಗಳು ಕಾಲ, ದೇಶಗಳ ಹಂಗನ್ನು ತೊರೆದು ಭಯೋತ್ಪಾದನೆಯಂತಹ ಜಾಗತಿಕ ಸಮಸ್ಯೆಯಿಂದ ತತ್ತರಿಸುತ್ತಿರುವ ಯಾವುದೇ ಸ್ವತಂತ್ರ ಜೀವಿಯೊಂದರ ಕತೆಯೂ ಆಗಬಹುದಾದ ಹಿರಿಮೆ ಈ ಚಿತ್ರಕ್ಕಿದೆ. ಭಯೋತ್ಪಾದನೆಗೆ ಹಲವು ಮುಖಗಳಿದ್ದಂತೆ ಶಾಂತಿಯನ್ನು ಹುಡುಕ ಹೊರಟವರಿಗೆ ಇರಬಹುದಾದ ಹಲವು ದಾರಿಗಳ ಅಗತ್ಯತೆಯನ್ನು ಈ ಚಿತ್ರ ಮನಗಾಣಿಸುತ್ತದೆ. □

ಹೊಸ ರಾಜಕೀಯ ಸಂಸ್ಕೃತಿ ಮೈಗೂಡಿಸಿಕೊಳ್ಳಲಿ

○ ಪ್ರೊ|| ರವೀಂದ್ರ ರೇಷ್ಮೆ
ಪತ್ರಕರ್ತರು, ಚಿಂತಕರು

ಎಪ್ಪತ್ತರ ದಶಕದಲ್ಲಿ ಆರಂಭಗೊಂಡ ಜನಪರ ಚಳವಳಿಯ ಕವಲುಗಳಾದ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಇತರೇ ಜನಪರ ಚಳವಳಿಗಳು ಹಾಗೂ ವ್ಯಕ್ತಿ-ಶಕ್ತಿಗಳೊಂದಿಗೆ ಜೊತೆಗೂಡಿ ಪರ್ಯಾಯ ರಾಜಕಾರಣವನ್ನು ರೂಪಿಸುವ ಐತಿಹಾಸಿಕ ಪ್ರಯತ್ನವೊಂದಕ್ಕೆ ಮುಂದಾಗಿವೆ. ಸ್ವಾರ್ಥ ಮತ್ತು ಅಧಿಕಾರ ಲಾಲಸೆಯೇ ರಾಜಕಾರಣದ ಜೀವಾಳವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಪರ್ಯಾಯ ರಾಜಕಾರಣದ ಈ ಪ್ರಯತ್ನ ಜನಪರ ವಿಚಾರಧಾರೆಯುಳ್ಳವರಲ್ಲಿ ಹೊಸ ಸಂಚಲನವನ್ನು ಮೂಡಿಸಿದೆ. ಹಿಂದೆ ಜನಪರ ಚಳವಳಿಗಳಲ್ಲಿ ತೊಡಗಿಸಿಕೊಂಡು ಕಾಲಾನಂತರ ವಿವಿಧ ರಾಜಕೀಯ ಪಕ್ಷಗಳಲ್ಲಿ ಸೇರಿಹೋಗಿದ್ದ ವ್ಯಕ್ತಿಗಳೂ ಈ ಪ್ರಯತ್ನದಿಂದಾಗಿ ಖುಷಿಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ 'ಸಂವಾದ' ನಾಡಿನ ಚಿಂತಕರೊಂದಿಗೆ ಚರ್ಚೆ ನಡೆಸಬೇಕೆಂದು ಇಚ್ಛಿಸಿದೆ. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರಿಗೆ 'ಸಂವಾದ' ಕಳುಹಿಸಿಕೊಟ್ಟಿತ್ತು. ಬಂದ ಉತ್ತರಗಳನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಮುಂದಿನ ಸಂಚಿಕೆಗಳಲ್ಲಿ ಉಳಿದವುಗಳನ್ನು ಪ್ರಕಟಿಸುತ್ತೇವೆ. ಓದುಗರೂ ಈ ಸಂವಾದದಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು

೧. ಜನಪರ ಚಳವಳಿಗಳು (ವಿಶೇಷವಾಗಿ ದಸಂಸ ಮತ್ತು ರೈತಸಂಘ) ಜೊತೆಗೂಡಿ ರೂಪಿಸ ಹೊರಟಿರುವ ಪರ್ಯಾಯ ರಾಜಕಾರಣ ಪ್ರಯತ್ನಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

೨. ಪ್ರಸ್ತುತ ಚಾಲ್ತಿಯಲ್ಲಿರುವ ರಾಜಕಾರಣಕ್ಕೆ ಹೊರತಾದ 'ಪರ್ಯಾಯ ರಾಜಕಾರಣ' ಹೇಗಿರಬೇಕೆಂದು ನೀವು ಬಯಸುತ್ತೀರಿ ?

೩. ಎಂಥ ಶಕ್ತಿಗಳು ಮತ್ತು ವ್ಯಕ್ತಿಗಳು ಒಗ್ಗೂಡಿದರೆ 'ಪರ್ಯಾಯ ರಾಜಕಾರಣ' ರೂಪಿಸಲು ಸಾಧ್ಯ ?

೪. ಜನಪರ ಚಳವಳಿಗಳು - ವ್ಯಕ್ತಿ - ಶಕ್ತಿಗಳು ಒಗ್ಗೂಡಲು ತಾವು ಸೂಚಿಸುವ ಮಾರ್ಗೋಪಾಯಗಳೇನು ?

೫. ಪರ್ಯಾಯ ರಾಜಕೀಯ ಶಕ್ತಿ (ಪಕ್ಷ) ಹೊಂದಬಹುದಾದ ನೀತಿ ಸಂಹಿತೆ ಮತ್ತು ಕಾರ್ಯಸೂಚಿಗಳೇನು ?

೧. ರೈತಸಂಘ ಮತ್ತು ದಸಂಸ ಈ ಎರಡೂ ಚಳವಳಿ ರಾಜಕಾರಣ ಮತ್ತು ಅಧಿಕಾರ ರಾಜಕಾರಣಗಳ ನಡುವಿನ ಸೂಕ್ಷ್ಮ ವ್ಯತ್ಯಾಸವನ್ನು ಗ್ರಹಿಸಿರಬಹುದು. ರೈತಸಂಘ ನೇರವಾಗಿ ಚುನಾವಣಾ ರಾಜಕೀಯ ಪ್ರವೇಶ ಮಾಡಿದ್ದರೆ, ದಸಂಸ ಸ್ಥಾಪಿತ ಪಕ್ಷಗಳ ಆಶ್ರಯದಲ್ಲಿ ಚುನಾವಣೆಗೆ ಇಳಿದಿತ್ತು. ಆದರೆ ಇವೆರಡೂ ಚಳವಳಿಗಳು ಚುನಾವಣಾ ರಾಜಕೀಯದ ಒತ್ತಡಗಳು ಮತ್ತು ಹೊಂದಾಣಿಕೆಗಳಿಂದಾಗಿ ತಮ್ಮ ಮೂಲ ಆದರ್ಶ ಮತ್ತು ನೈತಿಕ ಚೈತನ್ಯವನ್ನೇ ಕಳೆದುಕೊಂಡು ನಿಷ್ಕ್ರಿಯಗೊಂಡಿದ್ದನ್ನು ನಮಗೆ ಇತಿಹಾಸ ತೋರಿಸಿಕೊಟ್ಟಿದೆ. ಆದ್ದರಿಂದ ಅವೆರಡೂ ಸಂಘಟನೆಗಳ ಹೊಸ ಪ್ರಯತ್ನ ಇದುವರೆಗಿನ ಅನುಭವದ ಹಿನ್ನೆಲೆಯಲ್ಲಿ ಒಂದು ಹೊಸ ರಾಜಕೀಯ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಲಿ ಎಂದು ಬಯಸುತ್ತೇನೆ.

೨. ಈಗಿನ ಮೂರು ಸ್ಥಾಪಿತ ರಾಜಕೀಯ ಪಕ್ಷಗಳೆಂದರೆ ಕಾಂಗ್ರೆಸ್, ಬಿಜೆಪಿ ಮತ್ತು ಜನತಾದಳ. ಇವುಗಳಿಗೆ ಪ್ರತ್ಯೇಕ ಹೆಸರಿದ್ದರೂ ಕೂಡ ಇವು ಮೂಲಭೂತವಾಗಿ ಅಧಿಕಾರ ರಾಜಕಾರಣದ ಆಮಿಷಕ್ಕೆ ಒಪ್ಪಿಸಿಕೊಂಡಿರುವ ಪಕ್ಷಗಳು. ಹಾಗಾಗಿ ಅವು ಜನಾಂದೋಲನದ ಆದರ್ಶಗಳನ್ನಾಗಲಿ ಅಥವಾ ಸದೃಢವಾದ ಜನಪರ ಆಡಳಿತದ ಮೂಲಭೂತ ಶಿಸ್ತನ್ನಾಗಲಿ ಪಾಲಿಸುವುದು ಸಾಧ್ಯವಾಗದೆ ಕೇವಲ ಅವಕಾಶವಾದಿ ಗುಂಪುಗಳಾಗಿ ಹೋಗಿವೆ. ಆದ್ದರಿಂದ ಇವುಗಳಿಗೆ ಪರ್ಯಾಯವಾಗಿ ಹೊರಹೊಮ್ಮಬೇಕಾದ ಯಾವುದೇ ರಾಜಕೀಯ ಶಕ್ತಿ ಹೋರಾಟ ರಾಜಕಾರಣದ ಆದರ್ಶ ಮತ್ತು ಜನಪರ ಆಡಳಿತಕ್ಕೆ ಅಗತ್ಯವಾಗಿರುವ ದೂರದರ್ಶಿತ್ವ ಮತ್ತು ಕ್ರಿಯಾಶೀಲತೆಯನ್ನು ರೂಪಿಸಬೇಕಾಗಿದೆ.

೩. ರೈತೇತರ ಮತ್ತು ದಲಿತೇತರ ಸಮುದಾಯಗಳನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ಮನೋಧರ್ಮ ಪ್ರದರ್ಶಿಸಿದರೆ ಮಾತ್ರ ಪರ್ಯಾಯ ರಾಜಕಾರಣ ರೂಪಿಸಲು ಸಾಧ್ಯ. ಪರಂಪರಾನುಗತ ಗ್ರಹಿಕೆಯಂತೆ ರೈತರು ಮಾತ್ರ ಮಣ್ಣಿನ ಮಕ್ಕಳು ಹಾಗೂ ದಲಿತರು ಮಾತ್ರವೇ ಪ್ರಗತಿಪರ ಹೋರಾಟಗಾರರಾಗಬಲ್ಲವರು ಎಂಬ ಭ್ರಮೆಯೇ ಅವೆರಡೂ ಸಮುದಾಯಗಳನ್ನು ಅನಗತ್ಯವಾದ ಸ್ವಾನುಕಂಪ ಮತ್ತು ಸ್ವಪ್ರತಿಷ್ಠೆಯ ಪ್ರವೃತ್ತಿಗೆ ತಳ್ಳಿದ್ದು ಈ ಚಳವಳಿಗಳ ಇತಿಹಾಸದಲ್ಲಿಯೇ ದಾಖಲಾಗಿಬಿಟ್ಟಿದೆ. ಹಾಗಾಗಿ ಇವೆಲ್ಲವುಗಳಿಂದ ಮುಕ್ತವಾದ ಎಲ್ಲಾ ಪ್ರಗತಿಪರ ಹಾಗೂ ಉದಾರವಾದಿ ಸೈದ್ಧಾಂತಿಕ ಹಿನ್ನೆಲೆಯಿಂದ ಬಂದ ವ್ಯಕ್ತಿ ಶಕ್ತಿಗಳು ಒಗ್ಗೂಡಬೇಕಾಗಿದೆ. ವಿದ್ಯಾವಂತ ಇಂಜಿನಿಯರ್‌ಗಳು, ಡಾಕ್ಟರ್‌ಗಳು, ಮ್ಯಾನೇಜ್‌ಮೆಂಟ್ ಪದವೀಧರರು, ಆಧುನಿಕ ಉದ್ಯಮ ಮತ್ತು ವ್ಯಾಪಾರಗಳನ್ನು ನಿಭಾಯಿಸಬಲ್ಲ ಪ್ರತಿಭಾವಂತ ಚಿಂತಕರು ಮತ್ತು ಕ್ರಿಯಾಶಾಲಿಗಳಿಗೆ ಮುಕ್ತ ವೇದಿಕೆಯನ್ನು ಕಲ್ಪಿಸಬೇಕಾಗಿದೆ.

> **ಖಚಿತವಾದ ಅಭಿವೃದ್ಧಿಯ ಪ್ರಣಾಳಿಕೆ ಮತ್ತು ಜನಕಲ್ಯಾಣದ ಕನಸು ಇಲ್ಲದೇ ಹೋದರೆ ಯಾವುದೇ ರಾಜಕೀಯ ಪ್ರಯತ್ನ ಯಶಸ್ವಿಯಾಗುವುದಿಲ್ಲ. ಆದುದರಿಂದ ಪರ್ಯಾಯವಾದ ಆರ್ಥಿಕ ಚಿಂತನೆ ಮತ್ತು ಅನುಷ್ಠಾನ ಕ್ರಮಗಳನ್ನು ಮಂಡಿಸಬೇಕಾಗಿದೆ.**

೪. ಎಲ್ಲಾ ಜಾತಿ ಜನಾಂಗಗಳ ಬಡವರಲ್ಲಿ ಭರವಸೆ ಮೂಡಿಸುವುದೇ ಸೆಕ್ಯುಲರ್ ರಾಜಕಾರಣ. ಎಲ್ಲಾ ಜಾತಿಗಳ ಸಮರ್ಥರು ಮತ್ತು ಪ್ರತಿಭಾವಂತರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿ ಸಮಾನತೆ ಮೂಡಿಸುವುದೇ ಸಾಮಾಜಿಕ ನ್ಯಾಯದ ರಾಜಕಾರಣ. ಅದು ಬಿಟ್ಟು ಮತ್ತದೇ ಜಾತಿವಾದಿ ಪರಿಭಾಷೆಯನ್ನೇ ಬಳಸುತ್ತಾ ಹೋದರೆ ಅದು ಮತ್ತೊಂದು ವೋಟ್‌ಬ್ಯಾಂಕ್ ರಾಜಕಾರಣವಾಗಿಬಿಡುತ್ತದೆ. ಎಲ್ಲಾ ಜನಾಂಗದ ಹೊಸ ಸುಶಿಕ್ಷಿತ ಯುವ ತಲೆಮಾರಿನ ಕನಸು, ಆಕಾಂಕ್ಷೆಗಳಿಗೆ ಸ್ಪಂದಿಸದಿದ್ದರೆ ಯಾವುದೇ ರಾಜಕೀಯ ಪ್ರಯತ್ನ ಸಾರ್ಥಕವಾಗುವುದಿಲ್ಲ. ಸೆಕ್ಯುಲರ್ ಸೋಗಲಾಡಿತನ, ಜಾತಿವಾದಿ ಅಟ್ಟಹಾಸ ಮತ್ತು ಕೋಮುವಾದದ ಆರ್ಭಟದಿಂದ ಮುಕ್ತವಾದ ಆರೋಗ್ಯಕರ ಸಂಸ್ಕೃತಿಯನ್ನು ಸ್ಥಾಪಿಸಬೇಕಾಗಿದೆ.

೫. ಅತೀ ಮುಖ್ಯವಾಗಿ ಜಾಗತೀಕರಣ ಮತ್ತು ಮುಕ್ತಮಾರುಕಟ್ಟೆಯ ವೈಪರೀತ್ಯಗಳಿಂದ ಬಡವರು ಮತ್ತು ಸಾಮಾನ್ಯ ಜನರನ್ನು ರಕ್ಷಿಸುವುದು ಹೇಗೆ ಎಂಬ ಒಂದು ಸ್ಪಷ್ಟ ಆರ್ಥಿಕ ಚಿಂತನೆ ಮತ್ತು ಕ್ರಿಯಾಶೀಲ ಕಾರ್ಯಕ್ರಮದ ಅಗತ್ಯ ಇದೆ. ಖಚಿತವಾದ ಅಭಿವೃದ್ಧಿಯ ಪ್ರಣಾಳಿಕೆ ಮತ್ತು ಜನಕಲ್ಯಾಣದ ಕನಸು ಇಲ್ಲದೇ ಹೋದರೆ ಯಾವುದೇ ರಾಜಕೀಯ ಪ್ರಯತ್ನ ಯಶಸ್ವಿಯಾಗುವುದಿಲ್ಲ. ವಿಶ್ವಬ್ಯಾಂಕ್ ನಿರ್ದೇಶಿತ ಆರ್ಥಿಕ ನೀತಿಯಿಂದಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಶಿಕ್ಷಣ, ಆರೋಗ್ಯ, ಸಾರಿಗೆ ಮತ್ತು ಕುಡಿಯುವ ನೀರಿನಂತಹ ಅಗತ್ಯ ಸೇವೆಗಳನ್ನೂ ಕೂಡ ಖಾಸಗೀಕರಣ ಮಾಡುವ ಹುನ್ನಾರ ನಡೆಸುತ್ತಿರುವಾಗ ಒಂದು ಹೊಸ ರಾಜಕೀಯ ಪಕ್ಷ ಈ ಅಪಾಯಕಾರಿ ನೀತಿಗಳಿಗೆ ಪರ್ಯಾಯವಾದ ಆರ್ಥಿಕ ಚಿಂತನೆ ಮತ್ತು ಅನುಷ್ಠಾನ ಕ್ರಮಗಳನ್ನು ಮಂಡಿಸಬೇಕಾಗಿದೆ. ಮುಕ್ತ ಆರ್ಥಿಕ ವ್ಯವಸ್ಥೆಯ ಅನಿವಾರ್ಯತೆಯನ್ನು ಅನುಮೋದಿಸಿಕೊಂಡೇ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಆದರ್ಶಗಳನ್ನು ಉಳಿಸಿಕೊಂಡು ಹೋಗಬೇಕಾದ ಪರ್ಯಾಯ ವ್ಯವಸ್ಥೆಯನ್ನು ಸ್ಥಾಪಿಸಬೇಕಾಗಿದೆ. □

ಸಮಾನತೆ, ಸುಖೀರಾಜ್ಯ ಗುರಿಯಾಗಬೇಕು

ಚರ್ಚೆ

ಪರ್ಯಾಯ ರಾಜಕಾರಣ

○ ಕೋ. ಚೆನ್ನಬಸಪ್ಪ
ನಿವೃತ್ತ ನ್ಯಾಯಮೂರ್ತಿಗಳು

೧. ಪರ್ಯಾಯ ರಾಜಕಾರಣ ಪ್ರಯತ್ನ ಈಗ ಏಕೆ ಬಂತು? ಈಗ ಪ್ರಚಲಿತವಾಗಿರುವ ರಾಜಕಾರಣ ಈಗಿನ ಪ್ರಸ್ತುತ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ವಿಫಲವಾಗಿವೆ ಎಂಬ ಇಂಗಿತ ಇದರಲ್ಲಿ ಅಡಗಿದೆ. ಹಾಗಾದರೆ ಇಂದಿನ ನಮ್ಮ ತುರ್ತು ಸಮಸ್ಯೆ ಏನು? ಬಡತನ, ಅಜ್ಞಾನ, ಅನಾರೋಗ್ಯ, ಅನಕ್ಷರತೆ, ಅಸಮಾನತೆ - ಆರ್ಥಿಕ, ರಾಜಕೀಯ, ಸಾಮಾಜಿಕ ಇತ್ಯಾದಿ ಎಲ್ಲ ವಿಚಾರಗಳಲ್ಲೂ ಅಸಮಾನತೆ - ಎಂಬ ಮೂಲಭೂತ ಸಮಸ್ಯೆಗಳಿಗೆ ಈಗಿರುವ ರಾಜಕಾರಣ ಪರಿಹಾರ ನೀಡಲು ವಿಫಲವಾಗಿವೆ ಎಂದು ಪರ್ಯಾಯ ರಾಜಕಾರಣದ ಮಾತು ಕೇಳಿಬರುತ್ತದೆ.

'ಈಗ ವಿಶೇಷವಾಗಿ ದಸಂಸ ಮತ್ತು ರೈತಸಂಘ ಜೊತೆಗೂಡಿ ರೂಪಿಸಹೊರಟಿರುವ ರಾಜಕಾರಣ' ಈ ಮೇಲಿನ ಮೂಲಭೂತ ಸಮಸ್ಯೆಗೆ- ಬಡತನ, ಅಸಮಾನತೆ, ಅನಕ್ಷರತೆ ನಿವಾರಣೆಗೆ ಯಾವ ಪರ್ಯಾಯ ಸಿದ್ಧಾಂತ, ವ್ಯವಸ್ಥೆ ಕ್ರಿಯಾಶಕ್ತಿಯನ್ನು ರೂಪಿಸುತ್ತಿದೆಯೋ ನನಗೆ ಅರ್ಥವಾಗುತ್ತಿಲ್ಲ. ದಸಂಸದ ಸದಸ್ಯರ, ರೈತಸಂಘದ ಸದಸ್ಯರ ಹಸಿವೆಗೂ ಪ್ರಜೆಗಳ ಇತರ ವರ್ಗದ ಹೊಟ್ಟೆ ಹಸಿವೆಗೂ ಏನು ವ್ಯತ್ಯಾಸವಿದೆಯೊ ತಿಳಿಯದು.

೨ - ೩. ಪರ್ಯಾಯ ವ್ಯವಸ್ಥೆ 'ಇಲ್ಲದವರು' (Have-nots) ಎಲ್ಲರೂ ಒಂದಾಗಿ ನಮ್ಮ ಸಂವಿಧಾನ ಬಯಸುವ ಲೌಕಿಕ ಸುಖೀರಾಜ್ಯ (Secular welfare) ವನ್ನು 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಇರುವ ಸರಿಸಮಾನತೆ (Equality) ತರುವಂಥಾದ್ದಾಗಿರಬೇಕು. ಅದು ಯಾವ ಮಾತ್ರಕ್ಕೂ ಜಾತಿ ಮತ ವರ್ಣ ಆಧಾರಿತವಾಗಿರಲೇಬಾರದು. ಕೋಮುದ್ವೇಷವನ್ನು ಬಿತ್ತುವ, ಮೂಢ ನಂಬಿಕೆ ಹಬ್ಬಿಸುವ, ಮತಾಂಧತೆಯನ್ನು ಎಬ್ಬಿಸುವ ಪೂಜಾರಿ-ಪುರೋಹಿತವರ್ಗವನ್ನು ಧಿಕ್ಕರಿಸುವ ವಿಚಾರವಂತರೆಲ್ಲ ಒಂದಾಗಿ ಪರ್ಯಾಯ ವ್ಯವಸ್ಥೆ ರೂಪಿಸಬೇಕು.

೪. ಜನಪರ ಚಳವಳಿಗಳು ಅನೇಕವಾಗಿರಲಾರವು. ಬಡತನ, ಅನಕ್ಷರತೆ, ಅಜ್ಞಾನ... ನಿವಾರಣೆಗೆ ತೊಡಗಿರುವ, ಕೋಮು ಸೌಹಾರ್ದ ಬೆಳೆಸುವ ಎಲ್ಲ ವರ್ಗದ ಜನರೂ - ಜಾತಿಮತ ಪಂಥವಿಲ್ಲದೆ ಒಂದಾಗಬೇಕು. ಅಂಥವರ ಗಮನ ಪ್ರಮುಖತಃ ಗ್ರಾಮೀಣ ಜನರ ಅಭ್ಯುದಯದ ಕಡೆ ಇರಬೇಕು. ಅಪಾರ ಮಾನವ ಸಂಪನ್ಮೂಲ ಇರುವ ಈ ದೇಶದಲ್ಲಿ ಕೈಗಳಿಗೆ ದುಡಿಯುವ ಅವಕಾಶ ಇರುವಂಥ ಕೃಷಿ, ಕೈಗಾರಿಕಾ ನೀತಿಗೆ ಆದ್ಯತೆ ಇರುವಂಥ ಆರ್ಥಿಕ ವ್ಯವಸ್ಥೆ ಆಧಾರವಾಗಿರಬೇಕು. ಸ್ವದೇಶೀ ವಸ್ತುಗಳಿಗೆ ಪ್ರಾಮುಖ್ಯತೆ ಇರಬೇಕು. ವಿದೇಶೀ ಮೋಹಿನಿ ರೂಪಕ್ಕೆ ಮರುಳಾಗಬಾರದು.

೫. ಯಾವುದೇ ರಾಜಕೀಯ ಶಕ್ತಿಯಾದರೂ ಅತಿ ಮುಖ್ಯವಾದ ನೀತಿಸಂಹಿತೆ ಸಾಮಾಜಿಕ ನಿಷ್ಠೆ ಪ್ರಾಮಾಣಿಕತೆ, ನಿಸ್ವಾರ್ಥತೆ, ಪರಿಶುದ್ಧ ಹಸ್ತ ಈ ಮೂಲಭೂತ ನೈತಿಕತೆ ನಡತೆಯಿಲ್ಲದವರಿಂದ ಯಾವ ಪರ್ಯಾಯ ರಾಜಕಾರಣವೂ ಪಕ್ಷವೂ ಪ್ರಯೋಜನವಿಲ್ಲ. ಅನೀತಿವಂತರಿಂದ ವೈಷಮ್ಯದಿಂದ ದೇಶವನ್ನು ಕಟ್ಟಲಿಕ್ಕಾಗದು.

ಗಾಂಧಿವಾದ, ಸಮಾಜವಾದ, ಅಂಬೇಡ್ಕರ್‌ವಾದ, ಮಾರ್ಕ್ಸ್‌ವಾದ ಮುಂತಾದವುಗಳನ್ನು ಮಾರ್ಗದರ್ಶಿಗಳೆಂದು ನಂಬಿ ಹೊರಟ ಚಳವಳಿಗಳನ್ನು ದಾರಿತಪ್ಪಿಸಿದ 'ಮಾಯೆ' ಯಾವುದು ಎಂಬುದನ್ನು ಕಂಡುಕೊಳ್ಳುವುದರಲ್ಲೇ ಹೊಸ ನೀತಿ ಸಂಹಿತೆ ಮತ್ತು ಕಾರ್ಯಸೂಚಿಗಳು ಅರಳಿಯಾವು.

○ ಡಿ.ಎಸ್. ನಾಗಭೂಷಣ
ಸಮಾಜವಾದಿ ಚಿಂತಕರು

ಏಕತೆ ಪ್ರಯತ್ನಕ್ಕೆ ಎಲ್ಲರ ಬೆಂಬಲ

೧. ಸುಮಾರು ೨೦ ವರ್ಷಗಳ ಹಿಂದೆ ದೇಮ ಅವರ ಬಯಕೆಯಂತೆ ನಾನು ಮತ್ತು ಎಚ್. ಗೋವಿಂದಯ್ಯ ಸೇರಿ 'ಪಂಚಮ'ದ ದಲಿತ + ರೈತ ಸಂಚಿಕೆ ರೂಪಿಸಿದ ಹೊತ್ತಲ್ಲೇ ಇಂತಹ ಪ್ರಯತ್ನಕ್ಕೆ ಚಾಲನೆ ದೊರಕಿತ್ತು.

ಆದರೆ ಆಗ ಈ ಚಳವಳಿಗಳು ತುಂಬು ಹರೆಯದ ಸೊಕ್ಕಿನಲ್ಲಿದ್ದು, ಒಂದಕ್ಕೆ ದೇಶ ಕಾಣದ; ಇನ್ನೊಂದಕ್ಕೆ ನೆಲಕಾಣದ ಅವಿವೇಕ ಆವರಿಸಿದ್ದುದರಿಂದಾಗಿ ಆ ಪ್ರಯತ್ನ ಯಶ ಕಾಣಲಿಲ್ಲ. ಈ ಅವಿವೇಕದಿಂದಾಗಿಯೇ ಈ ಎರಡೂ ಚಳವಳಿಗಳಿಗೆ ಅಕಾಲ ವೃದ್ಧಾಪ್ಯ ಬಂದೊದಗಿ, ಈಚಿನ ದಿನಗಳಲ್ಲಿ ಮೊದಲಬಾರಿಗೆ ಇದನ್ನು ಸಾವಿನ ಭಯ ನಿಜವಾಗಿ ಮುಟ್ಟಿದಂತಿದೆ.

ಹೀಗಾಗಿ ಈ ಭಯವನ್ನು ಮೀರಲು ಎಲ್ಲರೂ ಒಟ್ಟಾಗಿ, ಬದುಕುವ ಧೈರ್ಯ, ಕೌಶಲ್ಯ ಸಂಘಟಿಸಿಕೊಳ್ಳುವುದೊಂದೇ ಮಾರ್ಗ ಎಂಬ ವಿವೇಕ ಈ ಚಳವಳಿಗಳಲ್ಲಿ ಸಹಜವಾಗಿ ಮೂಡಿದೆ. ಸಹಜವಾಗಿ ಮೂಡಿದ್ದು ಸತ್ಯವೂ ಆಗಿರುವುದರಿಂದ, ಸದ್ಯದ ಏಕತೆಯ ಪ್ರಯತ್ನಕ್ಕೆ, ತಮ್ಮದೇ ರೀತಿಗಳಲ್ಲಿ ಸತ್ಯದೊಂದಿಗೆ ಪ್ರಯೋಗಗಳನ್ನು ನಡೆಸುತ್ತಿರುವ ಎಲ್ಲರ ಬೆಂಬಲವಿರುತ್ತದೆ. ಏಕೆಂದರೆ ಈ ಎಲ್ಲ ಪ್ರಯೋಗಶೀಲರಿಗೆ ಪ್ರಮುಖವಾಗಿ ಆ ಎರಡು ಚಳವಳಿಗಳೂ ಪ್ರಯೋಗಶಾಲೆಗಳಾಗಿದ್ದವು.

೨. ಅಧಿಕಾರ ಮತ್ತು ಅಗತ್ಯಗಳು ಹೆಚ್ಚಿದಷ್ಟೂ ಮನುಷ್ಯನ ಕಷ್ಟ-ಕೋಟಲೆ ಮತ್ತು ಅಶಾಂತಿ ಹೆಚ್ಚುತ್ತದೆ ಮತ್ತು ಅದಕ್ಕನುಪಾತವಾಗಿ ಆತನ ತೃಪ್ತಿಯ ಆಳ ಮತ್ತು ಆಯಸ್ಸು ಕಡಿಮೆಯಾಗುತ್ತಾ ಹೋಗುತ್ತದೆ ಎಂಬ ಅರಿವನ್ನು ಮೂಡಿಸುವ ಚಿಂತನ-ಮಂಥನದ ಸುತ್ತ ಪರ್ಯಾಯ ರಾಜಕಾರಣವನ್ನು ಕಟ್ಟಬೇಕಾಗುತ್ತದೆ.

೩. ಮೇಲೆ ಸೂಚಿಸಿದಂತಹ ಚಿಂತನ-ಮಂಥನದಲ್ಲಿ ಭಾಗಿಗಳಾಗಬಯಸುವ ಎಲ್ಲರೂ - ಪಕ್ಷ ಮತ್ತು ಪೂರ್ವಾಪರ ಬೇಧವಿಲ್ಲದೆ- ಒಗ್ಗೂಡಿದರೆ ಇದು ಸಾಧ್ಯವಾದೀತು.

೪. ಒಗ್ಗೂಡಿಸಲು ಹೊರಟಿರುವ ಜನರ ಆತ್ಮವಿಶ್ವಾಸ, ಶ್ರದ್ಧೆ, ತಾಳ್ಮೆ ಹಾಗೂ ಧಾರಣ ಶಕ್ತಿಗಳೇ ಸದ್ಯಕ್ಕೆ ಉಳಿದಿರುವ ಮಾರ್ಗೋಪಾಯಗಳು. ಇವುಗಳಿಗೆ ಹೊರತಾದ ಹೊರಗಿನ ಮಾರ್ಗೋಪಾಯಗಳು ಈಗಾಗಲೇ ಹಲವು ಪ್ರಯೋಗಗಳಲ್ಲಿ ಬಳಕೆಯಾಗಿ ಸವಕಲಾಗಿ ಹೋಗಿವೆ.

೫. ಗಾಂಧಿವಾದ, ಸಮಾಜವಾದ, ಅಂಬೇಡ್ಕರ್‌ವಾದ, ಮಾರ್ಕ್ಸ್‌ವಾದ ಮುಂತಾದವುಗಳನ್ನು ಮಾರ್ಗದರ್ಶಿಗಳೆಂದು ನಂಬಿ ಹೊರಟ ಚಳವಳಿಗಳನ್ನು ದಾರಿತಪ್ಪಿಸಿದ 'ಮಾಯೆ' ಯಾವುದು ಎಂಬುದನ್ನು ಕಂಡುಕೊಳ್ಳುವುದರಲ್ಲೇ ಹೊಸ ನೀತಿ ಸಂಹಿತೆ ಮತ್ತು ಕಾರ್ಯಸೂಚಿಗಳು ಅರಳಿಯಾವು. □

ಪರ್ಯಾಯ ರಾಜಕಾರಣ ಮರಳುಗಾಡಿನ ಓಯಸಿಸ್



ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು, ಸಿರಿಗೆರೆ

ಪರ್ಯಾಯ ರಾಜಕಾರಣದ ಸೂತ್ರದಾರರಿಗೆ ನಾಡಿನ ಸರ್ವತೋಮುಖ ಏಳಿಗೆ ಮುಖ್ಯವಾಗಬೇಕು. ಜಾತಿ, ಅಧಿಕಾರ, ಹಣ, ಹೆಂಡ, ಕೀರ್ತಿ, ಸ್ವಜನಪಕ್ಷಪಾತ ಎನ್ನುವ ಅನಿಷ್ಠದ ಗೋಡೆಗಳನ್ನು ನೆಲಸಮ ಮಾಡಬೇಕು. ಯಾವ ವ್ಯಾಮೋಹಕ್ಕೂ ಬಲಿಯಾಗದೆ 'ಜನಸೇವೆಯೇ ಜನಾರ್ಧನನ ಸೇವೆ' ಎನ್ನುವ ಭೃತ್ಯಾಚಾರಿಗಳಾಗಿ ನೈತಿಕ ನೆಲೆಗಟ್ಟಿನ ಮೇಲೆ ಹೋರಾಟ ನಡೆಸಬೇಕು. ಪಾರದರ್ಶಕತೆ ಬದುಕಿನ ಬಂಡವಾಳವಾಗಬೇಕು. ಸಾಮಾಜಿಕ ಕಳಕಳಿ ಅವರ ಧ್ಯೇಯವಾಗಬೇಕು.

'ತಾತ್ವಿಕರು ಮಾತ್ರ ಆಡಳಿತದ ಚುಕ್ಕಾಣಿ ಹಿಡಿಯಬೇಕು'. 'ಮೂರ್ಖರ ಕೊನೆಯ ಅಸ್ತ್ರ ರಾಜಕಾರಣ'. ಇವೆರಡೂ ತದ್ವಿರುದ್ಧ ಹೇಳಿಕೆಗಳು. ಇಂದಿನ ರಾಜಕಾರಣದಲ್ಲಿ ತಾತ್ವಿಕರೂ ಇಲ್ಲ, ಮೂರ್ಖರೂ ಇಲ್ಲ. ಇರುವವರೆಲ್ಲ ಮುಖವಾಡದ ರಾಜಕಾರಣಿಗಳು. ರಾಜಕಾರಣ ಸಂಪತ್ತನ್ನು ಲೂಟಿ ಮಾಡುವ, ತಮಗಾಗದವರನ್ನು ತುಳಿಯುವ, ಐಷಾರಾಮದ ಬದುಕು ಸಾಗಿಸುವ, ಸ್ವಾರ್ಥವನ್ನು ಸಾಧಿಸಿಕೊಳ್ಳುವ ಹುಲ್ಲುಗ್ಗಾವಲಾಗುತ್ತಿದೆ. ಇದು ನಿಜಕ್ಕೂ ಮಾನವಂತರು ತಲೆತಗ್ಗಿಸುವ ಸಂಗತಿ. 'ನ್ಯಾಯನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ ಲೋಕವಿರೋಧಿ ಶರಣ ಆರಿಗೂ ಅಂಜುವವನಲ್ಲ' ಎನ್ನುವ ಬದ್ಧತೆಯುಳ್ಳ ತತ್ವನಿಷ್ಠರು ವಿರಳ. ಇಂಥ ವಿಚಿತ್ರ ಸನ್ನಿವೇಶದಲ್ಲಿ ಪರ್ಯಾಯ ರಾಜಕಾರಣದ ಮಾತು ಕೇಳಿಬರುತ್ತಿರುವುದು ಮರಳುಗಾಡಿನಲ್ಲಿ ಓಯಸಿಸ್ ಸಿಕ್ಕಂತಾಗಿದೆ. ಇದೊಂದು ಸ್ವಾಗತಾರ್ಹ ಬೆಳವಣಿಗೆ.

ಚಾಲ್ತಿಯಲ್ಲಿರುವ ರಾಜಕಾರಣ ಸ್ವಾರ್ಥ ಮತ್ತು ಅಧಿಕಾರ ಲಾಲಸೆಯಿಂದ ಕೂಡಿದ್ದು ಎಲ್ಲರೂ 'ಹೊತ್ತು ಬಂದಂತೆ ಕೊಡೆ ಹಿಡಿಯುವರೇ'. 'ಗೋಸುಂಬೆತನ' ರಾಜಕಾರಣಿಗಳ ಬದುಕಿನ ಬಂಡವಾಳವಾಗುತ್ತಿದೆ. ಇವರೆಲ್ಲ ಚುನಾವಣಾ ಸಂದರ್ಭದಲ್ಲಿ ವೈರಿಗಳಂತೆ ಹೋರಾಡಿ ಅಧಿಕಾರ ಕಬಳಿಸಲು ಪರಸ್ಪರ ಮಿತ್ರರಾಗುವ ಗುಣವಂತರು. ಸಿದ್ಧಾಂತಗಳನ್ನು ಗಾಳಿಗೆ ತೂರಿ, ನೀತಿ-ಅನೀತಿಗಳಿಗೆ ಹೊಸ ವ್ಯಾಖ್ಯಾನ ನೀಡುವ ನಿಪುಣರು. ಹೀಗಾಗಿ ಭ್ರಷ್ಟಾಚಾರ ಆಳವಾಗಿ ಬೇರುಬಿಟ್ಟಿರುವುದು ಜನಜನಿತ ಸಂಗತಿ. ಪರ್ಯಾಯ ರಾಜಕಾರಣದ ಚಿಂತಕರಿಗೆ, ಅದರಲ್ಲಿ ಪಾಲ್ಗೊಳ್ಳುವವರಿಗೆ ಇವೆಲ್ಲ ಪಾಠವಾಗಬೇಕು. ಅಧಿಕಾರವೇ ಪ್ರಧಾನವಾಗದೆ ತತ್ವ, ನೀತಿ, ಸಿದ್ಧಾಂತಗಳಿಗಾಗಿ ಸೆಣಸುವ ಗಟ್ಟಿತನ ಅವರದಾಗಬೇಕು.

ಸಕಲರ ಒಳಿತಿಗಾಗಿ ತುಡಿಯುವ ಮನಸ್ಸಿರಬೇಕು. ನಾನು, ನನ್ನಿಂದ, ನನಗಾಗಿ ಎನ್ನುವ ಸ್ವಾರ್ಥ, ಅಹಂಕಾರವನ್ನು ತ್ಯಜಿಸಿ ದೇಶದ ಒಳಿತಿಗಾಗಿ ನಾನು ಯಾವ ತ್ಯಾಗಕ್ಕಾದರೂ ಸಿದ್ಧ ಎನ್ನುವ ತತ್ವಕ್ಕೆ ಬದ್ಧರಾಗಬೇಕು. ಏನಾದರೂ ಮಾಡಿ ಚುನಾವಣೆಯಲ್ಲಿ ಗೆಲ್ಲಬೇಕು, ಗೆದ್ದಮೇಲೆ ಹೇಗಾದರೂ ಸರಿ ಅಧಿಕಾರ ಹಿಡಿಯಬೇಕು ಎನ್ನುವ ಸಮಯಸಾಧಕತನ ಮನದಲ್ಲೂ ಸುಳಿಯಬಾರದು. 'ಕಾಪಿ ಹೊಡೆದು ಪಾಸಾಗುವುದಕ್ಕಿಂತ ಫೇಲಾಗುವುದು ಗೌರವಾರ್ಹ ಎನ್ನುವ ಭಾವನೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು' ಎಂದು ಅಬ್ರಹಮ್ ಲಿಂಕನ್ ಶಾಲಾ ಶಿಕ್ಷಕರಿಗೆ ಬರೆದ ಪತ್ರದ ಸಾರ ಪರ್ಯಾಯ ರಾಜಕಾರಣಕ್ಕೂ ಅನ್ವಯಿಸಬೇಕು. ಗೆಲುವಿಗಿಂತ ಗೆಲುವಿನ ವಿಧಾನ ಆದರ್ಶದ ಅಡಿಪಾಯವಾಗಬೇಕು.

ಪರ್ಯಾಯ ರಾಜಕಾರಣವನ್ನೇ ಅಧಿಕಾರ ಹಿಡಿಯುವ, ಸಂಪತ್ತನ್ನು ಸೂರೆಗೊಳ್ಳುವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಅವರಂಥ ಚೇತನಗಳ ತತ್ವಗಳಿಗೆ ಮಸಿ ಬಳಿಯುವ ಹುನ್ನಾರವಾಗಿಸಿಕೊಳ್ಳಬಾರದು. ಬದಲಾಗಿ ಆ ಚಿಂತಕರ ಆದರ್ಶಗಳನ್ನು ಅನುಷ್ಠಾನದಲ್ಲಿ ತರುವ ಸತ್ಸಂಕಲ್ಪ ತಳೆಯಬೇಕು. ಜಾತಿಗಿಂತ ನೀತಿ, ವ್ಯಕ್ತಿ ಹಿತಕ್ಕಿಂತ ಸಮಷ್ಟಿಯ ಹಿತ ಮುಖ್ಯವಾಗಬೇಕು. ಜನರು ಬಯಸಿದ್ದನ್ನು ಕೊಡದೆ ಅವರಿಗೆ ಮುಖ್ಯವಾಗಿ ಏನು ಬೇಕು ಎನ್ನುವುದನ್ನು ಯೋಚಿಸಿ ಅಂಥದನ್ನು ಮಾತ್ರ ಕೊಡುವ ಯೋಜನೆಗಳನ್ನು ರೂಪಿಸಬೇಕು. ಅಗ್ಗದ ಪ್ರಚಾರಪ್ರಿಯತೆಯ ಗುಂಗಿನಲ್ಲಿ ಸಾಲ ಮನ್ನಾ, ಸಬ್ಸಿಡಿ, ತಾಳಿ ಭಾಗ್ಯಗಳಂಥ ಯೋಜನೆಗಳಿಗೆ ವಿದಾಯ ಹೇಳಿ ಎಲ್ಲ ಜನರಿಗೂ ಕೆಲಸ ಕೊಡುವ ಯೋಜನೆಗಳನ್ನು ಜಾರಿಯಲ್ಲಿ ತರಬೇಕು. ಹಸಿದವರಿಗೆ ತುತ್ತು ಅನ್ನ ಕೊಡುವುದು ಸರ್ಕಾರದ ಜವಾಬ್ದಾರಿಯಲ್ಲ, ಸರ್ಕಾರ ಅನ್ನವನ್ನು ಸಂಪಾದಿಸುವ ಮಾರ್ಗವನ್ನು ತೋರಿಸಬೇಕು. ದುಡಿಮೆಯ ಮಹತ್ವ ತಿಳಿಸಬೇಕು. ಇದನ್ನು ಬಿಟ್ಟು ಕೈಯೊಡ್ಡಿದವರಿಗೆ ಅನ್ನ ಕೊಡುತ್ತಿದ್ದರೆ ಅವನು ಮತ್ತೆ ಮತ್ತೆ ಕೈ ಒಡ್ಡುವನು. ಅನ್ನ ಕೊಡದಿದ್ದರೆ ನನ್ನ ಸಾವಿಗೆ ಸರ್ಕಾರವೇ ಕಾರಣ ಎಂದು ದೂರುವನು. ಅದಕ್ಕಾಗಿ ಕಾಯಕವೇ ಕೈಲಾಸ ಎನ್ನುವ ತತ್ವವನ್ನು ಜನರ ಮನಸ್ಸಿಗೆ ನಾಟುವಂತೆ ತಿಳಿಸಿ ಕಾಯಕಕ್ಕೆ ಬೇಕಾದ ಕಾರ್ಯಯೋಜನೆಗಳನ್ನು ರೂಪಿಸಬೇಕು.

ಬಹುಸಂಖ್ಯಾತರನ್ನೊಳಗೊಂಡ ದಲಿತ ಮತ್ತು ರೈತ ಸಂಘಗಳು ಆರಂಭದ ಆದರ್ಶದ ದಾರಿಯಲ್ಲೇ ಮುನ್ನಡೆದಿದ್ದರೆ ಇಂದು ಕರ್ನಾಟಕದ ಚಿತ್ರಣವೇ ಬದಲಾಗುತ್ತಿತ್ತು. 'ಬರಬರ್ತ ರಾಯರ ಕುದುರೆ ಕತ್ತೆಯಾಯ್ತು' ಎನ್ನುವ ಸ್ಥಿತಿ ಅವುಗಳದ್ದಾಯಿತು. ಅಧಿಕಾರ ದಾಹ ಅಧಿಕವಾಗಿ, ಕೀರ್ತಿಶನಿಯ ಬೆನ್ನುಬಿದ್ದು ಅಸಂಘಟಿತ ಜನರ ದನಿಯಾಗಿದ್ದ ಇವು ಕ್ರಮೇಣ ಕೆಲವೇ ಕೆಲವು ಮುಖಂಡರ ದನಿಯಾದವು. ಅದರಿಂದಾಗಿ ಅವುಗಳ ಹೋರಾಟದ ಶಕ್ತಿಗುಂದಿತು. ಆದ್ದರಿಂದ ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು ಅಸಂಘಟಿತರ ಸಂಘಟನೆಗೆ ಸಾತ್ವಿಕ ರೀತಿಯಲ್ಲೇ ಹೆಜ್ಜೆ ಇಡುವ ಸಂಕಲ್ಪ ಮಾಡಬೇಕು. ಈಗ ಒಂದುಗೂಡುವವರು ಅಧಿಕಾರದಾಹಿಗಳಾಗದೆ, ಕೀರ್ತಿಶನಿಯ ಹಿಂದೆ ಹೋಗದೆ ತತ್ವ ಮತ್ತು ಸತ್ಯಪ್ರೇಮಿಗಳಾಗಿ ಜನಪರ ಕಾಳಜಿ ಮೈಗೂಡಿಸಿಕೊಂಡು ಬೈರಾಗಿಗಳಂತೆ ಬಾಳುವುದನ್ನು ರೂಢಿಸಿಕೊಳ್ಳಬೇಕು. ಅಂಥ ಗುಣಗಳನ್ನು ಸಾರ್ವಜನಿಕರಲ್ಲೂ ಬಿತ್ತಿ ಬೆಳೆಯಲು ಪಣತೊಡಬೇಕು. ನಾನು ಎನ್ನುವ ಅಹಂ ಬಿಟ್ಟು ನಾವು ಎನ್ನುವ ಐಕ್ಯತಾಭಾವನೆ ಬೆಳೆಸಿಕೊಳ್ಳಬೇಕು.

ಪರ್ಯಾಯ ರಾಜಕಾರಣದ ಸೂತ್ರದಾರರಿಗೆ ನಾಡಿನ ಸರ್ವತೋಮುಖ ಏಳಿಗೆ ಮುಖ್ಯವಾಗಬೇಕು. ಜಾತಿ, ಅಧಿಕಾರ, ಹಣ, ಹೆಂಡ, ಕೀರ್ತಿ, ಸ್ವಜನಪಕ್ಷಪಾತ ಎನ್ನುವ ಅನಿಷ್ಠದ ಗೋಡೆಗಳನ್ನು ನೆಲಸಮ ಮಾಡಬೇಕು. ಯಾವ ವ್ಯಾಮೋಹಕ್ಕೂ ಬಲಿಯಾಗದೆ 'ಜನಸೇವೆಯೇ ಜನಾರ್ಧನನ ಸೇವೆ' ಎನ್ನುವ ಭೃತ್ಯಾಚಾರಿಗಳಾಗಿ ನೈತಿಕ ನೆಲೆಗಟ್ಟಿನ ಮೇಲೆ ಹೋರಾಟ ನಡೆಸಬೇಕು. ಪಾರದರ್ಶಕತೆ ಬದುಕಿನ ಬಂಡವಾಳವಾಗಬೇಕು. ಸಾಮಾಜಿಕ ಕಳಕಳಿ ಅವರ ಧ್ಯೇಯವಾಗಬೇಕು. ರಾಜ್ಯದಿಂದ ನನಗೇನು ಎನ್ನುವ ಶಕ್ತಿಗಳನ್ನು ದೂರವಿಡಬೇಕು. ಅಗ್ಗದ ಪ್ರಚಾರಪ್ರಿಯತೆಯ ಹುಚ್ಚಿನವರನ್ನು ಹತ್ತಿರ ಬಿಟ್ಟುಕೊಳ್ಳಬಾರದು. ಎಲ್ಲ ತ್ಯಾಗಕ್ಕೂ ಸಿದ್ಧರಾದವರು ಒಂದಾಗಬೇಕು. ಒಂದು ಜಾತಿಯ, ವರ್ಗದ, ಗುಂಪಿನ ಹಿತ ಮುಖ್ಯವಾಗದೆ ಸಮಗ್ರ ದೇಶದ, ಮಾನವ ಜನಾಂಗದ ಒಳಿತು ಕಣ್ಮುಂದಿರಬೇಕು. ಒಬ್ಬರ ಮೇಲೆ ಮತ್ತೊಬ್ಬರನ್ನು ಎತ್ತಿಕಟ್ಟಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಸಮಯಸಾಧಕತನ, ಸ್ವಾರ್ಥಸಾಧನೆಗಾಗಿ ಓಲೈಸುವ ಗುಣ ಇರಬಾರದು. ಸಾರ್ವಜನಿಕರ ನೋವು, ನಲಿವುಗಳನ್ನು ತಿಳಿದು ಅವುಗಳಿಗೆ ಸೂಕ್ತ ಪರಿಹಾರ ಹುಡುಕುವ ಮೇಧಾವಿತನ ಇರಬೇಕು.

ಅನಕ್ಷರತೆ, ಬಡತನ, ನಿರುದ್ಯೋಗ, ಸಾಮಾಜಿಕ ಅಸಮಾನತೆಗಳ ವಿರುದ್ಧ ಹೋರಾಡುವ ಮನಸ್ಸಿರಬೇಕು. ಎಂಥ ಸಂದರ್ಭದಲ್ಲೂ ಅನುಕೂಲಸಿಂಧು ಸಿದ್ಧಾಂತದ ಬೆನ್ನು ಬೀಳದ ಬೈರಾಗಿತನ ಬೆಳೆಸಿಕೊಳ್ಳಬೇಕು. ಸತ್ಯವನ್ನು ಪ್ರತಿಪಾದಿಸುವ, ವಾಸ್ತವಿಕತೆಯನ್ನು ತೆರೆದಿಡುವ, ನಿಷ್ಠುರತೆಯಿಂದ ವರ್ತಿಸುವ ಗುಣವಿರಬೇಕು. ರಾಜಕಾರಣವೇ ಪ್ರಧಾನವಾಗದೆ ಜನರನ್ನು ನೈತಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮೊದಲು ಜಾಗೃತಗೊಳಿಸಬೇಕು. ಅನ್ಯಾಯದ ವಿರುದ್ಧ ಎದೆ ಸೆಟಸಿ ನಿಲ್ಲುವ, ಒಳಿತನ್ನು

(ಮುಂದಿನ ಪುಟಕ್ಕೆ)

ಬಹುಜನರ ವೇದಿಕೆಯಾಗಬೇಕು



○ ಜಂಬಣ್ಣ ಅಮರಚಿಂತ
ಸಾಹಿತಿಗಳು

ಚರ್ಚೆ

ಪರ್ಯಾಯ ರಾಜಕಾರಣ

೧. ತಳದ ಜನರ ತಳಮಳವೇ
ಪರ್ಯಾಯ ರಾಜಕಾರಣದ ತಳಹದಿಯಾಗಬೇಕು

ರಂಗಭೂಮಿ ಅದೇ ನಾಟಕ ಅದೇ
ವೇಷಧಾರಿಗಳು ಅದುಲು ಬದುಲು
ರಾಮಹೋಗಿ ರಾವಣನಾದ
ಮೌಲ್ಯಗಳು ಅದುಲು ಬದುಲು

ಇಂದಿನ ರಾಜಕೀಯ ಪಕ್ಷಗಳು ಒಂದೇ ವೃಕ್ಷಕ್ಕೆ ಬಿಟ್ಟ ವಿಷದ ಫಲಗಳು ಎಂದು ಹೇಳಬಹುದು. ಇತ್ತೀಚಿನ ಚುನಾವಣೆಗಳನ್ನು ಗಮನಿಸಿದಾಗ ಯಾವ ಚುನಾವಣೆ ಸಿದ್ಧಾಂತದ ಆಧಾರದ ಮೇಲೆ ನಡೆದಿಲ್ಲ. ಅಧಿಕಾರ ಹಿಡಿಯುವದೊಂದೇ ಅವುಗಳ ಸಿದ್ಧಾಂತ. ನೀತಿ ನಿಯಮಗಳು ಇಲ್ಲಿ ಅಪ್ರಸ್ತುತ.

ಪ್ರಜೆಗಳೇನು ? ಪ್ರಜಾಪ್ರಭುತ್ವವೇನು ?
ದಾಳ ಉರುಳಿಸುವ ದಾಳಿಗೆ
ದೇಶದ ಬದುಲು ಕೋಶ ಬೇಡುವವರು
ದೇಶವನು ಮಾಡುವರು ಬುಡಮೇಲು

ಕಲುಷಿತಗೊಂಡ ಇಂತಹ ಸಮಕಾಲೀನ ರಾಜಕೀಯ ವ್ಯವಸ್ಥೆಯಲ್ಲಿ ಪರ್ಯಾಯವಾಗಿ ಹೊಸ ವೇದಿಕೆಯನ್ನು ಸೃಷ್ಟಿಸುವ ನಿಟ್ಟಿನಲ್ಲಿ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘಗಳು ಹೆಜ್ಜೆಯಿಟ್ಟಿರುವುದು ಸ್ವಾಗತಾರ್ಹ. ಇದೊಂದು ಐತಿಹಾಸಿಕ ಘಟನೆ.

೨. ಪ್ರಸ್ತುತ ಚಾಲ್ತಿಯಲ್ಲಿರುವ ರಾಜಕಾರಣ ಮೇಲ್ವರ್ಗದವರ ಹಿತಾಸಕ್ತಿಯನ್ನು ಕಾಪಾಡುವಂಥದ್ದು. ಕೋಮುವಾದದ ಕೇಸರಿ ಬಣ್ಣ ಬಳಿದುಕೊಂಡು ಅಧಿಕಾರದ ಗದ್ದುಗೆ ಹಿಡಿಯುವ ಹುನ್ನಾರಗಳನ್ನು ಪಕ್ಷಗಳು ಮೈಗೂಡಿಸಿಕೊಂಡಿವೆ. ಪ್ರೀತಿಯನ್ನು ಹಂಚದೆ ತ್ರಿಶೂಲ ಹಂಚುವ ಇವುಗಳ ನೀತಿ ದೇಶಭಕ್ತಿಯಾಗಿದೆ.

ಇವುಗಳ ವಿರುದ್ಧ ನೆಲೆಯಿಂದ ಪರ್ಯಾಯ ರಾಜಕಾರಣ ರೂಪುಗೊಳ್ಳಬೇಕು, ಪರ್ಯಾಯ ವ್ಯವಸ್ಥೆ ಅಂದರೆ ಜಡಗೊಂಡ ವ್ಯವಸ್ಥೆ ವಿರುದ್ಧದಂಗೆ ಎದ್ದು ಹೊಸತೆನ್ನು ನಿರ್ಮಿಸುವುದಾಗಿದೆ. ಜಾತ್ಯಾತೀತವಾದ, ಧರ್ಮಾತೀತ ವಾದ ಹಾಗೂ ಜನಸಮುದಾಯದ ಹಿತಾಸಕ್ತಿಯನ್ನು ಗಮದಲ್ಲಿಟ್ಟುಕೊಂಡು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಮುನ್ನಡೆಯಬೇಕು. ತಳದ ಜನರ ತಳಮಳವೇ ಪರ್ಯಾಯ ರಾಜಕಾರಣದ ತಳಹದಿಯಾಗಬೇಕು.

೩. ನಾಡು, ನುಡಿ, ಸಂಸ್ಕೃತಿಯ ಬಗ್ಗೆ ಗೌರವವುಳ್ಳ ಹಾಗೂ ಜನಸಮುದಾಯದ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವ ಮುತ್ಸದ್ದಿಗಳಿಂದ ಮತ್ತು ಸಂಘಟಿತ ಶಕ್ತಿಗಳಿಂದ ಪರ್ಯಾಯ ರಾಜಕಾರಣ ರೂಪುಗೊಳ್ಳುವುದು.

೪. ಮೊದಲು ಸಂಘಟನೆ ಕೆಳಸ್ತರದಿಂದ ಪ್ರಾರಂಭವಾಗಬೇಕು. ಯುವಶಕ್ತಿ ಈ ಸಂಘಟನೆಗೆ ಚಾಲನೆ ನೀಡಬೇಕು. ನಮ್ಮ ಶತೃಗಳು ಯಾರು? ಮಿತ್ರರು ಯಾರೆಂಬುದನ್ನು ಗುರುತಿಸಿಕೊಂಡು, ಸೈದ್ಧಾಂತಿಕ ಹಿನ್ನೆಲೆಯಿಂದ ಒಂದುಗೂಡಿ ಶಕ್ತಿಗಳು ಜನರ ಸಾಮಾನ್ಯರ ಬದುಕಿನ ಸಮಸ್ಯೆಗಳ ಪರಿಹಾರಕ್ಕೆ ಹೋರಾಟ ಮಾಡಬೇಕು.

೫. ಸಂಘಟನೆ ಎಲ್ಲರಿಗೆ ಒಪ್ಪಿಗೆಯಾಗುವ ಸಿದ್ಧಾಂತದ ಮೇಲೆ ರೂಪಗೊಂಡು ಅದು ಬಹು ಜನರ ವೇದಿಕೆ ಯಾಗಬೇಕು.

. ತುಳಿತಕ್ಕೊಳಗಾದವರ ಧ್ವನಿಯಾಗಬೇಕು. ಕೃಷಿ, ಉದ್ಯೋಗ, ಶಿಕ್ಷಣ, ಸಾಮಾಜಿಕ, ಸಾಂಸ್ಕೃತಿಕ ವಿಷಯಗಳ ಕುರಿತು ನಿರ್ದಿಷ್ಟ ಜನಹಿತ ಸೂಚಿ ಇರಬೇಕು ಮತ್ತು ಅದಕ್ಕೆ ನಿರ್ದಿಷ್ಟವಾದ ರಾಜಕೀಯ ಕಾರ್ಯಕ್ರಮ ಬೇಕು. ನಿಷ್ಠೆಯಿಂದ ದುಡಿಯುವ ಯುವಶಕ್ತಿ ಬೇಕು. ಇಲ್ಲವಾದಲ್ಲಿ ಮರಳಿನ ಮೇಲೆ ಮನೆಕಟ್ಟಿದಂತಾಗುವುದು. □

ಮರಳುಗಾಡಿನ ಓಯಸಿಸ್

(ಹಿಂದಿನ ಪುಟದಿಂದ)

ಪುರಸ್ಕರಿಸುವ, ಸಮಷ್ಠಿ ಹಿತವನ್ನು ಕಾಯುವ ಪ್ರಜ್ಞೆ ಸಾರ್ವಜನಿಕರಲ್ಲಿ ಮೂಡುವಂತೆ ಪ್ರಯತ್ನಿಸಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ಸಾಂಸ್ಕೃತಿಕ ಸಂಘಟನೆಗೆ ಒತ್ತು ಕೊಡಬೇಕು. ಈ ರೀತಿಯ ಚಿಂತನೆ ಚಿಂತನೆಯಲ್ಲೇ ಪರ್ಯವಸಾನಗೊಳ್ಳದೆ ಅನುಷ್ಠಾನದಲ್ಲಿ ಬರುವಂತೆ ಕಾರ್ಯೋನ್ಮುಖರಾಗಬೇಕು.

ರಾಜಕಾರಣಕ್ಕೆ ಧುಮುಕುವುದು ಎಂದರೆ ಜನಪರ ದನಿ ತಗ್ಗುವುದು, 'ಪರ್ಯಾಯ ರಾಜಕಾರಣ' ಎಂದರೆ ಅತಂತ್ರ ಸ್ಥಿತಿಯಲ್ಲಿ ಹೇಗೋ ಅಧಿಕಾರ ನಡೆಸುವುದು ಎನ್ನುವ ಪರಿಸ್ಥಿತಿ ಇಂದಿದೆ. ಹಣ, ಹೆಂಡ, ಜಾತಿ, ಬಲಪ್ರದರ್ಶನಗಳೇ ರಾಜಕಾರಣ ಎನ್ನುವ ಅರ್ಥ ಬಂದಿದೆ. ಇದನ್ನು ಹೋಗಲಾಡಿಸಿ ರಾಜ್ಯಾಂಗ, ಕಾರ್ಯಾಂಗ, ನ್ಯಾಯಾಂಗದ ವ್ಯಾಪ್ತಿಯಲ್ಲಿ ಅವುಗಳಿಗೆ ಗೌರವ ಬರುವಂತೆ ಕಾರ್ಯ ಮಾಡಬೇಕು. ಅವುಗಳನ್ನು ತಮ್ಮ ಹಿತಕ್ಕನುಗುಣವಾಗಿ ತಿರುಚುವ ಸಾಹಸ ಮಾಡಬಾರದು. ಅನ್ಯಾಯ, ಅಕ್ರಮ, ಅನೈತಿಕತೆಯ ವಿರುದ್ಧ ಮಾನವೀಯ ನೆಲೆಯಲ್ಲಿ ಹೋರಾಡುವ ಸಂಘಟನೆಯಾಗಬೇಕು. ಇದರಿಂದ ನಿಧಾನವಾಗಿಯಾದರೂ ಪರ್ಯಾಯ ರಾಜಕಾರಣ ಒಂದು ಬಲಿಷ್ಠ ಶಕ್ತಿಯಾಗಿ ರೂಪುಗೊಂಡು ಕಾಲಕ್ರಮೇಣ ಸತ್ಫಲವನ್ನು ನೀಡಬಲ್ಲುದು. ಈ ನೆಲೆಯಲ್ಲಿ ದಲಿತ ಮತ್ತು ರೈತ ಸಂಘಗಳು ಒಂದಾಗಿ ಪರ್ಯಾಯ ರಾಜಕೀಯದ ಚಿಂತನೆ ಮಾಡಬೇಕು. ಆದರೆ ಇದು ಆರಂಭ ಶೂರತ್ವವಾಗಲಿ, ಅಧಿಕಾರ ಹಿಡಿಯುವ ತಂತ್ರವಾಗಲಿ ಆಗಬಾರದು. ಇದು ಗಾಂಧೀಜಿಯವರು ಹೇಳಿರುವ ಸಪ್ತಪಾತಕಗಳನ್ನು ಮೆಟ್ಟಿ ನಿಲ್ಲುವಂತಾಗಬೇಕು. □



'ಸಂವಾದ' ದೊರೆಯುವ ಸ್ಥಳ

☞ ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
❖ ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು-೫೬೦ ೦೦೧, ☎ : ೨೨೨೦೩೫೮೦
❖ ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೧೩೮೨ ❖ ಸ್ಟೇಷನ್ ರಸ್ತೆ ಗುಲ್ಬರ್ಗ-೨, ☎ : ೪೨೪೩೦೨
❖ ಕೆ.ಎಸ್.ರಾವ್ ರಸ್ತೆ ಮಂಗಳೂರು-೧, ☎ : ೨೪೪೧೦೧೬ ❖ ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೯೪
☞ ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು - ೫೬೦ ೦೨೦
☞ ಕೆಎಸ್‌ಆರ್‌ಟಿಸಿ ಬುಕ್ ಸ್ಟಾಲ್, ಫ್ಲಾಟ್ ಫಾರ್ಮ್ ನಂ. ೧, ಸ್ಟಾಲ್ ನಂ. ೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು



೧. ಪ್ರತಿ ಕ್ಷೇತ್ರದಲ್ಲಿ [illegible] ರಾಜಕಾರಣದ ಶುದ್ಧೀಕರಣ ಆಗಬೇಕು. ಈ ಎಲ್ಲದಕ್ಕೆ ಒಂದು [illegible] ನಮ್ಮ ಬುದ್ಧಿಜೀವಿಗಳು [illegible] ಮಾತನಾಡುವವರು [illegible] ಚಾಲನೆಯೊದಗಿಸಬೇಕು. ಈ ಪ್ರಯತ್ನ ಯಶಸ್ವಿಯಾದಲ್ಲಿ ನಾಡನ್ನು ಕಾಡುತ್ತಿರುವ ಹಲಬಗೆಯ ಸಮಸ್ಯೆಗಳು ಪರಿಹಾರ ಕಾಣಬಲ್ಲವು.

೨. ಚಾಲ್ತಿಯಲ್ಲಿರುವ ರಾಜಕಾರಣವೆಂದರೆ ಸಜ್ಜನರು ಅಸಹ್ಯ ಪಡುವ ಸ್ಥಿತಿ ಇದೆ. ಆದರ್ಶ ರಾಜಕಾರಣ ನಮ್ಮೆಲ್ಲರ ಹಂಬಲ. ಈ ನಿಟ್ಟಿನಲ್ಲಿ ಪರ್ಯಾಯ ರಾಜಕಾರಣ ರೂಪಿಸಬೇಕೆಂದರೆ ಚಾಲ್ತಿ ರಾಜಕಾರಣದೊಂದಿಗೆ ಯಾವ ಕಾರಣಕ್ಕೂ ಒಪ್ಪಂದ ಮಾಡಿಕೊಳ್ಳದೆ ಇರುವುದು. ಮೌಲ್ಯಯುತ ರಾಜಕಾರಣಕ್ಕೆ ಮನ್ನಣೆ ಇದೆ. ಜನರಿಗೆ ಅದು ಬೇಕಾಗಿದೆ ಎಂಬುದನ್ನು ಮೊನ್ನೆಯ ಚುನಾವಣೆಯಲ್ಲಿ ಕಂಡಿದ್ದೇನೆ. ಮೌಲ್ಯಯುತ ರಾಜಕಾರಣ ಕೇವಲ ಕನಸುಗಾರರ ಮೊಗಸಾಲೆಯ ಮಾತಾಗುಳಿಯದೇ ವ್ಯವಸ್ಥಿತ ಸಮರತಂತ್ರ ರೂಪಿಸಿಕೊಂಡು ಕಣಕ್ಕಿಳಿಯಬೇಕಿದೆ. ಅದರ ಮೊದಲ ಹಂತವಾಗಿ ಎಲ್ಲೆಡೆ ಮೌಲ್ಯಯುತ ರಾಜಕಾರಣಕ್ಕೆ ಪೂರಕವಾದ ವಾತಾವರಣ ಸೃಷ್ಟಿಸಿಕೊಳ್ಳಬೇಕು.

ಹಣ, ಹೆಂಡ, ಜಾತಿ ಆಧಾರಿತ ರಾಜಕಾರಣದ ಕಲ್ಪನೆಯನ್ನೇ ಬುಡಮೇಲು ಮಾಡಬೇಕು. ಒಂದು ವ್ಯಕ್ತಿ ಅಥವಾ ಒಂದು ಗುಂಪು ಶಕ್ತಿ ಕೇಂದ್ರವಾಗುವುದನ್ನು ತಡೆಗಟ್ಟಿ ಅಪ್ಪಟ ಪ್ರಜಾಸತ್ತಾತ್ಮಕ ರೀತಿಯಲ್ಲಿ ಕಾರ್ಯಾಚರಣೆ ನಡೆಯುವಂತಿರಬೇಕು. ಈ ತಾತ್ವಿಕ ಬದ್ಧತೆಯಿಲ್ಲದೆ, ಇರುವ ಸನ್ನಿವೇಶವನ್ನು ತಮ್ಮ ಸ್ವಹಿತಾಸಕ್ತಿಗೆ ಬಳಸಿಕೊಳ್ಳಲು ಬಯಸುವ ಬೂಟಾಟಿಕೆಯ ಗೋಸುಂಬೆಗಳನ್ನು ದೂರವಿಡಬೇಕು. ಈ ರಾಜಕಾರಣದ ಕೆಳಹಂತದಿಂದ ಹಿಡಿದು ಮೇಲಿನ ಹಂತದವರೆಗೆ ವ್ಯಕ್ತಿಯ ಅರ್ಹತೆಗಳೇ ಪ್ರಾಮುಖ್ಯತೆ ಪಡೆಯಬೇಕು.

೩. ಉದ್ದಿಮೆದಾರರನ್ನು, ಅಬಕಾರಿ ಕುಳಗಳನ್ನು, ಮಠಾಧೀಶರನ್ನು, ಕ್ಯಾಪಿಟೇಶನ್ ಕುಳಗಳನ್ನು ಓಲೈಸಿ ಅವರ ಮರ್ಜಿಯಲ್ಲಿಯೇ ಚುನಾವಣೆ ನಡೆಸುವ ಶೈಲಿಗಿಂತ ನೇರವಾಗಿ ಜನತೆಯತ್ತ ನಡೆಯುವ ನಿರ್ಧಾರ ಕೈಗೊಳ್ಳಬೇಕು. ಮತದಾರನೇ ಕೊನೆಯ ಪಕ್ಷ ಒಂದು ರೂಪಾಯಿಯನ್ನಾದರೂ ನೀಡಿ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತಿರಬೇಕು. ರಾಷ್ಟ್ರ, ರಾಜ್ಯ ಮಟ್ಟದಿಂದ ಹಿಡಿದು ಹೋಬಳಿ ಮಟ್ಟದಲ್ಲಿಯೂ ಇರುವ ವೈಚಾರಿಕರನ್ನು ಆಕರ್ಷಿಸಬೇಕು. ಚುನಾವಣೆ ಎಂದರೆ ಪರಿವರ್ತನೆಗಾಗಿರುವ ಜನಾಂದೋಲನ ಎಂಬಂತಾಗಬೇಕು. ಜನಪರ ನಿಲುವಿರುವ ಎಲ್ಲ ಬಗೆಯ ಶಕ್ತಿಗಳು, ಸಂಘಟನೆಗಳು ಒಂದುಗೂಡಬೇಕು. ರಾಷ್ಟ್ರದ ಐಕ್ಯತೆಗೆ, ಭಾವೈಕ್ಯಕ್ಕೆ ಧಕ್ಕೆಯುಂಟುಮಾಡುವ ಧರ್ಮದ ನೆಲೆಯ ಮೇಲೆ ಸಿದ್ಧಾಂತ ರೂಪಿಸಿಕೊಂಡು ಧರ್ಮಾಂಧತೆ ಮತ್ತು ಜಾತಿವಾದ ಬಂಡವಾಳ ಮಾಡಿಕೊಂಡವರನ್ನು ಬಿಟ್ಟು

ಜನಪರ ಚಳವಳಿಗಳಲ್ಲಿನ ಹುಸಿ ಬುದ್ಧಿ ಜೀವಿಗಳನ್ನು, ಹುಸಿ ಹೋರಾಟಗಾರರನ್ನು ಗುರುತುಮಾಡಿ ಹೊರಗಿಡಬೇಕು. ಚಳವಳಿಯೊಂದು ಸೃಷ್ಟಿಯಾಗುವುದು ಜನರ ಬೆಂಬಲದಿಂದ. ಈ ಬೆಂಬಲ ಪ್ರಾಪ್ತಿಯಾಗಿ ಯಾವ ಉದ್ದೇಶಕ್ಕೆ ಆ ಚಳವಳಿ ಹುಟ್ಟಿಕೊಂಡಿತ್ತೋ ಅದು ನಿರ್ದಿಷ್ಟ ಸಾಧನೆಯನ್ನು ಸಾಧಿಸಿದ ಬಳಿಕ ಆ ಸಂಘಟನೆಯನ್ನು ಖಾಸಗಿ ಆಸ್ತಿಯಾಗಿ ಮಾಡಿಕೊಂಡವರ ಕುಟಿಲತೆಯೇ ಇವತ್ತಿನ ಸ್ಥಿತಿಗೆ ಕಾರಣ. ಇನ್ನು ನಿಜವಾಗಿಯೂ ಕಾಳಜಿ, ಬದ್ಧತೆ ಇದ್ದವರಿಗೆ ಆತ್ಮ ಪ್ರತಿಷ್ಠೆಯ ರೋಗ. ಪರ್ಯಾಯ ರಾಜಕಾರಣಕ್ಕೆ ಮುಂದಾಗುವವರು ಮೊದಲು ತಮ್ಮ ಅಹಂ ಬದಿಗಿರಿಸಿ ವಿನೀತ ಭಾವದಿಂದ ಕಾರ್ಯೋನ್ಮುಖರಾಗಬೇಕು. ವ್ಯಕ್ತಿ ಮತ್ತು ನಿರ್ದಿಷ್ಟ ಸಂಘಟನೆಗಿಂತ ಒಗ್ಗೂಡುವ ಪ್ರಯತ್ನವೇ ಮುಖ್ಯವೆಂದು ಭಾವಿಸುವಂತಾಗಬೇಕು.



❍ ಮೋಹನ ನಾಗಮ್ಮನವರ
ಸಾಹಿತಿ, ಚಿಂತಕರು

ಮುಂದಾಗುವವರು ಮೊದಲು ತಮ್ಮ ಅಹಂ ಬದಿಗಿರಿಸಿ ವಿನೀತ ಭಾವದಿಂದ ಕಾರ್ಯೋನ್ಮುಖರಾಗಬೇಕು. ವ್ಯಕ್ತಿ ಮತ್ತು ನಿರ್ದಿಷ್ಟ ಸಂಘಟನೆಗಿಂತ ಒಗ್ಗೂಡುವ ಪ್ರಯತ್ನವೇ ಮುಖ್ಯವೆಂದು ಭಾವಿಸುವಂತಾಗಬೇಕು. ಹೋರಾಟದ ಹಾದಿಗೆ ಸಾವಿರಾರು ನದಿಗಳು ಎಂದು ಮಾತನಾಡಿದವರೇ ಕೊಂಚವೇ ಸೈದ್ಧಾಂತಿಕ ಭಿನ್ನತೆಗಾಗಿ ದಶಕಗಟ್ಟಲೇ ಮುಖ ತಿರುವಿದವರು ಪರ್ಯಾಯ ರಾಜಕಾರಣದ ಉದ್ದೇಶ ಸಾಧನೆಗಾಗಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಮಾದರಿಯಲ್ಲಿ ಸೈದ್ಧಾಂತಿಕತೆಯನ್ನು ರೂಪಿಸಬೇಕು.

ಈ ಶಕ್ತಿಗಳು ಒಗ್ಗೂಡಲು ಪ್ರಯತ್ನಿಸುವ ವೇದಿಕೆ, ವ್ಯಕ್ತಿಗಳು ಮತ್ತು ಸಂಪನ್ಮೂಲಗಳು ಸಂಶಯದಿಂದ ಮುಕ್ತವಾಗಿರಬೇಕು. ಜನಾಂದೋಲವೊಂದು ರೂಪುಗೊಳ್ಳಲು ಸಹಕರಿಸಲು, ಶ್ರಮಿಸಲು ಸಿದ್ಧವಿರುವ ಪ್ರತಿಯೊಬ್ಬರನ್ನೂ ಸಂಪರ್ಕಿಸಿ ಒಂದೇ ವೇದಿಕೆಯಡಿ ನಿಲ್ಲುವಂತಾಗಬೇಕು.

೫. ವರ್ತಮಾನದ ರಾಜಕಾರಣ - ರಾಜಕಾರಣಿ ಮತ್ತು ವರ್ತಮಾನದ ರಾಜಕೀಯ ಮೌಲ್ಯದೊಂದಿಗೆ No Compromise ಮತ್ತು ಸಂಪೂರ್ಣ ಆದರ್ಶ ರಾಜಕಾರಣಕ್ಕೆ ಸಮರ್ಪಣೆ ಎಂಬುದೇ ಧ್ಯೇಯವಾಗಬೇಕು. ಅಪಾದನೆ ಮಾಡಲು ಅವಕಾಶವಿರಬೇಕು. ಅಪಾದನೆ ಮಾಡಿದವರೇ ವಿಚಾರಣೆ ನಡೆಸಿ ಸಾಬೀತು ಪಡಿಸುವಂತಾಗಿರಬೇಕು. ವಿಧಾನಸೌಧ ಮತ್ತು ಪಾರ್ಲಿಮೆಂಟುಗಳಿದ್ದರೂ ಕೂಡ ಅದಕ್ಕೆ ಪರ್ಯಾಯವಾಗಿ people's parliament ಮಾದರಿಯ ಜನಾಧಿವೇಶನಗಳ ನಿರ್ಣಯಗಳು ಸರಕಾರಕ್ಕೆ ಬಂಧನಕಾರಿಯಾಗಿರಬೇಕು.

ಹೇಗಾದರೂ ಸರಿ ಚುನಾವಣೆಯಲ್ಲಿ ಗೆದ್ದೇ ಗೆಲ್ಲಬೇಕು. ಶತಾಯಗತಾಯ ಅಧಿಕಾರ ಹಿಡಿದೇ ತೀರಬೇಕೆಂಬುದು ಅಪಾಯಕಾರಿಯಾದದ್ದು. ಈ ಮನೋಭಾವವೇ ಎಲ್ಲ ಸಾಮಾಜಿಕ ಜಾಡ್ಯಗಳ ಮಹಾತಾಯಿ. ಗೆಲುವು ಮತ್ತು ಅಧಿಕಾರ ಹಿಡಿಯುವ ಲಾಲಸೆಯ ಹೊರತಾಗಿ ಆಳುವ ಸತ್ತೆಯ ಎದುರು ಒತ್ತಡದ ಗುಂಪಾಗಿ ಕೆಲಸ ಮಾಡುವ ದೃಢನಿರ್ಧಾರ ಬೇಕು. ಚುನಾವಣೆಯನ್ನು ಚುನಾವಣೆಯ ಗತಿಯನ್ನು ಕಾರ್ಯಕರ್ತರೇ ನಿರ್ಧರಿಸಿ ಅವರೇ ಸಂಪನ್ಮೂಲ ರೂಢಿಸಿಕೊಂಡು ಚುನಾವಣೆ ಗೆಲ್ಲುವ ನಿಲುವು ಬೇಕು. ಈ ರಾಜಕಾರಣದಲ್ಲಿ ಧುರೀಣತ್ವ ಮಾರ್ಗದರ್ಶಕವಾಗಿರಬೇಕು. ಕಾರ್ಯಕರ್ತರು ಮತ್ತು ಜನತೆಯೇ ಸಾರ್ವಭೌಮರು. ಅವರೇ ಪ್ರತಿಹಂತದಲ್ಲಿ ಪಾಲ್ಗೊಳ್ಳುವಂತೆ ವ್ಯವಸ್ಥೆ ಏರ್ಪಡಬೇಕು. ಮೇಲಿನಿಂದ ನಿರ್ಣಯಗಳು ರೂಪುಗೊಂಡು ಕೆಳಹಂತದ ಕಾರ್ಯಕರ್ತರ ಮೇಲೆ ಹೇರಲ್ಪಡುವುದರ ಬದಲಿಗೆ ಕೆಳಹಂತದಿಂದಲೇ ಅಭಿಪ್ರಾಯಗಳು ರೂಪುಗೊಳ್ಳಬೇಕು. ಈಗ ಚಾಲ್ತಿಯಲ್ಲಿರುವ ರಾಜಕಾರಣದ ಶ್ರೇಣಿಯ ಪಿರಾಮಿಡ್ ಸಂಪೂರ್ಣವಾಗಿ ತಲೆಕೆಳಗಾಗಬೇಕು.

ಆದರ್ಶ ರಾಜಕಾರಣದ ಪ್ರಯತ್ನ

ಮಿಕ್ಕುಳಿದ ಎಲ್ಲ ಪ್ರಗತಿಪರರೂ ಒಗ್ಗೂಡಿ ಪರ್ಯಾಯ ರಾಜಕಾರಣ ರೂಪಿಸಬೇಕಿದೆ.

೪. ಜನಪರ ಚಳವಳಿಗಳಲ್ಲಿನ ಹುಸಿ ಬುದ್ಧಿ ಜೀವಿಗಳನ್ನು, ಹುಸಿ ಹೋರಾಟಗಾರರನ್ನು ಗುರುತುಮಾಡಿ ಹೊರಗಿಡಬೇಕು. ಚಳವಳಿಯೊಂದು ಸೃಷ್ಟಿಯಾಗುವುದು ಜನರ ಬೆಂಬಲದಿಂದ. ಈ ಬೆಂಬಲ ಪ್ರಾಪ್ತಿಯಾಗಿ ಯಾವ ಉದ್ದೇಶಕ್ಕೆ ಆ ಚಳವಳಿ ಹುಟ್ಟಿಕೊಂಡಿತ್ತೋ ಅದು ನಿರ್ದಿಷ್ಟ ಸಾಧನೆಯನ್ನು ಸಾಧಿಸಿದ ಬಳಿಕ ಆ ಸಂಘಟನೆಯನ್ನು ಖಾಸಗಿ ಆಸ್ತಿಯಾಗಿ ಮಾಡಿಕೊಂಡವರ ಕುಟಿಲತೆಯೇ ಇವತ್ತಿನ ಸ್ಥಿತಿಗೆ ಕಾರಣ.

ಇನ್ನು ನಿಜವಾಗಿಯೂ ಕಾಳಜಿ, ಬದ್ಧತೆ ಇದ್ದವರಿಗೆ ಆತ್ಮ ಪ್ರತಿಷ್ಠೆಯ ರೋಗ. ಪರ್ಯಾಯ ರಾಜಕಾರಣಕ್ಕೆ

ಪಕ್ಷದ ಪದಾಧಿಕಾರಿಯಾಗಲು, ಚುನಾವಣೆಗೆ ಸ್ಪರ್ಧಿಸಲು ಕಡಿಮೆ ಆಸ್ತಿಯೇ ಅರ್ಹತೆಯಾಗಬೇಕು. ವ್ಯಕ್ತಿಯ ಜನಪರ ಕಾಳಜಿಯ ಕೃತ್ಯಗಳೇ ಮಾನದಂಡವಾಗಬೇಕು. ಪಕ್ಷದ ಸಾಮಾನ್ಯ ಸದಸ್ಯನಾಗಲೂ ಸಹ ಅರ್ಹತೆಯನ್ನು ನಿಗದಿಪಡಿಸಬೇಕು. ವರ್ತಮಾನದ ರಾಜಕಾರಣದ ಮಾದರಿ

(ಮುಂದಿನ ಪುಟಕ್ಕೆ)

ಆಶಾದಾಯಕ ಬೆಳವಣಿಗೆ



ಚರ್ಚೆ

ಪರ್ಯಾಯ ರಾಜಕಾರಣ

○ ಪ್ರೊ|| ಟಿ.ಎಸ್. ಲೋಹಿತಾಶ್ವ
ಚಲನಚಿತ್ರ ನಟರು, ಚಿಂತಕರು

೧. ಮೇಲ್ನೋಟಕ್ಕೆ ಪರಸ್ಪರ ವಿರುದ್ಧ ಆಸಕ್ತಿಗಳನ್ನು ಹೊಂದಿದಂತೆ ಕಂಡರೂ ಆಳದಲ್ಲಿ ಎರಡೂ ಸಂಘಟನೆಗಳು ಎದುರಿಸುತ್ತಿರುವ ಸಮಸ್ಯೆಗಳು ಒಂದೇ ಎಂಬುದನ್ನು ತಡವಾಗಿಯಾದರೂ ಅರಿತು ಒಂದಾಗುವ ದಿಕ್ಕಿನಲ್ಲಿ ನಡೆಯಲು ಹೊರಟಿರುವುದು ನಿಜಕ್ಕೂ ಆಶಾದಾಯಕ ಬೆಳವಣಿಗೆ.

೨. ಚುನಾವಣಾ ಪ್ರಣಾಳಿಕೆಗಳಿಗಷ್ಟೇ ಮೀಸಲಾದ ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತರುವ ಯಾವ ಯತ್ನವನ್ನೂ ಮಾಡದೆ, ಕೇವಲ ವ್ಯಕ್ತಿ ಕೇಂದ್ರಿತ, ಅಧಿಕಾರ ಕೇಂದ್ರಿತ, ಜನವಿಮುಖೀ ರಾಜಕಾರಣದಿಂದ ಮಿತಿಯಿಲ್ಲದ ಭ್ರಷ್ಟತೆಯನ್ನು ಮೈತುಂಬಾ ಮೆತ್ತುಕೊಂಡಿರುವ ಸದ್ಯದ ರಾಜಕಾರಣದ ನೆರಳೂ ಸೋಂಕದಷ್ಟು ವಿಭಿನ್ನವಾದ ಜನಮುಖಿ ಪರ್ಯಾಯದ ಅವಶ್ಯಕತೆ ಇದೆ. ಇಂದಿನ ಪಕ್ಷಗಳು, ಸರಕಾರಗಳು ತನಗೆ ಅಧಿಕಾರ ನೀಡಿದ ಜನತೆಯನ್ನೇ ಶೋಷಿಸುತ್ತಾ ಅವರೆಲ್ಲ ದುಃಖ ದುಮ್ಮಾನಗಳಿಗೆ ಬೆನ್ನು ತಿರುಗಿಸಿರುವುದು ಸದ್ಯದ ದುರಂತ.

ನಿಜವಾದ ಅರ್ಥದಲ್ಲಿ ಪ್ರಜಾಪ್ರಭುತ್ವವನ್ನು ಪ್ರತಿಪಾದಿಸುವ ಪರ್ಯಾಯ ರಾಜಕಾರಣ ಬೇಕಿದೆ. ಸ್ವಾರ್ಥ ಸಾಧನೆಯ ಕಣಜವಾಗದೆ ಅಧಿಕಾರ, ಹಣ ಸಂಗ್ರಹದ ವೇದಿಕೆಯಾಗಿದೆ. ಜನಸೇವೆಯ ಪ್ರಾಮಾಣಿಕ ಆಶಯದ ರಾಜಕಾರಣ ಬೇಕಿದೆ. ಆಡುವುದೊಂದು ಮಾಡುವುದೊಂದು ಎಂಬ ಇಬ್ಬಂದಿತನದಿಂದ ದೂರವಿದ್ದು ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವ, ಜನತೆಯ ನೋವು ಸಂಕಷ್ಟಗಳನ್ನು ದೂರಮಾಡಲು ಯತ್ನಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಪರ್ಯಾಯದ ಅವಶ್ಯಕತೆ ಇದೆ. ರಾಜಕಾರಣ ಎಂಬ ಪದಕ್ಕೆ ಇರುವ ಪರಂಪರಾನುಗತ ಅರ್ಥವನ್ನೇ ಬದಲಿಸಿ ನಿಜ ಪರ್ಯಾಯ ಚಿಂತನೆ ನಡೆಸಬೇಕಿದೆ.

೩. ನಾಯಕತ್ವದ ಬಯಕೆ ಇಲ್ಲದ, ಸ್ವಂತ ಹಿತಾಸಕ್ತಿಗಳಿಲ್ಲದ, ಸಮಷ್ಟಿಯ ಪ್ರಗತಿಯನ್ನು ಬಯಸುವ ಎಲ್ಲರ ಏಳಿಗೆಯಲ್ಲಿ ನನ್ನ ಏಳಿಗೆ ಅಡಗಿದೆ ಎಂದು ತಿಳಿಯುವ ವ್ಯಕ್ತಿಗಳಿಂದ ಮಾತ್ರ ಪರ್ಯಾಯ ರಾಜಕಾರಣ ರೂಪಿಸಲು ಸಾಧ್ಯ. ಅಧಿಕಾರ ಲಾಲಸೆಯಿಂದ ದೂರವಿರುವವರು ಮಾತ್ರವೇ ಚಳವಳಿಯ ಮಾರ್ಗದರ್ಶಕರಾಗಿರಬೇಕು.

೪. ವ್ಯಕ್ತಿ ಪ್ರತಿಷ್ಠೆಗಳನ್ನು ಮರೆತು ನಡೆಯಬೇಕು. ಒಡೆದು ಹೋಳಾಗಿರುವ, ಅಸಹಾಯಕತೆಯಿಂದ ಕೈಚೆಲ್ಲಿ ಕುಳಿತಿರುವ ಎಲ್ಲಾ ಪ್ರತಿಭೆಗಳನ್ನು ಒಂದುಗೂಡಿಸಬೇಕು. ಬಹುಶಃ ಸಾಂಸ್ಕೃತಿಕ ರಾಷ್ಟ್ರೀಯತೆಯ ಹೆಸರಿನಲ್ಲಿ ವೈವಿಧ್ಯಮಯ ಭಾರತೀಯ ಬಹುಮುಖಿ ಸಂಸ್ಕೃತಿಯನ್ನು ನಿರ್ನಾಮ ಮಾಡಹೊರಟಿರುವ ಈ ದಿನಗಳಲ್ಲಿ ಸಾಂಸ್ಕೃತಿಕ ಕ್ರಾಂತಿ (ಚೈನಾ ಮಾದರಿ)ಯಿಂದ ಮಾತ್ರ ಜನರನ್ನು ಮಿಡಿಸುವ, ಒಲಿಸುವ, ಒಗ್ಗೂಡಿಸುವ ಕೆಲಸ ಸಾಧ್ಯ ಎನ್ನುವುದು ನನ್ನ ಮತ. ನಿಧಾನವಾದರೂ ಇದೊಂದು ಸುಭದ್ರ ಮಾರ್ಗ. ತಳಸಮುದಾಯದ ಕೊನೆಯ ವ್ಯಕ್ತಿಯವರೆಗೂ ಅರಿವನ್ನು ಮೂಡಿಸುವ ಕಾರ್ಯ ಆಗದೆ ಪರ್ಯಾಯ ರಾಜಕಾರಣಕ್ಕೆ ಅರ್ಥ ಬರುವುದಿಲ್ಲ.

೫. ಕೂಡಿ ನಡೆಯುವ, ಕೂಡಿ ಬಾಳುವ, ಕೂಡಿ ದುಡಿಯುವ, ಕಾರ್ಯಕ್ರಮಗಳ ಮಧ್ಯದಿಂದಲೇ ಹುಟ್ಟುವ ನಿಷ್ಠಾವಂತರು, ಮಾನವ ಸಂಘಜೀವಿ ಎಂಬ ತತ್ವದ ವ್ಯಾಪ್ತಿಗೆ ತೆರೆದುಕೊಂಡ ಮನಸ್ಸುಗಳು ಸೂಕ್ತ ಕಾರ್ಯಸೂಚಿಯನ್ನು ರೂಪಿಸಿಕೊಳ್ಳುತ್ತವೆ. ಕಾಲಾನುಕಾಲಕ್ಕೆ. □

ಆದರ್ಶ ರಾಜಕಾರಣದ ಪ್ರಯತ್ನ

(ಹಿಂದಿನ ಪುಟದಿಂದ)

ಯನ್ನು ಮೈಗೂಡಿಸಿಕೊಂಡವರನ್ನು ಹೊರಗಿಡಬೇಕು. ಪಕ್ಷದ ಕಾರ್ಯಕರ್ತರು ಹಾಗೂ ಪದಾಧಿಕಾರಿಗಳಿಗೆ ಹೋಬಳಿ ಮಟ್ಟದಲ್ಲಿ ಶಿಬಿರಗಳನ್ನೇರ್ಪಡಿಸಬೇಕು. ರಾಜ್ಯದ ೨೨೪ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿಯೂ ಕನಿಷ್ಠ ಪಕ್ಷ ಒಂದು ಸಾವಿರ ಕಾರ್ಯಕರ್ತರು ಸಜ್ಜಾಗಬೇಕು. ಈ ಕಾರ್ಯಕರ್ತರು ಅಲ್ಲಿ ಚಳವಳಿ, ಚುನಾವಣೆ ಮಾಡುವುದರಿಂದ ಹಿಡಿದು ನೆರೆಹಾವಳಿಯಾದರೆ ತಾವೇ ಮುಂದೆ ನಿಂತು ಪರಿಹಾರ ಕಾರ್ಯ ಕೈಗೊಳ್ಳುವ ಮಟ್ಟಿಗೆ ಸಮಾಜ ಕಾರ್ಯಕ್ಕೆ ಬದ್ಧರಾದ ಸಾಮಾಜಿಕ ಸೇನೆಯಂತಿರಬೇಕು.

ಭ್ರಷ್ಟಾಚಾರ ನಿರ್ಮೂಲನೆ, ನಿರುದ್ಯೋಗ ನಿವಾರಣೆ, ಎಲ್ಲ ರಂಗದ ಸಾಮಾಜಿಕ ಸಮಾನತೆ, ಕೃಷಿಗೆ ಆದ್ಯತೆ, ಯುವಜನ ಹಾಗೂ ಮಹಿಳೆಯರಿಗೆ ಪ್ರಾಮುಖ್ಯತೆಯ ಪಂಚಸೂತ್ರಗಳ ನಿಟ್ಟಿನಲ್ಲಿಯೇ ಪ್ರಣಾಳಿಕೆ ಅಣಿಯಾಗಬೇಕು. ಭ್ರಮೆಯಿಂದ ಹೊರತಾದ ವಾಸ್ತವದ ಅರಿವಿನಲ್ಲಿ ಕ್ರಿಯಾಯೋಜನೆ ರೂಪುಗೊಳ್ಳಲಿ. □

ನಡು ರಸ್ತೆಯಲಿ ನಿಂತಿದೆ ಮಗು

ನಡು ರಸ್ತೆಗೆ ಬಂದು ನಿಂತಿದೆ
ಮಗು
ಪುಟ್ಟ ಪಾದಗಳು
ಹೆಗಲಿಗೆ ಇಳಿಬಿದ್ದ ಕೂದಲು
ಬಟ್ಟಲು ಕಣ್ಣುಗಳು
ನೆಟ್ಟ ನೋಟ.

ಎಲ್ಲಿಗೋ ಹೊರಟ ಮಗು
ಯಾರದೋ ಮಗು
ದಾರಿ ತಪ್ಪಿತ್ತೆ, ಹಿಡಿದ ಕೈ ಬಿಟ್ಟಿತೆ
ನಡು ರಸ್ತೆಗೆ ಬಂದು ನಿಂತಿತೆ?

ಬ್ರೇಕುಗಳೆಲ್ಲ ಬಿದ್ದು
ವಾಹನಗಳೆಲ್ಲ ನಿಂತು
ಸ್ತಬ್ಧವಾಗಿದೆ ಬೀದಿ

ಮುತ್ತಿಡಲೂ ಹೊತ್ತಿಲ್ಲ
ಬತ್ತಿದೆ ಪ್ರೀತಿ
ಆಫೀಸುಗಳ ಗಡಿಯಾರಗಳು ಓಡುತ್ತಿವೆ
ಎತ್ತಿಕೊಳ್ಳಿ ಮಗುವ, ಬಿಡಿ ದಾರಿ

ಕಿರುಚುತ್ತವೆ ಹಾರನ್ನುಗಳು
ಅಬ್ಬರಿಸುತ್ತಾರೆ ಜನ
ದಿಕ್ಕೆಟ್ಟು ದಡಬಡಿಸುತ್ತದೆ ರಸ್ತೆ

ನಿರ್ಭಾವದಲಿ
ನಿರಾತಂಕದಲಿ
ನಡು ರಸ್ತೆಯಲಿ
ನಿಂತಿದೆ
ಪುಟ್ಟ ಪಾದಗಳ
ದಿಟ್ಟ ಮಗು

ನಿಂತಿದೆ
ಕೃಷ್ಣ
ವರ್ಣದ ಮಗು
ಎತ್ತಿಕೊಳ್ಳಲು ಯಾರಿಗೂ ಪುರುಸೊತ್ತಿಲ್ಲ.

○ ಜಿ.ಪಿ. ಬಸವರಾಜು



ಪರಂಪರೆ

ಭಾರತವು ಕಾಲಾಂತರದಿಂದ ಎರಡು ವ್ಯತ್ಯಾಸಗಳಲ್ಲಿ ತನ್ನ ಅಭಿವ್ಯಕ್ತಿಯನ್ನು ಸಾಧಿಸಿದೆ. ಒಂದು-ಅಕ್ಷರ, ಮತ್ತೊಂದು- ಮಾತು. ಮೊದಲನೆಯ ವಿನ್ಯಾಸದಲ್ಲಿ ಸೀಮಿತ ಜನವರ್ಗದ ಬದುಕು ಲಭ್ಯವಾಗುತ್ತದೆ. ಎರಡನೆಯ ವಿನ್ಯಾಸದಲ್ಲಿ ವ್ಯಾಪಕ ಜನವರ್ಗದ ಬದುಕು ಲಭ್ಯವಾಗುತ್ತದೆ. ಈ ಎರಡು ಬದುಕುಗಳಲ್ಲಿ ಮೊದಲನೆಯದು ಸುಖಲೋಲುಪತೆ. ಎರಡನೆಯದು ಶ್ರಮ. ಆದರೆ ನಾವು ಇದುವರೆ ವಿಗೂ ಕಲಿಯುತ್ತಾ ಮತ್ತು ಕಲಿಸುತ್ತಾ ಬಂದಿರುವುದು 'ಅಕ್ಷರ' ಮೂಲವಾದ ಪಾಠವನ್ನೇ. ಇಂತಹ ಪಾಠಗಳನ್ನು ಹಿನ್ನೆಲೆಗಿಟ್ಟು ಕೊಂಡು ಮಾತಾಡಿದಾಗ ಭಾರತವು ಭವ್ಯ-ದಿವ್ಯವಾಗಿ ಕಾಣುತ್ತದೆ. ಅದೇ ನಮ್ಮ ಜಡ ಶೈಕ್ಷಣಿಕತೆಯ ಕುರುಹು.

❍ ಡಾ॥ ಕಾ.ವೆಂ. ಶ್ರೀನಿವಾಸಮೂರ್ತಿ

ಅಕ್ಷರವಾಗದ ಆತ್ಮಕಥಾನಕ

(ಮಲೆ ಮಾದಪ್ಪನ ಕತೆ ಮತ್ತು ದಲಿತ ಸಂವೇದನೆ)

ಭಾರತವು ರಾಜಕೀಯವಾಗಿ ಯಾವತ್ತೂ ಏಕೀಕೃತ ರಾಷ್ಟ್ರವಾಗಿರಲಿಲ್ಲ. ಆದರೆ ಸಾಂಸ್ಕೃತಿಕವಾಗಿ ಅದನ್ನು ಸಾಧಿಸಿತ್ತು. ಇಂತಹ ಸಾಧನೆಯು ಉತ್ತರದ ಹಿಮಾಲಯದಿಂದ ದಕ್ಷಿಣದ ಕನ್ಯಾಕುಮಾರಿ ಯವರೆಗಿನ ಹಾಗೂ ಪಶ್ಚಿಮದ ಆಫ್ಘಾನಿಸ್ತಾನದಿಂದ ಪೂರ್ವದ ಬಂಗಾಳ ಮಣಿಪುರದವರೆಗೂ ವ್ಯಾಪಿಸಿರುವ ರಾಮಾಯಣ-ಮಹಾಭಾರತ ದಂತಹ ಮಹಾಕಾವ್ಯಗಳು, ರಾಮ-ಕೃಷ್ಣ-ಶಿವರಂತಹ ಪುರಾಣ ಪುರುಷರು, ಜಾತಿವ್ಯವಸ್ಥೆ ಮುಂತಾದ ಸಂಗತಿಗಳಿಂದ ಸಾಧ್ಯವಾಗಿತ್ತು.

ಇವೆಲ್ಲವೂ ಸಾಂಸ್ಕೃತಿಕ ಸೃಷ್ಟಿಗಳು. ಇವು ಭಾರತವನ್ನು ಅಂದಿಗೂ ಸಾವಿರಾರು ವರ್ಷಗಳಿಂದ ಅಖಂಡವಾಗಿ ಹೆಸರಿಸಲ್ಪಡುವ ಭರತಖಂಡ ವನ್ನು ಸಾಂಸ್ಕೃತಿಕವಾಗಿ ಏಕೀಕೃತಗೊಳಿಸಿವೆ. ಇಂತಹ ಏಕೀಕೃತ ಭಾರತ ದಲ್ಲಿ ಬಹುಮುಖಿ ಸಂಸ್ಕೃತಿಗಳು ಇವೆ. ಅವು ಇದ್ದಾಗಲೂ ಈ ಎಲ್ಲಾ ಸಂಸ್ಕೃತಿಗಳ ಒಳಗೆ ಕೆಲವು ಸಾಮಾನ್ಯ ಸಂಗತಿಗಳಿವೆ. ಅವು, ಈ ಹಿಂದೆ ಹೇಳಿದಂತೆ, ಭಾರತವನ್ನು ಸಾಂಸ್ಕೃತಿಕವಾಗಿ ಏಕೀಕರಣಗೊಳಿಸಿರುವ ಸೂತ್ರದ ಕೊಂಡಿಗಳಾಗಿವೆ. ಈ ಹಿನ್ನೆಲೆಯಲ್ಲಿ ಭಾರತದ ಚರಿತ್ರೆ ಎಂದಾಗ ಅದು ಸಾವಿರಾರು ವರ್ಷಗಳಷ್ಟು ಹಿಂದೆ ಹೋಗುತ್ತದೆ ಮತ್ತು ಅಸ್ತಿತ್ವದ ಪ್ರಶ್ನೆಯು ಸಾವಿರಾರು ಮೈಲುಗಳ ಭೂಭಾಗವನ್ನು ವ್ಯಾಪಿಸಿಕೊಳ್ಳುತ್ತದೆ. ಇದು ನಾವು ಹೆಮ್ಮೆ ಪಡುವ ವಿಚಾರ.

ಹೀಗೆ ಹೆಚ್ಚು ಪ್ರಾಚೀನವೂ ವ್ಯಾಪಕವೂ ಆದ ಸಂಸ್ಕೃತಿಯನ್ನು ಹೊಂದಿರುವ ಭಾರತವು ಇಡೀ ಜಗತ್ತಿನಲ್ಲಿ ಇಲ್ಲದ ಒಂದು ವಿಶಿಷ್ಟ ಸಂಗತಿಯನ್ನು ತನ್ನದಾಗಿಸಿಕೊಂಡಿದೆ. ಅದು, ಜಾತಿಯ ಪರಿಕಲ್ಪನೆ. ಇದು ಅತ್ಯಂತ ಹಿಂಸಾ ರೂಪಿ. ಇದಕ್ಕೆ ಕಿಂಚಿತ್ ಮಾನವೀಯತೆಯೂ ಇಲ್ಲ. 'ವರ್ಗ'ದಲ್ಲಿರುವ ಚಲನೆ ಇಲ್ಲಿ ಸಾಧ್ಯವಿಲ್ಲ. ಅದು ಇದ್ದರೂ ಬಂಡೆ ಬೆಳೆಯುವಷ್ಟೇ ನಿಧಾನ. ಇಂತಹ ಹಿಂಸಾ ರೂಪಿಯಾದ 'ಜಾತಿ' ಎಂಬ ಪರಿಕಲ್ಪನೆಯು ಹಿರಿದಾದ ಚರಿತ್ರೆ ಮತ್ತು ಭೌಗೋಳಿಕ ವ್ಯಾಪ್ತಿಯನ್ನು ಪಡೆದಿರುವ ಭಾರತವನ್ನು ಜಗತ್ತಿನ ಎದುರು ತಲೆ ತಗ್ಗಿಸುವಂತೆ ಮಾಡಿದೆ.

ಹೀಗೆ ಜಾತಿಯಾಧಾರಿತವಾದ ಭಾರತೀಯ ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅತ್ಯಂತ ಮೇಲ್‌ಸ್ತರದಲ್ಲಿ ಪ್ರತಿಷ್ಠಿತರಾದ ಜನವರ್ಗದವರು 'ಅಕ್ಷರ'ದ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸಿದರು. ಅಕ್ಷರವು ಅರಿವಿನ ಕುರುಹು. ಇದರ ಮೂಲಕವಾಗಿ ಲೋಕವನ್ನು ಕಾಣ ಬಹುದು. ಇದರ ಮೂಲಕ ಮಾನವನ ಸರ್ವಾಂಗೀಣ ಪ್ರಗತಿಯನ್ನು ಸಾಧಿಸಬಹುದು. ಆದ್ದರಿಂದ ಇದು ಅತ್ಯಂತ ಪವಿತ್ರವಾದ ಒಂದು ಪರಿಕಲ್ಪನೆಯಾಗಿದೆ. ಇಂತಹ ಪಾವಿತ್ರ್ಯವನ್ನು ಪಡೆದ ಅಕ್ಷರದೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡವರು ಅದನ್ನು ಇಡೀ ಸಮಾಜದ ಹಿತಾಸಕ್ತಿಗಾಗಿ ಬಳಸಬೇಕಾಗಿತ್ತು. ಅದರ ಮೂಲಕವಾಗಿ ಅಕ್ಷರದೊಂದಿಗೆ ಸಂಬಂಧ ಪಡೆದ ಕಾರಣಕ್ಕಾಗಿ ತಾವು ಪಡೆದ ಪುರೋಹಿತ (ಎತ್ತರೆತ್ತರಕ್ಕೆ ಏರಿಸುವವನು) ಎಂಬ ನಾಮಾಂಕಿತವನ್ನು ಸಾರ್ಥಕಗೊಳಿಸಿಕೊಳ್ಳಬೇಕಾ ಗಿತ್ತು. ಅಂತಹ ಸಂಬಂಧವು ಅತ್ಯಂತ ಪವಿತ್ರವಾದ ಸಂಬಂಧವೇ ಹೌದು. ಆದರೆ ಅದು ಹಾಗಾಗಲಿಲ್ಲ.

ತಮ್ಮ ಹಿತವನ್ನು ಒಳಗೊಂಡಂತೆಯೇ ಇಡೀ ಸಮಾಜದ ಹಿತಾಸಕ್ತಿಗಾಗಿ ಬಳಸಲ್ಪಡಬೇಕಿದ್ದ ಅಕ್ಷರವನ್ನು ತಮ್ಮ ಹಿತಾಸಕ್ತಿಗಾಗಿ ಮಾತ್ರ ಬಳಸಲಾಯಿತು. ಹಾಗಾಗಿ ಅಕ್ಷರದೊಂದಿಗೆ ಇವರು ಏರ್ಪಡಿಸಿಕೊಂಡ ಸಂಬಂಧವು ಪಾವಿತ್ರ್ಯದ ಸಂಬಂಧವಾಗಲಿಲ್ಲ; ಅದು ಹಾದರದ ಸಂಬಂಧ ವಾಯಿತು. ಅಂತಹ ಸಂಬಂಧದ ಹಿನ್ನೆಲೆಯಲ್ಲಿಯೇ ಅಕ್ಷರವನ್ನು ಕಾವ್ಯ, ತರ್ಕ, ಶಾಸ್ತ್ರ ಪುರಾಣ, ಚರಿತ್ರೆ ಮುಂತಾದ ಎಲ್ಲ ಜ್ಞಾನ ಶಾಖೆಗಳಿಗೂ ಬಳಸಿದರು. ಹೀಗೆ ಬಳಸಿದ್ದರಿಂದ ಅಲ್ಲಿಯ ಸಂವೇದನೆಗಳು ಮತ್ತು ಚಿಂತನೆಗಳು ತಮ್ಮ ಮತ್ತು ತಮ್ಮ ಪರವಾದ ಹಾಗೂ ತಮ್ಮನ್ನು ಕುರಿತಾದ ಅಕ್ಷರಿಕ ದಾಖಲೆಗಳಾದವು. ಇಂತಹ ಅಕ್ಷರ ರೂಪಿ ದಾಖಲೆಗಳು ಇದನ್ನು ಬಳಸಿದ ಒಂದು ವರ್ಗವನ್ನು ಕಟ್ಟಿಕೊಡುತ್ತದೆಯೇ ವಿನಃ ಇವರಿಂದ ಅಥವಾ ಅಕ್ಷರ ಸಂಸ್ಕೃತಿಯಿಂದ ಹೊರತಾದ ಜನವರ್ಗವನ್ನು ಕಟ್ಟಿಕೊಡುವುದಿಲ್ಲ. ಹಾಗಾಗಿ 'ಅಕ್ಷರ'ದಲ್ಲಿ ಅಕ್ಷರಕ್ಕೆ ಹೊರತಾದವರ ಸಂವೇದನೆಗಳಾಗಲೀ ನಿಜದ ಚರಿತ್ರೆಯಾಗಲೀ ಸಿಗುವುದು ದುರ್ಲಭ.

ಹೀಗೆ ಮನುಷ್ಯ ಸೃಷ್ಟಿಯಾದ ಅಕ್ಷರವು ಒಟ್ಟು ಮನುಷ್ಯ ಕುಲದ ಅಭ್ಯುದಯಕ್ಕೆ ಕಾರಣೀಭೂತವಾಗಬೇಕಿದ್ದ ಸಂದರ್ಭದಲ್ಲಿ ಅದನ್ನು ಈ ಪುರೋಹಿತ ವರ್ಗವು ಹೈಜಾಕ್ ಮಾಡಿಕೊಂಡಿತು. ಆದ್ದರಿಂದ

'ಬುದ್ಧಿ'ಯ ಜನರಿಂದ 'ಬೆವರಿನ' ಜನರು ದೂರ ಉಳಿಯುವಂತಾಯಿತು. ಇಂತಹ ಬೆವರಿನ ಜನ ಅಥವಾ ಭೌತಿಕ ಶ್ರಮದ ಮೂಲಕವಾಗಿಯೇ ಬದುಕನ್ನು ನಡೆಸಲು ಅನಿವಾರ್ಯವಾದ ಜನರು ತಮ್ಮ ಸಂವೇದನೆಗಳನ್ನು, ಚರಿತ್ರೆ-ಮುಂಗಾಣ್ಕೆಗಳನ್ನು ಮಾತಿನ ಮೂಲಕ ಹೊರಗೆ ಹಾಕಿದರು. ಹಾಗಾಗಿ ಈ ಜನರನ್ನು ಅರಿಯುವುದಕ್ಕಾಗಿ ನಾವು ಅಕ್ಷರಕ್ಕೆ ದಾಖಲಾದ 'ಮಾತಿ'ಗೆ ಮೊರೆಹೋಗಬೇಕಾಗುತ್ತದೆ. ಈ ಬಗೆಯಲ್ಲಿ ಒಂದು ಸಣ್ಣ ವರ್ಗವು 'ಅಕ್ಷರ'ದ ಮೂಲಕ ವ್ಯಕ್ತವಾಗುತ್ತಾ ಬಂದರೆ, ಇದಕ್ಕೆ ಹೊರತಾದ ದೊಡ್ಡ ಜನವರ್ಗವು 'ಮಾತು' -ಈ ಮೂಲಕ ವ್ಯಕ್ತವಾಗುತ್ತಾ ಬಂದಿತು. ಇವುಗಳಲ್ಲಿ 'ಬುದ್ಧಿ' ವರ್ಗವು 'ಅಕ್ಷರ'ದ ಮೇಲೆ ಸ್ಥಾಪಿಸಿದ ಪೇಟೆಂಟನ್ನು ಬಹುಜನರ ಅಭಿವ್ಯಕ್ತಿಯಾದ 'ಮಾತಿ'ನ ಮೇಲೆಯೂ ಪಡೆಯಲಾಗಲಿಲ್ಲ ಎಂಬುದು ಭಾರತೀಯ ಸಮಾಜದ ಸಮಾಧಾನಕರ ಸತ್ಯ. ಇದೂ ಸಾಧ್ಯವಾಗದೇ ಹೋಗಿದ್ದಿದ್ದರೆ ಭಾರತದ ಇಡೀ ಮನುಕುಲವು ಮೂಕವಾಗಬೇಕಿತ್ತು. ಸದ್ಯಕ್ಕೆ ಅಂತಹ ದುರಂತ ತಪ್ಪಿದೆ. ಇದು ನಿಸರ್ಗ ಕಲ್ಪಿಸಿದ ನ್ಯಾಯ.

ಹೀಗೆ ಭಾರತವು ಕಾಲಾಂತರದಿಂದ ಎರಡು ವ್ಯತ್ಯಾಸಗಳಲ್ಲಿ ತನ್ನ ಅಭಿವ್ಯಕ್ತಿಯನ್ನು ಸಾಧಿಸಿದೆ. ಒಂದು- ಅಕ್ಷರ, ಮತ್ತೊಂದು- ಮಾತು. ಮೊದಲನೆಯ ವಿನ್ಯಾಸದಲ್ಲಿ ಸೀಮಿತ ಜನವರ್ಗದ ಬದುಕು ಲಭ್ಯವಾಗುತ್ತದೆ. ಎರಡನೆಯ ವಿನ್ಯಾಸದಲ್ಲಿ ವ್ಯಾಪಕ ಜನವರ್ಗದ ಬದುಕು ಲಭ್ಯವಾಗುತ್ತದೆ. ಈ ಎರಡು ಬದುಕುಗಳಲ್ಲಿ ಮೊದಲನೆಯದು ಸುಖಲೋಲು ಪತೆ, ಇಹದಲ್ಲಿ ಸ್ವರ್ಗಾನಂದ, ಸಾಮಾಜಿಕ ಮತ್ತು ದೈವಿಕ ಘನತೆ ಮೊದಲಾದ ಅಂಶಗಳಿಗೆ ಭೂಮಿಕೆಯಾಗುತ್ತದೆ. ಆ ವರ್ಗದ ಹೊಟ್ಟೆಯು ಮಿತಿ ಮೀರಿ ತಿಂದು, ಬೆಳೆಯುವುದ ರಿಂದ ಉಪವಾಸ ವ್ರತ, ತಿಂದಿಳಿಯುವುದರಿಂದ ದಾನ ಮುಂತಾದ ಮೌಲ್ಯಗಳು ಅಲ್ಲಿ ಹುಟ್ಟಿಕೊಳ್ಳುತ್ತವೆ. ಈ ಮೌಲ್ಯ ಗಳೇ ಅವರನ್ನ ಪ್ರತಿಷ್ಠಿತರನ್ನಾಗಿಸುತ್ತವೆ. ಇದಕ್ಕೆ ಕೈಚಾಚುವ, ಬೆವರಿನಿಂದ ದೇಶವನ್ನು ಕಟ್ಟಿದರೂ ಅದಕ್ಕೆ ಸೂಕ್ತವಾದ ಆರ್ಥಿಕ ನ್ಯಾಯ ಪಡೆಯದ ಜನರು ಕೂಲಿಯ ನಂತರದಲ್ಲಿ ದಾನಕ್ಕೂ ಕೈ ಚಾಚಬೇಕಾದ ಅನಿವಾರ್ಯತೆ ಮೂಡುತ್ತದೆ. ಅವರಿಲ್ಲಿ ಗುಲಾಮರಾಗುತ್ತಾರೆ, ಶೋಷಿತರಾಗುತ್ತಾರೆ.

ಇಂಥವರ ಬದುಕು ಎರಡನೆಯದಾದ 'ಮಾತು' ಎಂಬ ವಿನ್ಯಾಸದಲ್ಲಿ ಪಡಿಮೂಡುತ್ತದೆ. ಆದರೆ ನಾವು ಇದುವರೆವಿಗೂ ಕಲಿಯುತ್ತಾ ಮತ್ತು ಕಲಿಸುತ್ತಾ ಬಂದಿರು ವುದು 'ಅಕ್ಷರ' ಮೂಲವಾದ ಪಾಠವನ್ನೇ ಎಂಬುದನ್ನು ಗಮನಿಸಬೇಕು. ಇಂತಹ ಪಾಠಗಳನ್ನು ಹಿನ್ನೆಲೆಗಿಟ್ಟುಕೊಂಡು ಮಾತಾಡಿದಾಗ ಭಾರತವು ಭವ್ಯವಾಗಿ, ದಿವ್ಯವಾಗಿ ಕಾಣುತ್ತದೆ. ಇಂತಹ ಭವ್ಯ ಭಾರತದ ಚ್ಯೂಯಿಂಗಮ್ಮನ್ನು ನಾವು ಇವತ್ತಿಗೂ ಉಗುಳದೇ ಚೀಪುತ್ತಿರುವುದು ನಮ್ಮ ಜಡ ಶೈಕ್ಷಣಿಕತೆಯನ್ನು ಅರಿವಿಗೆ ತರುತ್ತದೆ.

ಆದ್ದರಿಂದ ಅಕ್ಷರಕ್ಕೆ ದೂರ ಮತ್ತು ಹೊರತಾದ 'ಮಾತು' ನಮಗೆ ಇವತ್ತಿನ ಅಧ್ಯಯನಕ್ಕೆ ಹೆಚ್ಚು ನಿಲುಕಬೇಕಾಗಿದೆ. ಅದು ಹಾಗೆ ನಿಲುಕಿದೆ. ಆದರೆ ಸಮಾ ಧಾನಕರ ನೆಲೆಯಲ್ಲಿ ನಿಲುಕಿಲ್ಲ. ಅದು ಚಿಂತನ-ಮಂಥನ ವಾಗದೇ ಕ್ರಿಯಾರೂಪಕ್ಕೂ ಇಳಿದಿಲ್ಲ. ಈ ತಾತ್ವಿಕ ಹಿನ್ನೆಲೆ ಯಲ್ಲಿಯೇ 'ಮಾತು' ರೂಪದ ಕೃತಿಗಳನ್ನು ಅರಿಯಬೇಕಿದೆ. ಆ ಮೂಲಕವಾಗಿ ಭಾರತದ ದೊಡ್ಡ ಪ್ರಮಾಣದ ಚರಿತ್ರೆ ಯನ್ನು ಕಟ್ಟಿಕೊಳ್ಳಬೇಕಾಗಿದೆ. ಈ ನೆಲೆಯಲ್ಲಿ ಮಾದಪ್ಪನ ಕತೆ ನನಗೆ ಪ್ರಸ್ತುತವಾಗುತ್ತದೆ.

ಮಾದಪ್ಪ ಅಥವಾ ಮಲೆಮಹದೇಶ್ವರನು ವಾಸ್ತವ ವಾಗಿ ಇತಿಹಾಸ ಪುರುಷ. ಇವನ ಕಾಲವು ಕ್ರಿ.ಶ. ೧೨ನೇ ಶತಮಾನದಿಂದ ಕ್ರಿ.ಶ. ೧೭ನೇ ಶತಮಾನದ ನಡುವೆ ತೂಗುಯ್ಯಾಲೆಯಾಡುತ್ತಿದೆ. ಏನೇ ಆದರೂ ಈತ ಮಧ್ಯ ಕಾಲದವನು ಎಂಬುದು ಸ್ಪಷ್ಟ.

ಈತನನ್ನು ಕೇಂದ್ರವನ್ನಾಗಿ ಇಟ್ಟುಕೊಂಡು ವಿಭಿನ್ನ ವಿನ್ಯಾಸಗಳ ಕಥಾನಕಗಳು ಸೃಷ್ಟಿಯಾಗಿವೆ. ಭಾರತವು ಬಹುಸಂಸ್ಕೃತಿಗಳ ದೇಶವಾಗಿರುವುದರಿಂದ ಒಂದೇ ಪಠ್ಯವು ಬಹು ವಿನ್ಯಾಸಗಳಲ್ಲಿ ಮೂಡುವುದು ಸಹಜ. ಉದಾ: ೫,೦೦೦ ವಿನ್ಯಾಸಗಳಲ್ಲಿ ಇರುವ ಮಹಾಭಾರತದ ಕಥೆ. ಇವು ಶಿಷ್ಟ ಮತ್ತು ಜನಪದ : ಎರಡೂ ಸಾಹಿತ್ಯದಲ್ಲಿಯೂ ಇವೆ. ಇಂತಹ ಎರಡೂ ವಲಯಗಳ ಕೆಲವು ಕೃತಿಗಳಲ್ಲಿ ಮಾದಪ್ಪನು ಲಿಂಗಾಯತನಾಗಿ ಮತ್ತೂ ಕೆಲವು ಕೃತಿಗಳಲ್ಲಿ ಮಾದಿಗನಾಗಿ ಕಾಣುತ್ತಾನೆ. ಈ ಎರಡೂ ಬಗೆಯ ಕೃತಿಗಳನ್ನು ತೌಲನಿಕವಾಗಿ ಗಮನಿಸಿದಾಗ ಅವನು ಎದುರಿಸುವ ಸವಾಲು, ಅವನ ಸಂವೇದನೆ ಮುಂತಾದ ಅಂಶಗಳ ದೃಷ್ಟಿಯಿಂದ ಅವನು ದಲಿತ ಲೋಕದೊಳಗಿಂದ ಮೂಡಿಬಂದ ವ್ಯಕ್ತಿಯಾಗಿ ಕಾಣುವುದು ಸತ್ಯಕ್ಕೆ ಹೆಚ್ಚು ಹತ್ತಿರವೆನಿಸುತ್ತದೆ. ಇದನ್ನು ಮತ್ತಷ್ಟು ದೃಢಪಡಿ ಸುವ ನಿಟ್ಟಿನಲ್ಲಿ ಪಿ.ಕೆ. ರಾಜಶೇಖರ ಅವರು ಸಂಪಾದಿಸಿರುವ 'ಮಲೆ ಮಾದೇಶ್ವರ ಕಾವ್ಯ' ಮತ್ತು ೧೮ನೇ ಶತಮಾನದ ಕೃತಿಕಾರ ದೇವಚಂದ್ರನ 'ರಾಜಾವಳಿ ಕತೆ' ಇದೆ.

> **ಜಾತಿಯಾಧಾರಿತವಾದ ಭಾರತೀಯ ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅತ್ಯಂತ ಮೇಲ್‌ಸ್ತರದಲ್ಲಿ ಪ್ರತಿಷ್ಠಿತರಾದ ಜನವರ್ಗದವರು 'ಅಕ್ಷರ'ದ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸಿದರು. ಇಡೀ ಸಮಾಜದ ಹಿತಾಸಕ್ತಿಗಾಗಿ ಬಳಸಲ್ಪಡಬೇಕಿದ್ದ ಅಕ್ಷರವನ್ನು ತಮ್ಮ ಹಿತಾಸಕ್ತಿಗಾಗಿ ಮಾತ್ರ ಬಳಸಲಾಯಿತು. ಹಾಗಾಗಿ 'ಅಕ್ಷರ'ದಲ್ಲಿ ಅಕ್ಷರಕ್ಕೆ ಹೊರತಾದವರ ಸಂವೇದನೆಗಳಾಗಲೀ ನಿಜದ ಚರಿತ್ರೆಯಾಗಲೀ ಸಿಗುವುದು ದುರ್ಲಭ. ಹೀಗೆ ಮನುಷ್ಯ ಸೃಷ್ಟಿಯಾದ ಅಕ್ಷರವು ಒಟ್ಟು ಮನುಷ್ಯ ಕುಲದ ಅಭ್ಯುದಯಕ್ಕೆ ಕಾರಣೀಭೂತವಾಗಬೇಕಿದ್ದ ಸಂದರ್ಭದಲ್ಲಿ ಅದನ್ನು ಈ ಪುರೋಹಿತ ವರ್ಗವು ಹೈಜಾಕ್ ಮಾಡಿಕೊಂಡಿತು. ಆದ್ದರಿಂದ 'ಬುದ್ಧಿ'ಯ ಜನರಿಂದ 'ಬೆವರಿನ' ಜನರು ದೂರ ಉಳಿಯುವಂತಾಯಿತು. ಇಂತಹ ಬೆವರಿನ ಜನರು ತಮ್ಮ ಸಂವೇದನೆಗಳನ್ನು, ಚರಿತ್ರೆ-ಮುಂಗಾಣ್ಕೆಗಳನ್ನು ಮಾತಿನ ಮೂಲಕ ಹೊರಗೆಹಾಕಿದರು. ಹಾಗಾಗಿ ಈ ಜನರನ್ನು ಅರಿಯುವುದಕ್ಕಾಗಿ ನಾವು ಅಕ್ಷರಕ್ಕೆ ದಾಖಲಾದ 'ಮಾತಿ'ಗೆ ಮೊರೆಹೋಗಬೇಕಾಗುತ್ತದೆ.**

ಈ ಕತೆಗಳ ಮೇರೆಗೆ ಮಾದಪ್ಪನು ಪೂರ್ವಜನ್ಮದಲ್ಲಿ ಶಿವನಾಗಿರುತ್ತಾನೆ. ಆಗ ಆತನ ಪತ್ನಿ ಪಾರ್ವತಿಯು ಮುಟ್ಟಾಗ್ದ ಮೂರು ದಿನದ ಸೂತಕ ಕಳೆದುಕೊಳ್ಳುವಾಗ ಸ್ನಾನಕ್ಕೆ ಇಳಿಯುತ್ತಾಳೆ. ಮರಳಿ ಬರುವಾಗ ತನ್ನ ಹೊಲಸು ಬಟ್ಟೆಗಳ ಒಳಗೆ ಒಂದು ಮಗು ಹುಟ್ಟಿದುದು ಕಾಣುತ್ತದೆ. ಆಶ್ಚರ್ಯಚಕಿತಳಾದ ಈಕೆ ಶಿವನಿಗೆ ಅದನ್ನು ತೋರುತ್ತಾಳೆ. ಅದನ್ನು ಕಂಡ ಶಿವ, ಆ ಮಗುವು ಹೊಲಸಿನಿಂದ ಹುಟ್ಟಿರುವುದರಿಂದ ಅದಕ್ಕೆ ಹೊಲೆಯ ಎಂದು ನಾಮಕರಣ ಮಾಡುತ್ತಾನೆ. ಅಂತಹ ಮಗು ತರುಣನಾದಾಗ, ಅವನನ್ನು ತನ್ನ ಕಾಮಧೇನು (ಹಸು)ವನ್ನು ಕಾಯಲು ನೇಮಿಸುತ್ತಾನೆ. ಈ ಕಾಯಕದಲ್ಲಿ ನಿರತನಾದ ಈ ತರುಣ ಒಮ್ಮೆ ಅದರ ಹಾಲಿನ ರುಚಿಯನ್ನು ನೋಡುತ್ತಾನೆ. ಆಗ 'ಹಾಲೇ ಇಷ್ಟು ರುಚಿಯಿರು ವಾಗ ಇದರ ಮಾಂಸವೆಷ್ಟು ರುಚಿಯಿರಬಹುದು?' ಎಂದು ಅದನ್ನು ಕೊಲ್ಲುತ್ತಾನೆ.

ಆದರೆ ಅದನ್ನು ಕತ್ತರಿಸಿ ತಿನ್ನುವ ಬಗೆಯು ತಿಳಿಯದಾದಾಗ ಶಿವನನ್ನು ಕೇಳುತ್ತಾನೆ. ಅವನ ಇಷ್ಟವನ್ನು ಶಿವನೂ ಬೆಂಬಲಿಸಿ, ತನ್ನ ಮದದ ಬೆವರಿನಿಂದ ತರುಣನೊಬ್ಬನನ್ನು ಸೃಷ್ಟಿ ಮಾಡುತ್ತಾನೆ. ಅವನು ಮದ ಅಥವಾ ಮದದ ಬೆವರಿನಿಂದ ಹುಟ್ಟಿದ್ದರಿಂದ ಅವನಿಗೆ 'ಮಾದಿಗ' ಎಂದು ನಾಮಕರಣ ಮಾಡುತ್ತಾನೆ. ಅನಂತರದಲ್ಲಿ ಆತನನ್ನು ಹೊಲೆಯನ ನೆರವಿಗೆ ಕಳುಹಿಸುತ್ತಾನೆ. ಹಾಗೆ ಸಾಗಿದ ಇಬ್ಬರಲ್ಲಿ ಎಡಗೈಯವನು ಹಸುವಿನ ಮಾಂಸವನ್ನು ಕೊಯ್ದು ತುಂಡು ಮಾಡಿ ನೀಡುತ್ತಿದ್ದರೆ ಬಲಗೈಯವನು ಅದನ್ನು ತಿನ್ನುತ್ತಾ ಹೋಗುತ್ತಾನೆ. ಈ ಪ್ರಕ್ರಿಯೆಯನ್ನು ಮುಗಿಸಿಕೊಂಡು ಬಂದ ಇಬ್ಬರನ್ನೂ ಶಿವನು ಕೈಲಾಸ ಪ್ರವೇಶಕ್ಕೆ ನಿರಾಕರಿಸುತ್ತಾನೆ. ಪರಿಣಾಮವಾಗಿ ಶಿವನ ಆಣತಿಯ ಮೇರೆಗೆ ಇಬ್ಬರೂ ಭೂಲೋಕದಲ್ಲಿ ಅಣ್ಣ-ತಮ್ಮಂದಿರಾಗಿ ಬಾಳಾಟ ಮಾಡಲು ಬರುತ್ತಾರೆ.

ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಮದದ ಬೆವರಿನಿಂದ ಎಡಗೈಯವನು ಹುಟ್ಟಿದ ಮತ್ತು ಅಲ್ಲಿಯ ಇಬ್ಬರೂ ಹೊಟ್ಟೆಗಾಗಿ ಹಸುವಿನ ಮಾಂಸವನ್ನು ಬಳಸಿದರು ಎಂಬುದು. ಈ ಎರಡು ಅಂಶಗಳಲ್ಲಿ ಎರಡನೆಯದು ಆಹಾರಕ್ಕೆ ಸಂಬಂಧಿಸಿದ ವಿಚಾರವಾಗಿದೆ. ಸಾಕಿದ ಹಸುಗಳ ಮಾಂಸವು ಪುಷ್ಟಿಕರ ಹಾಗೂ ಅದಕ್ಕಾಗಿಯೇ ಅನೇಕ ದೇಶ-ವಿದೇಶಗಳು ಅದನ್ನು ವಿದೇಶೀ ವಿನಿಮಯದ ಗಳಿಕೆಗಾಗಿ ಅಂತರ ರಾಷ್ಟ್ರೀಯ ಉದ್ಯಮಗಳಲ್ಲಿ ಒಂದನ್ನಾಗಿಸಿಕೊಂಡಿರುವುದು. ಇನ್ನು ಮೊದಲನೆಯ ಅಂಶ. ಇನ್ನು ಎಡಗೈಯವನು ಬೆವರಿನಿಂದ ಹುಟ್ಟಿದ ಎಂಬ ಮಾತು ಕೇವಲ ಮಾತಲ್ಲ; ಅದು ಪ್ರತಿಮೆ (image). ಅದನ್ನು ಬಗೆದಾಗ ಬೆವರು ಅಥವಾ ಶ್ರಮದೊಂದಿಗೆ ಎಡಗೈಯವನ ಜೀವನ ಏರ್ಪಡಿಸಿಕೊಂಡ ಅವಿನಾಭಾವ ಸಂಬಂಧ ವೇದ್ಯವಾಗುತ್ತದೆ.

ಹೀಗೆ ಬೆವರಿನ ಮೂಲದಲ್ಲಿಯೇ ದಲಿತರ ಬದುಕು ಮತ್ತು ಚರಿತ್ರೆಯಿರುವುದು ಅತ್ಯಂತ ಹೆಮ್ಮೆಯ ವಿಚಾರ. ಇಂತಹ ಚರಿತ್ರೆಯನ್ನು ಹೊಂದಿರುವವರು ಪವಿತ್ರಾತ್ಮರೇ ಹೌದು ಎಂಬುದು ಆದರ್ಶದ ವಿಚಾರವೇ ಆಗುತ್ತದೆ. ಈ ಬಗೆಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವದ ಸಂಗತಿಗಳಿಗಾಗಿ ಮೌಖಿಕ ಮಹಾಕಾವ್ಯಗಳು ನಮಗೆ ಬಾಗಿಲನ್ನು ತೆರೆಯುತ್ತವೆ. ಆದ್ದರಿಂದ ಕೆಳವರ್ಗದ ಜನರ ಆತ್ಮವಿಶ್ವಾಸವನ್ನು ಕುದುರಿಸಲಿಕ್ಕಾಗಿ ಅವರ ಬೆವರಿದ್ದ ಚರಿತ್ರೆ ಅಧ್ಯಯನ ಯೋಗ್ಯವಾಗಬೇಕು.

***

ಶಿವನು ಕೈಲಾಸದಲ್ಲಿದ್ದಾಗ ಅವನ ವರಪ್ರಸಾದದಿಂದ ಭೂಲೋಕದೊಳಗಿನ ಬಂಕಾಪುರಿಯ ಅರಸು ಶ್ರವಣಾಸುರನು ದೇವಾನುದೇವತೆಗಳನ್ನು ತನ್ನ ಗುಲಾಮನನ್ನಾಗಿಸಿ [illegible]. ಕೊನೆಗೆ ಪಾರ್ವತಿಯನ್ನು ತನ್ನ ಸೇವಾಸ್ಥಾನಕ್ಕೆ [illegible] ತರುತ್ತಾನೆ. ಆಗ ಪಾರ್ವತಿಯು 'ಹೆಂಡಾ ಕುಡಿಯೋನ್ಗೆ ಬುಂಡ್ಯೆ ಹೆಂಡ್ತಿ ಅನ್ನೋ ಹಂಗೆ ನೀನೆಲ್ಲಿ ಹಾಳಾಗಿದ್ದೀಯೆ ಹಾಳ್ಮನೆ ಶಿವನೇ' ಎಂದು ಬೊಬ್ಬೆಹಾಕುತ್ತಾಳೆ.

ಇಲ್ಲಿ ಕಾಣುವ ಪಾರ್ವತಿಯ ವ್ಯಕ್ತಿತ್ವವು ಪ್ರತಿಷ್ಠಿತ ಜನವರ್ಗದಿಂದ ಬಂದ ಸೀತೆ, ಸಾವಿತ್ರಿ, ಮಂಡೋದರಿ, ಅಹಲ್ಯೆ, ಅನಸೂಯ -ಈ ಪಂಚ ಮಹಾಪತಿವ್ರತೆಯರ ಮಾದರಿಯದ್ದು ಅಲ್ಲ. ಬದಲಿಗೆ ಈ ದೇಶದ ಶ್ರಮಿಕರ ಸಂಸ್ಕೃತಿಯ ಸ್ತ್ರೀ ಸಂಕುಲದ ಮಾದರಿಯದ್ದು. ಈ ದೇಶದಲ್ಲಿ ಶ್ರಮ ಸಂಸ್ಕೃತಿಯೇ ಪ್ರಧಾನ ಮತ್ತು ವ್ಯಾಪಕ. ಆದ್ದರಿಂದ ಬೆವರಿನೊಂದಿಗೆ ಮೂಡಿದ ಕಾವ್ಯ-ಕಥಾನಕಗಳು ಭಾರತದ ನಿಜದ ಚರಿತ್ರೆಗೆ ಹೆಚ್ಚು ಹತ್ತಿರವೇ ಹೊರತು ಪ್ರತಿಷ್ಠಿತ ಜನವರ್ಗಗಳ ಪ್ರತಿನಿಧಿಗಳಾದ ಶಿಷ್ಟ ಕವಿಗಳಿಂದ ರಚಿತವಾದ ರಾಮಾಯಣ, ಮಹಾಭಾರತ, ಪುರಾಣ ಮುಂತಾದ ಕಾವ್ಯಗಳು ಅಲ್ಲ.

ಈ ಹಿನ್ನೆಲೆಯಲ್ಲಿ ಇಲ್ಲಿಯ ಪಾರ್ವತಿಯು ದಲಿತ ಲೋಕದ ಸ್ತ್ರೀ ವ್ಯಕ್ತಿತ್ವಕ್ಕೆ ಮಾದರಿಯಾಗುತ್ತಾಳೆ. ಇಂತಹ ಸ್ತ್ರೀ ತನ್ನ ಪತಿ ತನ್ನ ಜವಾಬ್ದಾರಿಯನ್ನು ಮರೆತಾಗ ಅರಚುತ್ತಾಳೆ; ಅವನು ತಪ್ಪನ್ನು ಎಸಗಿದಾಗ ಪರಚುತ್ತಾಳೆ. ಬದಲಿಗೆ ರಾಮ ಸೂಚಿಸಿದಾಕ್ಷಣ ಸೀತೆಯಂತೆ ಬೆಂಕಿಗೆ ಹಾರುವುದಿಲ್ಲ. ಈಕೆ ಸ್ವಾಭಿಮಾನಿ. ಗಂಡನನ್ನು ಪ್ರಶ್ನಿಸುವ ಕೆಚ್ಚಿದೆ. ಇದರ ಸಮರ್ಥನೆಗಾಗಿ ಇದೇ ಕಾವ್ಯದ 'ಸಂಕಮ್ಮನ ಸಾಲು' ಎಂಬ ಭಾಗವನ್ನು ಗಮನಿಸಬೇಕು. ಸಂಕಮ್ಮನ ಸಾಲು- ಇದು ಸೋಲಿಗರ ನೀಲಯ್ಯ ಮತ್ತು ಅವನ ಪತ್ನಿ ಸಂಕಮ್ಮ -ಇವರ ನಡುವೆ ನಡೆದ ದೃಢಸಂವಾದವನ್ನು ಕೇಂದ್ರವನ್ನಾಗಿ ಇಟ್ಟುಕೊಂಡಿದೆ.

ಇಲ್ಲಿ ಹೊಸದಾಗಿ ಮದುವೆಯಾದ ನೀಲಯ್ಯ ತನ್ನ ಕುಲದ ಪದ್ಧತಿಯಂತೆ ಒಂಬತ್ತು ತಿಂಗಳ ಕಾಲ ಬೇಟೆಗೆ ಹೋಗಬೇಕು. ಹೆಂಡತಿಯನ್ನು ಜೊತೆಯಲ್ಲಿ 'ಸಂಗಪ್ಪ'ನಾಗಿ ಕರೆದೊಯ್ಯದೆ ಮನೆಯಲ್ಲಿಯೇ ಬಿಟ್ಟುಹೋಗಬೇಕು. ಇದು ಸಮಾಜ ಮತ್ತು ಪುರುಷ ಎಂಬ ಅರ್ಥದ ಪದ್ಧತಿ.

ಸಂಕಮ್ಮ ಅಸೀಮ ರೂಪವತಿ. ಇವಳಿಗೆ ಮರುಳಾಗದವರೇ ಇಲ್ಲ. ಹಾಗೆ ಮರುಳಾದವರು ಇವಳನ್ನು ಮರುಳುಗೊಳಿಸಬಹುದು ಅಥವಾ ಇವಳು ಸಹ ಗಂಡನ ದೀರ್ಘ ಗೈರು ಹಾಜರಿಯಲ್ಲಿ ಅವರಿಗೆ ಸುಲಭವಾಗಿಯೇ ಮರುಳಾಗಬಹುದು. ಈ ಬಗೆಯ ಅನುಮಾನವು ನೀಲಯ್ಯನಿಗೆ ಕಾಡುತ್ತದೆ. ಅದಕ್ಕಾಗಿ ಅವಳಿಂದ ಭಾಷೆಯನ್ನು ಕೇಳುತ್ತಾನೆ. ಅವಳು ಸ್ವಾಭಿಮಾನಿಯಾದುದರಿಂದ ಅದನ್ನು ಕೊಡಲು ನಿರಾಕರಿಸುತ್ತಾಳೆ. ಅದನ್ನು ಈತ ಬಗೆಬಗೆಯಾಗಿ ಕೇಳುತ್ತಾನೆ. ಅವಳು ಅಂತಿಮವಾಗಿ ವಿವಾಹ ವಿಚ್ಛೇದನದ ವಿಚಾರದಲ್ಲಿ ಪ್ರಸ್ತಾಪಿಸುತ್ತಾಳೆಯೇ ಹೊರತು ಸ್ವಾಭಿಮಾನವನ್ನು ಬದಿಗೊತ್ತಿ ಅವನಿಗೆ ಭಾಷೆ ಕೊಡಲು ನಿರಾಕರಿಸುತ್ತಾಳೆ. ಒಟ್ಟಾರೆ ಇದು ಸಂಘರ್ಷ.

ಇಲ್ಲಿ ಸಂಕಮ್ಮನ ವ್ಯಕ್ತಿತ್ವವು ಸ್ವಾಭಿಮಾನಿ ನೆಲೆಯಲ್ಲಿ ಪ್ರಕಟಗೊಂಡಿದೆ. ಇದು ಶ್ರಮ ಸಂಸ್ಕೃತಿಯ ಒಳಗಿನ ಯಾವುದೇ ಹೆಣ್ಣಿನ ವ್ಯಕ್ತಿತ್ವವೂ ಹೌದು. ಗಂಡ ತನ್ನ ಗಡಿಯನ್ನುದಾಟಿ ಮಾತನಾಡಿದಾಗ ಅದನ್ನು ಪ್ರಶ್ನಿಸುವ ಕೆಚ್ಚನ್ನು ಇಲ್ಲಿಯ ಹೆಣ್ಣುತೋರುತ್ತಾಳೆ. ಆ ಮೂಲಕವಾದ ಪ್ರತಿಭಟನೆಯಿಂದ ತಾನೂ ಸಮಾಜದ ಆರ್ಥಿಕ ವ್ಯವಸ್ಥೆಯ ಉತ್ಪಾದನೆಯಲ್ಲಿ ಪುರುಷನಂತೆ ಪಾಲುದಾರಳು ಎಂಬುದನ್ನು ಪರೋಕ್ಷವಾಗಿ ಧ್ವನಿಸುತ್ತಾಳೆ. ಇಂತಹ ಮಹಿಳೆ ಒಡಲಾಳದ 'ಸಾಕವ್ವ', ಲಂಕೇಶರ 'ಅವ್ವ'-ಹೀಗೆಲ್ಲಾ ಹೌದು. ಇವಳು ಅಥವಾ ಇವರು ದಲಿತ ಸ್ತ್ರೀ-ಸಂಕುಲದ ಮತ್ತು ಶ್ರಮವು ನೆಲೆಯಾಗಿರುವ ಸಂಸ್ಕೃತಿಯ ಸ್ತ್ರೀ ಸಂಕುಲದ ಪ್ರಾತಿನಿಧಿಕ ರೂಪವೇ ಹೌದು.

ಇಲ್ಲಿಯ ಮಾದಪ್ಪ 'ಬೆವರ'ನ್ನು ಪ್ರತಿನಿಧಿಸುತ್ತಾನೆ. ಬೆವರೇ ಒಟ್ಟು ಸಮಾಜದ ಸಂಪತ್ತನ್ನು ಉತ್ಪಾದನೆ ಮಾಡಿರುವುದು. ಆದರೆ ಅಂತಹ ಸಂಪತ್ತು ಬೆವರಿಗೆ ದೂರವಾದ ಜನರ ಕೈಗೆ ಸಂದಿದೆ. ಆ ವರ್ಗವು ಬೆವರಿನ ಜನರಿಗೆ ನ್ಯಾಯವಾಗಿ ನೀಡಬೇಕಾದ ಪ್ರತಿಫಲವನ್ನು ನೀಡದೇ ಹೋದಾಗ ಬೆವರಿನ ವರ್ಗವು ಕನಿಷ್ಠ ನ್ಯಾಯ ಅಥವಾ ಪ್ರತಿಫಲವನ್ನು ನೀಡಬೇಕು ಎಂದು ಯಾಚಿಸುತ್ತದೆ. ಅದು ಮೀಸಲಾತಿಯೂ ಹೌದು. ಅದೂ ಸಾಧ್ಯವಾಗದೇ ಹೋದಾಗ ಆ ಮಾದಪ್ಪನೆಂಬ ಬೆವರಿನ ಶಕ್ತಿ ತನ್ನ ಉತ್ಪಾದನೆಯ ಕೇಂದ್ರೀಕೃತ ಸ್ಥಾನವಾದ ಬೇವಿನಹಟ್ಟಿ ಕಾಳಮ್ಮನನ್ನು ನಾಶ ಮಾಡಲು ಸಹ ಸಮರ್ಥವಾಗುವುದು ಕಷ್ಟವೇನೂ ಆಗುವುದಿಲ್ಲ.

ಇಂತಹ ಮಹಿಳೆಯನ್ನು ಮಾದಪ್ಪ ರಕ್ಷಿಸುತ್ತಾನೆ. ಇದರಿಂದ ಇವನ ಮಹತ್ವ ಇನ್ನಷ್ಟು ವೇದ್ಯವಾಗುತ್ತದೆ. ಮಾದಪ್ಪ ಈ ಬಗೆಯಾಗಿ ಪುರುಷ ಪರವಾದ ವ್ಯವಸ್ಥೆಯನ್ನು ಪೋಷಿಸುವುದಿಲ್ಲ; ಜಾನಪದ ನೆಲೆಯಲ್ಲಿ ನಿಂತು ಸ್ತ್ರೀಯನ್ನು ಕಾಯುತ್ತಾನೆ. ಇರುವ ಮೌಲ್ಯ ವ್ಯವಸ್ಥೆಯನ್ನು ಪ್ರತಿಭಟಿಸುತ್ತಾನೆ. ಇಂತಹ ಸಂಕಮ್ಮನನ್ನು ಅಂತಿಮವಾಗಿ ಮಾದಪ್ಪನು ತನ್ನ ಒಕ್ಕಲನ್ನಾಗಿಸಿಕೊಂಡು, ಅವಳಿಂದ ಹುಟ್ಟಿದ ಕಾರಯ್ಯ ಮತ್ತು ಬಿಲ್ಲಯ್ಯ ಎಂಬ ಇಬ್ಬರನ್ನು ತನ್ನ ದೇವರ ಗುಡ್ಡರನ್ನಾಗಿಸಿಕೊಳ್ಳುತ್ತಾನೆ. ಈ ಬಗೆಯಲ್ಲಿ ತನ್ನ ಸಾಂಸ್ಕೃತಿಕ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುತ್ತಾ ಸಾಗುತ್ತಾನೆ.

***

ಮಾದಪ್ಪನು ಶ್ರವಣಾಸುರನ ಸಂಹಾರಕ್ಕಾಗಿಯೇ ಭೂಮಿಗೆ ಅವತರಿಸಿ ಬರುವುದು. ಯಾವುದೇ ಮಂತ್ರ-ತಂತ್ರಗಳಿಂದ ಕೂಡಿದ ಪ್ರಬಲ ಆಯುಧದಿಂದ ಶ್ರವಣಾಸುರನನ್ನು ಕೊಲ್ಲುವುದು ಸಾಧ್ಯವಿಲ್ಲ ಎಂಬುದು ಮಾದಪ್ಪನಿಗೆ ಗೊತ್ತಿದೆ. ಆದ್ದರಿಂದ ಅವನು ದಲಿತ-ಶರಣ ಹರಳಯ್ಯ ಮನೆಗೆ ಬಂದು, ಅವನು ಮತ್ತು ಅವನ ಪತ್ನಿಯಿಂದ ತಮ್ಮ ತೊಡೆಗಳ ಚರ್ಮದಿಂದ ಮಾಡಿದ ಚಮ್ಮಾಳಿಗೆಯ ಜೋಡಿಯನ್ನು (ಚಪ್ಪಲಿ) ಕೇಳಿ ಪಡೆಯುತ್ತಾನೆ. ಅವುಗಳನ್ನು ಶ್ರವಣಾಸುರನಿಗಾಗಿ ತರುತ್ತಾನೆ. ಅವನ್ನು ಪಾದಗಳಿಂದ ಮೆಟ್ಟಿದ ಅಸುರ ನಿಂತಲ್ಲಿಯೇ ಭಗಭಗ ಉರಿದು ಬೂದಿಯಾಗುತ್ತಾನೆ. ಇದು ಕೇವಲ ಕತೆಯಲ್ಲ; ಪ್ರತಿಮೆ. ಶ್ರಮ ಮೂಲದ ಶಕ್ತಿಯ ಮಹಿಮೆ. ಇಂತಹ ಶಕ್ತಿಯಲ್ಲಿ ಶಕ್ತಿಯೇ ಅಲ್ಲದೆ ಪಾರಂಪರಿಕವಾದ ಸಾಮಾಜಿಕ ನೋವು, ಅಪಮಾನ, ಹತಾಶೆ, ಸಿಟ್ಟು ಆಕ್ರೋಶ ಮೊದಲಾದ ಎಲ್ಲಾ ಅಂಶಗಳು ಬೆರತಿವೆ. ಆದ್ದರಿಂದಲೇ ಆ ಜೋಡಿ ಚಮ್ಮಾಳಿಗೆಗೆ ಎಲ್ಲಿಲ್ಲದ ಶಕ್ತಿ!

ಶ್ರವಣಾಸುರನನ್ನು ಕೊಲ್ಲಲು ಯಾವುದೇ ಆಯುಧದಿಂದ ಸಾಧ್ಯವಾಗದೇ ಅದು ದಲಿತನೊಬ್ಬನ ದಲಿತತ್ವ ಎಂಬ ಉರಿಚಮ್ಮಾಳಿಗೆಯಿಂದ ಸಾಧ್ಯವಾಯಿತು ಎಂಬುದನ್ನು ಇಲ್ಲಿ ತೀವ್ರವಾಗಿ ಗಮನಿಸಬೇಕು. ಶೋಷಣೆಯ ಅಂತ್ಯವು ಶೋಷಿತನೊಬ್ಬ ಉರಿದು ನಿಂತಾಗ -ಎಂಬುದು ಇಲ್ಲಿಯ ವಿಸ್ತಾರ ಆಶಯದಲ್ಲೊಂದು ಭಾಗ.

ಇದು ಕಾವ್ಯದ ಹಲವು ಮುಖ್ಯ ಕೇಂದ್ರಗಳಲ್ಲಿ ಒಂದು.

***

ಜುಂಜೇಗೌಡ ಒಬ್ಬ ಶ್ರೀಮಂತ. ಈತನನ್ನು ಒಕ್ಕಲನ್ನಾಗಿಸಿಕೊಳ್ಳುವುದು ಮಾದಪ್ಪನ ಹಠ. ಅದಕ್ಕಾಗಿ ಜುಂಜೇಗೌಡ ಮಣಿಯದೇ ಹೋದಾಗ ಮಾದಪ್ಪ ಹಲವು ಮಾಟ, ಮಂತ್ರಗಳನ್ನು ಮಾಡುತ್ತಾನೆ. ಆ ಮೂಲಕವಾಗಿ ಶ್ರೀಮಂತ ಜುಂಜೇಗೌಡನನ್ನು ತನ್ನ ಒಕ್ಕಲನ್ನಾಗಿಸಿಕೊಂಡು ನೆಲೆನಿಲ್ಲಲು ಗುಡಿಯೊಂದನ್ನು ಕಟ್ಟಿಸಿಕೊಳ್ಳುತ್ತಾನೆ, ಮಾದಪ್ಪ.

ಇಲ್ಲಿ ಕೆಳವರ್ಗದ ವ್ಯಕ್ತಿಯೊಬ್ಬನು ಮೇಲ್ವರ್ಗದ ವ್ಯಕ್ತಿಯೊಬ್ಬನನ್ನು ತನ್ನ ಸದಾಶಯದ ವಿಸ್ತರಣೆಗಾಗಿ ತನ್ನ ಒಕ್ಕಲನ್ನಾಗಿಸಿಕೊಳ್ಳುವುದು ಎಷ್ಟರಮಟ್ಟಿಗೆ ಕಷ್ಟಸಾಧ್ಯ ಎಂಬ ಧ್ವನಿಯನ್ನು ಗಮನಿಸಬಹುದಾಗಿದೆ. ಇದಕ್ಕಾಗಿ ಮಾದಪ್ಪನು ಜುಂಜೇಗೌಡನ ಮೇಲೆ ಪ್ರಯೋಗಿಸಿದ ತಂತ್ರಗಳು ತನ್ನ ಅಸ್ತಿತ್ವವನ್ನು ಅವನಲ್ಲಿ ಸ್ಥಾಪಿಸುವುದು ಮಾತ್ರವಾಗಿದೆ. ಇದರ ಹೊರತು ಅವನ ನಾಶ ಈತನ ಹಾರೈಕೆಯಲ್ಲ ಎಂಬ ಜೀವವಿರೋಧಿಯಲ್ಲದ ತತ್ವ ಇಲ್ಲಿ ವೇದ್ಯಗೊಳ್ಳುತ್ತದೆ.

***

ಮಾದಪ್ಪ ಶ್ರಮ ಸಂಸ್ಕೃತಿಯ ಜನರನ್ನು ಪ್ರತಿನಿಧಿಸುತ್ತಾನೆ. ಇವನು ಅತ್ಯಂತ ಬಡವಳಾದ ಬೇವಿನಹಟ್ಟಿ ಕಾಳಮ್ಮನಿಗೆ ಅವಳ ಕೋರಿಕೆಯ ಮೇರೆಗೆ ಶ್ರೀಮಂತಳನ್ನಾಗಿಸುತ್ತಾನೆ. ಅವಳು ಇವನ ಒಕ್ಕಲಾಗಬೇಕೆಂಬುದು ಮಾತ್ರ ಇಲ್ಲಿಯ ಷರತ್ತು. ಶ್ರೀಮಂತಳಾದ ಮೇಲೆ ಆಕೆ ತನ್ನ ಪೂರ್ವಾಶ್ರಮ ಮತ್ತು ಷರತ್ತನ್ನು ಮರೆಯುತ್ತಾಳೆ. ಮರೆತು, ಮಹಾಜಿಪುಣೆಯಾಗಿ ಮೆರೆಯುತ್ತಾಳೆ. ಮಾದಪ್ಪನು ಕಡೆಕಡೆಗೆ ಅವಳಲ್ಲಿ

ವೀಚಿ ಸಾಹಿತ್ಯ ಪ್ರಶಸ್ತಿಗಾಗಿ ಕೃತಿಗಳ ಆಹ್ವಾನ

ವೀಚಿ ಸಾಹಿತ್ಯ ಪ್ರತಿಷ್ಠಾನವು ನೀಡುತ್ತಿರುವ ಮೂರನೆಯ ವರ್ಷದ 'ವೀಚಿ ಸಾಹಿತ್ಯ ಪ್ರಶಸ್ತಿ'ಗಾಗಿ ಕೃತಿಗಳನ್ನು ಆಹ್ವಾನಿಸಿದೆ. ಪ್ರಶಸ್ತಿಯು ೧೦,೦೦೦/- ರೂಪಾಯಿ ಮತ್ತು ಪ್ರಶಸ್ತಿಪತ್ರವನ್ನು ಒಳಗೊಂಡಿರುತ್ತದೆ. ೨೦೦೩ ಮತ್ತು ೨೦೦೪ನೇ ಸಾಲಿನಲ್ಲಿ ಪ್ರಕಟವಾಗಿರುವ ಕನ್ನಡ ಭಾಷೆಯ ಯಾವುದೇ ಪ್ರಕಾರದ ಪುಸ್ತಕಗಳನ್ನು ತಲಾ ಎರಡರಂತೆ ಲೇಖಕರು ಅಥವಾ ಪ್ರಕಾಶಕರು ಕಳುಹಿಸುವಂತೆ ಕೋರಲಾಗಿದೆ.

ಕಡೆಯ ದಿನಾಂಕ ಅಕ್ಟೋಬರ್ ೧೫, ೨೦೦೪

ಕೃತಿಗಳನ್ನು ಕಳುಹಿಸಿಕೊಡಬೇಕಾದ ವಿಳಾಸ

ಎಂ.ಹೆಚ್. ನಾಗರಾಜು, ಕಾರ್ಯದರ್ಶಿ,
ವೀಚಿ ಸಾಹಿತ್ಯ ಪ್ರತಿಷ್ಠಾನ, ಕೇರಾಫ್ ಸಂಜೀವಿನಿ
ಆಯುರ್ವೇದ ಆಸ್ಪತ್ರೆ, ಜನರಲ್ ಕಾರ್ಯಪ್ಪ ರಸ್ತೆ
ಕೃಷ್ಣರಾಜೇಂದ್ರ ಬಡಾವಣೆ, ತುಮಕೂರು - ೫೭೨ ೧೦೧

'ಭಿಕ್ಷೆಯನ್ನಾದರೂ ನೀಡು' ಎಂದು ಕೇಳುತ್ತಾನೆ. ಅದಕ್ಕೂ ಅವಳು ನಿರಾಕರಿಸುತ್ತಾಳೆ. ಎಲ್ಲವನ್ನೂ ಕೊಟ್ಟ ಈತ ಅವಳು ನ್ಯಾಯದ ಕನಿಷ್ಠ ಭಾಗವಾಗಿ ಭಿಕ್ಷವನ್ನೂ ಕೊಡದಿದ್ದಾಗ ಅವಳನ್ನು ನಾಶಗೊಳಿಸುತ್ತಾನೆ. ಇದು ಸ್ವೀಕರಿಸಿದವರನ್ನು ಕುರಿತ ನೀಡಿದವರ ಪಾಠ. ಇದು ಸಹ ಕಾವ್ಯ ಪ್ರತಿಮೆಯೇ ಹೌದು.

ಇಲ್ಲಿಯ ಮಾದಪ್ಪ 'ಬೆವರ'ನ್ನು ಪ್ರತಿನಿಧಿಸುತ್ತಾನೆ. ಬೆವರೇ ಒಟ್ಟು ಸಮಾಜದ ಸಂಪತ್ತನ್ನು ಉತ್ಪಾದನೆ ಮಾಡಿರುವುದು. ಆದರೆ ಅಂತಹ ಸಂಪತ್ತು ಬೆವರಿಗೆ ದೂರವಾದ ಜನರ ಕೈಗೆ ಸಂದಿದೆ. ಆ ವರ್ಗವು ಬೆವರಿನ ಜನರಿಗೆ ನ್ಯಾಯವಾಗಿ ನೀಡಬೇಕಾದ ಪ್ರತಿಫಲವನ್ನು ನೀಡದೇ ಹೋದಾಗ ಬೆವರಿನ ವರ್ಗವು ಕನಿಷ್ಠ ನ್ಯಾಯ ಅಥವಾ ಪ್ರತಿಫಲವನ್ನು ನೀಡಬೇಕು ಎಂದು ಯಾಚಿಸುತ್ತದೆ. ಅದು ಮೀಸಲಾತಿಯೂ ಹೌದು. ಅದೂ ಸಾಧ್ಯವಾಗದೇ ಹೋದಾಗ ಆ ಮಾದಪ್ಪನೆಂಬ ಬೆವರಿನ ಶಕ್ತಿ ತನ್ನ ಉತ್ಪಾದನೆಯ ಕೇಂದ್ರೀಕೃತ ಸ್ಥಾನವಾದ ಬೇವಿನಹಟ್ಟಿ ಕಾಳಮ್ಮನನ್ನು ನಾಶ ಮಾಡಲು ಸಹ ಸಮರ್ಥವಾಗುವುದು ಕಷ್ಟವೇನೂ ಆಗುವುದಿಲ್ಲ.

ಹೀಗೆ ಬೆವರು ತನ್ನ ಪಾಲನ್ನು ಅಥವಾ ಕನಿಷ್ಠ ಪಾಲನ್ನು ಪಡೆಯದಿದ್ದಾಗ ಅದನ್ನು ಎದುರಿಸಿ, ಉಳಿಯುವ ಶಕ್ತಿ ಯಾವ ಬಂಡವಾಳಶಾಹಿಯ ಶಕ್ತಿ ಮತ್ತು ಅದರ ವಕ್ತಾರನಿಗೂ ಬದುಕುಳಿದಿರುವುದಿಲ್ಲ ಎಂಬ ಧ್ವನಿ ನನಗೆ ಕೇಳುತ್ತದೆ. ಈ ನೆಲೆಯಲ್ಲಿ 'ಕಾಳಮ್ಮನ ಸಾಲು' ಎಂಬ ಈ ಒಟ್ಟು ಭಾಗವು ಒಂದು ಸಂಯೋಜಿತ ಪ್ರತಿಮೆಯಾಗಿ ಶ್ರಮಿಕರ ಬಿಸಿಯುಸಿರನ್ನು ಮುಂಗಾಣ್ಕೆಯನ್ನಾಗಿಸುವಲ್ಲಿ ಯಶಸ್ಸನ್ನು ಕಾಣುತ್ತದೆ. ಇಂತಹ ಪ್ರಸ್ತುತತೆಯು ಬಂಡವಾಳಶಾಹಿ ಜಗತ್ತಿನ ವಿಸ್ತರಣೆಯ ಈ ಕಾಲಕ್ಕೆ ಪಾಠವಾಗಬಹುದು.

***

ಮಾದಪ್ಪನ ಕಾವ್ಯಕ್ಕೆ ಜೀವ ಮತ್ತು ಮನುಷ್ಯ ಪರವಾದ ಮೌಲ್ಯವಿದೆ. ಈ ಮಾದಪ್ಪ ರಾಮಾಯಣದ ಶ್ರೀರಾಮನಂತೆ ಸೀತೆಯನ್ನು ಬೆಂಕಿಗೆ ಅಟ್ಟುವುದಿಲ್ಲ; ಪುರುಷನ ಶೋಷಣೆಗೆ ಒಳಗಾದ ಸಂಕಮ್ಮನನ್ನು ಕಾಯುತ್ತಾನೆ. ಅಂತೆಯೇ ಪುರಾಣದ ವಾಮನನಂತೆ ದಾನ ಕೊಟ್ಟವನನ್ನು ಬಲಿ ತೆಗೆದುಕೊಳ್ಳುವುದಿಲ್ಲ; ತಾನೇ ಎಲ್ಲವನ್ನು ಕೊಟ್ಟು ಭಿಕ್ಷೆಯನ್ನು ಕೇಳಿ ಪಡೆಯುವ ದಾರುಣಾವಸ್ಥೆಗೆ ಹೋಗಿ ತಲುಪುತ್ತಾನೆ.

ಈ ಮೂಲಕ ದಲಿತತ್ವದ ದಾರುಣತೆ, ಪರರನ್ನು ಶೋಷಿಸದ ಪಾವಿತ್ರ್ಯತೆ, ಯಾರನ್ನೂ ಸಾಮಾಜಿಕವಾಗಿ ಅಪಮಾನಗೊಳಿಸದ ಸಭ್ಯತೆ -ಈ ಎಲ್ಲವನ್ನು ಒಟ್ಟಾಗಿಸಿಕೊಂಡ ಸಾಂಸ್ಕೃತಿಕ ನಾಯಕನಾಗಿ ಆ ಮೌಲ್ಯಾವಸ್ಥೆಯ ಸ್ಥಾಪನೆಗಾಗಿ ಹೊರಡುತ್ತಾನೆ. ಆ ದಾರಿಯಲ್ಲಿ ಶಿಷ್ಟ ಪುರಾಣಗಳ ಪುಣ್ಯ ಪುರುಷರಂತೆ ಪ್ರಾಣಿಸಂಕುಲವನ್ನು ಬೇಟೆಯಾಡದೆ; ಅರ್ಜುನನಂತೆ ಖಾಂಡವ ವನವನ್ನು ದಹನ ಮಾಡದೆ, ರಾಜಕೀಯಾಧಿಕಾರದ ಸ್ಥಾಪನೆಗಾಗಿ ಜೀವಕುಲದಿಂದ ಜೀವ ತೆಗೆಯುವ ಯುದ್ಧವನ್ನು ಕೈಗೊಳ್ಳದೆ ಮುಖ್ಯನಾಗುತ್ತಾನೆ.

ಹಾಗೆ ಆಗುತ್ತಲೇ ಅಕ್ಷರವಾಗದ ದಲಿತತ್ವಕ್ಕೆ ಆತ್ಮಕಥಾನಕನೆನಿಸುತ್ತಾನೆ. □

ಕುಲಕದಿರು

○ ಡಾ|| ರಂಗರಾಜ ವನದುರ್ಗ



ನನ್ನ ಕೈ ಕುಲಕದಿರು ಗೆಳೆಯ
ನನ್ನಲ್ಲಿ ಹೊಸದೇನಿದೆ ?
ಅದೆ ಅಂಗೈಯೊಳಗೆ ಅದೆ ಗೆರೆ

ಒಡೆಯನ ಮಹರಿಗೆ
ಕಲ್ಲು ಹೊರೆಸುವ ಬದಲು
ದನಗಳ ಹಟ್ಟಿಗೆ
ಸೆಗಣಿ ಬಳಿಸುವ ಬದಲು
ಪಂಚಾಂಗದ ಪುಟದೊಳಗೆ
ಕವಡೆಯಾಗಿಸುವ ಬದಲು
ನಿನ್ನ ಆ ಅಗ್ರಹಾರ
ನನ್ನ ಬೊಗಸೆಗೆ
ಹಿಡಿ ಅಕ್ಷರವಾದರೂ ಸುರಿದಿದ್ದರೆ
ನಾನು ನಾನಾಗುತ್ತಿದ್ದೆ
ನಿನ್ನ ಸಮ ಇರುತ್ತಿದ್ದೆ.
ಆದರೆ, ನನ್ನದು ಈಗಲೂ ಖಾಲಿಕೈ
ಅದಕ್ಕೆ ಗೆಳೆಯ
ನನ್ನ ಖಾಲಿ ಕೈಗೆ
ನಿನ್ನ ಕಂಪ್ಯೂಟರ್ ಕುಕ್ಕದಿರು.

ಹುಟ್ಟದ ಸೂರ್ಯ ಸಾಯದ ಕತ್ತಲು
ನಿತ್ಯ ನನ್ನ ಮೇಲೆ ನೂರು ಸವಾರಿ
ಕತ್ತಲ ಗವಿ ದಾಟಿ ಚಿನ್ನದ ಮನೆ ಮೀಟಿ
ನಿತ್ಯ ನಡೆಯುತ್ತಿರುವೆ ಮೈಲುಮೈಲು
ಅಗೆದಗೆದು ತೆಗೆದ ಮೂಟೆಯ ಆದಿರು
ಸೇರುತ್ತಿದೆ ಆಗಲೇ ಧಣಿಯ ತವರು

ಆದರೂ ನನ್ನಲ್ಲೂ ಉಳಿದಿದೆ
ಅಂಗೈ ತುಂಬೆಲ್ಲ ಆದಿರ ಚೂರು
ಅದಕ್ಕೆ ಗೆಳೆಯ ಮೈ ಕುಲಕದಿರು
ನಿನಗೂ ನಟ್ಟಾವು ಅದರ ಚೂರು.

ಸಂವಾದ

ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಪೌರ ಕಾರ್ಮಿಕರ ಜಾಗತಿಕ ಗುತ್ತಿಗೆ ಯಾರಿಗೆ?

ಜಾಗೃತಿ

ಜಾಗತೀಕರಣ ನಮ್ಮ ಮನೆ ಬಾಗಿಲಿಗೇ ಬಂದಿದೆ. 'ಪ್ರಗತಿಯ ಬಸಿರೆಂದು' ಬಲಿಷ್ಠ ರಾಷ್ಟ್ರಗಳು ಬಣ್ಣಿಸುತ್ತಿರುವ ಜಾಗತೀಕರಣದಿಂದ ಭಾರತದ ಅಲಕ್ಷಿತ ಜನಸಮುದಾಯ ತತ್ತರಿಸಿ ಹೋಗುತ್ತಿದ್ದು ಮುಂಬರುವ ದಿನಗಳು ಕರಾಳವಾಗಲಿವೆ ಎಂಬುದು ಭಾರತದಲ್ಲಿ ದಲಿತ ಮಾನವ ಹಕ್ಕುಗಳ ರಾಷ್ಟ್ರೀಯಾಂದೋಲನ ಶೋಧಿಸಿ ಪ್ರಕಟಿಸಿರುವ ಮಾಹಿತಿಯಿಂದ ತಿಳಿದು ಬಂದಿದೆ. ಜಾಗತೀಕರಣದ ಬಗೆಗಿನ ಎಲ್ಲಾ ಭರವಸೆಗಳು ಎಂಥ ಹಸಿ ಸುಳ್ಳು ಎಂಬುದು ಈ ಮಾಹಿತಿಯಿಂದ ತಿಳಿದು ಬರುತ್ತದೆ. ಈ ಮಾಹಿತಿಯನ್ನಾಧರಿಸಿದ ಸಂಶೋಧನಾ ಲೇಖನಮಾಲೆಯ ಆರನೆಯ ಹಾಗೂ ಕೊನೆಯ ಕಂತು ಇದು.

○ ಅನು: ಡಿ. ಡೊಮಿನಿಕ್

ಪೌರ ಕಾರ್ಮಿಕರ ಉದ್ಯೋಗಕ್ಕಾಗಿ ಜಾಗತೀಕರಣದ ಸಂದರ್ಭದಲ್ಲಿ ಯಾರಾದರೂ ಗುತ್ತಿಗೆ ಹಿಡಿಯುವರೇ?

'ಜಾತಿ ಪದ್ಧತಿಯಿಂದಾಗಿ ಪೌರ ಕಾರ್ಮಿಕರನ್ನು (ಕಸ ತೆಗೆಯುವವರು) ಅಂಚಿಗೆ ತಳ್ಳಿರುವುದು ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಸಾರ್ವಜನಿಕ ಅಂಗಗಳಲ್ಲಿ ಎದ್ದು ಕಾಣುತ್ತಿದೆ. ಅವರನ್ನು ವಂಚಿಸಿ ಶೋಷಿಸುತ್ತಿರುವುದು ಅವರ ಪ್ರತ್ಯೇಕ ಜಾತಿ ಮತ್ತು ವೃತ್ತಿಯಿಂದಾಗಿ. ಪೌರ ಕಾರ್ಮಿಕರನ್ನು ತೀವ್ರವಾದ ಅಸ್ಪೃಶ್ಯತೆ ಮತ್ತು ಪ್ರತ್ಯೇಕಿತ ಬದುಕಿಗೆ ದೂಡಿ ಬಲಿಪಶುಗಳನ್ನಾಗಿ ಮಾಡಲಾಗಿದೆ. ಅಸ್ಪೃಶ್ಯರಾದ, ಮುಟ್ಟಬಾರದ ಮತ್ತು ನೋಡಬಾರದ ಅವರು ಚಾರಿತ್ರಿಕವಾಗಿ ಸಾಮಾಜಿಕ ನಿರ್ಲಕ್ಷ್ಯ, ದೂಷಣೆ ಮತ್ತು ಕಳಂಕಕ್ಕೆ ಒಳಪಡಿಸಲಾಗಿದೆ'.

-ಸಫಾಯಿ ಕರ್ಮಚಾರಿಗಳ ರಾಷ್ಟ್ರೀಯ ಸಮಿತಿಯ ವರದಿ, ೧೯೯೫-೯೬

ಚಾರಿತ್ರಿಕವಾಗಿ, ಭೂಮಿ ಮತ್ತು ಇತರೆ ಸಂಪನ್ಮೂಲಗಳಿಂದ ದಲಿತರನ್ನು ದೂರವಿಟ್ಟ ಜಾತಿ ಕಾನೂನು, ಅದೇ ಕಾನೂನಿಂದ ಅವರು ಸಮಾಜದ ಸ್ವಚ್ಛತೆಯ ಜವಾಬ್ದಾರಿ ಹೊರುವಂತೆ ಮಾಡಿದ್ದರಿಂದ ಅವರು ಕೊಳಕು ಹೊರುವಂಥ ಅವಹೇಳನಕಾರಿ ಕೆಲಸವನ್ನು ಒತ್ತಾಯಪೂರ್ವಕವಾಗಿ ನಿರ್ವಹಿಸಲಾಯಿತು. (ಹೇಲೆತ್ತುವುದು ಮತ್ತು ಅದನ್ನು ಸಾಗಿಸುವ ಆಚರಣೆ)

'ಈ ಕನಿಷ್ಠ ಜಾತಿಗಳು (ಚಮ್ಮಾರ, ಬೆಗಾರಿ, ಧನುಕ, ಥೋರಿ, ಬಲಹಾರಿ) ಜಾತಿ ಪದ್ಧತಿಯ ಭೂಮಿ ಉಳದಂತೆ ತಡೆದಿರುವುದು ಒತ್ತಾಯದಿಂದಾಗಿ ಅಲ್ಲದೆ ಅವರಿಗೆ ಗೊತ್ತುಪಡಿಸಿ ಚರ್ಮ ಕೆಲಸ ಮತ್ತು ಸ್ವಚ್ಛತೆ ಮುಂತಾದ ಕೆಲಸಗಳಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಭೂಮಾಲೀಕ ಮತ್ತು ರೈತರ ಜಮೀನಿನಲ್ಲಿ ದುಡಿಯಲು ಮೀಸಲು ಪಡೆಯುವಂತಾದರು. (ಇರ್ಫಾನ್ ಹಬೀಬ್, ಭಾರತೀಯ ಚಾರಿತ್ರಿಕ ಪ್ರಬಂಧಗಳು). ಆದ್ದರಿಂದ ಇದು ವಂಶಪಾರಂಪರ್ಯವಾಗಿ, ಬೇರೆ ಜಾತಿಗಳವರು ಮಾಡದ ಕಸುಬಾಗಿಯೇ ಉಳಿದುಕೊಂಡಿದೆ.

ಈ ಹೇಲೆತ್ತುವ ಕೆಲಸದಲ್ಲಿ ತೊಡಗಿರುವವರಲ್ಲಿ ಅಧಿಕ ಮಂದಿ ದಲಿತ ಮಹಿಳೆಯರಾಗಿದ್ದಾರೆ. ಸಫಾಯಿ ಕರ್ಮಚಾರಿಗಳ ಬಗ್ಗೆ ಅಧಿಕೃತ ಅಂಕಿ-ಅಂಶಗಳು ನಮಗೆ ದೊರೆಯುವುದು ಉದ್ಯೋಗವೆಂದು ದಾಖಲಾಗಿರುವ ವರದಿಗಳಿಂದ. ಆದರೆ ದಲಿತ ಮಹಿಳೆಯರು ಭಾರತದಾದ್ಯಂತ ಹಳ್ಳಿಗಳಲ್ಲಿ ಖಾಸಗಿ ಮನೆಗಳಲ್ಲಿ ಹೇಲು ಬಾಚುತ್ತಿದ್ದು ಗಂಡಸರಿಗಿಂತ ಕಮ್ಮಿ ಕೂಲಿಯನ್ನು ಪಡೆಯುತ್ತಿದ್ದಾರೆ. ಅಂದರೆ ಖಾಸಗೀ ಕೆಲಸಗಾರರಾಗಿರುವ ಈ ಮಹಿಳೆಯರ ಕೂಲಿ ತಿಂಗಳಿಗೆ ೫/- ರೂ. ಹಾಗೂ ತಂಗಳನ್ನ. ಈ ಕ್ರಮಬದ್ಧ ಗುಲಾಮಿತನ ಅವರನ್ನು ಜಾತಿಪದ್ಧತಿಯ ವಿಷಚಕ್ರದಲ್ಲಿ ಸಿಲುಕಿಸಿದೆಯಲ್ಲದೆ, ಸಾಕ್ಷರತೆಯಿಂದ ದೂರ ವಿಟ್ಟಿದೆ. (ಜೋಧ್‌ಪುರದಲ್ಲಿ ಕೈಗೊಂಡ ಅಧ್ಯಯನದ ಪ್ರಕಾರ, ಅವರ ಸಾಕ್ಷರತೆಯು ಕೇವಲ ಶೇ ೧೦.೫ -(ಪುರುಷರ ಸಾಕ್ಷರತೆ ಶೇ ೧೮.೩ ಹಾಗೂ ಮಹಿಳೆಯರ ಸಾಕ್ಷರತೆ ಶೇ ೨.೦೧) ಶ್ಯಾಂಲಾಲ್, ದಿಭಂಗಿ, ಅದರ ಸಾಮಾಜಿಕ-ಆರ್ಥಿಕ ಪರಿಣಾಮ, ೧೯೯೨) ಹೀಗೆ ಅವರ ಘನತೆಗೆ ಈ ವೃತ್ತಿ ಕಳಂಕ ತರುತ್ತದೆ.



ಆರೋಗ್ಯದ ಮೇಲೆ ಅಧಿಕ ಖರ್ಚು : ಅನೇಕ ಮುನಿಸಿಪಾಲಿಟಿಗಳಲ್ಲಿ ಪುರಾತನ ಕಾಲದ ಪೊರಕೆ, ಬುಟ್ಟಿ ಮತ್ತು ಸನಿಕೆಗಳನ್ನು ಸಫಾಯಿ ಕರ್ಮಚಾರಿ ಕೆಲಸಕ್ಕಾಗಿ ನೀಡಲಾಗಿದೆ. ಬಹುತೇಕ ಕಡೆಗಳಲ್ಲಿ ಈ ಕೆಲಸದಲ್ಲಿ ತೊಡಗಿರುವವರಿಗೆ ಗಮ್ ಶೂಗಳು, ಕೈಚೀಲ ಅಥವಾ ಮುಖವಾಡಗಳನ್ನು ನೀಡಲಾಗಿಲ್ಲ. ಹೀಗೆ ಇತರರ ಆರೋಗ್ಯ ಮತ್ತು ಬದುಕನ್ನು ಕಾಯುವ ಈ ಜನಕ್ಕೆ ಆಧುನಿಕ ಸಾಧನಗಳಿಲ್ಲದೆ ಅಪಾಯಕಾರಿ ಸನ್ನಿವೇಶದಲ್ಲಿ ಆರೋಗ್ಯ ಡೋಲಾಯಮಾನ ಸ್ಥಿತಿಯಲ್ಲಿರುತ್ತದೆ.

ಈ ಹಿಂದಿನ ರಾಷ್ಟ್ರೀಯ ಯೋಜನಾ ಸಮಿತಿಯ ಅಧ್ಯಯನದ ಪ್ರಕಾರ ಈ ಕೆಲಸದಲ್ಲಿ ತೊಡಗಿರುವವರ ಆರೋಗ್ಯ ದೀನ ಸ್ಥಿತಿಗೆ ತಲುಪಿದೆಯೆಂದು ಹೇಳಿರುವುದು ಈಗಲೂ ವಾಸ್ತವವಾಗಿಯೇ ಉಳಿದುಕೊಂಡಿದೆ:

- ★ ಶೇ ೪೯.೩ ರಷ್ಟು ಮಂದಿ ಉಸಿರಾಟದ ತೊಂದರೆಗಳಿಂದ ನರಳುತ್ತಿದ್ದಾರೆ.
- ★ ಶೇ ೧೨.೫ ರಷ್ಟು ಜನ ಚರ್ಮ ರೋಗಗಳಿಂದ ವೇದನೆ ಪಡುತ್ತಿದ್ದಾರೆ.
- ★ ಶೇ ೫೫.೯ ರಷ್ಟು ಜನ ಸಂಧಿವಾತದ ಬಗ್ಗೆ ದೂರಿದ್ದಾರೆ.
- ★ ಶೇ ೭.೨ ರಷ್ಟು ಜನ ಜ್ವರ ಪೀಡಿತರು.
- ★ ಶೇ ೨೬.೩ ರಷ್ಟು ಮಂದಿ ಕರುಳು ಬೇನೆಗೊಳಗಾಗಿದ್ದಾರೆ.
- ★ ಶೇ ೧೧.೮ ರಷ್ಟು ಮಂದಿ ತೂಕ ಕಳೆದುಕೊಂಡಿದ್ದಾರೆ.
- ★ ಶೇ ೧೧.೨ ರಷ್ಟು ಮಂದಿ ದೈಹಿಕವಾಗಿ ಗಾಯಗೊಂಡಿದ್ದಾರೆ.
- ★ ಶೇ ೧೨.೫ ರಷ್ಟು ಜನ ಮಾನಸಿಕ ಒತ್ತಡ ಮತ್ತು ಮದ್ಯಪಾನ ವ್ಯಸನಿಗಳಾಗಿದ್ದಾರೆ.

(ವೃತ್ತಿಪರ ಆರೋಗ್ಯ ಮತ್ತು ರಕ್ಷಣಾ ಕೇಂದ್ರ ವರದಿ, ಮುಂಬಯಿ, ೧೯೯೬)

ಆಧುನಿಕ ಕಾಲದಲ್ಲೂ ಭಾರತ ನಾಚಿ ತಲೆತಗ್ಗಿಸಿದೆ :

ಆ ಅಮಾನವೀಯ ಕೆಲಸವನ್ನು ನಿಲ್ಲಿಸಲು ಮೊದಲಬಾರಿ ಮುಂಬೈ ರಾಜ್ಯದಲ್ಲಿ ಅಕ್ಟೋಬರ್ ೧೯೪೭ರಲ್ಲಿ ಒಂದು ಖಾಸಗೀ ಬಿಲ್ಲನ್ನು ಮಂಡಿಸಲಾಯಿತು. ಹೀಗೆ ೧೯೪೭-೨೦೦೩ರವರೆಗೆ ಅನೇಕ ರಾಷ್ಟ್ರೀಯ ಸಮಿತಿಗಳು ಮತ್ತು ಶೋಧನಾ ಸಮಿತಿಗಳನ್ನು ನೇಮಿಸಲಾಗಿದೆ. ದೇಶದಲ್ಲಿನ ಈ ಅಮಾನವೀಯ ಆಚರಣೆಯನ್ನು ಇಲ್ಲವಾಗಿಸಲು ಮತ್ತು ಎಲ್ಲಾ ಕರ್ಮಚಾರಿಗಳಿಗೆ ಪುನರ್ವಸತಿ ಕಲ್ಪಿಸಲು ಭಾರತ ಸರ್ಕಾರ ಮತ್ತು ಯೋಜನಾ ಸಮಿತಿ ಕಾರ್ಯಕ್ರಮಗಳನ್ನು ರೂಪಿಸಿ ಸಂಪನ್ಮೂಲಗಳನ್ನು ನೀಡಿದೆ. ಕರ್ಮಚಾರಿ ಉದ್ಯೋಗ ಮತ್ತು ಒಣ ಪಾಯಿಖಾನೆಗಳನ್ನು ಕಟ್ಟುವುದನ್ನು ನಿಲ್ಲಿಸುವ ಕಾನೂನಿನ ಮೂಲಕ ೧೯೯೩ರಲ್ಲಿ ಸರ್ಕಾರ ಅಂಥ ಕೆಲಸಗಳನ್ನು ರದ್ದುಗೊಳಿಸಿದೆ.

ಈ ಎಲ್ಲಾ ಕ್ರಮಗಳ ಹೊರತಾಗಿಯೂ ಇವತ್ತಿಗೂ ಮಲ ಹೊರುವ ಕೆಲಸ ನಿರಂತರವಾಗಿ ನಡೆದಿದೆ. ಒಣ ಪಾಯಿಖಾನೆಗಳನ್ನು ಈಗಲೂ ಕಟ್ಟುತ್ತಿದ್ದಾರೆ. ಸರ್ಕಾರವೇ ಸಾರ್ವಜನಿಕ ಹಣವನ್ನು ಉಪಯೋಗಿಸಿ ಈ ಕೆಲಸಕ್ಕಾಗಿ ಜನರನ್ನು ನೇಮಿಸಿಕೊಳ್ಳಲಾಗುತ್ತಿದೆ. ಭಾರತದಲ್ಲಿನ ಈ ದುರಂತಕ್ಕೆ ಈ ಕೆಳಗಿನ ಅಂಶಗಳೇ ಸಾಕ್ಷಿಯಾಗಿವೆ.

ಒಣ ಪಾಯಿಖಾನೆಗಳ ಬಳಕೆ ಈಗಲೂ ಮುಂದುವರೆದಿದೆ: ೧೯೮೯ರಲ್ಲಿ ಇಂಥ ಪಾಯಿಖಾನೆಗಳು ಭಾರತದಲ್ಲಿ ಒಟ್ಟು ೭.೬೪ ಮಿಲಿಯನ್ ಇದ್ದು ಅವುಗಳಲ್ಲಿ ೫.೪೨ ಮಿಲಿಯ ನಗರದಲ್ಲಿದ್ದರೆ, ೨.೨೨ ಮಿಲಿಯನ್ ಗ್ರಾಮೀಣ ಪ್ರದೇಶದಲ್ಲಿವೆ. ಇಂಥ ಒಣ ಪಾಯಿಖಾನೆಗಳನ್ನು ಬಳಸುವ ನಗರದ ಕುಟುಂಬಗಳು ೭,೨೦೫,೬೮೬. ಗ್ರಾಮೀಣ ಪ್ರದೇಶದ ಬಳಕೆದಾರ ಕುಟುಂಬಗಳ

ಸಂಖ್ಯೆ ೨,೪೮೦,೨೫೬. (ಯೋಜನಾ ಸಮಿತಿಯಿಂದ ನೇಮಿತವಾದ ಕಾರ್ಯಪಡೆಯ ವರದಿ, ೧೯೯೦)

ಹೆಚ್ಚುತ್ತಿರುವ ಪರಿಶಿಷ್ಟ ಜಾತಿಯ ಪೌರಕಾರ್ಮಿಕರು

'ಭಾರತದಾದ್ಯಂತ ಕಸಗುಡಿಸುವವರು, ಕೊಳಕು ಬಾಚುವವರು, ಮಲ ಹೊರುವವರು ಮತ್ತು ಪೌರಕಾರ್ಮಿಕರಾಗಿರುವವರೆಲ್ಲರೂ ಅಸ್ಪೃಶ್ಯರೇ...'

(ಆರ್. ದಿಲಿಗೆಯವರ ಅಧ್ಯಯನ)

ಜಾಗತೀಕರಣದಡಿ ಆರ್ಥಿಕ ಖರ್ಚು-ವೆಚ್ಚಗಳ ನಿರ್ವಹಣೆ ಮತ್ತು ಕಲ್ಯಾಣ ಕಾರ್ಯಕ್ರಮಗಳಲ್ಲಿ ಸರ್ಕಾರದ ಪಾತ್ರ ಕಮ್ಮಿಯಾಗುತ್ತಿರುವಾಗ, ವಿವಿಧ ರೀತಿಯ ಉದ್ಯೋಗಾವಕಾಶಗಳಿಂದ ಅನಕ್ಷರಸ್ಥ ಜನ ಮತ್ತು ಅಸಂಘಟಿತ ಜನ ಹೊರಗುಳಿದುಬಿಟ್ಟು, ಕಸಗುಡಿಸುವ ಉದ್ಯೋಗ ಮಾತ್ರ ಅವರ ಅನಿವಾರ್ಯ ಆಯ್ಕೆಯಾಗಿಬಿಡುತ್ತದೆ.

'ಕೊಳಕನ್ನು ತೆಗೆಯುವ ಸಾಂಪ್ರದಾಯಿಕ ಕೆಲಸದಿಂದಾಗಿ ಅಸ್ಪೃಶ್ಯರಾದವರಿಗೆ ಕೆಲವು ವೇತನ ತರುವ ಉದ್ಯೋಗಗಳ ಸಂಪೂರ್ಣ ಏಕಸ್ವಾಮ್ಯ ದೊರಕಬೇಕಿತ್ತು. ಇಂಥ ಕೆಲಸವನ್ನು ಇತರೆ ಜಾತಿಗಳವರು ಆಯ್ದುಕೊಳ್ಳುವುದು ದೂರದ ಪ್ರಶ್ನೆಯಾಗಿರುವುದರಿಂದ ಸಾವಿರಾರು ಅಸ್ಪೃಶ್ಯರು ಇಂಥ 'ಸಂಘಟಿತ ವಲಯ'ದಲ್ಲಿ ವೇತನ ನೀಡುವ ಉದ್ಯೋಗ ದೊರೆತು, ಸಾಮಾಜಿಕ ಭದ್ರತೆ ದೊರೆತಂತಾಗುತ್ತಿತ್ತು. (ಆರ್. ದಿಲಿಗೆ, ಭಾರತದಲ್ಲಿ ಅಸ್ಪೃಶ್ಯರು) ಆದರೆ ಈ ಆರ್ಥಿಕ ಸಬಲೀಕರಣದ ಅವಕಾಶಗಳೂ ಸಹ ಸಾರ್ವಜನಿಕ ವಲಯವನ್ನು ಖಾಸಗೀಕರಿಸುವುದರಿಂದಾಗಿ ಕುಸಿಯುತ್ತಿವೆ.

ಗಂಭೀರ ಪ್ರಶ್ನೆಗಳು

★ ಈ ಹೇಲೆತ್ತುವ ಕೆಲಸ ಸ್ವಾತಂತ್ರ್ಯ ಬಂದು ೫೦ ವರ್ಷಗಳ ನಂತರವೂ ಮುಂದುವರಿದಿದೆ ಎಂದರೆ ಇದೊಂದು ದೊಡ್ಡ ಅಪರಾಧ ಮತ್ತು ಕಳಂಕವಲ್ಲವೇ ?

★ ಈ ಅಸಹ್ಯ, ಅಮಾನವೀಯ ಆಚರಣೆಯನ್ನು ರದ್ದುಪಡಿಸದೆ, ನಿರಂತರವಾಗಿ ಜನರಿಂದ ಮತ್ತು ಸಂವಿಧಾನಾತ್ಮಕ ಸರ್ಕಾರಗಳ ಹೊರತಾಗಿಯೂ ಮುಂದುವರಿದಿದೆ ಎಂದರೆ, ಇಂಥ ಸರ್ಕಾರದಲ್ಲಿ ಪಾಲ್ಗೊಂಡವರನ್ನೆಲ್ಲಾ 'ಭಾರತೀಯ ಜನತೆಗೆ ಮತ್ತು ಸಂವಿಧಾನಕ್ಕೆ ದ್ರೋಹ' ಬಗೆದವರೆಂದು ಸಾರ್ವಜನಿಕವಾಗಿ ಘೋಷಿಸಿ, ತೀರ್ಮಾನಿಸಬಾರದೇಕೆ ?

★ ಈ ಕ್ರೂರ ಪದ್ಧತಿಯನ್ನು ಕಾಯ್ದುಕೊಂಡು, ತಮ್ಮ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳುತ್ತಿರುವ ಮೇಲ್ಜಾತಿ ಗುಂಪುಗಳ ವಿರುದ್ಧ ಪ್ರಜ್ಞಾವಂತ ನಾಗರಿಕ ಸಮಾಜ ದಂಗೆ ಏಳಬಾರದೇಕೆ ?

★ ಈ ಸಫಾಯಿ ಕರ್ಮಚಾರಿಗಳ ದುರಂತಮಯ ಬದುಕಿಗೆ ಆಸರೆಯಾಗುವ ಕಾರ್ಯಕ್ರಮಗಳನ್ನು ಕೈಗೊಳ್ಳದೆ 'ದೇಶಪ್ರೇಮ', 'ರಾಷ್ಟ್ರೀಯತೆ' ಎಂದು ಬೊಗಳುತ್ತಿರುವ ರಾಜಕೀಯ ಪಕ್ಷಗಳಿಗೆ ಮರ್ಯಾದೆ ಇದೆಯಾ ?

★ ದೇಶದಾದ್ಯಂತ ಪ್ರಜೆಗಳ ಸ್ವಚ್ಛತೆಗೆ ತಮ್ಮನ್ನು ಮುಡುಪಾಗಿರಿಸಿರುವ ಈ ಕರ್ಮಚಾರಿಗಳನ್ನು ಸರ್ಕಾರ ಖಾಸಗೀ ಗುತ್ತಿಗೆ ಪದ್ಧತಿಗೆ ದೂಡುತ್ತಿರುವುದನ್ನು ಭಾರತೀಯ ಪ್ರಜೆಗಳು ಸುಮ್ಮನೆ ನಿಂತು ನೋಡಬೇಕೆ ?

★ ಈ ಕರ್ಮಚಾರಿಗಳಿಗೆ ಉಪಯೋಗವಾಗದ ರಾಷ್ಟ್ರೀಯ ಅಭಿವೃದ್ಧಿ ಪ್ರಗತಿ ಎಂದು ಜಾಗತೀಕರಣದಡಿ ಕೂಗುವುದರಲ್ಲಿ ಏನಾದ್ರೂ ಅರ್ಥವಿದೆಯೇ ? ಈ ಕರ್ಮಚಾರಿಗಳ ಬದುಕಿನ ಗುಣಮಟ್ಟ ಎಷ್ಟು ಸುಧಾರಿಸಿದೆ ಎನ್ನುವ ಆಧಾರದಲ್ಲಿ ಮಾತ್ರ ಪ್ರಗತಿಯನ್ನು ಅಳೆಯಬೇಕು ತಾನೆ ?



ಜೀವ ಭದ್ರತೆಯ ಹಕ್ಕಿಗೂ ಕುತ್ತು

'ಜಾತಿ ವ್ಯವಸ್ಥೆಯು ಒಂದು ಆರ್ಥಿಕ ವ್ಯವಸ್ಥೆ. ಅದು ಜನರನ್ನು ಭೂಒಡೆತನದಿಂದ ಮತ್ತು ಶಿಕ್ಷಣದಿಂದ ತಡೆಯುತ್ತದೆ. ಅದೊಂದು ವಿಷಚಕ್ರ ಮತ್ತು ಆರ್ಥಿಕ ಶೋಷಣೆಯ ಕೂಟ. ಮೇಲು ಜಾತಿಯ ವ್ಯಕ್ತಿಗೂ ಮತ್ತು ಭೂಮಾಲೀಕತ್ವ ಪದ್ಧತಿಗೂ ಸಂಬಂಧವಿದೆ. ಹಾಗೆಯೇ ಕೆಳಜಾತಿ ಮತ್ತು ಭೂಮಿ ಇಲ್ಲದೆ ಇರುವುದಕ್ಕೂ ಸಂಬಂಧವಿದೆ... ಜಾತಿಯು ಆರ್ಥಿಕ ಶೋಷಣಾ ಪದ್ಧತಿಯನ್ನು ಶಾಶ್ವತವಾಗಿಸುವ ಸಾಧನ.' (ಹ್ಯುಮನ್ ರೈಟ್ಸ್ ವಾಚ್, ಬ್ರೋಕನ್ ಪೀಪಲ್ ೧೯೯೯)

ಅಮರ್ತ್ಯ ಸೇನ್‌ರ ಅಭಿಪ್ರಾಯದಂತೆ, 'ಅಭಿವೃದ್ಧಿ ಎಂದರೆ ಜನರಿಗೆ ಆನಂದ ತರುವ ನಿಜವಾದ ಸ್ವಾತಂತ್ರ್ಯವನ್ನು ವಿಸ್ತರಿಸುವ ಕ್ರಿಯೆ'. ಇಂದು ಮನುಷ್ಯನ ಪ್ರಾಧಾನ್ಯತೆಯನ್ನು ಗುರುತಿಸಲಾಗುತ್ತಿದೆ. ಆತ/ಆಕೆ 'ಅಭಿವೃದ್ಧಿಯ ಮುಖ್ಯ ಕೇಂದ್ರವಾಗಿ ಪರಿಗಣಿಸಲಾಗುತ್ತಿದೆ' (ಸೇನ್ ೧೯೯೯). ಹಾಗಾಗಿ ಅಭಿವೃದ್ಧಿ ಅಂದರೆ ಮುಕ್ತ ಹಾಗೂ ಸುಸ್ಥಿರ ಪಾರುಪತ್ಯ (ಜನರು ತಮ್ಮಷ್ಟಕ್ಕೆ ತಾವೆ ಮುಕ್ತವಾಗಿ ಆಯ್ಕೆ ಮಾಡುವುದು) ಅಭಿವೃದ್ಧಿಯ ಮುಖ್ಯ ಕೇಂದ್ರ. ಅಲ್ಲದೆ ಅದು ಅದರ ಭಾಗವೂ ಹೌದು. ಆದ್ದರಿಂದ ಈ ಸ್ವಾತಂತ್ರ್ಯಕ್ಕೆ ಯಾವುದೇ ಅಡ್ಡಿಯಿರುವುದನ್ನು ತೆಗೆದುಹಾಕಬೇಕಾಗುತ್ತದೆ.

ರಾಜಕೀಯ ಮತ್ತು ನಾಗರಿಕ ಹಕ್ಕುಗಳ ನಿರಾಕರಣೆಯು ಸ್ವಾತಂತ್ರ್ಯ ಉಲ್ಲಂಘನೆಗೆ ಕಾರಣವಾಗುತ್ತದೆ. ಅದು ಸಮುದಾಯವಾದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆಯ ಸ್ವಾತಂತ್ರ್ಯದ ಮೇಲೆ ನಿರ್ಬಂಧವೇರುತ್ತದೆ. ಈ ರೀತಿಯ ಉಲ್ಲಂಘನೆ ಮತ್ತು ಗುಲಾಮಿತನವು ಜಾತಿ ಆಧಾರಿತ ತಾರತಮ್ಯವಾಗಿದೆ. ಹಾಗೂ ದಲಿತರನ್ನು ತಮ್ಮ ಹಕ್ಕು ಮತ್ತು ಕಸುಬಿನ ಆಧಾರದ ಮೇಲೆ ಹಿಂಸೆಗೆ ಗುರಿಪಡಿಸಲಾಗುತ್ತದೆ.

ಭಾರತದ ಆರ್ಥಿಕ ನೀತಿಗಳಲ್ಲಿ ತೀವ್ರ ಸುಧಾರಣೆ ತಂದಿರುವ ಜಾಗತೀಕರಣದ ಕ್ರಿಯೆ ಇದನ್ನು ಮತ್ತಷ್ಟು ಹೆಚ್ಚಾಗಿಸಿದೆ. ಬದಲಾಗುತ್ತಿರುವ ನೀತಿಗಳು ಪ್ರಸ್ತುತ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿಗಳ ಮೇಲೆ ಬಹಳಷ್ಟು ಪರಿಣಾಮ ಬೀರಿದ್ದು, ನಿರ್ದಿಷ್ಟವಾಗಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಜಾತಿ ಸಂಬಂಧಗಳನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ.

ಗುಲಾಮಿತನ ಎಂದರೆ ಜಾತಿ ಆಧಾರಿತ ತಾರತಮ್ಯ ಮತ್ತು ಹಿಂಸೆ, ದಲಿತರ ಅಭದ್ರ ಬದುಕು.

ಜಾತಿ ಪದ್ಧತಿಯು ಉನ್ನತ ಜಾತಿಯವರು ದಲಿತರನ್ನು ದಮನ ಮಾಡಲು, ಗುಲಾಮರನ್ನಾಗಿಸಲು ಮತ್ತು ಅವರನ್ನು ಶೋಷಣೆ ಮಾಡಲು ಅನುಮತಿ ನೀಡುತ್ತದೆ. ಹಾಗೂ ಅದು ಗುಲಾಮಗಿರಿ ಮತ್ತು ಊಳಿಗಮಾನ್ಯ ಪದ್ಧತಿಗಿಂತ ಕ್ರೂರವಾಗಿದೆ. ಅದು ನೀತಿ ನಿಯಮಗಳ ಮೂಲಕ ಸಮಾಜದಲ್ಲಿನ ವ್ಯಕ್ತಿ ಮತ್ತು ಗುಂಪುಗಳ ಮುಖ್ಯ ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. ಇದು ಆಸ್ತಿ ಹಕ್ಕು, ಉದ್ಯೋಗ, ವೇತನ, ಶಿಕ್ಷಣ ಮತ್ತು ಗುಲಾಮಗಿರಿಯ ನಿಯಮಗಳನ್ನು ಒಳಗೊಂಡಿದೆ.

ದಲಿತರು ಸಾಮಾಜಿಕ-ಆರ್ಥಿಕ ಏಣಿಶ್ರೇಣಿಯ ತಳಭಾಗದಲ್ಲಿದ್ದು, ಅವರು ಶೋಷಣೆಗೆ ಒಳಪಟ್ಟಿದ್ದಾರೆ. ಜಾತಿ ತಾರತಮ್ಯದ ಪಟ್ಟನ್ನು ಇವರೇ ಅನುಭವಿಸಬೇಕಾಗಿದೆ ಮತ್ತು ಇವರೇ ಅಸ್ಪೃಶ್ಯತೆಯ ಬಲಿಪಶುಗಳಾಗಿದ್ದಾರೆ.

ದಲಿತರ ಮೇಲಿನ ದೌರ್ಜನ್ಯ ಹೊಸದಲ್ಲ. ಭಾರತದ ಜಾತಿ ಪದ್ಧತಿಯು ಶತಮಾನಗಳಿಂದ ದಲಿತರನ್ನು, ಗುಲಾಮರನ್ನಾಗಿ, ವ್ಯವಸಾಯ ಕೂಲಿಕಾರರನ್ನಾಗಿ ಇರಿಸಲು ಒಂದು ಸಾಧನವಾಗಿದೆ.

ಕಳೆದ ಮೂರು ದಶಕಗಳ ಜನಪರ ಚಳವಳಿಯು ದಲಿತರಲ್ಲಿ ಪ್ರಜ್ಞೆ ತಂದು ಜಾತಿ ಪದ್ಧತಿಯನ್ನು ಮತ್ತು ಅವರ ಸ್ಥಿತಿಯನ್ನು ನಿರಾಕರಿಸುವಂತೆ ಮಾಡಿದೆ. ಇಂದಿನ ಸನ್ನಿವೇಶದಲ್ಲಿ ಹೊಸದಾಗಿ ದಲಿತರ ಹಕ್ಕುಗಳ ಪ್ರತಿಪಾದನೆಯ ಕುರಿತು ವಿವಾದಗಳು ಕಾಣಿಸಿಕೊಳ್ಳುತ್ತಿವೆ.

೧೯೮೧ ರಿಂದ ೨೦೦೦, ಈ ೧೬ ವರ್ಷಗಳ ನಡುವೆ ದಲಿತರ ಮೇಲೆ ೩,೫೭,೯೪೫ ಅಪರಾಧ ಮತ್ತು ದೌರ್ಜನ್ಯ ಪ್ರಕರಣಗಳನ್ನು ಮಾಡಲಾಗಿದೆ. ಹಾಗಾಗಿ, ದಲಿತರ ಮೇಲೆ

ವಾರ್ಷಿಕ ಸರಾಸರಿ ೨೨,೩೭೧ ಅಪರಾಧ ಮತ್ತು ದೌರ್ಜನ್ಯ ಪ್ರಕರಣಗಳು ಇದೇ ಕಾಲದಲ್ಲಿ ಎಸಗಲಾಗಿದೆ. ೨೦೦೦ ವರ್ಷದ ದೌರ್ಜನ್ಯ ಮತ್ತು ಹಿಂಸೆ ಪ್ರಕರಣಗಳು; ೪೮೬ ಹತ್ಯೆ ಪ್ರಕರಣ, ೩,೨೯೮ ತೀವ್ರಗಾಯ, ೨೬೦ ದೊಂಬಿ, ೧೦೩೪ ಅತ್ಯಾಚಾರ ಮತ್ತು ೧೧೮,೬೬೪ ಇತರೆ ಅಪರಾಧಗಳ ಪ್ರಕರಣಗಳನ್ನು ಒಳಗೊಂಡಿವೆ.

ಯಾವಾಗ ದಲಿತರು ಒಗ್ಗಟ್ಟಾಗಲು ಪ್ರಯತ್ನಿಸುವರೊ ಅಥವಾ ಅವರ ಹಕ್ಕುಗಳನ್ನು ಪ್ರತಿಪಾದಿಸುವರೋ ಆಗ ಸಾಮೂಹಿಕ ಅತ್ಯಾಚಾರ, ದರೋಡೆ, ಲೂಟಿ ಇತ್ಯಾದಿಗಳ ರೂಪದಲ್ಲಿ ಭೂಮಾಲೀಕರ ಪ್ರತಿರೋಧವನ್ನು ಎದುರಿಸ ಬೇಕಾಗುತ್ತದೆ

-ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ರಾಷ್ಟ್ರೀಯ ಆಯೋಗ, ಆಯೋಗದ ವರದಿಯ ಮುಖ್ಯಾಂಶಗಳು -೧೯೯೪-೯೫ ಮತ್ತು ೯೫-೯೬

ಒಳಸುಳಿಗಳ ಪತ್ತೆ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ರಾಷ್ಟ್ರೀಯ ಆಯೋಗದ ೧೯೯೮ರ ವರದಿಯು ದೌರ್ಜನ್ಯಗಳಿಗೆ ಕೆಳಕಂಡ ಕಾರಣಗಳನ್ನು ಕೊಟ್ಟಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲೆ ನಡೆಯುವಂತೆ ದೌರ್ಜನ್ಯ ಮತ್ತು ಇತರೆ ಉಲ್ಲಂಘನೆಗೆ ಮುಖ್ಯವಾದ ಕಾರಣಗಳು, ಭೂಮಿ, ಆಸ್ತಿ ನೀರಿಗೆ ಸಂಬಂಧಿಸಿದ ಸಂಗತಿಗಳು, ವೇತನ ಪಾವತಿ, ಸಾಲ, ಜೀತ ಮತ್ತು ಒತ್ತಾಯ ಕೂಲಿ ಪದ್ಧತಿ, ಮನುಷ್ಯನ ಘನತೆಗೆ ಸಂಬಂಧಪಟ್ಟ ವಿಚಾರ, ಹಾಗೂ ಒತ್ತಾಯಪೂರ್ವಕವಾಗಿ ಹೀನಾಯ ಕೆಲಸಗಳನ್ನು ಮಾಡುವಂತೆ ಎಸ್‌ಸಿ, ಎಸ್‌ಟಿಗಳ ಮೇಲೆ ಒತ್ತಾಯ ಹೇರುವುದು ಹಾಗೂ ದಲಿತ ಹೆಣ್ಣುಮಕ್ಕಳ ಮೇಲೆ ದಬ್ಬಾಳಿಕೆ ಮತ್ತು ಹಿಂಸೆಯನ್ನು ಒಳಗೊಂಡಿದೆ.

ಸಾಮಾಜಿಕ ಸಮಸ್ಯೆಯಲ್ಲಿ ಅಸ್ಪೃಶ್ಯತೆ ಮತ್ತು ಪ್ರಬಲ ಜಾತಿಗಳಿಂದ ಬೇರ್ಪಡಿಸುವಿಕೆಯನ್ನು ಒಳಗೊಂಡಿದೆ. ಸಾಂಸ್ಥಿಕರಣದ ಬೇರ್ಪಡಿಸುವಿಕೆ ಬಹಳ ಹೀನಾಯಕರವಾದದ್ದು. ಮತ್ತು ದಲಿತರ ಸ್ಪರ್ಶ ಮೈಲಿಗೆ ಉಂಟುಮಾಡುವುದು ಎಂಬ ಪ್ರಬಲ ಜಾತಿಗಳ ಮನಸ್ಥಿತಿ ದಲಿತರಿಗೆ ಭಯಾನಕ ಮತ್ತು ಸಾಮಾಜಿಕ ಅವಮಾನವಾಗಿದೆ.

ದಲಿತರನ್ನು, ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲು ಬಿಡದಿರುವುದು, ಸಾರ್ವಜನಿಕ ಸ್ಥಳಗಳಾದ ಕೆರೆಗಳಲ್ಲಿ ಬಟ್ಟೆ ಒಗೆಯಲು ಬಿಡದಿರುವುದು, ಸ್ನಾನ ಮಾಡಲು ನಿರ್ಬಂಧ, ಸಾರ್ವಜನಿಕ ಚಹಾ ಅಂಗಡಿಗಳ ಪ್ರವೇಶ ನಿಷೇಧ, ಸಾರ್ವಜನಿಕ ಸ್ಥಳಗಳಾದ; ಬಸ್ ನಿಲ್ದಾಣ, ಪಂಚಾಯಿತಿ ಕಟ್ಟೆಯಲ್ಲಿ ಇತರ ಜಾತಿಗಳೊಡನೆ ಕೂರಲು ಬಿಡದಿರುವುದು, ರಸ್ತೆಯಲ್ಲಿ ಓಡಾಡಲು ನಿಷೇಧ, ಚಪ್ಪಲಿ ಮತ್ತು ಶುಭ್ರ ಬಟ್ಟೆ ಧರಿಸಲು ಬಿಡದಿರುವುದು, ದೋಬಿ ಮತ್ತು ಕ್ಷೌರಿಕರ ಸೇವೆ ಇವರಿಗೆ ಲಭಿಸದಿರುವುದು. ಹೀಗೆ ಅನೇಕ ಹೀನಾಯ ಪದ್ಧತಿಗಳು ದಲಿತರ ಬದುಕಿನ ಮೇಲೆ ಬೆದರಿಕೆಯನ್ನು ಹುಟ್ಟಿಸಿವೆ.

ಧಾರ್ಮಿಕ ಮತ್ತು ಸಾಮಾಜಿಕ ವಿಧಿಗಳ ಸಮಯದಲ್ಲಿ ಪ್ರಬಲ ಜಾತಿಗಳ ಜಾತಿ ಹಿರಿಮೆಯು ದಲಿತರ ಮೇಲಿನ ದೌರ್ಜನ್ಯ ಮತ್ತು ಜಾತಿ ಗಲಭೆಗೆ ಕಾರಣವಾಗುತ್ತದೆ. ಜಾತಿ ಆಧಾರಿತ ಆರ್ಥಿಕ ಮತ್ತು ರಾಜಕೀಯ ಅಂಶಗಳು ಉದ್ವೇಗ ಮತ್ತು ಹಿಂಸೆಯ ಉಲ್ಬಣಕ್ಕೆ ಕಾರಣವಾಗಿವೆ. ದಲಿತರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಮತ್ತು ಅದರ ಆರ್ಥಿಕ, ಸಾಮಾಜಿಕ, ರಾಜಕೀಯ ಹಕ್ಕುಗಳ ಪ್ರತಿಪಾದನೆಯು ಪ್ರಬಲ ಜಾತಿಗಳ ಸಿಟ್ಟಿಗೆ ಕಾರಣವಾಗುತ್ತದೆ.

ದಲಿತರನ್ನು ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲು ಬಿಡದಿರುವುದು, ಸಾರ್ವಜನಿಕ ಸ್ಥಳಗಳಾದ ಕೆರೆಗಳಲ್ಲಿ ಬಟ್ಟೆ ಒಗೆಯಲು ಬಿಡದಿರುವುದು, ಸ್ನಾನ ಮಾಡಲು ನಿರ್ಬಂಧ, ಸಾರ್ವಜನಿಕ ಚಹಾ ಅಂಗಡಿಗಳ ಪ್ರವೇಶ ನಿಷೇಧ, ಸಾರ್ವಜನಿಕ ಸ್ಥಳಗಳಾದ; ಬಸ್ ನಿಲ್ದಾಣ, ಪಂಚಾಯಿತಿ ಕಟ್ಟೆಯಲ್ಲಿ ಇತರ ಜಾತಿಗಳೊಡನೆ ಕೂರಲು ಬಿಡದಿರುವುದು, ರಸ್ತೆಯಲ್ಲಿ ಓಡಾಡಲು ನಿಷೇಧ ಚಪ್ಪಲಿ ಮತ್ತು ಶುಭ್ರ ಬಟ್ಟೆ ಧರಿಸಲು ಬಿಡದಿರುವುದು, ದೋಬಿ ಮತ್ತು ಕ್ಷೌರಿಕರ ಸೇವೆ ಇವರಿಗೆ ಲಭಿಸದಿರುವುದು. ಹೀಗೆ ಅನೇಕ ಹೀನಾಯ ಪದ್ಧತಿ ಗಳು ದಲಿತರ ಬದುಕಿನ ಮೇಲೆ ಬೆದರಿಕೆಯನ್ನು ಹುಟ್ಟಿಸಿವೆ.

ಚುನಾವಣೆಯ ಸಂದರ್ಭಗಳಲ್ಲಿ ಮೀಸಲಾತಿ ನೀತಿಯ ಕುರಿತು ಉದ್ಭವವಾಗುವ ಘರ್ಷಣೆಗಳು, ನಾಟಿ ಮತ್ತು ಪೈರು ಕೀಳುವ ಸಂದರ್ಭದಲ್ಲಿ ಉದ್ಭವಿಸುವ ಘರ್ಷಣೆಗಳು, ದಲಿತರು ಪೈರು ಕಿತ್ತ ನಂತರ ಕಣಜದಿಂದ ಇಳುವರಿ ತೆಗೆಯುವ ಸಂದರ್ಭದಲ್ಲಿ ಉದ್ಭವಿಸುವ ಘರ್ಷಣೆಗಳು, ಸರ್ಕಾರ ತಮಗೆ ನೀಡಿದ ಜಮೀನನ್ನು ಸ್ವಾಧೀನ ಮಾಡಿಕೊಳ್ಳುವ ಸಮಯದಲ್ಲಿ ಉದ್ಭವವಾಗುವಂತಹ ಹಿಂಸೆಗಳು, ಮೇಲ್ಜಾತಿಗಳು ಬಲವಂತವಾಗಿ ದಲಿತರ ಮೇಲೆ ಹೇರುವ ಕೆಲಸಗಳು ಅಂದರೆ ಸತ್ತ ದನ ಅಥವಾ ಹೊಕ್ಕಳು ಬಳ್ಳಿಯನ್ನು ದಲಿತರು ತೆಗೆಯಲು ಒಪ್ಪದೆ ಇರುವುದರಿಂದ ಆಗುತ್ತಿವೆ ಮತ್ತು ದಲಿತರಲ್ಲಿ ಹೆಚ್ಚುತ್ತಿರುವ ಪ್ರಜ್ಞೆ ಮತ್ತು ದಲಿತರ ಹಕ್ಕುಗಳ ಪ್ರತಿಪಾದನೆ ಅವರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಕಾರಣವಾಗಿದೆ. ಹಾಗಾಗಿ ಪ್ರಬಲ ಜಾತಿಗಳು ದಲಿತರ ಮೇಲೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಒಂದು ಅಧ್ಯಯನದ (ಸಾಕ್ಷಿ : ದಲಿತ್ ಹ್ಯುಮನ್ ರೈಟ್ಸ್ ಮಾನಿಟರ್ ೨೦೦೨ ಮತ್ತು ೨೦೦೧, ೨೦೦೩) ಪ್ರಕಾರ ಭೂಮಿ, ಜೀತಪದ್ಧತಿ, ವೇತನ ಮತ್ತು ಸಾಲದಿಂದ ಉದ್ಭವವಾಗುವ ತಕರಾರುಗಳೇ ದಲಿತರ ಮೇಲಿನ ಹಿಂಸೆಗೆ ಕಾರಣವಾಗಿವೆ. ಭೂಮಿಯ ಜೊತೆ ನೀರು ಕೂಡ ಸೂಕ್ಷ್ಮ ವಿವಾದದ ಸಂಗತಿಯಾಗಿದೆ. ಆದರಲ್ಲೂ ಇಂದಿನ ಭಾರತದಲ್ಲಿ ಇರುವಂತೆ ನೀರಿನ ಕೊರತೆಯ ಸಂದರ್ಭದಲ್ಲಿ ಕುಡಿಯುವ ನೀರು ನೀರಾವರಿ ಮತ್ತು ನೀರು ನಿಂತಿರುವ ಪ್ರದೇಶದಿಂದ ನೀರು ವಿನಿಯೋಗಿಸುವುದರಿಂದ ದಲಿತರ ಪ್ರಾಣಕ್ಕೂ ಅಪಾಯ ತರಬಹುದಾಗಿದೆ.

ಹಾಗಾಗಿ ಜಾತಿಗಲಭೆಗಳನ್ನು ಮುಖ್ಯವಾಗಿ, ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಲೈಂಗಿಕ ಸಂಗತಿಗಳಾಗಿ ವಿಂಗಡಿಸಬಹುದು. ಪೊಲೀಸರ ಕೃತ್ಯಗಳೂ ಕೂಡ ಅದಕ್ಕೆ ಕಾರಣವಾಗುತ್ತವೆ. ಆದರೆ ಈ ಎಲ್ಲಾ ಕಾರಣಗಳನ್ನು ಬೆರಸಿ, ಅದಕ್ಕೆ ಜಾತಿಯ ಬಣ್ಣವನ್ನು ಹಚ್ಚಲಾಗಿದೆ. ಅಂದರೆ ಈ ಎಲ್ಲಾ ಕಾರಣಗಳಲ್ಲಿ ಜಾತಿಯ ಪ್ರಶ್ನೆ ಮುಖ್ಯವಾಗುತ್ತದೆ.

ಆದುದರಿಂದ ಇಲ್ಲಿ ಉದ್ಭವವಾಗುವ ಪ್ರಶ್ನೆಗಳೆಂದರೆ, ಏಕೆ ಪ್ರಬಲ ಜಾತಿಗಳು ಇನ್ನೂ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯವನ್ನು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಮತ್ತು ಆರ್ಥಿಕ ವಲಯಗಳಲ್ಲಿ ಪಾಲಿಸುತ್ತಾರೆ ಮತ್ತು ಇಂದಿನ ಆಧುನಿಕ ಮತ್ತು ಜಾಗತೀಕರಣದ ಯುಗದಲ್ಲಿಯೂ ಕೂಡ ಅವರು ದಲಿತರ ಮೇಲೆ, ಅಮಾನವೀಯ ಮತ್ತು ಹಿಂಸಾತ್ಮಕ ಕೃತ್ಯಗಳನ್ನು ಏಕೆ ಎಸಗುತ್ತಾರೆ? ಎರಡನೆಯದಾಗಿ, ದಲಿತರು ಕಾನೂನಾತ್ಮಕವಾಗಿ ತಮ್ಮ ಮಾನವ ಹಕ್ಕುಗಳನ್ನು ಮತ್ತು ಸಮಾಜದ ಎಲ್ಲಾ ರಂಗದಲ್ಲೂ ಸಮಾನ ಪಾಲ್ಗೊಳ್ಳುವಿಕೆಯನ್ನು ಪಡೆಯಲು ಪ್ರಯತ್ನಿಸಿದಾಗ, ಏಕೆ ಪ್ರಬಲ ಜಾತಿಗಳಿಗೆ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಅಧಿಕಾರದ ಹಕ್ಕುಗಳು ಸಿಗುವುದು, ಅವರು ಜಾತಿ ವ್ಯವಸ್ಥೆಯಲ್ಲಿ ಇಟ್ಟಿರುವ ವಿಶ್ವಾಸ ಮತ್ತು ಭರವಸೆಯಿಂದ ಅಷ್ಟೆ

ವಿದ್ಯೆ, ತಂತ್ರಜ್ಞಾನ ಮತ್ತು ಪ್ರಜಾಪ್ರಭುತ್ವದಲ್ಲಿ ಇಷ್ಟೇ ಪ್ರಗತಿ ಸಾಧಿಸಿದರೂ ಭಾರತದ ಬಹುಸಂಖ್ಯಾ ಜನರ ವಿಚಾರ ಮತ್ತು ನಡವಳಿಕೆಯನ್ನು ಸಾಂಪ್ರದಾಯಿಕ ಏಣಿ ಶ್ರೇಣಿ ವ್ಯವಸ್ಥೆಯು ಆಳುತ್ತಿದೆ. ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಅವಕಾಶಗಳು ಜಾತ್ಯಾತೀತವಾಗಿದ್ದು ಸಾಮಾಜಿಕ ಸಮಾನತೆಯ ಆಧಾರವಾಗಿದೆ, ಆದರೆ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ಸಾಂಪ್ರದಾಯಿಕ ನಿಯಮಗಳು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಅಸಮಾನತೆಯ ತತ್ವಗಳ ಆಗರವಾಗಿದೆ. ಹಾಗಾಗಿ ಇದು ದೇಶದ ಕಾನೂನು ಮತ್ತು ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಯ ಸಾಂಪ್ರದಾಯಿಕ ನಿಯಮಗಳು, ಆದರ್ಶಗಳು ಮತ್ತು ನೀತಿಗಳ ನಡುವೆ ಸಂಘರ್ಷಕ್ಕೆ ಅವಕಾಶ ಮಾಡಿಕೊಡುತ್ತವೆ.

ಜಾತಿ ತಾರತಮ್ಯದ ವಿಧಗಳು ಮತ್ತು ದಲಿತರ ಬದುಕಿನ ರಕ್ಷಣೆಯ ಮೇಲೆ ಸರ್ಕಾರ ಮತ್ತು ಮಾರುಕಟ್ಟೆಯ ಮಧ್ಯಸ್ಥಿಕೆಯ ಪರಿಣಾಮಗಳು:

ಸರ್ಕಾರದ ಮಧ್ಯಸ್ಥಿಕೆ : ಬದಲಾಗುತ್ತಿರುವ ಇಂದಿನ ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳಲ್ಲಿ ಸರ್ಕಾರವು ಅಭಿವೃದ್ಧಿಯ ನಿರ್ಮಾಣವಾಗಿ ದಲಿತರಿಗೆ ಬದುಕಲು ರಕ್ಷಣೆಯನ್ನು ಒದಗಿಸುವಲ್ಲಿ ಮಧ್ಯಸ್ಥಿಕೆ ವಹಿಸಬೇಕಾಗುತ್ತದೆ. ವ್ಯವಸಾಯ ಯಾಂತ್ರೀಕರಣ ಅಥವಾ ನೀರಾವರಿ ಬೇಸಾಯದ ಅಭಿವೃದ್ಧಿಯು ಕೃಷಿ ದುಡಿಮೆಯನ್ನು ಕಡಿಮೆಗೊಳಿಸಿದೆ. ಇದು ಬದಲಾಗುತ್ತಿರುವ ಉತ್ಪಾದನಾ ಸಂಬಂಧಗಳಿಗೆ ಎಡೆಮಾಡಿ ಕೊಟ್ಟಿದೆ. ಹಳ್ಳಿಯ ಸಾಮಾನ್ಯ ಭೂಮಿಯನ್ನು ಸಾಮುದಾಯಿಕಗೊಳಿಸುವ ಮುಖಾಂತರ ಭೂಮಿಯ ಲಭ್ಯತೆ ಕಡಿಮೆಯಾಗಿದೆ. ಇದು ಹಳ್ಳಿಗಳಲ್ಲಿ ಅಧಿಕಾರ ಸಂಬಂಧಗಳನ್ನು ಮರುಸಂಘಟಿಸುತ್ತದೆ.

ಸರ್ಕಾರಗಳು ಅಭಿವೃದ್ಧಿ ಕಾರ್ಯಕ್ರಮಗಳ ಮುಖಾಂತರ ಅಥವಾ ಕಾನೂನಾತ್ಮಕ ಕಾಯ್ದೆಗಳ ಮುಖಾಂತರ ಕೆಳಕಂಡ ಪರಿಸ್ಥಿತಿಗಳಲ್ಲಿ ಮಧ್ಯಸ್ಥಿಕೆ ವಹಿಸ ಬೇಕಾಗುತ್ತದೆ.

★ ಬರಡು ಭೂಮಿಯ ಹಳ್ಳಿಗಳಲ್ಲಿ ಹೊಸದಾಗಿ ಪ್ರಾರಂಭಿಸಿದ ಕಾಲುವೆ ನೀರಾವರಿಯ ಮೇಲೆ ದಲಿತರು ಹಕ್ಕು ಸಾಧಿಸುವ ಸಂದರ್ಭದಲ್ಲಿ ಅವರ ಜೀವಕ್ಕೆ ಅಪಾಯ ಉಂಟಾಗುತ್ತದೆ.

★ ಕೃಷಿ ಉತ್ಪನ್ನ ಹೆಚ್ಚಾಗಿ ದಲಿತರು ಭೂಮಿಯ ಪ್ರವೇಶಾಧಿಕಾರ ಅಥವಾ ಹೆಚ್ಚಿನ ವೇತನ ಕೇಳುವ ಸಂದರ್ಭದಲ್ಲಿ ಅವರ ಜೀವಕ್ಕೆ ಅಪಾಯ ಉಂಟಾಗುತ್ತದೆ.

★ ಸ್ಥಳೀಯ ಸರ್ಕಾರ ಪದ್ಧತಿ (ಪಂಚಾಯಿತಿ) ಯಲ್ಲಿ ಮೀಸಲಾತಿಯು ಸರ್ಕಾರದ ನೀತಿ. ಆದರೆ ದಲಿತರು ಸ್ಥಳೀಯ ಸರ್ಕಾರದಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಪ್ರತಿಪಾದಿಸಲು ಹೊರಟಾಗ, ದಲಿತರ ರಕ್ಷಣೆ ಮಾಡಲು ಆಗುತ್ತಿಲ್ಲ.

★ ಆಂಧ್ರ ಪ್ರದೇಶದಲ್ಲಿ ಸ್ಥಳೀಯ ಸರ್ಕಾರಗಳಲ್ಲಿ ಹೊಸದಾಗಿ ರೂಪುಗೊಂಡಿರುವ ಹಳ್ಳಿ-ಶಿಕ್ಷಣ-ಸಮಿತಿಗಳು, ನೀರು-ಬಳಕೆ-ಸಂಘಗಳು ಮತ್ತು ನೀರು ಕೊಟ್ಟಿಗೆಯ ಸಮಿತಿಗಳ ಮೂಲಕ ದಲಿತರು ಅಭಿವೃದ್ಧಿಯಲ್ಲಿ ಮಧ್ಯಸ್ಥಿಕೆ ವಹಿಸಲು ಇಚ್ಛಿಸುವ ಸಂದರ್ಭದಲ್ಲಿ ದಲಿತರಿಗೆ ಅಪಾಯಗಳು ಉಂಟಾಗಿವೆ.

ಮಾರುಕಟ್ಟೆ ಮಧ್ಯಸ್ಥಿಕೆ

ಹಳ್ಳಿಗಳಲ್ಲಿ ಅಂಗಡಿಗಳು ಅಥವಾ ಕೈಗಾರಿಕೆಗಳ ಸ್ಥಾಪನೆ ಅಥವಾ ಸಂತೆಗಳನ್ನು ಪರಿಚಯಿಸುವ ಮೂಲಕ ಮಾರುಕಟ್ಟೆ ಮಧ್ಯಸ್ಥಿಕೆ ವಹಿಸುತ್ತದೆ. ದಲಿತರು ಕೆಲವು ಪದಾರ್ಥಗಳನ್ನು ಮಾರಲು ಮತ್ತು ಖರೀದಿಸಲು ನಿಷೇಧಿಸಲಾಗುತ್ತದೆ. ಹಾಗಾಗಿ ಇಂತಹ ಮಧ್ಯಸ್ಥಿಕೆಯಿಂದ ಈಗಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳ ಮೇಲೆ ಪ್ರಭಾವ ಬೀರುತ್ತದೆ.

ದಲಿತರು ಈ ರೀತಿಯ ಹೊಸ ಮಾರುಕಟ್ಟೆ ಮಧ್ಯಸ್ಥಿಕೆಯಲ್ಲಿ ಪಾಲ್ಗೊಳ್ಳಲು ಪ್ರಯತ್ನಿಸಿದಾಗ ದಲಿತರ ಪ್ರಾಣಕ್ಕೆ ಆಪತ್ತು ಒದಗುತ್ತದೆ.

ಉದಾಹರಣೆಗೆ :

★ ಇಂದು ಭಾರತದ ಹಳ್ಳಿಗಳಲ್ಲಿ ಹೋಟೆಲುಗಳಲ್ಲಿ ಎರಡು ಲೋಟಗಳ ಪದ್ಧತಿ (ದಲಿತರಿಗಾಗಿ ಪ್ರತ್ಯೇಕ ಲೋಟ) ಮತ್ತು ಪ್ರತ್ಯೇಕಿಸಿದ ಆಸನಗಳು ಅಸ್ಪೃಶ್ಯತೆಯ ಹೊಸ ರೂಪವಾಗಿವೆ.

★ ಅಧ್ಯಯನಗಳ ಪ್ರಕಾರ ನಗರೀಕರಣ ಅಥವಾ ಲಾಭದಾಯಕ ಹೂಡಿಕೆಗಳು ಇರುವಂತಹ ಸ್ಥಳಗಳಲ್ಲಿ ಭೂಮಿಯ ಬೆಲೆ ಹೆಚ್ಚಾಗಿರುತ್ತದೆ. ಅಂತಹ ಪ್ರದೇಶದಲ್ಲಿ ದಲಿತರು ಸಣ್ಣ ಪ್ರಮಾಣದಲ್ಲಿ ಭೂಮಿ ಹೊಂದಿದ್ದರೂ ಕೂಡ ಅವರ ಮೇಲೆ ದೌರ್ಜನ್ಯಗಳು ನಡೆಯುತ್ತವೆ.

★ ಕೆಲವು ಪ್ರಕರಣಗಳಲ್ಲಿ ಖಾಸಗಿ ಉದ್ಯಮದಲ್ಲಿ ದಲಿತರಿಗೆ ಕಡಿಮೆ ವೇತನ ನೀಡಿ ದೈಹಿಕ ಹಿಂಸೆಯನ್ನು ನೀಡುತ್ತಿರುವುದನ್ನು ಗಮನಿಸಬಹುದು.

ಬ್ಯಾನರ್ಜಿ ಮತ್ತು ನೈಟ್ (೧೯೯೧) ರ ಅಭಿಪ್ರಾಯದಂತೆ 'ವಾಸ್ತವದಲ್ಲಿ ಜಾತಿ ತಾರತಮ್ಯ ಇನ್ನೂ ಇದೆ. ವಿಶೇಷವಾಗಿ ಉದ್ಯೋಗ ತಾರತಮ್ಯ' ಮತ್ತು ಆ ತಾರತಮ್ಯ ಭಾಗಶಃ ಸಾಂಪ್ರದಾಯಿಕ ರೀತಿಯಲ್ಲಿ ಕಾರ್ಯನಿರ್ವಹಿಸುವುದನ್ನು ಕಾಣಬಹುದು; ಕಡಿಮೆ ವೇತನ ಮತ್ತು ಭವಿಷ್ಯವಿಲ್ಲದ ಉದ್ಯೋಗಗಳಲ್ಲಿ ಅಸ್ಪೃಶ್ಯರು (ದಲಿತರು) ಹೆಚ್ಚಾಗಿ ಇರುವುದನ್ನು ಕಾಣಬಹುದು.

★ ಕೆಲವು ಅಧ್ಯಯನಗಳ ಪ್ರಕಾರ ದಲಿತರು ತಮ್ಮ ಕಸುಬನ್ನು ಬದಲಿಸಿ ಬೇರೆ ಕಸುಬಿಗೆ ಇಳಿದರೆ ಅಥವಾ ಗೌರವಾನ್ವಿತ ಅಥವಾ ಇತರೆ ಮಾರುಕಟ್ಟೆ ವ್ಯವಹಾರಕ್ಕೆ ಇಳಿದರೆ, ಅದು ದಲಿತರ ಮೇಲೆ ಬೆದರಿಕೆ ಅಥವಾ ದೌರ್ಜನ್ಯಕ್ಕೆ ಕಾರಣವಾಗುತ್ತದೆ.

★ ಆಂಧ್ರ ಪ್ರದೇಶದಲ್ಲಿನ ಅಧ್ಯಯನದ ಪ್ರಕಾರ (ವೆಂಕಟೇಶ್ವರಲು, ೧೯೯೦) ದಲಿತರು ತಮ್ಮ ವೃತ್ತಿಯನ್ನು ಬದಲಿಸಲು ಪ್ರಯತ್ನಿಸಿದಾಗ ಅವರ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹೇರಲಾಗುತ್ತದೆ.

★ ಜಾತಿ ಪದ್ಧತಿಯು ಹೇರಿರುವ ವೃತ್ತಿಗಳನ್ನು ಅಂದರೆ, ದೇವದಾಸಿ (ದೇವಸ್ಥಾನದ ವೇಶ್ಯೆಯರು) ಹೆಣದ ಮುಂದೆ ತಮಟೆ ಬಾರಿಸುವುದು ಅಥವಾ ಧಾರ್ಮಿಕ ಸಮಾರಂಭಗಳಲ್ಲಿ ಪ್ರಾಣಿ ಬಲಿ ನೀಡುವುದನ್ನು ದಲಿತರು ಪಾಲಿಸದೆ ಇದ್ದಾಗ, ಅವರನ್ನು ಕೊಂದು ಹಾಕಿರುವುದನ್ನು ಅಥವಾ ದೈಹಿಕವಾಗಿ ಹಿಂಸಿಸಿರುವುದನ್ನು ಅನೇಕ ಸಂದರ್ಭಗಳಲ್ಲಿ ಕಾಣಬಹುದು.

★ ಒರಿಸ್ಸಾದಲ್ಲಿನ ಅಧ್ಯಯನದ ಪ್ರಕಾರ (ತ್ರಿಪತಿ, ೧೯೯೪) ಹಳ್ಳಿ ಪ್ರದೇಶಗಳಲ್ಲಿ ಭೂಮಿ ಗುತ್ತಿಗೆ, ಗೌರವಾನ್ವಿತ ವೃತ್ತಿ ಮತ್ತು ದುಡಿಮೆ, ಮಾರುಕಟ್ಟೆಯಲ್ಲಿ ತಾರತಮ್ಯಗಳನ್ನು ಕಾಣಬಹುದು. ಒಂದು ಹಳ್ಳಿಯ ಶೇ ೯೬ರಷ್ಟು ದಲಿತರ ಪ್ರಕಾರ ಮತ್ತು ಎರಡನೆಯ ಹಳ್ಳಿಯ ಎಲ್ಲಾ ದಲಿತರ ಪ್ರಕಾರ ವೇತನ ತಾರತಮ್ಯ ಇರುವುದನ್ನು ಕಾಣಬಹುದಾಗಿದೆ. ಒಂದು ಹಳ್ಳಿಯ ಶೇ ೨೮ ಮತ್ತು ಇನ್ನೊಂದು ಹಳ್ಳಿಯ ಶೇ ೨೦ ದಲಿತರು ಬಾಡಿಗೆ ವ್ಯವಸ್ಥೆ ಮತ್ತು ಬಡ್ಡಿ ದರದಲ್ಲಿ ಜಾತಿ ತಾರತಮ್ಯಕ್ಕೆ ಒಳಗಾಗಿರುವುದನ್ನು ಕಾಣಬಹುದು. ದಲಿತರು ಈ ರೀತಿಯ ಜಾತಿ ತಾರತಮ್ಯವನ್ನು ಪ್ರಶ್ನಿಸಿದಾಗ ತಮ್ಮ ಜೀವಕ್ಕೆ ಬೆದರಿಕೆ ಬರುತ್ತದೆಯೆಂಬುದನ್ನು ಗ್ರಹಿಸಿದ್ದಾರೆ.

ಗಂಭೀರ ಪ್ರಶ್ನೆಗಳು

ಜಾಗತೀಕರಣದ ಪ್ರತಿಪಾದಕರು ಸರ್ಕಾರವು ಸೇರಿದಂತೆ ರಾಷ್ಟ್ರದ ಪ್ರಗತಿ ಬಗ್ಗೆ ಮಾತನಾಡುತ್ತಾರೆ. ಆದರೆ ಇವರು ಏಕೆ ತಮ್ಮ ವಿಚಾರ ಮತ್ತು ಕಾನೂನು ನೀತಿಗಳನ್ನು ಮಾತನಾಡುವಾಗ ಜಾತಿ ಬಗ್ಗೆ ಏನೂ ಮಾತನಾಡುವುದಿಲ್ಲ. ಅಭಿವೃದ್ಧಿಯ ಸಾಮಾಜಿಕ ಸ್ವಾಮ್ಯದ ಪ್ರತಿಪಾದನೆ ಆರ್ಥಿಕ ಪ್ರಗತಿಯ ಸಾಮಾಜಿಕ ಅಸಮಾನತೆಯನ್ನು ತಡೆಯುತ್ತದೆ. ಮತ್ತು ಅವರಿಂದ ಉದ್ಭವವಾಗುವ ಉದ್ವೇಗವನ್ನು ಮತ್ತು ತೊಂದರೆಯನ್ನು ತಡೆಗಟ್ಟಬಹುದಾಗಿದೆ.

★ ಭಾರತ ನ್ಯಾಯಾಂಗ ಪದ್ಧತಿಗೆ ತಡವಾಗಿಯಾದರೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಸೇರ್ಪಡೆಯಾಗಿರುವುದನ್ನು ರಾಷ್ಟ್ರೀಯ ಪ.ಜಾ/ಪ.ಪಂ. ಆಯೋಗವು ಹೇಳುವಂತೆ, ಏಕೆ ಈ ಸರ್ಕಾರಗಳು ಇನ್ನೂ ಜಾರಿಗೊಳಿಸಲು ನಿರ್ಲಕ್ಷ್ಯ ತೋರುತ್ತವೆ ಮತ್ತು ತಡಮಾಡುತ್ತಿವೆ? ಇದು ಸರ್ಕಾರದ ಜಾತಿ ನಿಷ್ಠೆಯನ್ನು ಬಹಿರಂಗಪಡಿಸುವುದಿಲ್ಲವೇ? ಮತ್ತು ದಲಿತರ ರಕ್ಷಣೆಯ ಕಾನೂನುಗಳನ್ನು ಕಾರ್ಯರೂಪಕ್ಕೆ ತರಲು ಅವರಿಗೆ ಇಷ್ಟವಿಲ್ಲದಿರುವುದನ್ನು ಇದು ತೋರಿಸುತ್ತದೆಯಲ್ಲವೆ.

★ ಭಾರತದ ಸಂವಿಧಾನದ ಮೂಲಭೂತ ಹಕ್ಕುಗಳ ಅನುಚ್ಛೇದ ೨೧ ರ ಪ್ರಕಾರ ಜಾತಿ ದೌರ್ಜನ್ಯ ಮತ್ತು ಆಕ್ರಮಣದ ಮೂಲಕ ಉಂಟಾಗುವ ದಲಿತರ ಜೀವ ಬೆದರಿಕೆಗೆ ರಕ್ಷಣೆ ಕೊಡುವಂಥ ಸಂವಿಧಾನದ ಕರ್ತವ್ಯವನ್ನು ಪೂರೈಸಲು ರಾಷ್ಟ್ರೀಯ ಎಸ್‌ಸಿ/ಎಸ್‌ಟಿ ಆಯೋಗಕ್ಕೆ ಹೆಚ್ಚಿನ ಅಧಿಕಾರವನ್ನು ಏಕೆ ಕೊಡಬಾರದು ?

★ ಕೆಲಸಗಾರರ ರಕ್ಷಣೆಯನ್ನು ತೆಗೆದುಹಾಕುವುದೇ ಆರ್ಥಿಕ ಉದಾರೀಕರಣ ತರ್ಕವಾದರೆ, ಉದ್ಯೋಗ ಸ್ಥಳದಲ್ಲಿ ದಲಿತ ಹೆಣ್ಣುಮಕ್ಕಳಿಗೆ ಆಗುತ್ತಿರುವ ಹಿಂಸೆ ಮತ್ತು ಕಿರುಕುಳ, ಜೀವ ಬೆದರಿಕೆ ಉಂಟಾಗುವಾಗ ರಕ್ಷಣೆ ಎಲ್ಲಿದೆ ?

★ ಬಾಲಕಾರ್ಮಿಕರಿಗೆ ಅಂದರೆ ಅವರಲ್ಲಿ ಹೆಚ್ಚಿನ ಮಕ್ಕಳು ದಲಿತರೇ ಆಗಿರುವಾಗ ಅವರಿಗೆ ಸರ್ಕಾರ ರಕ್ಷಣೆ ಒದಗಿಸಲು ಅಸಮರ್ಥವಾಗಿ ಹೆಚ್ಚುತ್ತಿರುವ ಖಾಸಗೀಕರಣದ ಮುಖಾಂತರ ಲಾಭಪ್ರೇರಿತ ಅಪಾಯದಿಂದಾಗಿ ಮಕ್ಕಳ ಜೀವ ಅಭದ್ರತೆಗೆ ಒಳಗಾಗುತ್ತಿಲ್ಲವೇ ?

★ ನಿಜ ಹೇಳುವುದಾದರೆ ರಾಷ್ಟ್ರದ ಪ್ರಗತಿಗೆ ದಲಿತ ಸಮುದಾಯದ ಜೀವನ ಮತ್ತು ಶ್ರಮ ಬಹಳಷ್ಟು ಕೊಡುಗೆ ನೀಡಿದೆ. ದುರಂತ ಎಂದರೆ, ಅವರು ತುಳಿತ, ಬೆದರಿಕೆ, ಭಯ ಮತ್ತು ಸುರಕ್ಷಿತ ಜೀವನ ನಡೆಸಲು ಆಗುತ್ತಿಲ್ಲ ಏಕೆ ?

(ಮುಗಿಯಿತು) □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಇನ್ನು ಮುಂದೆ ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ದಲಿತ್ ಡೈರಿ

ದಲಿತ ಹಕ್ಕುಗಳ ಬಗ್ಗೆ ಚರ್ಚಿಸುವ 'ದಯಾಪರ' ಸಂಪಾದಕರು, ಅಂಕಣಕಾರರು ಮತ್ತು ಪ್ರಮುಖರು ಉದ್ಯೋಗ ಮೀಸಲಾತಿಯೊಂದಕ್ಕೆ ಮಾತ್ರ ಗಮನ ಕೇಂದ್ರೀಕರಿಸುವರು. ಈ ಉದ್ಯೋಗ 'ಮೀಸಲಾತಿ'ಯು ಖಾಸಗಿ ವಲಯದ ಉದ್ಯೋಗದ್ದಾಗಿದೆ. ಇದರ ಸಂಖ್ಯೆ ಕೆಲವೇ ಲಕ್ಷಗಳು. ಪಾಲುದಾರಿಕೆ ಎಂದರೆ ವ್ಯಾಪಾರ ಮತ್ತು ಕೈಗಾರಿಕೆಯಲ್ಲಿ ದಲಿತರ ಪಾಲು ಎಂದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಜ್ಞಾನ ಮಾರುಕಟ್ಟೆ ಸಿನೆಮಾ, ಸಂಗೀತ, ಮಾಧ್ಯಮ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಲ್ಲಿ ಭಾರತದ ಸಂಪತ್ತು ಮತ್ತು ಪ್ರಾತಿನಿಧ್ಯದಲ್ಲಿ ಪಾಲು ಪಡೆಯುವುದು.

○ ಚಂದ್ರಭಾನ್ ಪ್ರಸಾದ್
ಅನು: ಕೆ.ವಿದ್ಯಾ, ಡಿ.ಡೊಮಿನಿಕ್

ಸುದ್ದಿ ಕೊಠಡಿಗಳೆಂಬ ಪುರೋಹಿತರ ಅಡ್ಡೆಗಳು

ಚಂದ್ರಭಾನ್ ಪ್ರಸಾದ್
ದಲಿತ್ ಡೈರಿ

ಕಳೆದ ವಾರ ನಾನು ತಮಿಳುನಾಡಿನ ವಿದ್ಯುಚ್ಛಕ್ತಿ ನಗರ ನವೇಲಿಯಲ್ಲಿ 'ಖಾಸಗಿ ವಲಯದಲ್ಲಿ ಮೀಸಲಾತಿಗಳು' ಎಂಬ ವಿಚಾರಸಂಕಿರಣದಲ್ಲಿ ಪಾಲ್ಗೊಂಡಿದ್ದೆ. ವಿಚಾರಸಂಕಿರಣದ ನಿಮಿತ್ತ ದಲಿತ ಅಧಿಕಾರಿಗಳು ಒಂದು ಔತಣಕೂಟವನ್ನು ಏರ್ಪಡಿಸಿದ್ದರು.

ನನ್ನ ಸಂಪೂರ್ಣ ಅಪನಂಬಿಕೆಯ ಪ್ರಕಾರ, ಹೆಚ್ಚಿನವರು ಪಾಲುದಾರಿಕೆ (Diversity) ಬಗ್ಗೆ ತಿಳಿದುಕೊಂಡಿದ್ದಾರೆ. ಇದು ಅಮೆರಿಕಾದಲ್ಲಿ ಹೇಗೆ ವಾಸ್ತವತೆಯಿಂದ ಕೆಲಸ ಮಾಡುತ್ತಿದೆ ಎಂಬ ಬಗ್ಗೆಯೂ ಬಲ್ಲವರಾಗಿದ್ದಾರೆ. ಕೆಲವು ಸಲ, ಅವರು ನನ್ನ ದಲಿತ್‌ಡೈರಿಯನ್ನು ಪಯೊನಿಯರ್ ವೆಬ್‌ಸೈಟ್ ನಿಂದ ತೆಗೆದುಕೊಳ್ಳುತ್ತಿದ್ದರು. ಇಂದಿನ ಪ್ರಮುಖ ದಲಿತ ಬುದ್ಧಿಜೀವಿ, ಶ್ರೀ ರವಿಕುಮಾರ್‌ರವರ ಪೆರಿಯಾರ್ ಬಗೆಗಿನ ಹೊಸ ಪ್ರಬಂಧವು ತಮಿಳುನಾಡಿನಲ್ಲಿ ಹೊಸ ಬೌದ್ಧಿಕ ಮಂಥನವನ್ನು ಉಂಟು ಮಾಡಿದೆ. ಇದರ ಬಗ್ಗೆ ನನ್ನ ತಮಿಳಿನ ಲೇಖನಗಳಲ್ಲಿ ಪ್ರಸ್ತಾಪವಾಗಿರುವುದರಿಂದ ಇದರ ವ್ಯಾಪಕ ಮಾರಾಟಕ್ಕೆ ಸಹಾಯವಾಗಿದೆ. ಆಗಸ್ಟ್೮ರಂದು, ಪಾಲುದಾರಿಕೆಯ ವಿಚಾರಸಂಕಿರಣದ ಪ್ರಮುಖ ಬಿಂದುವಾಗಿತ್ತು.

ಪಾಂಡಿಚೆರಿಯ ನನ್ನ ಅನುಭವವು ಇದೇ ಆಗಿತ್ತು. ಪಾಂಡಿಚೆರಿ ಮೂಲದ ಪ್ರಕಟಣಾ ಸಂಸ್ಥೆ ನವ್ಯನವು ಪ್ರಕಟಿಸಿದ ನನ್ನ ದಲಿತ್‌ಡೈರಿ ೧೯೯೯-೨೦೦೩: 'ಭಾರತದಲ್ಲಿ ವರ್ಣದ್ವೇಷದ ಬಗ್ಗೆ ಪುನರ್ ಆಲೋಚನೆ' ಬಿಡುಗಡೆಯಲ್ಲಿ ಪಾಲ್ಗೊಳ್ಳಲು ನಾನು ಒಂದು ವಾರದ ವರೆಗೆ ದಕ್ಷಿಣಭಾರತದಲ್ಲಿದ್ದೆ. ಪುಸ್ತಕವನ್ನು ಆಗಸ್ಟ್ ೯ ರಂದು ಚೆನ್ನೈ ಮತ್ತು ಹೈದರಾಬಾದ್‌ಗಳಲ್ಲಿ ಬಿಡುಗಡೆ ಮಾಡಲಾಯಿತು. ನಾನು ದಕ್ಷಿಣಕ್ಕೆ ಭೇಟಿ ಕೊಡುತ್ತೇನೆಂಬ ಸುದ್ದಿ ತಿಳಿದ ಕೂಡಲೇ ಇತರ ಗುಂಪುಗಳು ವಿಚಾರಸಂಕಿರಣಗಳನ್ನು ಸಂಘಟಿಸಲು ಮುಂದಾದವು.

ಚೆನ್ನೈನಲ್ಲಿ, ಅಮೆರಿಕ ರಾಯಭಾರ ಕಚೇರಿಯಲ್ಲಿ ರಾಯಭಾರಿಯಾಗಿರುವ ರಿಚರ್ಡ್ ಹೇನ್ಸ್‌ರವರು ಪುಸ್ತಕ ಬಿಡುಗಡೆ ಮಾಡಿ, ಅಮೆರಿಕದ ಪಾಲುದಾರಿಕೆ ಬಗ್ಗೆ ಸುದೀರ್ಘವಾಗಿ ಮಾತನಾಡಿದರು. ಯುವ ದಲಿತ ಪತ್ರಕರ್ತರಾದ ಎಂ. ಜಯರಾಣಿ ಪ್ರಥಮ ಪ್ರತಿಯನ್ನು ಸ್ವೀಕರಿಸಿದರು. ಆಗಸ್ಟ್ ೧೦ ರಂದು ಹಿಂದೂ ಸಮೂಹದ ಒಡೆತನದಲ್ಲಿರುವ ಏಷ್ಯನ್ ಸ್ಕೂಲ್ ಆಫ್ ಜರ್ನಲಿಸಂ, ನನ್ನನ್ನು ಉಪನ್ಯಾಸ ನೀಡಲು ಆಹ್ವಾನಿಸಿತು.

ಆಗಸ್ಟ್ ೧೧ ರಂದು, ಒಡಿಸ್ಸಿ ಚೈನ್ ಆಫ್ ಬುಕ್‌ಸ್ಟೋರ್ ಹೈದರಾಬಾದಿನಲ್ಲಿ ಪುಸ್ತಕ ಬಿಡುಗಡೆಯನ್ನು ಏರ್ಪಡಿಸಿತ್ತು. ನ್ಯಾಯಮೂರ್ತಿ ರಾಮಸ್ವಾಮಿಯವರು ಪುಸ್ತಕ ಬಿಡುಗಡೆ ಮಾಡಿದರು. ದಲಿತ ಡೈರಿಯನ್ನು ಪ್ರತೀವಾರವು ಪುನರ್ ಉತ್ಪಾದಿಸುವ ತೆಲುಗು ದೈನಿಕ ವಾರ್ತಾದ ಸಂಪಾದಕರಾದ ಟಿ.ಅಶೋಕ್ ಡೆಕ್ಕನ್ ಹೆರಾಲ್ಡ್‌ನ ಹಿರಿಯ ಪತ್ರಕರ್ತರಾದ ಅಖಿಲೇಶ್ವರಿಯೊಂದಿಗೆ ಪ್ರಥಮ ಪ್ರತಿಯನ್ನು ಪಡೆದರು.

ಆಗಸ್ಟ್ ೧೨ ರಂದು ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಬುದ್ಧಿಜೀವಿ ಕಾರ್ಯಕರ್ತರಾದ ಭೋಜ ತರ್ಕಂ ಮತ್ತು ಗೀತ ರಾಮಸ್ವಾಮಿಯವರೊಂದಿಗೆ ಪುಸ್ತಕದ ಬಗೆಗಿನ ಚರ್ಚೆಯನ್ನು ಏರ್ಪಡಿಸಿತ್ತು. ಪ್ರಮುಖ ದಲಿತ ಬರಹಗಾರ್ತಿ ಹಾಗೂ ಕಾರ್ಯಕರ್ತೆಯಾದ ಶ್ಯಾಮಲರವರು ಅವರ ಸಂಸ್ಥೆಯಲ್ಲಿ ಮಹಿಳಾ ಬರಹಗಾರ್ತಿಯರೊಂದಿಗೆ ಚರ್ಚೆಯನ್ನು ಏರ್ಪಡಿಸಿದ್ದರು. ಸಂಜೆಗೆ ಮತ್ತೊಬ್ಬ ಉದಯೋನ್ಮುಖ ಮಹಿಳಾ ಬರಹಗಾರ್ತಿಯಾದ ಸ್ವಾತಿ ಮಾರ್ಗರೇಟ್ ಎಂಬವರು ಅನೇಕ ಯುವ ಕಾರ್ಯಕರ್ತರೊಂದಿಗೆ ನಾನಿರುವ ಸ್ಥಳಕ್ಕೆ ಬಂದು ಮತ್ತೊಂದು ಸುತ್ತಿನ ಚರ್ಚೆಯನ್ನು ನಡೆಸಿದರು.

ಉತ್ತರಕ್ಕೆ ವಾಪಾಸಾದಾಗ, ನನ್ನ ಓದುಗರು ಪಾಲುದಾರಿಕೆಯನ್ನು ಪ್ರಚಾರಪಡಿಸಲು, ಯುಪಿ ದಲಿತ ಪಾಲುದಾರಿಕೆ ಗುಂಪನ್ನು ಕಟ್ಟಿದ್ದರು. ಕಾಂಗ್ರೆಸ್ ಪಕ್ಷದ ಶಿಶುಪಾಲ್‌ಸಿಂಗ್ ದೆಹಲಿ ದಲಿತ ಪಾಲುದಾರಿಕೆ ಗುಂಪಿನ ಮುಖಂಡರು. ಇದು ಎರಡು ಕಾರ್ಯಕ್ರಮಗಳನ್ನು ಏರ್ಪಡಿಸಿತ್ತು. ಒಂದು ಸಿಐಐಯಲ್ಲಿ ಇದರಲ್ಲಿ ಕಾದಂಬರಿಕಾರ್ತಿಯಾದ ಸಾಗರಿಕಾ ಘೋಷ್ ಪಾಲ್ಗೊಂಡಿದ್ದರು. ಇನ್ನೊಂದು ಡಿಪಿಎಸ್‌ನಲ್ಲಿ ನಡೆಯಿತು. ಇದರಲ್ಲಿ ಶುಭಪರ್ಮಾರ್ ಭಾಗವಹಿಸಿದ್ದರು.

ಕಳೆದ ತಿಂಗಳು, ನಾನು ಗೋರಕ್‌ಪುರದ ಪಾಲುದಾರಿಕೆ ಬಗೆಗಿನ ವಿಚಾರಸಂಕಿರಣದಲ್ಲಿ ಪಾಲ್ಗೊಂಡಿದ್ದೆ. ಕೆಲವು ತಿಂಗಳುಗಳ ಹಿಂದೆ ಷಾಹಜಾನ್‌ಪುರದ ಸ್ಲೀಪಿ ಪಟ್ಟಣದಲ್ಲಿ ಇದೇ ರೀತಿಯ ವಿಚಾರಸಂಕಿರಣವೊಂದರಲ್ಲಿ ಪಾಲ್ಗೊಂಡಿದ್ದೆ. ಉತ್ತರ ಪ್ರದೇಶದ ಅತೀ ದೂರದ ಲಕಿಮ್‌ಪುರ್ ಖಿರಿ ಜಿಲ್ಲೆಯಲ್ಲಿ ಪಾಲುದಾರಿಕೆಯ ವಿಚಾರಸಂಕಿರಣದಲ್ಲಿ ಮಾತನಾಡಲು ಆಹ್ವಾನ ಬಂದಿತ್ತು. ವೈವಿಧ್ಯತೆಯ ಬಗೆಗಿನ ವಿಚಾರ ಸಂಕಿರಣದ ಆಹ್ವಾನಗಳು ಹೇರಳವಾಗಿ ಬರುತ್ತಿವೆ. ಮಧುರೈಯ ದಲಿತ ಬರಹಗಾರರು ನಾನು ಅಲ್ಲಿ ಭೇಟಿ ಕೊಡಲು ಒತ್ತಾಯಿಸುತ್ತಿದ್ದಾರೆ.

ಈ ದಲಿತ ಗುಂಪುಗಳು ಶ್ರೀಮಂತ ಸರ್ಕಾರೇತರ ಸಂಸ್ಥೆಗಳಿಂದ ಅಥವಾ ಪರದೇಶದ ಫೌಂಡೇಶನ್‌ಗಳಿಂದ ನಿಧಿ ಪಡೆಯುತ್ತಿಲ್ಲ. ಈ ದಲಿತ ಗುಂಪುಗಳು ಅಧಿಕ ಸಂಖ್ಯೆಯ ದಲಿತರಿಂದ ೧೦೦ ಅಥವಾ ೨೦೦ ರೂಪಾಯಿಗಳನ್ನು ಸಂಗ್ರಹಿಸುತ್ತದೆ. ಮತ್ತು ನನ್ನ ಭೇಟಿಗಾಗಿ ವಿಮಾನ ಟಿಕೆಟ್‌ಗಳನ್ನು ಖರೀದಿಸಲು ಹಣ ಎತ್ತುವುದಕ್ಕೆ ಜನ ಚಳವಳಿಯಾಗಿ ಪರಿವರ್ತಿಸುತ್ತದೆ. ನಾನು ರೈಲು ಪ್ರಯಾಣ ಮಾಡಿದರೆ, ನಾನು ಅನೇಕ ಅಂಕಣಗಳನ್ನು ಕಳೆದುಕೊಳ್ಳುತ್ತೇನೆ. ಇದು ತುಂಬಾ ನೋವಿನ ಸಂಗತಿ, ಯಾಕೆಂದರೆ ನಾನು ದಲಿತರ ಆರ್ಥಿಕ ಸ್ಥಿತಿಗತಿಯನ್ನು ಅರಿತುಕೊಂಡಿದ್ದೇನೆ. ಆಗಸ್ಟ್ ೮ರ ಔತಣಕೂಟಕ್ಕೆ ಏಡಿಗಳನ್ನು ತರುವುದಕ್ಕೆ ನವೇಲಿಯಿಂದ ೧೬೦ ಕಿ.ಮೀ ದೂರವಿರುವ ಪಾಂಡಿಚೆರಿಗೆ ಒಂದು ಗುಂಪನ್ನು ಕಳುಹಿಸಲು ಸಿದ್ಧವಿದ್ದ ನನ್ನ ಸ್ನೇಹಿತರನ್ನು ನಾನು ತಡೆದೆ.

ವಾರ್ತಾಕೊಠಡಿಗಳು ಮತ್ತು ಟಿವಿ ವಾರ್ತೆ ಚಾನೆಲ್‌ಗಳನ್ನು ನಿರ್ದೇಶಿಸುವ ಬ್ರಾಹ್ಮಣರ ಅವಿವೇಕತೆ ಮತ್ತು ನಕಲಿತನವನ್ನು ಕಂಡು ನಾನು ಆಶ್ಚರ್ಯಗೊಂಡೆ. ಮಧುರೈ ಮತ್ತು ಲಕಿಮ್ ಖಿರಿಯ ದಲಿತರು ಖಂಡಿತವಾಗಿಯೂ ಅಮೆರಿಕದ ವೀಸಾ ಪಡೆಯಲು ಅಥವಾ ಇಂಟರ್‌ನೆಟ್ ನೋಡಲು ಅವಕಾಶವಿಲ್ಲದಿದ್ದರೂ ಅವರಿಗೆ ಪಾಲುದಾರಿಕೆಯ ಬಗ್ಗೆ ಅರಿವಿಲ್ಲವೇ? ಭಾರತೀಯ ವೃತ್ತಪತ್ರಿಕಾ ಸಂಪಾದಕರು, ಮಾರಾಟಗಾರರು ಮತ್ತು ನಮ್ಮ ವಾರ್ತಾ ಚಾನೆಲ್‌ಗಳ ಮಹಿಳೆಯರು ಅದು ಹೇಗೆ ಈ ವಿಷಯದಲ್ಲಿ ಅಷ್ಟು ಮುಗ್ಧರಾಗಿರುವರು?

ದಲಿತ ಹಕ್ಕುಗಳ ಬಗ್ಗೆ ಚರ್ಚಿಸುವ 'ದಯಾಪರ' ಸಂಪಾದಕರು, ಅಂಕಣಕಾರರು ಮತ್ತು ಪ್ರಮುಖರು ಉದ್ಯೋಗ ಮೀಸಲಾತಿಯೊಂದಕ್ಕೆ ಮಾತ್ರ ಗಮನ ಕೇಂದ್ರೀಕರಿಸುವರು. ಈ ಉದ್ಯೋಗ 'ಮೀಸಲಾತಿ'ಯು ಖಾಸಗಿ ವಲಯದ ಉದ್ಯೋಗದ್ದಾಗಿದೆ. ಇದರ ಸಂಖ್ಯೆ ಕೆಲವೇ ಲಕ್ಷಗಳು. ಪಾಲುದಾರಿಕೆ ಎಂದರೆ ವ್ಯಾಪಾರ ಮತ್ತು ಕೈಗಾರಿಕೆಯಲ್ಲಿ ದಲಿತರ ಪಾಲು ಎಂದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಜ್ಞಾನ ಮಾರುಕಟ್ಟೆ ಸಿನೆಮಾ, ಸಂಗೀತ, ಮಾಧ್ಯಮ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಲ್ಲಿ

ಭಾರತದ ಸಂಪತ್ತು ಮತ್ತು ಪ್ರಾತಿನಿಧ್ಯದಲ್ಲಿ ಪಾಲು ಪಡೆಯುವುದು.

ಸಂಪಾದಕರು, ಅಂಕಣಕಾರರು ಮತ್ತು ಪ್ರಮುಖರು ಜಗತ್ತಿನಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ಸಮಕಾಲೀನ ಜ್ಞಾನ ಪಡೆದವರಾಗಿರಬೇಕು. ಇವರಿಗೆ ಅಮೇರಿಕನ್ ಪಾಲುದಾರಿಕೆಯ ಬಗ್ಗೆ ಅರಿವಿಲ್ಲದಿದ್ದರೆ, ಮಾಧ್ಯಮ ವೃತ್ತಿಗರಾಗಿ ಬಹಳ ಅಸಮರ್ಥರಾಗಿರುತ್ತಾರೆ. ಇದರ ಬಗ್ಗೆ ಅರಿವಿದ್ದು, ಪಾಲುದಾರಿಕೆ ಬಗ್ಗೆ ಭಯಪಟ್ಟರೆ, ಇವರು ನಿಜವಾಗಿಯೂ ಜಾತಿವಾದಿಗಳಾಗಿರುತ್ತಾರೆ.

ಒಬ್ಬ ಪುರೋಹಿತ ಮತ್ತು ಸಂಪಾದಕನ ನಡುವಿನ ವ್ಯತ್ಯಾಸವನ್ನು ನಾವು ಹೇಗೆ ಗುರುತಿಸಬಹುದು? ಪುರೋಹಿತನು ಅಸ್ಪೃಶ್ಯತೆಯ ಭೀಕರತೆಯನ್ನು ಪಾಲಿಸಬಹುದು, ಆದರೆ ಕೆಲವೊಮ್ಮೆ ಯಾವುದೇ ಪ್ರಗತಿಪರ ಅವಕಾಶಕ್ಕೆ ಕಾಯಬಹುದು. ಸಂಪಾದಕನು ಪುರೋಹಿತನನ್ನು ಮೀರಿಸಬಹುದು. ಹೇಗೆಂದರೆ ಮಾಹಿತಿಯ ಪ್ರಸಾರವನ್ನು ತಡೆಹಿಡಿಯುವ ಮೂಲಕ ಆದರೂ ಪ್ರಗತಿಪರ ಮತ್ತು ಉದಾರವಾದಿ ಅವಕಾಶಕ್ಕೆ ಕ್ಲೇಮು ಮಾಡಬಹುದು.

ಇದೆಂಥ ನಾಚಿಕೆಗೇಡು!

ಭಾರತೀಯ ಮಾಧ್ಯಮ ಮತ್ತು ೨೦೦೪ರ ಏಕತಾ ಸಮ್ಮೇಳನ

ಭಾರತೀಯ ಮಾಧ್ಯಮ 'ನಾಥದ್ವಾರ ದೇವಸ್ಥಾನದ ವಿಸ್ತೃತ ಆವರಣ'ವೆಂದು ಒಬ್ಬರು ಕರೆದಲ್ಲಿ 'ತರ್ಕ ಬಿಟ್ಟ ದಲಿತನೊಬ್ಬನ ಸಾಮಾನ್ಯ ಕಹಿ ಹೇಳಿಕೆ' ಎಂದು ತಿರಸ್ಕರಿಸಿಬಿಡಬಹುದು. ಆದರೆ ಇಂಥದ್ದನ್ನೇ ಪ್ರತಿಬಿಂಬಿಸುವ ಸಾಂಸ್ಥಿಕ ಉದಾಹರಣೆಯೊಂದು ಇಲ್ಲಿದೆ.

ಈ ಆಗಸ್ಟ್‌ನಲ್ಲಿ ವಾಷಿಂಗ್ಟನ್ ಡಿ.ಸಿ 'ಏಕತೆ ೨೦೦೪' ಎಂದು ಕರೆಯಲಾಗುವ ಜಗತ್ತಿನ ಅತೀ ದೊಡ್ಡ ಮಾಧ್ಯಮ ಒಡಂಬಡಿಕೆಯ ಸಮ್ಮೇಳನದ ಆತಿಥ್ಯ ವಹಿಸಿಕೊಂಡಿದೆ. ಇದಕ್ಕೆ ಸುಮಾರು ೮,೧೦೦ ಅಮೇರಿಕನ್ ಪತ್ರಕರ್ತರನ್ನು ಕರೆಯಲಾಗಿದೆ. ಇದು ಎಂಥ ಮಹತ್ವವಾದ ಸಂಗತಿಯೆಂದರೆ, ಅಮೇರಿಕಾ ಅಧ್ಯಕ್ಷರಾದ ಜಾರ್ಜ್‌ಬುಶ್ ಮತ್ತು ಡೆಮಾಕ್ರಟಿಕ್ ಪ್ರೆಸಿಡೆಂಟ್ಸಿಯಲ್‌ನ ನಾಮನಿರ್ದೇಶಿತನಾದ ಜಾನ್ ಕೆರ್‍ರಿಯು ಸಭಿಕರನ್ನುದ್ದೇಶಿಸಿ ಮಾತನಾಡಲಿದ್ದಾರೆ.

ಈ ಸಮಾವೇಶವು ನಿರಂತರವಾಗಿ ಐದು ವರ್ಷಗಳಿಗೊಮ್ಮೆ ನಡೆಯುವ ಅಮೇರಿಕನ್ ಪತ್ರಕರ್ತರ ಒಲಂಪಿಯಾಡ್ ಎಂದೇ ಆಗಿದೆ. ಇದನ್ನು ಮೊದಲನೇ ಬಾರಿಗೆ ಅಟ್ಲಾಂಡಾ (೧೯೮೮)ದಲ್ಲಿ ಏರ್ಪಡಿಸಿದ್ದಾಗ ೬,೦೦೦ ಪತ್ರಕರ್ತರು ಭಾಗವಹಿಸಿದ್ದರು. ಇದೇ ಸಮಾವೇಶವನ್ನು ಸಿಯಾಟಲ್ (೧೯೯೯) ನಲ್ಲಿ ನಡೆಸಿದಾಗ ಸಂಖ್ಯೆ ೭,೦೦೦ಕ್ಕೆ ಏರಿತು. ಇಂಥ ೫ ದಿನಗಳ ಸಮಾವೇಶವನ್ನು (ಆಗಸ್ಟ್ ೪ ರಿಂದ ೮ರವರೆಗೆ) ಜಗತ್ತಿನಾದ್ಯಂತ ಯಾವುದಾದರೂ ಒಂದು ನಗರ ಏರ್ಪಡಿಸಿದ್ದಿದೆಯೇ? ಈ ಪತ್ರಕರ್ತರ ಒಲಂಪಿಯಾಡ್ ಅಮೇರಿಕನ್ ಮಾಧ್ಯಮದಲ್ಲಿ ಬಹುವಾಗಿ ಚರ್ಚಿತವಾಗಿದೆ ಎನ್ನುವುದನ್ನು ಮತ್ತೆ ಒತ್ತಿ ಹೇಳಬೇಕಾಗಿಲ್ಲ. ಭಾರತದಲ್ಲಿ ೪೩,೮೨೮ ಪ್ರಕಟಣೆಗಳು ಅದರಲ್ಲಿ ೪,೮೯೦ ದಿನಪತ್ರಿಕೆಗಳಿದ್ದು ೧೮ ಪ್ರಧಾನ ಭಾಷೆ ಹಾಗೂ ೮೧ ಉಪಭಾಷೆಗಳಲ್ಲಿ ಪ್ರಕಟಗೊಳ್ಳುತ್ತಿದೆ.

ಹೀಗಿದ್ದರೂ ೨೦೦೪ರ ಸಮಾವೇಶದ ಬಗ್ಗೆ ಯಾವ ಪ್ರಕಟಣೆಗಳು ಸಹ ಹೇಳಲಿಲ್ಲ ಏಕೆ? ಭಾರತದ ಅನೇಕ ದಿನಪತ್ರಿಕೆಗಳು ಹಾಗೂ ಸುದ್ದಿ ಮಾಧ್ಯಮಗಳು ಅಮೇರಿಕನ್ ಸುದ್ದಿ ಸಂಸ್ಥೆಗಳಿಗೆ ಚಂದಾದಾರ ಆಗಿವೆ. ಅನೇಕವು ತಮ್ಮದೇ ಆದ ಪ್ರತಿನಿಧಿಗಳನ್ನು ಅಮೇರಿಕದಲ್ಲಿ ಹೊಂದಿವೆ. ಅನೇಕ ಸಂಪಾದಕರು ಅಮೇರಿಕನ್ ದಿನಪತ್ರಿಕೆಗಳನ್ನು ಇಂಟರ್‌ನೆಟ್ ಮೂಲಕ ಓದುತ್ತಿರುತ್ತಾರೆ. ಅನೇಕ ಸುದ್ದಿ ಚಾನಲ್‌ಗಳು ವಿದೇಶಿ ವಿಭಾಗವನ್ನು ಹೊಂದಿದ್ದು ವಿದೇಶಿ ಸುದ್ದಿ ಚಾನಲ್‌ಗಳ ಕಾರ್ಯಕ್ರಮವನ್ನು ನಕಲು ಮಾಡುತ್ತವೆ. ಹೀಗಿರುವಲ್ಲಿ ಇಂಥ ಬೃಹತ್ ಸಮ್ಮೇಳನವನ್ನು ಒಂದು ಸಣ್ಣ ಅಂಕಣದಲ್ಲೂ ಸಹ ಪ್ರಕಟಿಸಲಿಲ್ಲ ಏಕೆ? ಅಥವಾ ಹತ್ತು ಸೆಕೆಂಡುಗಳಷ್ಟಾದರೂ ಸಹ ಸುದ್ದಿ ಚಾನಲ್‌ಗಳಲ್ಲಿ ಪ್ರಸಾರ ಮಾಡಿಲ್ಲ ಏಕೆ? ಅದೂ ಸಹ ಅನೇಕ ಸುದ್ದಿ ಪತ್ರಿಕೆಗಳು ಅಂತರರಾಷ್ಟ್ರೀಯ ವಿಷಯಗಳನ್ನು ಒಂದು ಪುಟದಷ್ಟಾದರೂ ಬರೆಯುವಾಗ ಇದನ್ನಾಕೆ ಪ್ರಕಟಿಸಲಿಲ್ಲ?

ನಿರಂತರವಾಗಿ ಅನೇಕ ಚಾನಲ್‌ಗಳು ಅಂತರರಾಷ್ಟ್ರೀಯ ವಿಷಯವನ್ನು ಪ್ರಸಾರ ಮಾಡುತ್ತಿರುತ್ತವೆ. ಹೀಗಿರುವಲ್ಲಿ ಇದನ್ನು ಕೇವಲ ಮಾಹಿತಿ ಕೊರತೆ ಎಂದು ಪರಿಗಣಿಸಿದಲ್ಲಿ ಅನೇಕ ಭಾರತೀಯ ಪತ್ರಕರ್ತರು ಅಯೋಗ್ಯರೆಂದಾಗುತ್ತದೆ. ಹೀಗೆ ಅವರನ್ನು ವಿವರಿಸುವುದು 'ರಾಜಕೀಯವಾಗಿ ತಪ್ಪು' ಎಂದಾಗುತ್ತದೆ. ಆದ್ದರಿಂದ ೨೦೦೪ರ ಏಕತಾ ಸಮಾವೇಶದ ಬಗ್ಗೆ ಭಾರತೀಯ ಮಾಧ್ಯಮಗಳು ತಿಳಿದುಕೊಂಡಿಲ್ಲವೆಂದು ಹೇಳುವುದು ದಡ್ಡತನವಾಗುತ್ತದೆ.

ಈ ಘಟನೆಯನ್ನು ಮುಚ್ಚಿಹಾಕಲು ಇತರೇ ಕಾರಣಗಳೇನಾದರೂ ಇವೆಯೇನು? ಭಾರತೀಯ ದಿನಪತ್ರಿಕೆಗಳ ಸಂಪಾದಕರೂ, ಸುದ್ದಿ ಚಾನಲ್‌ಗಳ ಮುಖ್ಯಸ್ಥರು ಜಾತಿವಾದಿಗಳೇ? ಹೀಗೆ ಅವರನ್ನು ವಿವರಿಸುವುದು ಸಹ ರಾಜಕೀಯವಾಗಿ ತಪ್ಪಾಗುತ್ತದೆ. ಹೀಗಿದ್ದರೂ ದಲಿತ ವೀಕ್ಲಿ ಅಂಕಣವನ್ನು ಆರಂಭಿಸಲು ತೆಗೆದುಕೊಂಡ ಚಂದನ್‌ಮಿತ್ರರ ನಿರ್ಧಾರವೂ ಸಹ ರಾಜಕೀಯವಾಗಿ ತಪ್ಪು ಹೆಜ್ಜೆ ಆಗುತ್ತದೇನು? ರಾಜಕೀಯವಾಗಿ ಸರಿಯೆಂದು ಗುರುತಿಸಿಕೊಂಡಿರುವ ಮಾಧ್ಯಮಗಳಾದ ಇಂಡಿಯನ್ ಎಕ್ಸ್‌ಪ್ರೆಸ್, ದಿ ಹಿಂದೂಗಳು ಇಂಥ ಅಂಕಣವನ್ನು ಬಹುಹಿಂದೆಯೇ ಆರಂಭಿಸಬಹುದಾಗಿತ್ತು. ತೆಲುಗು ದಿನಪತ್ರಿಕೆ ವಾರ್ತಾದ ಸಂಪಾದಕರ ಮೇಲೆ ಇಂಥ ವೀಕ್ಲಿ ಅಂಕಣವನ್ನು ಪ್ರಕಟಪಡಿಸಬಾರದೆಂಬ ಒತ್ತಡವೂ ಸಹ ರಾಜಕೀಯವಾಗಿ ಸರಿಯೆನ್ನುವ ಎಡೆಗಳಿಂದಲೇ ಬರುತ್ತಿದೆಯಲ್ಲವೇ?

> ಆಗಸ್ಟ್‌ನಲ್ಲಿ ವಾಷಿಂಗ್ಟನ್ ಡಿ. ಸಿ. ಯು 'ಏಕತೆ ೨೦೦೪' ಎಂದು ಕರೆಯಲಾಗುವ ಜಗತ್ತಿನ ಅತೀ ದೊಡ್ಡ ಮಾಧ್ಯಮ ಒಡಂಬಡಿಕೆಯ ಸಮ್ಮೇಳನದ ಆತಿಥ್ಯ ವಹಿಸಿಕೊಂಡಿದೆ. ಇದಕ್ಕೆ ಸುಮಾರು ೮,೧೦೦ ಅಮೇರಿಕನ್ ಪತ್ರಕರ್ತರನ್ನು ಕರೆಯಲಾಗಿದೆ. ಇದು ಅಮೇರಿಕಾದ ಪತ್ರಕರ್ತರ ಒಲಂಪಿಯಾಡ್ ಎಂದೇ ಖ್ಯಾತಿ ಗಳಿಸಿದೆ. ಈ ಏಕತಾ ಸಮ್ಮೇಳನವು ಪತ್ರಿಕೋದ್ಯಮ ಹಾಗೂ ಶಿಕ್ಷಣದಲ್ಲಿ ನ್ಯಾಯಪರತೆ ಮತ್ತು ನಿಷ್ಪುರತೆಯನ್ನು ಸುದ್ದಿ ಪ್ರಕಟಣೆಯಲ್ಲಿ ಅನುಸರಿಸಬೇಕೆಂದು ಘೋಷಿಸುತ್ತದೆ. ಚಾರಿತ್ರಿಕವಾಗಿ ಸಾಮಾಜಿಕವಾಗಿ ವಂಚಿತರಾದ ಗುಂಪುಗಳ ಹಕ್ಕುಗಳನ್ನು ಪ್ರತಿಪಾದಿಸುತ್ತದೆ. ಇಂತಹ ಮಹತ್ವವುಳ್ಳ ಇದನ್ನು ಭಾರತೀಯ ಮಾಧ್ಯಮಗಳು ಪ್ರಕಟಿಸದಿರಲು ಕಾರಣವೇನು?

೨೦೦೪ರ ಏಕತೆಯನ್ನು ಪ್ರಕಟಿಸಲು ಭಾರತೀಯ ಮಾಧ್ಯಮವೇಕೆ ಹಿಂಜರಿಯುತ್ತದೆ. 'ಏಕತೆ: ವರ್ಣ ಪತ್ರಕರ್ತರು', ತನ್ನನ್ನೇ ಒಂದು ಶಕ್ತಿಯುತ ಹೊಂದಾಣಿಕೆಯೆಂದೂ, ಬದಲಾವಣೆಯ ಶಕ್ತಿಯೆಂದೂ ವಿವರಿಸಿಕೊಂಡಿವೆ. ರಾಷ್ಟ್ರೀಯ ಕಪ್ಪು ಪತ್ರಕರ್ತರ ಸಂಘ (ನ್ಯಾಷನಲ್ ಅಸೋಸಿಯೇಷನ್ ಆಫ್ ಬ್ಲಾಕ್ ಜರ್ನಲಿಸ್ಟ್) ಸ್ಥಳೀಯ ಅಮೇರಿಕನ್ ಪತ್ರಕರ್ತರ ಸಂಘ (ನೇಟಿವ್ ಅಮೇರಿಕನ್ ಜರ್ನಲಿಸ್ಟ್ ಅಸೋಸಿಯೇಷನ್), ಹಿಸ್ಪಾನಿಕ್ ಪತ್ರಕರ್ತರ ರಾಷ್ಟ್ರೀಯ ಸಂಘ ಹಾಗೂ ಏಷ್ಯಾ-ಅಮೇರಿಕನ್ ಪತ್ರಕರ್ತರ ಸಂಘ ಎಂಬ ಪ್ರಧಾನ ನಾಲ್ಕು ಪತ್ರಕರ್ತ ಮಂಡಲಿಗಳು ೧೯೮೪ರ ಏಕತಾ ಸಮ್ಮೇಳನವನ್ನು ರೂಪಿಸಿದ್ದವು. ವಾಷಿಂಗ್ಟನ್ ಡಿಸಿ ಸಮ್ಮೇಳನವೂ ಮೂರನೆಯದಾಗಿತ್ತು. ಹೋಲಿಸುವುದಾದರೆ, ಈ ಏಕತಾ ಸಮ್ಮೇಳನವು ಇತ್ತೀಚೆಗೆ ನವದೆಹಲಿಯಲ್ಲಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪತ್ರಕರ್ತರ ಸಂಘದ ಸಮ್ಮೇಳನವೆಂದಾಗುತ್ತದೆ.

ಈ ಏಕತಾ ಸಮ್ಮೇಳನವು ಪತ್ರಿಕೋದ್ಯಮ ಹಾಗೂ ಶಿಕ್ಷಣದಲ್ಲಿ ನ್ಯಾಯಪರತೆ ಮತ್ತು ನಿಷ್ಪುರತೆಯನ್ನು ಸುದ್ದಿ ಪ್ರಕಟಣೆಯಲ್ಲಿ ಅನುಸರಿಸಬೇಕೆಂದು ಘೋಷಿಸುತ್ತದೆ. ಈ ಏಕತೆಯು ಚಾರಿತ್ರಿಕವಾಗಿ ಸಾಮಾಜಿಕವಾಗಿ ವಂಚಿತರಾದ ಗುಂಪುಗಳ ಹಕ್ಕುಗಳನ್ನು ಬಯಸುತ್ತದೆ. ಇಂಥ ಸಮ್ಮೇಳನದ ಜಾಗಗಳಲ್ಲಿ ಅನೇಕ ಅಮೇರಿಕನ್ ದಿನಪತ್ರಿಕೆಗಳು, ಟಿವಿ ಚಾನಲ್‌ಗಳು ಮತ್ತು ಪತ್ರಿಕೋದ್ಯಮ ಸಂಸ್ಥೆಗಳು 'ನೇಮಕ ಕೇಂದ್ರ'ಗಳನ್ನು ತೆರೆದಿದ್ದವು. ಈ ಸಮ್ಮೇಳನವನ್ನು ಬಹುವಾಗಿ ಮುಖ್ಯವಾಹಿನಿಯಲ್ಲಿರುವ ಅಮೇರಿಕನ್ ಮಾಧ್ಯಮ ಮತ್ತು ನಿಗಮ ಜಗತ್ತು ಪ್ರಾಯೋಜಿಸಿದ್ದವು. ಭಾರತದ ಮಾಧ್ಯಮವೇನಾದರೂ ೨೦೦೪ರ ಏಕತೆಯನ್ನು ಪ್ರಕಟಿಸಿದ್ದಾದಲ್ಲಿ ಕೆಲವೊಂದು ಪರಿಣಾಮಗಳನ್ನು ಎದುರಿಸಬೇಕಾಗಿತ್ತು. ಇಂಥ ಪ್ರಕಟಣೆಯು ಹೊಸ ಚರ್ಚೆಯನ್ನೇ ಹುಟ್ಟುಹಾಕುತ್ತಿತ್ತು. ಆಗ ಭಾರತೀಯ ಮಾಧ್ಯಮವು ಒತ್ತಡಕ್ಕೆ ಸಿಲುಕಿಕೊಂಡು ದಲಿತರಿಗಾಗಿ ತನ್ನ ನೀತಿಯನ್ನು ಬದಲಿಸಿ ಅವಕಾಶ ಕಲ್ಪಿಸಬೇಕಾಗಿತ್ತು. ಇಲ್ಲವಾದಲ್ಲಿ ತನ್ನ ಉನ್ನತ ನೈತಿಕ ನೆಲೆಯನ್ನು ಬಿಟ್ಟುಕೊಟ್ಟು ಮುಜುಗರದ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತಿತ್ತು. ದಲಿತ ಹಕ್ಕುಗಳಿಗಾಗಿ ಈ ಅಂಕಣ ವಾದಿಸುವಲ್ಲಿ, ತಳಿಶಾಸ್ತ್ರೀಯವಾಗಿ ಉತ್ಪಾದಿಸಿದ ಆಲೂಗಡ್ಡೆಯಂತೆ ಗಾತ್ರ, ಬಣ್ಣ ರುಚಿಯಲ್ಲಿ ಒಂದೇ ಇರುವಂತೆ ಭಾರತದ ಎಡಪಂಕ್ತೀಯ, ಲಿಬರಲ್, ಸೆಕ್ಯುಲರ್, ಬಲಪಂಥೀಯ ಅಥವಾ ಸಮಾಜವಾದಿ ಪತ್ರಕರ್ತರು, ಬರಹಗಾರರು, ಅಂಕಣಕಾರರು ಪ್ರತಿಕ್ರಿಯಿಸುತ್ತಾರೆ.

ಅಮೇರಿಕದಂತೆ ಭಾರತವು ತನ್ನ ಸಾಮಾಜಿಕ ನೆಲೆ ಹಾಗೂ ಬಹಿಷ್ಕಾರದ ಚರಿತ್ರೆಯನ್ನು ಹೊಂದಿದೆ. ಅಮೇರಿಕವು

ಈಗ ತನ್ನ ಜನಾಂಗೀಯ ಸಂಬಂಧಗಳನ್ನು ಸರಿಪಡಿಸಲು ಪ್ರಯತ್ನಿಸುತ್ತಿದೆ. ಇಂದು ಎನ್‌ಎಬಿಜೆಯು [illegible] ಸದಸ್ಯತ್ವವನ್ನು ಹೊಂದಿದೆ. ಭಾರತೀಯ ಸುದ್ದಿ ಚಾನೆಲ್‌ಗಳು ಇದುವರೆಗೆ [illegible] ದಲಿತರನ್ನು ಹೊಂದಿಲ್ಲ. ಎನ್‌ಎಬಿಜೆ ವೆಬ್‌ಸೈಟ್‌ನ ಪ್ರಕಾರ ೧೨ ಕಪ್ಪು ಜನರು ಮೊದಲ ಶ್ರೇಣಿಯ ಸಂಪಾದಕರಾಗಿ, ೧೬ ಜನರು ವ್ಯವಸ್ಥಾಪಕ ಸಂಪಾದಕರಾಗಿ ಮತ್ತು ೧೯ ಜನರು ಅಭಿಪ್ರಾಯ ಸಂಗ್ರಾಹಕ ಸಂಪಾದಕರಾಗಿ ಇದ್ದಾರೆ. ಕರಿಯನಾದ ರಿಚರ್ಡ್ ಪಾರ್ಸನ್ಸ್‌ನು ಅಮೆರಿಕದ ಅತೀ ದೊಡ್ಡ ಮಾಧ್ಯಮ ಸಮೂಹವಾದ ಟೈಮ್ ವಾರ್ನರ್‌ನ ಮುಖ್ಯ ಸಂಪಾದಕ ಅಧಿಕಾರಿಯಾಗಿದ್ದಾನೆ (ಸಿಇಒ).

ದಲಿತರಿಗಾಗಿ ಇದೇ ರೀತಿಯ ಮಾಧ್ಯಮ ವೈವಿಧ್ಯತೆಯ ಭಾರತದ ಹಿತಾಸಕ್ತಿಯಾಗಬಾರದೇಕೆ? ಒಂದು ಡಜನ್‌ನಷ್ಟು ದಲಿತರು ಸಂಪಾದಕರು, ಸುದ್ದಿ ಚಾನೆಲ್ ಮುಖ್ಯಸ್ಥರು, ಅಂಕಣಕಾರರು, ಪ್ರಮುಖವಾಗಿ ಮತ್ತು ಮತ್ತೊಂದು ಸಾವಿರದಷ್ಟು ದಲಿತರು ಸುದ್ದಿ ಕೊಠಡಿಗಳಲ್ಲಿ ಅವಕಾಶ ಪಡೆಯುವುದು ಭಾರತದ ಹಿತಾಸಕ್ತಿಯಾಗಬಾರದೇಕೆ? ನಾಥದ್ವಾರವು ದಲಿತರ ಪ್ರವೇಶಕ್ಕೆ ಅನುಮತಿಸುತ್ತಿಲ್ಲ, ಯಾಕೆಂದರೆ ಅಲ್ಲಿ ಪುರೋಹಿತ ಮತ್ತು ದೇವರಿದ್ದಾನೆಂದು. ಭಾರತದ ಮಾಧ್ಯಮವು ನಾಥದ್ವಾರದ ಮುಂದುವರಿಕೆ ಯೆಂಬಂತಾಗಿ ಅದೇ ಭಾರತದ ಹಿತಾಸಕ್ತಿಯಾಗಿದೆಯೇ?

> **ಸಮ್ಮೇಳನದ ಜಾಗಗಳಲ್ಲಿ ಅನೇಕ ಅಮೆರಿಕನ್ ದಿನಪತ್ರಿಕೆಗಳು, ಟಿವಿ ಚಾನೆಲ್‌ಗಳು ಮತ್ತು ಪತ್ರಿಕೋದ್ಯಮ ಸಂಸ್ಥೆಗಳು 'ನೇಮಕ ಕೇಂದ್ರ'ಗಳನ್ನು ತೆರೆದಿದ್ದವು. ಭಾರತದ ಮಾಧ್ಯಮವೇನಾದರೂ ೨೦೦೪ರ ಏಕತೆಯನ್ನು ಪ್ರಕಟಿಸಿದ್ದಿದ್ದರೆ ಕೆಲವೊಂದು ಪರಿಣಾಮಗಳನ್ನು ಎದುರಿಸಬೇಕಾಗಿತ್ತು. ಇಂಥ ಪ್ರಕಟಣೆಯು ಹೊಸ ಚರ್ಚೆಯನ್ನೇ ಹುಟ್ಟುಹಾಕುತ್ತಿತ್ತು. ಆಗ ಭಾರತೀಯ ಮಾಧ್ಯಮವು ಒತ್ತಡಕ್ಕೆ ಸಿಲುಕಿಕೊಂಡು ದಲಿತರಿಗಾಗಿ ತನ್ನ ನೀತಿಯನ್ನು ಬದಲಿಸಿ ಅವಕಾಶ ಕಲ್ಪಿಸಬೇಕಾಗಿತ್ತು. ಇಲ್ಲವಾದಲ್ಲಿ ತನ್ನ ಉನ್ನತ ನೈತಿಕ ನೆಲೆಯನ್ನು ಬಿಟ್ಟುಕೊಟ್ಟು ಮುಜುಗರದ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತಿತ್ತು.**

ಜಿಎಂ ಸರಬರಾಜು ವೈವಿಧ್ಯತೆಯನ್ನು ಕೂಡಾ ಪಾಲಿಸುತ್ತಿದೆ. ೨೦೦೩ರಲ್ಲಿ ಕಂಪೆನಿಯು ಅಲ್ಪಸಂಖ್ಯಾತ ಸರಬರಾಜುದಾರರಿಂದ [illegible] ಬಿಲಿಯನ್ ಅಮೆರಿಕನ್ ಡಾಲರ್ ಮೊತ್ತದ ಸರಕುಗಳನ್ನು ಮತ್ತು ಸೇವೆಗಳನ್ನು ಖರೀದಿಸಿದೆ ಎಂದರೆ ಹಿಂದಿನ ವರ್ಷಕ್ಕಿಂತ ಇದು ೧ ಬಿಲಿಯನ್ ಡಾಲರ್ ಹೆಚ್ಚಾಗಿದೆ. ಕಂಪನಿಯ ದೊಡ್ಡ ಸರಬರಾಜುದಾರನು ಬಿಳಿಯನಾಗಿದ್ದರೂ, ಸಣ್ಣ ಅಲ್ಪಸಂಖ್ಯಾತ ಸರಬರಾಜುದಾರರಿಂದ ಸರಕುಗಳನ್ನು ಪಡೆಯಬೇಕೆಂಬ ಆದೇಶವನ್ನು ಜಿಎಂ ರೂಪಿಸಿದೆ. ಉದಾಹರಣೆಗೆ ಜಿಎಂಗೆ ಪ್ರಮುಖ ಆಟೋ ಬಿಡಿಭಾಗಗಳ ಸರಬರಾಜುದಾರನಾದ ಜಾನ್ಸನ್ ಕಂಟ್ರೋಲ್ಸ್ ಕಳೆದ ವರ್ಷ ೧ ಬಿಲಿಯನ್ ಡಾಲರ್ ಮೊತ್ತದ ಸರಕುಗಳು ಮತ್ತು ಸೇವೆಗಳನ್ನು ಖರೀದಿಸಿದೆ. ೧೯೯೯ರ ವೇಳೆಗೆ ಅದರ ಡೀಲರ್‌ಶಿಪ್ ವೈವಿಧ್ಯತೆಯಡಿಯಲ್ಲಿ ಜಿಎಂ ೩೨೦ ಅಲ್ಪಸಂಖ್ಯಾತ ಸರಬರಾಜುದಾರರನ್ನು ಹೊಂದಿತ್ತು. ಇದರ ವಹಿವಾಟು ವಾರ್ಷಿಕ ೯.೫ ಬಿಲಿಯನ್ ಡಾಲರ್ ಆಗಿತ್ತು. ಜಿಎಂ ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳಿಗೂ ನೆರವು ನೀಡುತ್ತದೆ ಎಂಬುದನ್ನು ಹೇಳಬೇಕಾದ ಅವಶ್ಯಕತೆಯಿಲ್ಲ.

ಜಿಎಂ, ಅದರ ವೈವಿಧ್ಯತಾ ಅಜೆಂಡಾಕ್ಕಾಗಿ ತನ್ನ ಅಭ್ಯರ್ಥಿಗಳನ್ನು ಶಿಫಾರಸ್ಸು ಮಾಡುವ ಅನೇಕ ಅಲ್ಪಸಂಖ್ಯಾತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಹೊಂದಿದೆ. ಅಲ್ಪಸಂಖ್ಯಾತ ವ್ಯಾಪರ ಸಂಸ್ಥೆಗಳು ಅದಕ್ಕೆ ಸರಕುಗಳು ಮತ್ತು ಸೇವೆಗಳನ್ನು ಒದಗಿಸುತ್ತದೆ.

ಜಿಎಂನ ವೈವಿಧ್ಯತಾ ಇಲಾಖೆಯು ಅಲ್ಪಸಂಖ್ಯಾತರು ನಡೆಸುವ ಶಿಕ್ಷಣ ಸಂಸ್ಥೆಗಳಲ್ಲಿ ಉದ್ಯೋಗ ಮಾರುಕಟ್ಟೆಗಳನ್ನು ಹೊಂದಿದೆ ಹಾಗೂ 'ಸ್ಥಳದಲ್ಲೇ ನೇಮಕಾತಿ ನಡೆಸುವುದು' ಕೂಡಾ ವೈವಿಧ್ಯತೆಯ ಒಂದು ಭಾಗವಾಗಿದೆ.

ಈ ಹಿನ್ನೆಲೆಯಲ್ಲಿ ದಲಿತ ಉದ್ಯಮಸ್ಥರನ್ನು ಸಂಘಟಿಸುವಲ್ಲಿ ಖಾಸಗಿ ವಲಯ ಪತ್ರಿಕಾ ಹೇಳಿಕೆಯನ್ನು ನೀಡಬಹುದೆನ್ನುವುದನ್ನು ಊಹಿಸೋಣ. 'ಜಗತ್ತಿನ ಬಗ್ಗೆ ಭಾರತೀಯ ಬೂರ್ಜ್ವಾರ ದೃಷ್ಟಿ ಹೇಗಿದೆಯೆನ್ನುವುದನ್ನು ನೋಡಿ' ಈ ಭಾರತೀಯ ಬೂರ್ಜ್ವಾ ದೃಷ್ಟಿಯ ಬಗ್ಗೆ ಅಮೆರಿಕದ ಸಾರ್ವಜನಿಕ ಗ್ರಹಿಕೆ ಎಂಥದೆಂಬುದನ್ನು ಊಹಿಸಿಕೊಳ್ಳಿ.

ಭಾರತೀಯ ಕೈಗಾರಿಕೆಯು ವಾಣಿಜ್ಯ ವ್ಯಾಕರಣದಲ್ಲಿ ನಂಬಿಕೆಯನ್ನಿಡಲು ಆರಂಭಿಸಬೇಕಷ್ಟೆ. ಲಾಭಕ್ಕಾಗಿ ವಾಣಿಜ್ಯ ಇರುತ್ತದೆ. ಇದು ಸಾಧ್ಯವಾಗಬೇಕಾದರೆ ಉತ್ಪಾದನೆಯಲ್ಲಿ ಗುಣಮಟ್ಟ ಮತ್ತು ಸ್ಪರ್ಧೆ ಇರಬೇಕು. ಅಂದರೆ ಅಗತ್ಯವಿರುವ ಶ್ರಮಶಕ್ತಿಯನ್ನು ಸಮಾಜದ ಎಲ್ಲ ವರ್ಗಗಳಿಂದಲೂ ಸ್ಪರ್ಧಾತ್ಮಕವಾಗಿ ಆಯ್ಕೆ ಮಾಡಬೇಕಾಗುತ್ತದೆ. ಮೀಸಲಾತಿಯ ಮೂಲಕ ನೂರಾರು ದಲಿತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಯಾವುದೇ ರಾಜ್ಯದಲ್ಲಿಯೂ ಇದು ಐಎಎಸ್/ಐಪಿಎಸ್ ಅಧಿಕಾರಿಗಳನ್ನು ಅವರ ಅತ್ಯುತ್ತಮ ದಕ್ಷತೆಗೆ ತೆಗೆದುಕೊಂಡಲ್ಲಿ ಅವರಲ್ಲಿ ಇಬ್ಬರಾದರೂ ದಲಿತರಾಗಿರುತ್ತಾರೆ.

ಇದು ಯಾಕೆಂದರೆ ದಲಿತರಲ್ಲಿ ಇರುವಂಥ ಗಾಢವಾದ ಆದರ್ಶವೇ ಸರಿ. ದಲಿತೇತರರು ಆದರ್ಶಗಳನ್ನು ಹೊಂದಿಲ್ಲವಾದ್ದರಿಂದ ತಮ್ಮ ಸಾಮರ್ಥ್ಯಕ್ಕಿಂತ ಕಮ್ಮಿ ದುಡಿಯುತ್ತಾರೆ. ಇಂಥ ಸಾಮಾಜಿಕ ವಿದ್ಯಮಾನವನ್ನು ಅಮೆರಿಕಾದ ಕಂಪನಿಗಳು ಕೈಗೆತ್ತಿಕೊಳ್ಳುತ್ತವೆ. ಅಲ್ಲಿನ ಜಿಎಂ ಕಪ್ಪು ಪ್ರತಿಭೆಯನ್ನು ಹುಡುಕುತ್ತಾನೆ ಮತ್ತು ಅಂಥ ಅಧಿಕ ಪ್ರತಿಭೆಗಳೂ ಸಹ ಆತನಿಗೆ ದೊರೆಯುತ್ತವೆ. ಮೂರು ದಶಕಗಳ ಹಿಂದೆ ಕಪ್ಪು

ಲಾಭಕ್ಕೆ ಜಾತಿ ಇಲ್ಲವೆಂದು ಗೊತ್ತಿದೆ

ಸೆಪ್ಟೆಂಬರ್ ೩ ರಂದು ಪ್ರಮುಖ ಕೈಗಾರಿಕಾ ಸಂಸ್ಥೆಯೊಂದು ದೆಹಲಿಯಲ್ಲಿ ಪತ್ರಿಕಾಗೋಷ್ಠಿಯೊಂದನ್ನು ಏರ್ಪಡಿಸಿತ್ತು. ಖಾಸಗಿ ವಲಯದ ಉದ್ಯೋಗ ಮೀಸಲಾತಿಯ ಬಗೆಗಿನ ಕೈಗಾರಿಕೆಯ ದೃಷ್ಟಿಕೋನಗಳನ್ನು ತಿಳಿಯಪಡಿಸುತ್ತದೆಂದು ಅಪೇಕ್ಷಿಸಲಾಗಿತ್ತು. ನಿರೀಕ್ಷಿತವೆಂಬಂತೆ, ಪ್ರತಿನಿಧಿಯು ಸರ್ಕಾರದ ಪ್ರಯತ್ನವನ್ನು ವಿರೋಧಿಸಿದ. ಇದು ಒಳ್ಳೆಯದೇ, ಎಷ್ಟೆಂದರೂ, ಇದು ಪ್ರಜಾಪ್ರಭುತ್ವವಲ್ಲವೇ. ಇದರಂತೆ ದಲಿತರು, ಭಾರತದ ಮಾರುಕಟ್ಟೆ ಮತ್ತು ಸಮಾಜವನ್ನು ಪ್ರಜಾಸತ್ತಾತ್ಮೀಕರಣಗೊಳಿಸುವ ಹಕ್ಕನ್ನು ಹೊಂದಿದ್ದಾರೆ. ಮಾರುಕಟ್ಟೆ ಮುಖಂಡರು ಅದನ್ನು ವಿರೋಧಿಸುವ ಹಕ್ಕನ್ನು ಕೂಡಾ ಹೊಂದಿದ್ದಾರೆ. ಆದರೆ, ಯಾರೇ ಆಗಲಿ, ಚರ್ಚಿಸುವ ಪಕ್ಷಕಾರರು ತಮ್ಮ ವಾದಗಳಲ್ಲಿ ಕನಿಷ್ಠ ಅರ್ಹತೆಯನ್ನು ಗೌರವಿಸಬೇಕೆಂದು ಬಯಸುತ್ತಾರೆ.

ಕೈಗಾರಿಕಾ ಪತ್ರಿಕಾಗೋಷ್ಠಿಯು 'ಖಾಸಗಿ ವಲಯ ಉದ್ಯೋಗ ಮೀಸಲಾತಿ'ಯನ್ನು 'ಕೈಗಾರಿಕಾ ವಿರೋಧಿ' ಯೆಂದು ಹೇಳಿತು. ಆ ತೀರ್ಮಾನಕ್ಕೆ ಆಧಾರವೇನೆಂದು ನಮಗೆ ಗೊತ್ತಿಲ್ಲ. ಇದಕ್ಕೇನಾದರೂ ವೈಜ್ಞಾನಿಕ ಕಾರಣಗಳಿವೆಯೇ? 'ದಲಿತ ಇಂಜಿನಿಯರರು, ವಿಜ್ಞಾನಿಗಳು, ಮ್ಯಾನೇಜರುಗಳು, ಕೈಗಾರಿಕೆಯ ನಾಶಕ್ಕೆ ಕಾರಣವಾಗುತ್ತಾರೆಂದು ಅಧ್ಯಯನವೇನಾದರೂ ಸಮರ್ಥಿಸಿದೆಯೇ? ಆದರೆ, ಖಾಸಗಿ ವಲಯದ ಅಭಿಪ್ರಾಯವು ಖಂಡನೀಯವಾದದ್ದು. ಎಷ್ಟೆಂದರೂ, ಪ್ರಜಾಪ್ರಭುತ್ವವು ದುರಾಚಾರಿಗಳಿಗೆ ಅವಕಾಶ ನೀಡುತ್ತದೆಯಲ್ಲವೇ?

ಆದರೆ, ಹೆಚ್ಚು ದಿಗ್ಭ್ರಮೆಯ ಸಂಗತಿಯೆಂದರೆ, 'ಜಗತ್ತಿನಲ್ಲಿ ಎಲ್ಲೂ ಖಾಸಗಿ ವಲಯದಲ್ಲಿ ಮೀಸಲಾತಿಯಿಲ್ಲ' ಎಂಬುದನ್ನು ಪತ್ರಿಕಾಗೋಷ್ಠಿಯು ಒತ್ತಿ ಹೇಳಿದ್ದು. ಅಮೆರಿಕಾವು ಸೇರಿದಂತೆ ಖಾಸಗಿ ವಲಯವು ಜಗತ್ತಿನ ಅಧಿಕಾರ ವ್ಯಾಪ್ತಿಯಲ್ಲಿದೆ ಎಂಬುದು ನಮಗೆ ಗೊತ್ತಿಲ್ಲವೇ? ಆಫ್ರಿಕನ್ ಅಮೆರಿಕನ್ನರು ಅದು ಇತರ ಜನಾಂಗೀಯ ಅಲ್ಪಸಂಖ್ಯಾತರಿಗಾಗಿ ಅಮೆರಿಕದ ಕಂಪೆನಿಗಳು 'ಮೀಸಲಾತಿಗಳನ್ನು' ಪಾಲಿಸುತ್ತಿಲ್ಲ ಎಂಬುದು ವಾಸ್ತವ ಸಂಗತಿಯಾಗಿದೆ. ಆದರೆ ಅವರು 'ವೈವಿಧ್ಯತೆ' ಎಂಬ ಸಾರ್ವಜನಿಕ ನೀತಿಯನ್ನು ಅನುಸರಿಸುತ್ತಿದ್ದಾರೆ. ಇದು ಭಾರತದ 'ಮೀಸಲಾತಿ'ಗಿಂತ ವ್ಯಾಪ್ತಿ ತೀವ್ರತೆ ಮತ್ತು ಪರಿಣಾಮದಲ್ಲಿ ವಿಶಾಲವಾದದ್ದು. 'ಮೀಸಲಾತಿ'ಯು ಉದ್ಯೋಗಗಳಿಗೆ ಮಾತ್ರ ಸೀಮಿತಗೊಂಡಿದೆ. 'ವೈವಿಧ್ಯತೆ'ಯು ಆಫ್ರಿಕನ್-ಅಮೆರಿಕನ್ನರು, ಸ್ಥಳೀಯ ಅಮೆರಿಕನ್ನರು, ಹಿಸ್ಪಾನಿಕ್ಸ್, ಏಷ್ಯನ್ನರು ಮುಂತಾದವರನ್ನು 'ಅಲ್ಪಸಂಖ್ಯಾತ'ರೆಂದು ಪರಿಭಾಷಿಸಿ, ಅಮೆರಿಕದ ಜನಸಂಖ್ಯೆಯಲ್ಲಿ ಅವರ ಸಂಖ್ಯೆ ಎಷ್ಟಿದೆಯೋ ಅಷ್ಟು ಪ್ರಮಾಣದಲ್ಲಿ ಅವರು ಅಮೆರಿಕನ್ ಜೀವನದ ಎಲ್ಲ ಮಜಲುಗಳಲ್ಲಿ ಪ್ರತಿನಿಧಿತರಾಗಬೇಕೆಂದು ಬಯಸುತ್ತದೆ. ಜಗತ್ತಿನ ಅತೀ ದೊಡ್ಡ ವಾಹನ ತಯಾರಕರಾಗಿರುವ ಜಿಎಂ ಎಂದೆ ಜನಪ್ರಿಯವಾದ ಜನರಲ್ ಮೋಟಾರ್ಸ್‌ನ ಪ್ರಕರಣವನ್ನೇ ತೆಗೆದುಕೊಳ್ಳಿ.

೧೮೫.೫೨ ಬಿಲಿಯನ್ ಡಾಲರ್‌ಗಳ ಆದಾಯವನ್ನು ಹೊಂದಿರುವ ಜಿಎಂ ವೈವಿಧ್ಯತೆ ವಿಭಾಗವನ್ನು ಹೊಂದಿದೆ. ಇದು ತನ್ನ ಜನಾಂಗೀಯ/ಕುಲದ ಕಾರ್ಯಪಡೆಯ ವಿವರವನ್ನು ಬಹಿರಂಗಪಡಿಸುತ್ತದೆ. ೨೦೦೦ದ ವೇಳೆಗೆ ಅಲ್ಪಸಂಖ್ಯಾತರು ಕಾರ್ಯಪಡೆಯ ೨೩ ಶೇಕಡ ಇದ್ದರು: ವ್ಯವಸ್ಥಾಪನಾ ವರ್ಗದಲ್ಲಿ ೧೯.೨%, ಇಂಜಿನಿಯರಿಂಗ್‌ನಲ್ಲಿ ೧೭.೬% ಹಾಗೂ ಮಾರುಕಟ್ಟೆ ವಿಭಾಗದಲ್ಲಿ ೧೬.೩% ಅಮೆರಿಕಾದಲ್ಲಿ ಅಲ್ಪಸಂಖ್ಯಾತರು ಸುಮಾರು ಶೇ೭೭ ರಷ್ಟಿದ್ದಾರೆ.

ಪ್ರತಿಭೆ ಗೈರುಹಾಜರಿಯಿದ್ದಂತೆ ಕಂಡಿತ್ತು. ಏಕೆಂದರೆ ಆಗ ಅದನ್ನು ಯಾರೂ ಗುರುತ್ತಿಸಿರಲಿಲ್ಲ.

ಭಾರತದ ಉದ್ಯಮವು ತನ್ನ 'ಜಾತಿ ಹಿತಾಸಕ್ತಿ'ಯಿಂದ ಮುಕ್ತಗೊಂಡು ತನ್ನ ಶ್ರಮಶಕ್ತಿಯನ್ನು ಪ್ರಜಾಸತಾತ್ತ್ರೀಕರಿಸಬೇಕು. ಇದರಿಂದ ಖಾಸಗಿ ವಲಯದ ಹಿತಾಸಕ್ತಿಯು ಮತ್ತಷ್ಟು ವೃದ್ಧಿಯಾಗುತ್ತದೆ. ಒಬ್ಬ ದಲಿತ ಇಂಜಿನಿಯರ್ ಅಧಿಕ ಮೌಲ್ಯವನ್ನು ಒದಗಿಸಿದಲ್ಲಿ ಉದ್ಯಮವು ಅಂಥ ದಲಿತರನ್ನು ದಲಿತೇತರರಿಗಿಂತ ಹೆಚ್ಚಾಗಿ ಇಷ್ಟಪಡಬೇಕಾಗುತ್ತದೆ. ಆದ್ದರಿಂದ ಹೆಚ್ಚು ಲಾಭ ಗಳಿಸುವಲ್ಲಿ, ಅತ್ಯುತ್ತಮ ವಾಹನ ತಯಾರಿಕೆಯ ಬಗ್ಗೆ ಜಿಎಂನಿಂದ ಪಾಠ ಕಲಿಯುವುದು ಸೂಕ್ತ.

> ಇತ್ತೀಚೆಗೆ ದೆಹಲಿಯಲ್ಲಿ ಏರ್ಪಡಿಸಿದ್ದ ಕೈಗಾರಿಕಾ ಪತ್ರಿಕಾಗೋಷ್ಠಿಯು 'ಖಾಸಗಿ ವಲಯ ಉದ್ಯೋಗ ಮೀಸಲಾತಿ'ಯನ್ನು 'ಕೈಗಾರಿಕಾ ವಿರೋಧಿ' ಯೆಂದು ಹೇಳಿತು. ಹಾಗೂ 'ಜಗತ್ತಿನಲ್ಲಿ ಎಲ್ಲೂ ಖಾಸಗಿ ವಲಯದಲ್ಲಿ ಮೀಸಲಾತಿಯಿಲ್ಲ' ಎಂದು ಪತ್ರಿಕಾಗೋಷ್ಠಿಯು ಒತ್ತಿ ಹೇಳಿತು. ಅಮೆರಿಕಾವು ಸೇರಿದಂತೆ ಖಾಸಗಿ ವಲಯವು ಜಗತ್ತಿನ ಅಧಿಕಾರ ವ್ಯಾಪ್ತಿಯಲ್ಲಿದೆ ಎಂಬುದು ನಮಗೆ ಗೊತ್ತಿಲ್ಲವೇ ?
> ಜನಾಂಗೀಯ ಅಲ್ಪಸಂಖ್ಯಾತರಿಗಾಗಿ ಅಮೆರಿಕದ ಕಂಪೆನಿಗಳು 'ಮೀಸಲಾತಿಗಳನ್ನು' ಪಾಲಿಸುತ್ತಿಲ್ಲ ಎಂಬುದು ವಾಸ್ತವ ಸಂಗತಿ. ಆದರೆ ಅವರು 'ವೈವಿಧ್ಯತೆ' ಎಂಬ ಸಾರ್ವಜನಿಕ ನೀತಿಯನ್ನು ಅನುಸರಿಸುತ್ತಿದ್ದಾರೆ. ಇದು ಭಾರತದ 'ಮೀಸಲಾತಿ'ಗಿಂತ ವ್ಯಾಪ್ತಿ, ತೀವ್ರತೆ ಮತ್ತು ಪರಿಣಾಮದಲ್ಲಿ ವಿಶಾಲವಾದದ್ದು.

೧೦ನ್ನು ಪಡೆಯಲು ೧೨.೫ ಅಂಕಗಳನ್ನು ಗಳಿಸಬೇಕು

ಸುಮಾರು ೧೦ ಮಂದಿ ದಲಿತೇತರರನ್ನು ಸಮೀಕ್ಷೆಗೆ ಒಳಪಡಿಸಿ ಅವರಿಗೆ ಈ ಪ್ರಶ್ನೆಯನ್ನು ಕೇಳಿ. 'ಒಬ್ಬ ದಲಿತೇತರ ಉದ್ಯೋಗದಾತನು ಮ್ಯಾನೇಜ್‌ಮೆಂಟ್ ಪದವೀಧರನಾದ ಒಬ್ಬ ದಲಿತ ಮತ್ತು ದಲಿತೇತರನೊಬ್ಬನನ್ನು ಸಂದರ್ಶಿಸುತ್ತಾನೆನ್ನಿ. ಇವರಿಬ್ಬರೂ ಸಹ ಗರಿಷ್ಠ ೧೫ ಅಂಕದಲ್ಲಿ ಕನಿಷ್ಠ ೧೦ನ್ನು ಗಳಿಸುತ್ತಾರೆನ್ನೋಣ. ಅಲ್ಲಿ ಒಂದು ಉದ್ಯೋಗ ಮಾತ್ರವಿರುತ್ತದೆ. ಅದನ್ನು ಪಡೆಯುವವರ್‍ಯಾರು?' ಇವರೆಲ್ಲರ ಉತ್ತರ ದಲಿತೇತರನ ಪರವಾಗಿರುತ್ತದೆ. ಹಾಗೆಯೇ ೧೦ ಮಂದಿ ದಲಿತರನ್ನು ಸಮೀಕ್ಷೆಗೊಳಪಡಿಸಿ ಈ ಪ್ರಶ್ನೆಯನ್ನು ಕೇಳಿ. 'ಒಬ್ಬ ದಲಿತೇತರ ಉದ್ಯೋಗದಾತನು ಮ್ಯಾನೇಜ್‌ಮೆಂಟ್ ಪದವೀಧರನಾದ ಒಬ್ಬ ದಲಿತ ಮತ್ತು ದಲಿತೇತರನೊಬ್ಬನನ್ನು ಸಂದರ್ಶಿಸುತ್ತಿದ್ದಾನೆನ್ನಿ. ದಲಿತ ವಿದ್ಯಾರ್ಥಿಯು ೧೦ ಅಂಕಗಳನ್ನು ಪಡೆದರೆ ದಲಿತೇತರ ವಿದ್ಯಾರ್ಥಿಯು ೭.೫ನ್ನು ಗಳಿಸುತ್ತಾನೆ. ಒಂದು ಉದ್ಯೋಗವಿರುವಲ್ಲಿ ಯಾರನ್ನು ಆರಿಸಲಾಗುತ್ತದೆ?' ಇದಕ್ಕೆ ಉತ್ತರ 'ದಲಿತೇತರ ಅಭ್ಯರ್ಥಿಯು ಉತ್ತಮ ಅವಕಾಶ ಪಡೆದಿರುತ್ತಾನೆ' ಇದು ಅಪರಿಚಿತವೆಂದುಕೊಂಡರೂ ಸಹ ದಲಿತರ ಅನುಭವ ಮಾತ್ರ ನಿಜವಾಗಿರುತ್ತದೆ.

ಈ ಪ್ರಮೇಯವನ್ನು ಸಾಧಿಸಿ ತೋರಿಸಿದಲ್ಲಿ ಈ ದೇಶದ ಭವಿಷ್ಯವು ಭಯಾನಕವಾಗಿ ತೋರುತ್ತದೆ. ಭಾರತದ ಜಾತಿವ್ಯವಸ್ಥೆಯು ತನ್ನ ಹಿತಾಸಕ್ತಿಗಳಿಗೆ ಅತಿಯಾದ ನಿಷ್ಠೆಯನ್ನು ಬಯಸುತ್ತದೆ. ಆದ್ದರಿಂದ ಇಲ್ಲಿ ಜಾತಿ ಹಿತಾಸಕ್ತಿ ಮತ್ತು ದೇಶದ ಹಿತಾಸಕ್ತಿ ಮಾರಾಮಾರಿಯಾಗಿ ನಿಲ್ಲುತ್ತವೆ. ಹೀಗಿರುವಲ್ಲಿ ಆಯ್ಕೆ ಮಾತ್ರ ಮಾಡಲೇಬೇಕಾಗುತ್ತದೆ. ಇವತ್ತಿನ ವಿದ್ಯಮಾನದಲ್ಲಿ ಜಾತಿ ಹಿತಾಸಕ್ತಿಯೇ ನೇಮಕಾತಿಯಲ್ಲಿ ಎದ್ದು ಕಾಣುವ ಸಂಗತಿಯಾಗಿದೆ. ಒಬ್ಬ ದಲಿತ ಅಭ್ಯರ್ಥಿಯು ವೈಪರೀತ್ಯ ಸಾಮಾಜಿಕ ಒತ್ತಡದಲ್ಲೂ ದಲಿತೇತರ ಅಭ್ಯರ್ಥಿಯೊಂದಿಗೆ ಸಮಾನ ಅಂಕಗಳನ್ನು ಪಡೆದಾಗಲೂ ಆತನನ್ನು ಏಕೆ ಪರಿಗಣಿಸಲಾಗುವುದಿಲ್ಲ? ಅಥವಾ ದಲಿತೇತರ ಅಭ್ಯರ್ಥಿಯು ದಲಿತ ಅಭ್ಯರ್ಥಿಗಿಂತ ೨.೫ರಷ್ಟು ಕಮ್ಮಿ ಅಂಕಗಳನ್ನು ಪಡೆದಾಗಲೂ ಆತನನ್ನು ಬಯಸಲಾಗುತ್ತದೆ ಏಕೆ? ಉದ್ಯೋಗದಾತ ಅಥವಾ ಸಂದರ್ಶಕ ಎರಡು ಪ್ರತಿಕ್ರಿಯೆಗಳನ್ನು ನೀಡಬಹುದು. ೧. ೧೦ ಮತ್ತು ೭.೫ರ ನಡುವಿನ ವ್ಯತ್ಯಾಸ ಕಾಣುವುದಾದರೂ ಕೆಲಸದ ಜಾಗದಲ್ಲಿ ಯಾರೂ ಸಹ ಉತ್ತಮವಾಗಿ ಕೆಲಸ ಮಾಡಬಹುದು ಅಥವಾ ಮಾಡದೆ ಇರಬಹುದು. ೨. ಈಗಾಗಲೇ ಕಂಪನಿಯ ಗಳಿಕೆಯು ತಿಂಗಳಿಗೆ ೧೦೦ ಕೋಟಿಗಳಿಗಿಂತಲೂ ಅಧಿಕವಿರುವಾಗ ಒಬ್ಬ ವೃತ್ತಿಪರ ನುರಿತ ದಲಿತನೊಬ್ಬನ ಆಯ್ಕೆಯಿಂದ ೫ ಲಕ್ಷ ಕಂಪನಿಗೆ ದೊರೆಯುವುದು ಅಂತಹ ಮಹತ್ವದ್ದೇನು ಅಲ್ಲ. ಈ ಎರಡೂ ವಾದಗಳಲ್ಲೂ ದೇಶದ ಹಿತಾಸಕ್ತಿಯನ್ನು ಗಾಳಿಗೆ ತೂರಲಾಗಿದೆಯಲ್ಲವೇ? ಇದೊಂದು ಪ್ರತ್ಯೇಕವಾದ ವಿಶೇಷ ಘಟನೆಯೆಂದು ಕಂಡುಬಂದಲ್ಲಿ ಅದನ್ನು ಮರೆಯಬಹುದಿತ್ತೇನೋ.

ಆದರೆ ಇದೊಂದು ವಿದ್ಯಮಾನವಾಗಿದ್ದಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಪಾಲು ಶೇ ೧ ರಷ್ಟಿರುವುದನ್ನು ಅದು ವಿವರಿಸುತ್ತದೆ. ಒಂದು ಬಿಲಿಯನ್ ಜನರಿರುವ ಈ ದೇಶಕ್ಕೆ ಇದೊಂದು ಚಾರಿತ್ರಿಕ ದುರಂತವೆಂದೇ ಹೇಳಬೇಕಾಗುತ್ತದೆ. ಇಂಥ ವಿಶ್ಲೇಷಣೆ ಖಾಸಗೀ ವಲಯದಲ್ಲಿ ದಲಿತರ ಪ್ರವೇಶಕ್ಕಾಗಿ ತಂತ್ರವೆಂದು ಪರಿಗಣಿಸಿದಿರಲಿ. ಏಕೆಂದರೆ ಜಾತಿ ಹಿತಾಸಕ್ತಿಯನ್ನು ಕಾಯ್ದುಕೊಳ್ಳುತ್ತಿರುವ ನಿದರ್ಶನಗಳು ಇಲ್ಲಿ ಕಾಣಸಿಗುತ್ತವೆ. ವರದಕ್ಷಿಣೆಯಂಥ ಕ್ರೂರ ಪದ್ಧತಿ ಅನೇಕ ಪೋಷಕರನ್ನು ಸರ್ವನಾಶಪಡಿಸಿದೆ. ಪ್ರತಿವರ್ಷ ನೂರಾರು ವಧುಗಳನ್ನು ಸುಡಲಾಗುತ್ತದೆ. ಸರಾಸರಿ ದಲಿತ ಪೋಷಕರನ್ನು ಗಣನೆಗೆ ತೆಗೆದುಕೊಂಡಲ್ಲಿ, ಪುರುಷ ಪ್ರೇರಿತ ನಿಲುವುಗಳಿದ್ದಾಗ್ಯೂ ಸಹ, ಒಬ್ಬ ಪೋಷಕ ತನ್ನ ಮಗಳಿಗೆ ಒಳ್ಳೆಯ ಶ್ರೀಮಂತ ವರನನ್ನೇ ಬಯಸುತ್ತಿರುತ್ತಾನೆ. ಹುಡುಗಿಯರು ಶಿಕ್ಷಿತರಾಗಿದ್ದು ಸಾಧಾರಣ ಆದಾಯದ ೧೦ ಕುಟುಂಬಗಳನ್ನು ಸಮೀಕ್ಷೆ ಮಾಡಿ ಸಾಮಾಜಿಕವಾಗಿ ಒಳ್ಳೆಯ ವರನನ್ನು ಪಡೆಯಲಾಗದೆ ದಿನಪತ್ರಿಕೆಗಳಲ್ಲಿ ವಿವಾಹ ಜಾಹೀರಾತಿನ ಮೂಲಕ ಸಿಗುವ ಪ್ರತಿಕ್ರಿಯೆಗಳನ್ನು ಗಮನಿಸಿದ್ದಲ್ಲಿ ಶಾಲಾಶಿಕ್ಷಕರು, ಗುಮಾಸ್ತರು ಅಥವಾ ಸಣ್ಣ ಅಂಗಡಿಯ ಮಾಲೀಕರೇ ತಮ್ಮ ಸಾಮಾಜಿಕ ಹಿನ್ನೆಲೆಯನ್ನು ಪ್ರತಿಧ್ವನಿಸುತ್ತಿರುತ್ತಾರೆ. ಹೀಗಿರುವಲ್ಲಿ ಅಧಿಕ ಸಂಬಳ, ಉತ್ತಮ ಮನೆ, ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ೫/೧೦ ಮಂದಿ ದಲಿತ ಹುಡುಗರ ಜಾಹೀರಾತನ್ನು ನೀಡಿದ್ದಲ್ಲಿ 'ಮುಂದುವರಿದ' ಜಾತಿಗಳ ಕಪಟತನ ಒಮ್ಮೆಗೇ ಹೊರಬೀಳುತ್ತದೆ. ಅನೇಕ ದಲಿತೇತರ ಪೋಷಕರು ಅಂಥದ್ದನ್ನು ಗಮನಿಸದೆ ತಮ್ಮ ಮಕ್ಕಳ ಹಿತಾಸಕ್ತಿಯನ್ನು ಶಾಲಾಶಿಕ್ಷಕ, ಗುಮಾಸ್ತ ಅಂಗಡಿ ಮಾಲೀಕರಿಗೇ ಒತ್ತೆ ಇಟ್ಟುಬಿಡುತ್ತಾರೆ. ಇದೇ ಸತ್ಯ ಹುಡುಗರಿಗೂ ಅನ್ವಯಿಸುತ್ತದೆ. ಒಬ್ಬ ದಲಿತೇತರ ಹುಡುಗ ತನ್ನ ಜಾತಿಯ ಶಾಲಾಶಿಕ್ಷಕಿಯಾದ ಹುಡುಗಿಯನ್ನಷ್ಟೆ ಇಷ್ಟಪಡುತ್ತಾನಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಲೆಕ್ಚರರ್ ಆಗಿರುವ ದಲಿತ ಹುಡುಗಿಯನ್ನು ಬಯಸುವುದಿಲ್ಲ. ಇಲ್ಲಿ ಕೆಳದರ್ಜೆಯವರನ್ನು ಅವಮಾನಿಸಲು ಇಚ್ಛಿಸದೆ 'ಜಾತಿ ಹಿತಾಸಕ್ತಿ' ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನಷ್ಟೇ ಎತ್ತಿ ತೋರಿಸಲಾಗಿದೆ.

> ಜಾಗತಿಕವಾಗಿ ಎಲ್ಲಾ ಸಮಾಜಗಳಲ್ಲಿ ವ್ಯಕ್ತಿಗಳು ಬಿಕ್ಕಟ್ಟಿನ ಸಂದರ್ಭದಲ್ಲಿ ಸಾಮಾಜಿಕ/ರಾಷ್ಟ್ರೀಯ ಹಿತಾಸಕ್ತಿಗಳನ್ನು ಬದಿಗೊತ್ತಿ ತಮ್ಮ ಅಸ್ತಿತ್ವವನ್ನಷ್ಟೇ ಕಾಯ್ದುಕೊಳ್ಳುತ್ತಾರೆ. ಆದರೆ ಭಾರತದಲ್ಲಿ ತಮ್ಮ ಆಸಕ್ತಿಗಳನ್ನು ಬದಿಗೊತ್ತಿ ಜಾತಿ ಹಿತಾಸಕ್ತಿಯನ್ನು ಕಾಯ್ದುಕೊಳ್ಳುತ್ತಾರೆ. ಯಾವುದೇ ಮಾನದಂಡದಿಂದಲಾದರೂ ಸರಿ ಭಾರತಕ್ಕೆ ಜಾತಿವ್ಯವಸ್ಥೆ ಒಂದು ಪೀಡೆಯಾಗಿದೆಯಲ್ಲದೆ, ವರವೇನೂ ಅಲ್ಲ.

ಜಾಗತಿಕವಾಗಿ ಎಲ್ಲಾ ಸಮಾಜಗಳಲ್ಲಿ ವ್ಯಕ್ತಿಗಳು ಬಿಕ್ಕಟ್ಟಿನ ಸಂದರ್ಭದಲ್ಲಿ ಸಾಮಾಜಿಕ/ರಾಷ್ಟ್ರೀಯ ಹಿತಾಸಕ್ತಿಗಳನ್ನು ಬದಿಗೊತ್ತಿ ತಮ್ಮ ಅಸ್ತಿತ್ವವನ್ನಷ್ಟೇ ಕಾಯ್ದುಕೊಳ್ಳುತ್ತಾರೆ. ಆದರೆ ಭಾರತದಲ್ಲಿ ತಮ್ಮ ಆಸಕ್ತಿಗಳನ್ನು ಬದಿಗೊತ್ತಿ ಜಾತಿ ಹಿತಾಸಕ್ತಿಯನ್ನು ಕಾಯ್ದುಕೊಳ್ಳುತ್ತಾರೆ. ಇಂಥವರು ತಮ್ಮ ಮಕ್ಕಳ ಹಿತಾಸಕ್ತಿಯನ್ನು ಕಡೆಗಣಿಸಿದ್ದಲ್ಲಿ ದೇಶದ ಹಿತಾಸಕ್ತಿಯನ್ನು ಕಡೆಗಣಿಸುತ್ತಾರೆ.

ಭಾರತದಲ್ಲಿ ವ್ಯಕ್ತಿಯ ಐಡೆಂಟಿಟಿ ಜಾತಿ ಮೂಲವಾಗಿರುವುದರಿಂದ ಅದು ಸಾಮಾಜಿಕ ವಿದ್ಯಮಾನವನ್ನು ವ್ಯಾಖ್ಯಾನಿಸುತ್ತಿರುತ್ತದೆಯಲ್ಲದೆ ಮೇಲ್ಜಾತಿಯವರು ಜಾತಿ ಹಿತಾಸಕ್ತಿಯನ್ನೆ ಬಯಸುತ್ತಾರೆ. ಯಾವುದೇ ಮಾನದಂಡದಿಂದಲಾದರೂ ಸರಿ ಭಾರತಕ್ಕೆ ಜಾತಿವ್ಯವಸ್ಥೆ ಒಂದು ಪೀಡೆಯಾಗಿದೆಯಲ್ಲದೆ, ವರವೇನೂ ಅಲ್ಲ. ಇಂಥ ದ್ವೇಷಮಯ ಸಾಮಾಜಿಕ ಪರಿಸ್ಥಿತಿಯಲ್ಲೂ ದಲಿತರು ತಮ್ಮ ಹಾದಿಯನ್ನು ಹುಡುಕಿಕೊಳ್ಳುತ್ತಿದ್ದಾರೆ. ನನ್ನ ಸ್ನೇಹಿತ ಡಿ.ಶ್ಯಾಮ್ ಬಾಬು ಹೇಳುವುದನ್ನು ಇಲ್ಲಿ ಸ್ಮರಿಸಿಕೊಳ್ಳಲೇಬೇಕು : 'ದಲಿತೇತರರೊಡನೆ ಸ್ಪರ್ಧಿಸುವಾಗ ಒಬ್ಬ ದಲಿತ ೧೦ನ್ನು ಗಳಿಸಬೇಕಾದರೆ ೧೨.೫ ಅಂಕಗಳನ್ನು ಗಳಿಸಲೇಬೇಕು'. □

ವಿಶ್ಲೇಷಣೆ

ಬಿಜೆಪಿ ಹಿಂದುತ್ವದಿಂದ ದೂರ ಸರಿಯುತ್ತಿದೆಯೇ?

○ ಡಿ.ಎಂ. ಚಿಣ್ಣಪ್ಪ

ಲೋಕಸಭಾ ಚುನಾವಣೆ ಬಳಿಕ ಕಳೆದ ತಿಂಗಳು ಮುಂಬೈನ 'ರಿನಾಯಿಸ್ಸಾನ್ಸ್' ಪಂಚತಾರಾ ಹೋಟೆಲ್‌ನಲ್ಲಿ 'ಆತ್ಮಾವಲೋಕನ' ನಡೆಸಲು ಸೇರಿ ಬಿಜೆಪಿ ಕೆಲವರ ಟೀಕೆಗೆ ಗುರಿಯಾಗಿದ್ದು ಹಳೆಯ ಸುದ್ದಿ. ಆಗಸ್ಟ್ ತಿಂಗಳ ಮೊದಲ ವಾರ ಗೋವಾದಲ್ಲಿ ಮತ್ತೆ ಮೂರು ದಿನಗಳ 'ಚಿಂತನ ಬೈಠಕ್' ನಡೆಸಿದೆ. ಅದೂ ಬಿಗಿ ಬಂದೋಬಸ್ತ್‌ನಲ್ಲಿ! ಭಾರತ ದೇಶದ ದೊಡ್ಡ ರಾಜಕೀಯ ಪಕ್ಷವೊಂದು ಭಾರತದಲ್ಲಿ ತನ್ನ ಪಕ್ಷದ ಶಿಬಿರವೊಂದನ್ನು ನಡೆಸಲು ಸೂಕ್ತ ಬಂದೋಬಸ್ತ್ ಬೇಕಿದೆ! ಏಕೆಂದರೆ ಬೈಠಕ್ ನಡೆದ 'ಇಂಟರ್‌ನೇಶನಲ್ ಸೆಂಟರ್' ಮೇಲೆ 'ಫಿದಾಯಿನ್ ದಾಳಿ'ಯ ಬೆದರಿಕೆಯಿತ್ತು. ವಿಚಿತ್ರ ಆದರೂ ಸತ್ಯ.

ವಿಷಯ ಅದಲ್ಲ. ಬಿಜೆಪಿ ತನ್ನ ಕಾರ್ಯಸೂಚಿಯಿಂದ 'ಹಿಂದುತ್ವ' ಮತ್ತು 'ಜಾತಿವಾದ'ಗಳನ್ನು ಕೈ ಬಿಟ್ಟಿದೆ! ಇದು ಸುದ್ದಿ. ಆದರೆ ಇದು ರಾಷ್ಟ್ರಮಟ್ಟದಲ್ಲಿ ದೊಡ್ಡ ಸುದ್ದಿಯಾದಂತೆ ಕಂಡು ಬರುತ್ತಿಲ್ಲ. ಮಾಧ್ಯಮಗಳಲ್ಲಿ ಇದಕ್ಕೆ ಸಿಗಬೇಕಾದ ಮಟ್ಟದಲ್ಲಿ ಪ್ರಚಾರ ದೊರಕಿಲ್ಲ. ಆಂಗ್ಲ ದಿನಪತ್ರಿಕೆಯೊಂದು ಏಳನೇ ಪುಟದಲ್ಲಿ ಸುದ್ದಿ ಪ್ರಕಟಿಸಿದೆ. 'ಹಿಂದುತ್ವ' ಬಿಜೆಪಿಯ ಜೀವಾಳ. ಬಂಡವಾಳ ಕೂಡ. ನನ್ನ ಗೆಳೆಯರೊಬ್ಬರ ಪ್ರಕಾರ 'Minus Hindutva BJP is another Janatha party' ಇನ್ನು 'ಜಾತಿವಾದ ಅಥವಾ ಜಾತೀಯತೆ' ಪುರೋಹಿತ ವರ್ಗದ ಸೃಷ್ಟಿ ಬುದ್ಧಿಯ ಬಂಡವಾಳಷಾಹಿಗಳ ಕೊಡುಗೆ. ಸನಾತನ ಹಿಂದೂ ಧರ್ಮವನ್ನು ವಿಕೃತಗೊಳಿಸಿ ತಮ್ಮ ಮೂಗಿನ ನೇರಕ್ಕೆ ಇತಿಹಾಸ ಬರೆದವರ ಕುರಿತು ಎಷ್ಟು ಹೇಳಿದರೂ ಒಂದೇ. 'ಕಸ ಹೊರುವಾತ ಕಳಸ ಹೊರಬಾರದು, ಅದಕ್ಕೆ ಬೇರೆ ಅರ್ಹತೆ ಬೇಕು' ಎಂದು ವಾದಿಸುವವರು ಅಂದೂ ಇದ್ದರು; ಇಂದೂ ಇದ್ದಾರೆ. ಮುಂದೆಯೂ ಇರುತ್ತಾರೆ. ಇವರ ಜಾಣತನ ಇವರ ನೀಚತನದ ಇನ್ನೊಂದು ಮುಖ ಅಷ್ಟೆ

೧೯೪೭ರ ನಂತರ ಈ ದೇಶವನ್ನಾಳಿದ ಎಲ್ಲ ರಾಜಕೀಯ ಪಕ್ಷಗಳೂ ಜಾತೀಯತೆಯಂತಹ ಸಾಮಾಜಿಕ ಅನಿಷ್ಟಗಳನ್ನು ಪೋಷಿಸಿಕೊಂಡು ಬಂದಿದೆ. ಮೊನ್ನೆ ಮೈಸೂರಿನಲ್ಲಿ ರಾಜ್ಯದ ಉಪಮುಖ್ಯಮಂತ್ರಿ 'ಜಾತಿಯತೆ ಇರುತ್ತದೆ' ಎಂದು ಬಹಿರಂಗ ಸಭೆಯಲ್ಲಿ ಹೇಳಲಿಲ್ಲವೆ ? ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಶೋಷಣೆ ಬೇಡ ಎಂದು ಕೂಗುವವರ ದನಿ ಕ್ಷೀಣಿಸುತ್ತಿದೆಯೆ ?

ದಲಿತರ ಉದ್ಧಾರಕ್ಕಾಗಿ ದೇವರ ಅವತಾರ! ಎಂತಹ ಹಸಿ ಸುಳ್ಳು! 'ಆಸ್ತಿಕ-ನಾಸ್ತಿಕ' ಇವು ವಸ್ತುನಿಷ್ಠ ಚಿಂತನೆಯೆ ? ಕಾಲವೇ ಉತ್ತರ ಹೇಳಬಹುದು.

ಹಿಂದುತ್ವದ ಸ್ಥಾನದಲ್ಲಿ ರಾಷ್ಟ್ರಪ್ರೇಮ

ಹಿಂದುತ್ವವನ್ನು ಕೈಬಿಟ್ಟಿರುವುದಾಗಿ ಘೋಷಿಸಿರುವ ಬಿಜೆಪಿ ಪಕ್ಷಾಧ್ಯಕ್ಷ ವೆಂಕಯ್ಯನಾಯ್ಡು ಹಿಂದುತ್ವದ ಬದಲಿಗೆ 'ರಾಷ್ಟ್ರಪ್ರೇಮ'ವನ್ನು ಅಳವಡಿಸಿರುವುದಾಗಿ ಹೇಳಿದ್ದಾರೆ. ಇಂಗ್ಲಿಷಿನಲ್ಲಿ Nationalization ಎಂದಿದ್ದಾರೆ. ಅದೇನೇ ಇರಲಿ. 'ಹಿಂದುತ್ವ' ಪದ ಪ್ರಯೋಗವೇ ಸಂಕುಚಿತ ಮನೋಭಾವದ ಪ್ರತೀಕವಾಗಿತ್ತು. ಎಲ್ಲಿಯವರೆಗೆ ಬಿಜೆಪಿ ಪರಧರ್ಮ ಸಹಿಷ್ಣುತೆಯನ್ನು ಮೈಗೂಡಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಜಾತ್ಯಾತೀತ ವಾದಿಗಳು ಬಿಜೆಪಿಯನ್ನು ಸಹಿಸಿಕೊಳ್ಳುವುದಿಲ್ಲ.

ದ್ವಿಮುಖ ನೀತಿ : ಜನ ಸಾಮಾನ್ಯರು ಬಿಜೆಪಿಯನ್ನು ನಂಬದಿರಲು ಮತ್ತೊಂದು ಕಾರಣ ಅದು ಅನುಸರಿಸುವ ದ್ವಿಮುಖ ನೀತಿ. 'ಹಿಂದುತ್ವ'ವನ್ನು ಕೈಬಿಟ್ಟಿದ್ದೇವೆ ಎಂದಿರುವ ವೆಂಕಯ್ಯನಾಯ್ಡು ಶಿಬಿರದ ಕೊನೆಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡುತ್ತ 'We will use it as and when required' ಎಂದೂ ಹೇಳಿದ್ದಾರೆ. ಇದು ಏನನ್ನು ಸೂಚಿಸುತ್ತದೆ? ಬಿಜೆಪಿಯವರದೊಂದು Hidden Agenda ಇದೆ; ಲೋಕಸಭೆಯಲ್ಲಿ ಬಿಜೆಪಿಗೆ ಮೂರನೇ ಎರಡರಷ್ಟು ಅಥವಾ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದಾಗ Hidden Agenda ವನ್ನು ಹೊರತಗೆಯುತ್ತದೆ ಎಂದು ಈ ದೇಶದ ಬಹಳಷ್ಟು ಬುದ್ಧಿಜೀವಿಗಳು ನಂಬಿದ್ದಾರೆ. ಇದನ್ನು ಸುಳ್ಳು ಎಂದು ತಳ್ಳಿಹಾಕುವಂತಿಲ್ಲ. ಅಧಿಕಾರ ಹಿಡಿಯಲು ಅವರು ಯಾವ ಮಟ್ಟಕ್ಕೂ ಇಳಿಯಲು ಸಿದ್ಧರಿದ್ದಾರೆ ಎನ್ನುವುದು ಇತ್ತೀಚಿನ ದಿನಗಳಲ್ಲಿ ರುಜುವಾತುಗೊಂಡಿದೆ. ದಲಿತರನ್ನು ಓಲೈಸಲು ಬಂಗಾರುಲಕ್ಷ್ಮಣ್ ಅವರಿಗೆ ಪಕ್ಷಾಧ್ಯಕ್ಷ ಪಟ್ಟಕಟ್ಟಿದಾಗ ಆ ಬಳಿಕ ತೆಹಲ್ಕಾ ಹಗರಣವನ್ನು ಮುಂದೊಡ್ಡಿ ಹೊರದಬ್ಬಿದಾಗ ಯಾರಿಗೂ ಅಚ್ಚರಿಯುಂಟಾಗಲಿಲ್ಲ.

ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ ಮಿತ್ರಪಕ್ಷಗಳೊಂದಿಗಿನ ಮೈತ್ರಿ ಎಂದಿನಂತೆ ಮುಂದುವರೆಯುತ್ತದೆ ಎಂದೂ ನಾಯ್ಡು ಹೇಳಿದ್ದಾರೆ. ಆದರೆ ಲೋಕಸಭಾ ಚುನಾವಣೆ ನಂತರ ಮೈತ್ರಿಕೂಟದಲ್ಲೂ ಅಪಸ್ವರ ವೆದ್ದಿದೆ. 'ಹಿಂದುತ್ವ' ವಿಚಾರದಲ್ಲಿ ಜಾರ್ಜ್ ಫರ್ನಾಂಡಿಸ್ ಈಗಾಗಲೆ ತಮ್ಮ ಅಸಮಧಾನ ವ್ಯಕ್ತಪಡಿಸಿದ್ದಾರೆ. ಪ್ರಾಯಶಃ ಗೋವಾ ಅಧಿವೇಶನದ ತೀರ್ಮಾನಗಳಿಗೆ ಇದೂ ಒಂದು ಕಾರಣವಿರಬಹುದು. ನಾಲ್ಕೂವರೆ ವರ್ಷಗಳ ಅಧಿಕಾರಾವಧಿಯಲ್ಲಿ ಬಿಜೆಪಿ ತನ್ನ ನಿಲುವುಗಳನ್ನು ಸಡಿಲಗೊಳಿಸಿ ಕೋಮು ಸಿದ್ಧಾಂತದಂತಹ ಅನಿಷ್ಟಕಾರಿ ನೀತಿಗಳಿಂದ ದೂರ ಸರಿದಿರುವುದಾಗಿ ಘೋಷಿಸಿ ಅದನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ದೃಢ ಹೆಜ್ಜೆ ಇಟ್ಟಿದ್ದರೆ ಲಕ್ಷಾಂತರ ಮಂದಿ ಬಿಜೆಪಿಯತ್ತ ವಾಲುತ್ತಿದ್ದರೇನೋ.

ಗೋದ್ರಾ ದುರಂತ ವಿಶ್ವದ ಕಣ್ತೆರೆಸಿದೆ. ಬಿಜೆಪಿಯನ್ನು ಬೆತ್ತಲೆಗೊಳಿಸಿದೆ. ಸೌಹಾರ್ದಯುತ ಸಹಜೀವನ ಬಯಸುವವರು ಬಿಜೆಪಿಗೆ ಹಿಡಿ ಶಾಪ ಹಾಕಿದ್ದಾರೆ. ಗೋದ್ರಾ ಘಟನೆ ದೇಶ ವಿಭಜನೆಯನ್ನು ನೆನಪಿಸಿದೆ. ದುಡಿದುಣ್ಣುವ ಮಂದಿಗೆ ನೆಮ್ಮದಿ ಬೇಕಾಗಿದೆ. ಧರ್ಮದ ಹೆಸರಿನಲ್ಲಿ ರಕ್ತಪಾತವನ್ನು ಯಾರೂ ಸಹಿಸುವುದಿಲ್ಲ. ಪ್ರಾಯಶಃ ಈ ಕಾರಣಕ್ಕಾಗಿಯೇ ಭಜರಂಗದಳವನ್ನು The Safron Hooligans ಎನ್ನುವವರಿದ್ದಾರೆ. Religious Bigots ಎಂದೂ ಮೂದಲಿಸುವವರಿದ್ದಾರೆ. ಈ ಕೇಸರಿ ಪಡೆಗೆ ಅಟ್ಟಹಾಸ ಎನ್‌ಡಿಎ ಸರಕಾರದ ಅವಧಿಯಲ್ಲಿ ಮೇರೆ ಮೀರಿತ್ತು ಎಂಬುದು ಸುಳ್ಳೇನಲ್ಲ. ದೇವಾಲಯದಿಂದ ಪ್ರಯೋಗಾಲಯದವರೆಗೆ 'ಸರ್ವಂ ಕೇಸರಿ ಮಯಂ' ಮಾಡಬೇಕೆಂಬ ಮಹದಾಶೆ ಇವರದಾಗಿತ್ತು. ಬಿಜೆಪಿಯಲ್ಲಿನ ಸೂತ್ರಧಾರಿಗಳು ತೆರೆಯ ಮರೆಯಲ್ಲಿರುತ್ತಾರೆ; ಪಾತ್ರಧಾರಿಗಳು ಹೊರಗೆ ಕಾಣಿಸಿಕೊಳ್ಳುತ್ತಾರೆ.

ಇನ್ನು ಹಿಂದುತ್ವದ ಕುರಿತು ಚರ್ಚಿಸುವುದು, ವಿಶ್ಲೇಷಿಸುವುದು, ವ್ಯಾಖ್ಯಾನಿಸುವುದೆಂದರೆ ಬ್ರಾಹ್ಮಣರ ಕುರಿತು ಟೀಕಿಸುವುದೆಂದು ಅನೇಕರು ಅರ್ಥೈಸುವುದನ್ನು ನಾವು ನೋಡುತ್ತಿದ್ದೇವೆ. ಸಂಘಪರಿವಾರ ಎಂದೊಡನೆ ಜುಟ್ಟು ಜನಿವಾರ ಎಂಬ ದಿಢೀರ್ ತೀರ್ಮಾನ ಸಲ್ಲದು. ಒಂದು ಸಾಮಾಜಿಕ ಅನಿಷ್ಟದ ವಿರುದ್ಧ ಧ್ವನಿಯೆತ್ತುವಾಗ ಹಿಂದೆ ಅದನ್ನು ಬೆಂಬಲಿಸಿದವರ ಕುರಿತೂ ಪ್ರಸ್ತಾಪಿಸಲೇಬೇಕಾಗುತ್ತದೆ. ವಿಗ್ರಹ ಆರಾಧನೆ ಎಂದೊಡನೆ ಪುರೋಹಿತವರ್ಗ ನಮ್ಮ ಕಣ್ಣ ಮುಂದೆ ಬರುವುದಿಲ್ಲವೆ ?

ಬಿಜೆಪಿ 'ಹಿಂದುತ್ವ'ವನ್ನು ಕೈಬಿಟ್ಟಿದೆ, ಜಾತಿವಾದದಿಂದ ದೂರ ಸರಿದಿದೆ ಎಂದು ಸಂಭ್ರಮಿಸುವ ಅವಶ್ಯಕತೆಯಿಲ್ಲ. ನಾಗರಿಕ ಸಮಾಜ ನಾಚಿಕೆಯಿಂದ ತಲೆತಗ್ಗಿಸುವಂತಹ ನೂರಾರು ಅನಾಗರಿಕ ಪದ್ಧತಿಗಳು ಇಂದಿಗೂ ಜೀವಂತವಿವೆ. ಅವುಗಳ ವಿರುದ್ಧ ಧ್ವನಿಯೆತ್ತುವ ಪ್ರವೃತ್ತಿಯನ್ನು ಇಂದಿನ ತರುಣರು ಮೈಗೂಡಿಸಿಕೊಳ್ಳಬೇಕಷ್ಟೆ. ವಿದ್ಯಾವಂತ ಯುವ ಜನಾಂಗ ಹೊಸ ಸಮಾಜ ಕಟ್ಟುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯ. ಸಾಮಾಜಿಕ ಬದಲಾವಣೆಗೆ ವರ್ಗ ಸಂಘರ್ಷ ಅನಿವಾರ್ಯವಾದರೂ ಚಿಂತಿಲ್ಲ. ಆದರೆ 'ದಲಿತ ಇಂಡಿಯ - ದಲಿತೇತರ ಇಂಡಿಯಾ' ಆಗುವುದು ಬೇಡ. □

ಬಿಜೆಪಿ 'ಹಿಂದುತ್ವ'ವನ್ನು ಕೈಬಿಟ್ಟಿದೆ, ಜಾತಿವಾದದಿಂದ ದೂರ ಸರಿದಿದೆ ಎಂದು ಸಂಭ್ರಮಿಸುವ ಅವಶ್ಯಕತೆಯಿಲ್ಲ. ನಾಗರಿಕ ಸಮಾಜ ನಾಚಿಕೆಯಿಂದ ತಲೆತಗ್ಗಿಸುವಂತಹ ನೂರಾರು ಅನಾಗರಿಕ ಪದ್ಧತಿಗಳು ಇಂದಿಗೂ ಜೀವಂತವಿವೆ. ಅವುಗಳ ವಿರುದ್ಧ ಧ್ವನಿಯೆತ್ತುವ ಪ್ರವೃತ್ತಿಯನ್ನು ಇಂದಿನ ತರುಣರು ಮೈಗೂಡಿಸಿ ಕೊಳ್ಳಬೇಕಷ್ಟೆ. ವಿದ್ಯಾವಂತ ಯುವ ಜನಾಂಗ ಹೊಸ ಸಮಾಜ ಕಟ್ಟುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿ ಕೊಳ್ಳುವುದು ಇಂದಿನ ತುರ್ತು ಅಗತ್ಯ. ಸಾಮಾಜಿಕ ಬದಲಾವಣೆಗೆ ವರ್ಗ ಸಂಘರ್ಷ ಅನಿವಾರ್ಯವಾದರೂ ಚಿಂತಿಲ್ಲ. ಆದರೆ 'ದಲಿತ ಇಂಡಿಯ - ದಲಿತೇತರ ಇಂಡಿಯಾ' ಆಗುವುದು ಬೇಡ.

ಹೊಸ ಪುಸ್ತಕ

ನಾಗಲದೇವಿ ವಿರಚಿತ

ಷೋಡಶಭಾವನಾ ಕಾವ್ಯ

ಲೇ. ಡಾ|| ಕಮಲಾ ಹಂಪನಾ

ಬೆಲೆ: ರೂ. ೫೦/-

ಕವಯತ್ರಿ ನಾಗಲದೇವಿ ರಚಿಸಿರುವ ಈ ಕೃತಿ ಜೈನ ಧಾರ್ಮಿಕ ಹಿನ್ನೆಲೆಯಲ್ಲಿ ಹಾಗೂ 'ಜೀವ'ನ ವಿಕಾಸಪಥದಲ್ಲಿ ಷೋಡಶ (೧೬) ಭಾವನೆಗಳ ಪಾತ್ರ ಮತ್ತು ಸ್ಥಾನದ ಮಹತ್ವ ವನ್ನು ತಿಳಿಸುತ್ತದೆ. ಗೆರಸೊಪ್ಪೆ ರಾಜ್ಯವನ್ನಾಳಿದ ರಾಣಿಯರಲ್ಲಿ ಒಬ್ಬಳಾದ ನಾಗಲದೇವಿ ಕನ್ನಡದಲ್ಲಿ ಈ ಚಂಪೂಕಾವ್ಯವನ್ನು ರಚಿಸಿರುವುದು ವಿಶೇಷ. ಮಹಿಳೆಯೊಬ್ಬರು ಬರೆದಿರುವ ಹಳಗನ್ನಡ ಕಾವ್ಯವನ್ನು ಹೊಸಗನ್ನಡದಲ್ಲಿ ಅನುವಾದಿಸಿ ಕಮಲಾ ಹಂಪನಾ ಅವರು ಸಿದ್ಧಪಡಿಸಿದ್ದಾರೆ.

ಪ್ರಕಾಶಕರು : ಜೈನ ಅಧ್ಯಯನ ಸಂಸ್ಥೆ ಶ್ರೀಕ್ಷೇತ್ರ, ಶ್ರವಣಬೆಳಗೊಳ-೫೭೩ ೧೩೫.



ದಲಿತ ಹೋರಾಟ: ಗಂಭೀರ ಸವಾಲುಗಳು

ಲೇ. ಪ್ರೊ|| ಜಿ ಹೆಚ್ ನಾಯಕ

ಬೆಲೆ: ರೂ. ೪೦/-

ದಲಿತ ಹೋರಾಟ: ಗಂಭೀರ ಸವಾಲುಗಳು ಈ ಬರಹವು ಜಿ ಹೆಚ್ ನಾಯಕರು ಬೆಂಗಳೂರಿನಲ್ಲಿ ರಾಜ್ಯಮಟ್ಟದ ದಲಿತ ಅಧ್ಯಯನ ಶಿಬಿರವೊಂದರಲ್ಲಿ ಮಾಡಿದ ಭಾಷಣದ ಲಿಖಿತ ರೂಪ.

ದಲಿತ ಚಳವಳಿಯನ್ನು ವಿಶ್ಲೇಷಿಸಿರುವುದರ ಜೊತೆಗೆ ಅದು ಮುಂದೆ ಸಾಗಬೇಕಾದ ಮಾರ್ಗಗಳನ್ನು ಸೂಚಿಸಿ ನಾಡಿನಾದ್ಯಂತ ಚರ್ಚೆಗೆ ಗ್ರಾಸ ಒದಗಿಸಿದ್ದಾರೆ.

ಪ್ರಕಾಶಕರು : ದಸಂಸ ಪ್ರಕಾಶನ, ನಂ. ೪೦೨, ೧ನೇ ಮುಖ್ಯರಸ್ತೆ, ೨ನೇ ಬ್ಲಾಕ್, ಹೆಚ್‌ಬಿಆರ್ ಬಡಾವಣೆ, ಬೆಂಗಳೂರು - ೫೬೦ ೦೪೩.



ಬೆಳಕಿನತ್ತ

ಲೇ. ಎ.ಕೆ. ಮುತ್ತಲಿಬ

ಬೆಲೆ: ರೂ. ೩೦/-

ಶ್ರೀ ಶಿವಮೂರ್ತಿ ಶರಣರು ಒಮ್ಮೆ ಚಿತ್ರದುರ್ಗ ಕಾರಾಗೃಹದಲ್ಲಿ ಖೈದಿಗಳ ಮನಃಪರಿವರ್ತನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದ ಸಂದರ್ಭ. ಮುತ್ತಲಿಬ ಅವರು ಅಲ್ಲಿ ಖೈದಿಗಳಾಗಿದ್ದರು. ಶರಣರಿಂದ ಪ್ರೇರೇಪಿತರಾದ ಅವರು ತಮ್ಮ ನಿಜ ಜೀವನವನ್ನು ಅರಿತು ದ್ವೇಷಾಸೂಯೆಗಳನ್ನು ತೊರೆದರು. ಅನಂತರ ಅವರಿಂದ ಜನ್ಮತಳೆದದ್ದೇ ಈ ಕೃತಿಯಲ್ಲಿನ ವಚನಗಳು. ಇದರಲ್ಲಿ ಅನೇಕ ಅರ್ಥಪೂರ್ಣ ವಚನಗಳಿವೆ.

ಪ್ರಕಾಶಕರು : ಜಮುರಾ ಕಲಾಲೋಕ, ಶ್ರೀ ಮುರುಘಾಮಠ, ಚಿತ್ರದುರ್ಗ-೫೭೭೫೦೨

ಸಸ್ಯ ಪುರಾಣ

ಲೇ. ಬಿ.ಜಿ.ಎಲ್. ಸ್ವಾಮಿ

ಬೆಲೆ: ರೂ. ೫೦/-

ನಮ್ಮ ಕೆಲವು ಹಿಂದಿನ ಕವಿಗಳು, ಸಾಹಿತಿಗಳು ಮತ್ತು ವಚನಕಾರರು ತಮ್ಮ ಕೃತಿಗಳ ರಚನೆಯ ಸಂದರ್ಭದಲ್ಲಿ ಉಪಮೆಯಾಗಿ ಅನೇಕ ಸಸ್ಯ ಹಾಗೂ ಹೂವುಗಳ ಹೆಸರುಗಳನ್ನು ಬಳಸಿಕೊಂಡಿದ್ದಾರೆ.

ಅಂತಹ ಸಸ್ಯ ಹಾಗೂ ಹೂವುಗಳ ವೈಜ್ಞಾನಿಕ ಹೆಸರುಗಳು, ಅವುಗಳಿಗಿರುವ ಪರ್ಯಾಯ ಹೆಸರುಗಳು ಇನ್ನಿತರ ಮಾಹಿತಿಗಳನ್ನು ಲೇಖಕರು ಇಲ್ಲಿ ದಾಖಲಿಸಿದ್ದಾರೆ. ಇದರಿಂದ ಓದುಗರಿಗೆ ಕಾವ್ಯಾಭ್ಯಾಸದ ಜೊತೆಗೇ ಸಸ್ಯಶಾಸ್ತ್ರದ ಪರಿಚಯವೂ ಆಗುತ್ತದೆ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಬೆಂಗಳೂರು - ೦೧

ಧರ್ಮ ನಿರಪೇಕ್ಷತೆಯ ದೃಷ್ಟಿಕೋನಗಳು

ಲೇ. ಅಸ್ಗರ್ ಅಲಿ ಇಂಜಿನಿಯರ್

ಬೆಲೆ: ರೂ. ೩೦/-

ಪ್ರಮುಖ ಮುಸ್ಲಿಂ ವಿದ್ವಾಂಸರಾದ ಲೇಖಕರು ಕೋಮು ಸೌಹಾರ್ದತೆ ಹಾಗೂ ಅಂತರ್‌ಧರ್ಮೀಯ ಅರಿವಿನ ಕುರಿತು ಅಪಾರ ಕೊಡುಗೆ ನೀಡಿದ್ದಾರೆ. ಈ ಕೃತಿಯಲ್ಲಿ ಹಿಂದೂ-ಮುಸ್ಲಿಂ ವೈರತ್ವದ ಕಲ್ಪನೆ, ಪಠ್ಯಪುಸ್ತಕಗಳು ಮತ್ತು ಕೋಮುವಾದ, ಒಳಗೊಂಡಂತೆ ವಿವಿಧ ರೀತಿಯ ಲೇಖನಗಳನ್ನು ಓದುಗರ ಕೈಗಿತ್ತಿದ್ದಾರೆ.

ಪ್ರಕಾಶಕರು : ಪೀಪಲ್ಸ್ ಲೀಗಲ್ ಫೋರಂ, ಮೈಸೂರು ಮತ್ತು ಸೆಂಟರ್ ಫಾರ್ ಸ್ಟಡಿ ಆಫ್ ಸೊಸೈಟಿ ಅಂಡ್ ಸೆಕ್ಯುಲರಿಸಂ, ಮುಂಬಯಿ.



ನಾವು ಮತ್ತು ನಮ್ಮ ಪರಿಸರ

ಸಂ. ಡಾ|| ಸಬಿಹಾ ಭೂಮಿಗೌಡ

ಬೆಲೆ: ರೂ. ೫೦/-

ಈ ಕೃತಿಯಲ್ಲಿ ಜೀವವೈವಿಧ್ಯದ ಅಗಾಧತೆ, ಮಹತ್ವ ಮತ್ತು ವೈಶಿಷ್ಟ್ಯಗಳನ್ನು ತಿಳಿಸುವ ಲೇಖನಗಳು, ದೇಶೀ ಕೃಷಿ ಪದ್ಧತಿಯ ಮಹತ್ವ, ಜನಪದರು ಸಾಂಪ್ರದಾಯಿಕ ಕೃಷಿಯಲ್ಲಿ ತೊಡಗಿಸಿಕೊಂಡ ಚಾರಿತ್ರಿಕ ವಿವರಗಳು, ರಾಸಾಯನಿಕ ಕೀಟನಾಶಕಗಳು ಉಂಟು ಮಾಡಿದ ದುಷ್ಪರಿಣಾಮಗಳ ಬಗೆಗಿನ ಸಂಶೋಧನಾತ್ಮಕ ಬರಹಗಳು ಮತ್ತು ಇಂದು ನಗರೀಕರಣದ ಫಲವಾಗಿ ನಾವು ಅನುಭವಿಸುತ್ತಿರುವ ಸಮಸ್ಯೆಗಳು ಇನ್ನಿತರ ವಿಷಯಗಳನ್ನೊಳಗೊಂಡ ೧೫ ಲೇಖನಗಳಿವೆ. ಪ್ರತಿಯೊಬ್ಬರೂ ಓದಲೇಬೇಕಾದಂತಹ ಕೃತಿ ಇದು.

ಪ್ರಕಾಶಕರು : ಡಾ|| ಕೆ. ಶಿವರಾಮಕಾರಂತ ಪೀಠ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.



ಡೆಮಾಕ್ರಸಿ ಅಂದರೆ ಸಮಾನತೆ

ಜನರಿಗೆ ವಿದ್ಯಾಭ್ಯಾಸ ಬೇಕು. ಈ ದಿನಗಳಲ್ಲಿ ಜನರೆಲ್ಲ 'ಡೆಮಾಕ್ರಸಿ'ಯ ವಿಷಯ ಅಂದರೆ ಎಲ್ಲಾ ಜನರ ಸಮಾನತೆಯ ವಿಷಯ ಮಾತನಾಡುವರು. ಒಬ್ಬ ಎಲ್ಲರಂತೆ ತಾನೂ ಎಂದು ಹೇಗೆ ತಿಳಿಯಬಲ್ಲ, ಅವನಿಗೆ ತಿಳಿವಳಿಕೆ ಚೆನ್ನಾಗಿರಬೇಕು. ಮೂಢನಂಬಿಕೆಗಳಿಂದ ಪಾರಾಗುವ ಸ್ಪಷ್ಟವಾದ ಮನಸ್ಸಿರಬೇಕು. ಅವನು ತನ್ನ ಮನಸ್ಸಿನಲ್ಲಿ ಕವಿದುಕೊಂಡಿರುವ ಮೂಢನಂಬಿಕೆಯ ಪದರಗಳನ್ನೆಲ್ಲಾ ತೂರಿ ಹೋಗಿ ತನ್ನ ಅಂತರಾಳದಲ್ಲಿರುವ ಸತ್ಯವನ್ನು ಅರಿಯಬೇಕಾಗಿದೆ. ಆಗ ಎಲ್ಲಾ ಪೂರ್ಣತೆ, ಶಕ್ತಿ ತನ್ನಲ್ಲಿಯೇ ಇರುವುವು, ಯಾರೋ ಹೊರಗಿನವರು ಇವನ್ನು ತನಗೆ ಕೊಟ್ಟಿಲ್ಲವೆಂಬುದನ್ನು ಅರಿಯುವನು. ಅವನಿಗೆ ಇದು ಗೊತ್ತಾದರೆ ತಕ್ಷಣ ಅವನು ಸ್ವತಂತ್ರನಾಗುವನು. ಆಗ ಅವನು ಸಮಾನತೆಯನ್ನು ಪಡೆಯುವನು. ಆಗ ಅವನಿಗೆ ಎಲ್ಲರೂ ತನ್ನಂತೆಯೆ ಸಮಾನರು, ಪರಿಪೂರ್ಣರು ಎಂಬುದು ಗೊತ್ತಾಗ್ತುವುದು. ಇತರ ಸಹೋದರರ ಮೇಲೆ ಕಾಯಕವಾಗಿಯಾಗಲೀ, ಮಾನಸಿಕವಾಗಿಯಾಗಲೀ ಅಥವಾ ನೈತಿಕವಾಗಿಯಾಗಲೀ ಯಾವ ಬಲತ್ಕಾರವನ್ನೂ ಮಾಡಕೂಡದು ಎಂಬುದನ್ನು ಅರಿಯುವನು. ತನಗಿಂತ ಕೀಳಾದವರು ಎಂದಾದರೂ ಯಾರಾದರೂ ಇದ್ದರು ಎಂಬ ಭಾವನೆಯನ್ನು ಅವನು ತೊರೆಯುವನು. ಆಗ ಅವನು ಸಮಾನತೆಯ ವಿಷಯವನ್ನು ಮಾತನಾಡಬಹುದು, ಅದಕ್ಕೆ ಮುಂಚೆ ಅಲ್ಲ.

ಕಳೆದ ಹತ್ತು ವರ್ಷಗಳಿಂದಲೂ ಭರತಖಂಡದ ಅನೇಕ ಭಾಗಗಳಲ್ಲಿ ಸಂಚರಿಸುವಾಗ ಆ ದೇಶದಲ್ಲೆಲ್ಲಾ ಇರುವ ಸಾಮಾಜಿಕ ಸುಧಾರಣೆಯ ಸಂಸ್ಥೆಗಳನ್ನು ಕಂಡೆನು. ಇಂದು ಸಭ್ಯರೆಂದು (Gentleman) ಕರೆದುಕೊಳ್ಳುವ ಮತ್ತು ದೊಡ್ಡ ಮನುಷ್ಯರಾಗಿ ಮುಂದೆಯೂ ಸಭ್ಯರಂತೆ ಇರಲು ಯತ್ನಿಸುವವರು ಯಾರ ರಕ್ತವನ್ನು ಹೀರಿ ಆ ಸ್ಥಿತಿಗೆ ಬಂದರೋ, ಅವರ ಹಿತಕ್ಕೋಸುಗವಾಗಿ ಯಾವ ಒಂದು ಸಂಸ್ಥೆಯನ್ನೂ ಸ್ಥಾಪಿಸಿಲ್ಲ. ಎಷ್ಟು ಜನ ಸಿಪಾಯಿಗಳನ್ನು ಮುಸಲ್ಮಾನರು ಕರೆದುಕೊಂಡು ಬಂದರು? ಈಗ ಆಂಗ್ಲೇಯರು ಎಷ್ಟು ಮಂದಿ ಇರುವರು? ಭರತಖಂಡದಲ್ಲಿ ಅಲ್ಲದೆ ಬೇರೆ ಯಾವ ಕಡೆಯಲ್ಲಿ ಆರು ರೂಪಾಯಿ ಸಂಬಳಕ್ಕೆ ತನ್ನ ತಂದೆಯ ಮತ್ತು ಸಹೋದರರ ತಲೆಯನ್ನು ಕೂಡ ಕತ್ತರಿಸುವ ಲಕ್ಷಾಂತರ ಮಂದಿ ಸಿಕ್ಕುವರು!

ಏಳು ಶತಮಾನಗಳ ಮಹಮ್ಮದೀಯರ ಆಳ್ವಿಕೆಯಲ್ಲಿ ಆರು ಕೋಟಿ ಮಹಮ್ಮದೀಯರು, ಒಂದು ಶತಮಾನದ ಕ್ರೈಸ್ತರ ಆಳ್ವಿಕೆಯಲ್ಲಿ ಇಪ್ಪತ್ತು ಲಕ್ಷ ಕ್ರೈಸ್ತರು-ಹೀಗೆ ಆಗುವುದಕ್ಕೆ ಕಾರಣವೇನು? ಸ್ವತಂತ್ರ ಆಲೋಚನೆ ಇಡೀ ದೇಶವನ್ನೇ ಏಕೆ ತ್ಯಜಿಸಿರುವುದು? ಹಸ್ತಕೌಶಲ್ಯವುಳ್ಳ ನಮ್ಮ ಶಿಲ್ಪಿಗಾರರು ಪಾಶ್ಚಾತ್ಯರೊಂದಿಗೆ ಸ್ಪರ್ಧಿಸಲಾರದೆ ಏಕೆ ಕ್ರಮೇಣ ಮಾಯವಾಗುತ್ತಿರುವರು? ಪುನಃ ಯಾವ ಶಕ್ತಿಯಿಂದ ಜರ್ಮನ್ ಕೂಲಿಕಾರನು ಅನೇಕ ಶತಮಾನಗಳಿಂದ ತಮ್ಮ ದೇಶದಲ್ಲಿ ಬೇರೂರಿದ ಆಂಗ್ಲ ಕೂಲಿಕಾರರನ್ನು ಜಯಿಸಿದನು? ವಿದ್ಯೆ, ವಿದ್ಯೆ, ವಿದ್ಯೆಯೊಂದೇ. ಅನೇಕ ಐರೋಪ್ಯ ದೇಶಗಳಲ್ಲಿ ಪ್ರಯಾಣಮಾಡಿ ಅತಿ ದೀನರಿಗೂ ಅಲ್ಲಿರುವ ಸೌಕರ್ಯ ಮತ್ತು ವಿದ್ಯೆ ಇವುಗಳನ್ನು ಕಂಡಾಗ ನನ್ನ ದೇಶದ ಬಡ ಜನರ ಸ್ಥಿತಿಯೂ ನನಗೆ ನೆನಪಾಗಿ ನಾನು ಕಂಬನಿಯನ್ನು ಸುರಿಸುತ್ತಿದ್ದೆ. ಈ ವ್ಯತ್ಯಾಸ ಹೇಗೆ ಆಯಿತು? ನನಗೆ ಸಿಕ್ಕಿದ ಉತ್ತರವೇ ವಿದ್ಯೆ, ವಿದ್ಯೆಯಿಂದ ಸ್ವಾವಲಂಬನೆ.

ಇಷ್ಟ ಸಿದ್ಧಾಂತವೆಂದರೆ ಮನುಷ್ಯನಿಗೆ ತನ್ನ ಧರ್ಮವನ್ನು ಹುಡುಕಿಕೊಳ್ಳುವ ಅವಕಾಶವನ್ನು ಕೊಡುವುದು..... ಉದಾಹರಣೆಗೆ ನಾನು ಮಗುವಾಗಿದ್ದಾಗ ನನ್ನ ತಂದೆ ನನ್ನ ಕೈಗೆ ಒಂದು ಪುಸ್ತಕವನ್ನು ಕೊಡುವನು. ಅದು ದೇವರು ಹಾಗೆ, ಹೀಗೆ ಎಂದು ಹೇಳುವುದು. ನನ್ನ ಮನಸ್ಸಿನಲ್ಲಿ ಅದನ್ನು ಹಾಕುವುದಕ್ಕೆ ಅವನಿಗೆ ಏನು ಅಧಿಕಾರವಿತ್ತು? ನಾನು ಹೇಗೆ ಬೆಳೆಯುತ್ತೇನೆ ಎಂಬುದು ಅವನಿಗೆ ಹೇಗೆ ಗೊತ್ತು? ಅವನಿಗೆ ನನ್ನ ಸ್ವಭಾವದ ಬೆಳವಣಿಗೆಯ ಪರಿಚಯವಿಲ್ಲದೆ, ತನ್ನ ಭಾವನೆಗಳನ್ನು ನನ್ನ ಮೇಲೆ ಬಲಾತ್ಕರಿಸಲು ಯತ್ನಿಸಿದನು. ಇದರ ಪರಿಣಾಮವಾಗಿ ನನ್ನ ವಿಕಾಸಕ್ಕೆ ಆತಂಕ ಒದಗಿತು. ತನಗೆ ಯೋಗ್ಯವಲ್ಲದ ನೆಲದಲ್ಲಿ ಒಂದು ಗಿಡವನ್ನು ಬೆಳೆಯುವಂತೆ ಬಲಾತ್ಕರಿಸಲಾರಿರಿ. ಮಗುವು ತನಗೆ ತಾನೇ ಕಲಿತುಕೊಳ್ಳುವುದು. ಅದು ತನ್ನ ಸ್ವಭಾವಕ್ಕೆ ಅನುಗುಣವಾಗಿ ಬೆಳೆಯುವುದಕ್ಕೆ ನೀವು ಸಹಾಯ ಮಾಡಬಹುದು. ನೀವು ಅದಕ್ಕೆ ಹೀಗೆಯೇ ಬೆಳೆಯಬೇಕೆಂದು ಒತ್ತಾಯ ಮಾಡಲಾಗುವುದಿಲ್ಲ, ಅದಕ್ಕೆ ಇರುವ ಆತಂಕಗಳನ್ನು ನಿವಾರಿಸಿ ಸಹಾಯ ಮಾಡಬಹುದು...

ಮುಂದಿನದು ಸ್ವಭಾವ ತನಗೆ ತಾನೇ ಬೆಳೆಯುವುದು. ಜಗತ್ತಿನಲ್ಲಿರುವ ಭಯಂಕರವಾದ ದೋಷವನ್ನು ಕುರಿತು ಯೋಚಿಸಿ ನೋಡಿ. ಕೋಟ್ಯಾಂತರ ಅರಿಯದ ಮಕ್ಕಳ ಬುದ್ಧಿಯು, ಅವರಿಗೆ ಸರಿಯಾಗಿ ಬೋಧಿಸದೆ ಇರುವ ಪರಿಣಾಮವಾಗಿ, ಕೆಟ್ಟು ಹೋಗಿರುವುದನ್ನು ನೋಡಿ. ಎಷ್ಟು ಸುಂದರವಾದ ವಿಷಯಗಳು, ಎಷ್ಟು ಅಮೋಘವಾದ ಆಧ್ಯಾತ್ಮಿಕ ಸತ್ಯಗಳಾಗಬಹುದಾಗಿತ್ತು! ಅವುಗಳೆಲ್ಲ ಭಯಂಕರವಾದ, ಮನೆಯ ಮತ, ಸಾಮಾಜಿಕ ಮತ, ದೇಶದ ಮತ, ಮುಂತಾದವುಗಳಿಂದ ಇನ್ನೂ ಅಂಕುರಾವಸ್ಥೆಯಲ್ಲಿಯೇ ನಾಶವಾಗಿವೆ. ನೀವು ಬಾಲ್ಯಾವಸ್ಥೆಯಲ್ಲಿ ಕಲಿತ ಮತ ಅಥವಾ ನಿಮ್ಮ ದೇಶದ ಮತದ ವಿಚಾರವಾಗಿ ಕಲಿತ ವಿಷಯಗಳ ಪರಿಣಾಮವಾಗಿ, ಈಗ ನಿಮ್ಮಲ್ಲಿ ಇರುವ ಮೂಢ ವಿಚಾರಗಳು ಈಗ ಎಷ್ಟು ಅನಾಹುತ ಮಾಡಿವೆ ಅಥವಾ ಮುಂದೆ ಮಾಡಬಲ್ಲವು ಎಂಬುದನ್ನು ಕುರಿತು ಯೋಚಿಸಿ ನೋಡಿ. ಪ್ರತಿಯೊಂದು ಆಲೋಚನೆಯ ಹಿಂದೆ ಎಂತಹ ಅದ್ಭುತವಾದ ಶಕ್ತಿ ಹುದುಗಿದೆ ಎಂಬುದನ್ನು ಮಾನವನು ಅರಿಯನು.

ಸ್ಥಿತಿ-ಗತಿ

ಈ ಪ್ರಪಂಚವೇ ಒಂದು ಮೂಢನಂಬಿಕೆಯ ಸರಪಳಿಯಲ್ಲಿ ಬದ್ಧವಾಗಿರುವುದು. ಗಂಡಸಾಗಲೀ, ಹೆಂಗಸಾಗಲೀ ನಾನು ಪದದಳಿತರನ್ನು ನೋಡಿ ಕನಿಕರ ಪಡುವೆನು. ಯಾರು ಇವರನ್ನು ಈ ಸ್ಥಿತಿಗೆ ತರುತ್ತಾರೋ ಅವರನ್ನು ನೋಡಿ ಇನ್ನೂ ಹೆಚ್ಚು ಮನಕರಗುವೆನು. ಹಗಲಿನಷ್ಟು ಸ್ಫುಟವಾಗಿ ನನಗೆ ತಿಳಿಯುವ ಒಂದು ವಿಷಯ, ದುಃಖವೆಲ್ಲಾ ಅಜ್ಞಾನದಿಂದ ಜನಿಸುವುದು ಎಂಬುದು... ಅನಂತ ಪ್ರೇಮ ಮತ್ತು ಭೂತದಯೆಯಿಂದ ಕೂಡಿದ ನೂರಾರು ಬುದ್ಧರು ಬೇಕಾಗಿದ್ದಾರೆ. ಜಗದ ಧರ್ಮಗಳೆಲ್ಲ ನಿಸ್ತೇಜವಾಗಿ ನಗೆಗೇಡಾಗಿವೆ. ಜಗತ್ತಿಗೆ ಬೇಕಾಗಿರುವುದು ಶುದ್ಧ ಚಾರಿತ್ರ್ಯ... ನಮಗೆ ಇಂದು ಬೇಕಾಗಿರುವುದು ಧೀರನುಡಿ, ಧೀರತರ ಕಾರ್ಯ. ಮಹಾ ವ್ಯಕ್ತಿಗಳೆ ಏಳಿ! ಜಾಗ್ರತರಾಗಿ! ಪ್ರಪಂಚ ದುಃಖದಲ್ಲಿ ಬೇಯುತ್ತಿದೆ.

ಮಾನವ ಸಮಾಜ ಸರದಿಯ ಮೇಲೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಚಾತುರ್ವರ್ಣದವರಿಂದ ಆಳಲ್ಪಡುತ್ತಿದೆ. ಪ್ರತಿವರ್ಣದ ಆಳ್ವಿಕೆಯಲ್ಲೂ ಒಳ್ಳೆಯದೂ ಇದೆ, ಕೆಟ್ಟದ್ದೂ ಇದೆ. ಬ್ರಾಹ್ಮಣರ ಆಳ್ವಿಕೆಯಲ್ಲಿ ವಂಶ ಪಾರಂಪರ್ಯದ ದೃಷ್ಟಿಯಿಂದ ವಿಪರೀತವಾಗಿ ಇನ್ನೊಬ್ಬರನ್ನು ತಮ್ಮೊಂದಿಗೆ ಬೆರೆಯುವಂತೆ ಮಾಡಿರುವರು; ಬ್ರಾಹ್ಮಣಿಕೆ ಮಾಡುವರು; ಮತ್ತು ಅವರ ವಂಶಸ್ಥರಿಗೆ ಬೇಕಾದಷ್ಟು ರಕ್ಷಣೆಗಳಿರುತ್ತವೆ. ಅವರಿಗಲ್ಲದೆ ಬೇರೆ ಯಾರಿಗೂ ಹೇಳಿಕೊಡುವ ಹಕ್ಕಿಲ್ಲ. ಅದರಲ್ಲಿ ಮುಖ್ಯವಾದುವು ಯಾವುವೆಂದರೆ, ಎಲ್ಲಾ ಶಾಸ್ತ್ರಗಳಿಗೂ ತಳಹದಿಯನ್ನು ಹಾಕುವುದೇ ಆ ಕಾಲದಲ್ಲಿ, ಬ್ರಾಹ್ಮಣರು ಬುದ್ಧಿಯನ್ನು ಪೋಷಿಸುವರು. ಏಕೆಂದರೆ ಬುದ್ಧಿ ಶಕ್ತಿಯ ಮೂಲಕ ಅವರು ಆಳಬೇಕಾಗಿರುವುದು.

ವಿವೇಕಾನಂದರ ವಿಚಾರಗಳು

ಸ್ವತಂತ್ರ ಆಲೋಚನೆ ಇಡೀ ದೇಶವನ್ನೇ ಏಕೆ ತ್ಯಜಿಸಿರುವುದು? ಹಸ್ತಕೌಶಲ್ಯವುಳ್ಳ ನಮ್ಮ ಶಿಲ್ಪಿಗಾರರು ಪಾಶ್ಚಾತ್ಯರೊಂದಿಗೆ ಸ್ಪರ್ಧಿಸಲಾರದೆ ಏಕೆ ಕ್ರಮೇಣ ಮಾಯವಾಗುತ್ತಿರುವರು? ಪುನಃ ಯಾವ ಶಕ್ತಿಯಿಂದ ಜರ್ಮನ್ ಕೂಲಿಕಾರನು ಅನೇಕ ಶತಮಾನಗಳಿಂದ ತಮ್ಮ ದೇಶದಲ್ಲಿ ಬೇರೂರಿದ ಆಂಗ್ಲ ಕೂಲಿಕಾರರನ್ನು ಜಯಿಸಿದನು? ವಿದ್ಯೆ, ವಿದ್ಯೆ, ವಿದ್ಯೆಯೊಂದೇ. ಐರೋಪ್ಯ ದೇಶಗಳಲ್ಲಿ ಅತಿ ದೀನರಿಗೂ ಅಲ್ಲಿರುವ ಸೌಕರ್ಯ ಮತ್ತು ವಿದ್ಯೆ ಇವುಗಳನ್ನು ಕಂಡಾಗ ನನ್ನ ದೇಶದ ಬಡ ಜನರ ಸ್ಥಿತಿಯೂ ನೆನಪಾಗುತ್ತಿತ್ತು. ಈ ವ್ಯತ್ಯಾಸ ಹೇಗೆ ಆಯಿತು? ನನಗೆ ಸಿಕ್ಕಿದ ಉತ್ತರವೇ ವಿದ್ಯೆ, ವಿದ್ಯೆಯಿಂದ ಸ್ವಾವಲಂಬನೆ.

ಸಂಗ್ರಹ:

ಜ.ಹೊ. ನಾರಾಯಣಸ್ವಾಮಿ

ಕ್ಷತ್ರಿಯನ ಆಳ್ವಿಕೆಯಲ್ಲಾದರೋ ಕ್ರೌರ್ಯವೂ ಬಲಾತ್ಕಾರವೂ ಸೇರಿರುವುದು. ಆದರೆ ಅವರು ತಮ್ಮೊಂದಿಗೆ ಬೆರೆಯುವುದಕ್ಕೆ ಅಡ್ಡಿ ತರುವುದಿಲ್ಲ. ಅವರ ಕಾಲದಲ್ಲಿ ಅನೇಕ ಕಲೆಗಳು, ಸಮಾಜ ಸಂಸ್ಕೃತಿಗಳು ಹೆಚ್ಚು ಅಭಿವೃದ್ಧಿಗೆ ಬರುವುವು.

ವೈಶ್ಯರ ಕಾಲದ ಆಳ್ವಿಕೆ ಅನಂತರ ಬರುವುದು. ಮೌನವಾದ ದಬ್ಬಾಳಿಕೆ ಮತ್ತು ಜನರನ್ನು ಸುಲಿದು ತಿನ್ನುವುದರಲ್ಲಿ ಇದು ಬಹಳ ಭೀಕರವಾಗಿರುವುದು. ಇದರ ಅನುಕೂಲವೇನೆಂದರೆ, ವ್ಯಾಪಾರಸ್ಥನು ಎಲ್ಲಾ ಕಡೆಗೂ ಹೋಗುವುದರಿಂದ ಹಿಂದಿನ ಇಬ್ಬರ ಆಳ್ವಿಕೆಯ ಕಾಲದಲ್ಲಿ ಶೇಖರವಾಗಿದ್ದ ಭಾವನೆಗಳನ್ನು ಹಂಚುವುದಕ್ಕೆ ಸಹಕಾರಿಯಾಗುವನು. ಕ್ಷತ್ರಿಯರಿಗಿಂತ ಇವರು ಇನ್ನೊಬ್ಬರೊಂದಿಗೆ ಸಹಕರಿಸುವುದು ಹೆಚ್ಚು, ಆದರೆ ಸಂಸ್ಕೃತಿ ಕ್ಷೀಣದೆಸೆಗೆ ಬರುವುದು.

ಕೊನೆಗೆ ಶೂದ್ರನ ಆಳ್ವಿಕೆ ಬರುವುದು. ಅದರ ಅನುಕೂಲ ಯಾವುದೆಂದರೆ, ದೈಹಿಕ ಸೌಕರ್ಯಗಳನ್ನು ಎಲ್ಲರಿಗೂ ಸಮನಾಗಿ ಹಂಚುವುದು. ಅದರ ಅನಾನುಕೂಲವೆ (ಬಹುಶಃ) ಸಂಸ್ಕೃತಿಯ ಹೀನತೆ. ಎಲ್ಲರಲ್ಲಿಯೂ ಸಾಧಾರಣ ವಿದ್ಯೆ ಹರಡುವುದು. ಆದರೆ ಪ್ರತಿಭಾವಂತರು ಕಡಿಮೆಯಾಗುವರು.

ಬ್ರಾಹ್ಮಣನ ವಿದ್ಯೆ, ಕ್ಷತ್ರಿಯನ ಸಂಸ್ಕೃತಿ, ವೈಶ್ಯನ ವಿತರಣಾ ಶಕ್ತಿ, ಶೂದ್ರನ ಸಮತ್ವದ ಆದರ್ಶ, ಇವುಗಳೆಲ್ಲವನ್ನೂ ಇಟ್ಟುಕೊಂಡು, ಅವುಗಳ ಕುಂದನ್ನು ತೊರೆದ ಒಂದು ಸ್ಥಿತಿಯನ್ನು ರಚಿಸುವುದಕ್ಕೆ ಸಾಧ್ಯವಾದರೆ ಅದು ಆದರ್ಶ ಸ್ಥಿತಿಯಾಗುವುದು. ಆದರೆ ಅದು ಸಾಧ್ಯವೆ?

ಆದರೆ ಮೊದಲನೆಯ ಮೂರು ವರ್ಗದವರಿಗೆ ಅವರವರ ಸರದಿ ಸಿಕ್ಕಿದೆ, ಈಗ ಕೊನೆಯವರ ಕಾಲ. ತಮ್ಮ ಸರದಿಯನ್ನು ಅವರು ಹೊಂದೇ ಹೊಂದುವರು. ಅವರನ್ನು ಯಾರೂ ವಿರೋಧಿಸಲಾರರು. ಚಿನ್ನ ಅಥವಾ ಬೆಳ್ಳಿಯ ಪ್ರಮಾಣದ (standard) ಕಷ್ಟಗಳೆಲ್ಲಾ ನನಗೆ ತಿಳಿಯದು. (ಇದರ ವಿಚಾರವಾಗಿ ಯಾರಿಗೂ ಹೆಚ್ಚು ತಿಳಿದಂತೆ ಕಾಣುವುದಿಲ್ಲ.) ಆದರೆ ಇಷ್ಟನ್ನು ಮಾತ್ರ ನಾನು ನೋಡಬಲ್ಲೆ. ಚಿನ್ನದ ಪ್ರಮಾಣ ಬಡವನನ್ನು ಅತಿ ಬಡವನನ್ನಾಗಿಯೂ, ಹಣಗಾರರನ್ನು ಹೆಚ್ಚು ಹಣಗಾರರನ್ನಾಗಿಯೂ ಮಾಡಿದೆ... ನಾನು ಸಮತಾವಾದಿ. (Socialist). ಏಕೆಂದರೆ ಅದು ಒಂದು ಸಂಪೂರ್ಣವಾದ ಸಂಸ್ಥೆ ಎಂದು ತಿಳಿದಿರುವೆನು ಎಂದಲ್ಲ. ಆದರೆ ಒಂದು ಚೂರು ರೊಟ್ಟಿ ಏನೂ ಇಲ್ಲದೇ ಇರುವುದಕ್ಕಿಂತ ಮೇಲು... ಬೇರೆ ಬೇರೆ ಜನಗಳಿಗೆ ಸುಖ ದುಃಖಗಳನ್ನು ಹಂಚುವುದು, ಯಾವಾಗಲೂ ಒಬ್ಬರೇ ಸುಖ ಅಥವಾ ಒಬ್ಬರೇ ದುಃಖವನ್ನು ಅನುಭವಿಸುವುದಕ್ಕಿಂತ ಮೇಲು.

ನಾವು ಸ್ವಂತವಾಗಿ ಏನನ್ನೂ ಮಾಡುವುದಿಲ್ಲ. ಯಾರಾದರೂ ಏನಾದರೂ ಮಾಡಹೊರಟರೆ ಅವರನ್ನು ಹಿಯಾಳಿಸುವೆವು. ಇದೇ ನಮ್ಮ ಜನಾಂಗದ ಅಧೋಗತಿಗೆ ಕಾರಣ. ದುರ್ಬಲತೆ ಮತ್ತು ಅಸಹಾನುಭೂತಿ ಇದೇ ಎಲ್ಲಾ ದುಃಖಗಳಿಗೂ ಮೂಲ. ಆದ್ದರಿಂದ ನೀವು ಇವೆರಡನ್ನೂ ತ್ಯಜಿಸಬೇಕು. ಯಾವ ಯಾವ ವ್ಯಕ್ತಿಗಳಲ್ಲಿ ಏನೇನು ಶಕ್ತಿ ಸಾಮರ್ಥ್ಯ ಅಡಗಿದೆಯೋ!..... ಎಲ್ಲರಿಗೂ ಅವಕಾಶವನ್ನು ಕಲ್ಪಿಸಿಕೊಡಿ.

ಭರತಖಂಡದ ಹೀನಸ್ಥಿತಿಗೆ ಮುಖ್ಯ ಕಾರಣವೇನೆಂದರೆ ದೇಶದ ವಿದ್ಯೆ ಮತ್ತು ಬುದ್ಧಿವಂತಿಕೆ ಎಲ್ಲವನ್ನೂ ಎಲ್ಲೋ ಅಲ್ಪಮಂದಿ ತಮ್ಮ ಕೈಯಲ್ಲಿ ಅಹಂಕಾರದಿಂದಲೂ ರಾಜಾಧಿಕಾರದ ಬಲದಿಂದಲೂ ವಶಪಡಿಸಿಕೊಂಡದ್ದು.

ಪ್ರತಿಯೊಂದಕ್ಕೂ ರಾಜರನ್ನೇ ಆಶ್ರಯಿಸಿ, ಜನಸಾಮಾನ್ಯರ ಹಿತಕ್ಕೆ ಅಥವಾ ಆತ್ಮರಕ್ಷಣೆಗೆ ಸ್ವಲ್ಪವೂ ಪ್ರಯತ್ನಪಡದೆ ಇದ್ದರೆ ಅಂತಹ ಜನಾಂಗದಲ್ಲಿ ಅಂತರ್ಗತವಾಗಿರುವ ಶಕ್ತಿ ಕ್ರಮೇಣ ನಶಿಸುವುದು. ಇಂತಹ ಪರಾಧೀನತೆಗೆ ಮತ್ತು ಅನ್ಯರಕ್ಷಣೆಗೆ ಒಳಗಾದ ಸ್ಥಿತಿ ಮುಂದುವರಿದರೆ ಅದು ಜನಾಂಗದ ನಾಶಕ್ಕೆ ಕಾರಣವಾಗುವುದು. ಅಂತಹ ಜನಾಂಗದ ಅಳಿವು ಅನತಿ ದೂರದಲ್ಲಿರುವುದು.

ನಾನು ಪಾಶ್ಚಾತ್ಯ ದೇಶಕ್ಕೆ ಹೋಗಿ ಸಮುದ್ರ ಪ್ರಯಾಣಕ್ಕೆ ಇದ್ದ ವಿರೋಧವನ್ನು ನಾಶಮಾಡಿದೆ. ನನ್ನನ್ನು ಅವರು ಬಹಿಷ್ಕಾರ ಹಾಕಬೇಕಾದರೆ ಭರತಖಂಡದ ಅರ್ಧ ಆಳುವ ಅರಸರು, ಮುಕ್ಕಾಲು ಪಾಲು ಇಂಡಿಯಾ ದೇಶದ ವಿದ್ಯಾವಂತರು ಇವರುಗಳೊಂದಿಗೆ ಮಾಡಬೇಕು.

ಭರತಖಂಡದಲ್ಲಿ... ಪಾಶ್ಚಾತ್ಯರೊಡನೆ ಭೋಜನ ಮಾಡುವುದನ್ನು ಆಕ್ಷೇಪಣೀಯವೆಂದು ಅನೇಕರು ಭಾವಿಸಿದರು. ನಾನು ಪಾಶ್ಚಾತ್ಯರೊಡನೆ ಭೋಜನ ಮಾಡಿದುದಕ್ಕಾಗಿ ಒಂದು ಖಾಸಗಿ ದೇವಾಲಯದಿಂದ ಅಲ್ಲಿಯ ಮಾಲೀಕರು ನನ್ನನ್ನು ಹೊರಕ್ಕೆ ಅಟ್ಟಿದರು... ನಾನು ಪ್ರಥಮ ಬಾರಿ ಅಮೇರಿಕಕ್ಕೆ ಬಂದಾಗ ನಾನು ಷರಾಯಿ ಧರಿಸದೆ ಇದ್ದುದಕ್ಕೆ ನನ್ನನ್ನು ಕೀಳಾಗಿ ನೋಡಿದರು... ಅವರು ನನಗೆ ನೀಡಿದ ಆಹಾರಪಾನೀಯಗಳನ್ನು ನಾನು ಸ್ವೀಕರಿಸದೇ ಇದ್ದಾಗ ನನ್ನನ್ನು ಅವರು ವಿಚಿತ್ರ ಪ್ರಾಣಿ ಎಂಬಂತೆ ನೋಡಿದರು.

ಹಿಂದಿನ ಆಚಾರಗಳೆಲ್ಲ ಮಾಯವಾಗಿವೆ. ಇವನೊಂದಿಗೆ ಊಟಮಾಡಬಾರದು, ಅವನೊಂದಿಗೆ ನೀರು ಕುಡಿಯಬಾರದು ಎನ್ನುವುದು ಮಾತ್ರ ನಮ್ಮ ದೇಶದಲ್ಲಿ ಈಗ ಉಳಿದಿದೆ... ಈಗ ಆಹಾರ ನಿಯಮದ ಅರ್ಥವೆಲ್ಲ ಮಾಯವಾಗಿ ಬಾಹ್ಯ ಆಚಾರ ಒಂದು ಉಳಿದಿದೆ. ನಮ್ಮ ಜಾತಿಯಲ್ಲಿ ಕಳ್ಳರು, ಕುಡುಕರು, ಕೊಲೆಪಾತಕರು ಇರಬಹುದು. ಆದರೆ ಒಬ್ಬ ಒಳ್ಳೆಯ ಮನುಷ್ಯ ತನ್ನ ಜಾತಿಗಿಂತ ಕೆಳಗೆ ಇರುವವರೊಂದಿಗೆ ಅವನು ತನ್ನಷ್ಟಕ್ಕೇ ಯೋಗ್ಯನಿದ್ದರೂ ಅವನೊಂದಿಗೆ ಊಟ ಮಾಡಿದರೆ ಅವನನ್ನು ಬಹಿಷ್ಕರಿಸುವರು. ಇದೊಂದು ನಮ್ಮ ದೇಶದ ದೊಡ್ಡ ದೋಷ... ಸತ್ಯ ಹೇಳುವುದು, ದೀನರ ಸೇವೆ ಮಾಡುವುದು, ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವುದು ಇದರಲ್ಲಿದೆ ಅಂತರಂಗ ಶುದ್ಧಿ. ನಾವು ಸದಾಕಾಲ ಸತ್ಯವನ್ನು ಹೇಳುವೆವು? ಅನೇಕ ವೇಳೆ ಹೀಗೆ ಆಗುವುದು. ಶ್ರೀಮಂತನ ಮನೆಗೆ ತನ್ನ ಸ್ವಂತ ಕೆಲಸಕ್ಕೆ ಹೋಗಿ 'ದೀನರಕ್ಷಕ' ಎಂದು ಅವನನ್ನು ಹೊಗಳುವರು. ಅವನು ತನ್ನ ಮನೆಗೆ ಬರುವ ಬಡವನ ನಾಶ ಮಾಡುವುದು ಇವರಿಗೆ ಗೊತ್ತಿದ್ದರೂ ಹಾಗೆ ಹೇಳುವರು. ಇದೇನು ಸುಳ್ಳಲ್ಲದೆ ಬೇರೆಯಲ್ಲ.

ಕೆಲವು ಶಾಸ್ತ್ರಗಳಿವೆ. ಅವು ಹೀಗೆ ಹೇಳುವುವು. 'ಶೂದ್ರ ವೇದವನ್ನು ಹೇಳಿದರೆ ಅವನ ಕಿವಿಗೆ ಕಾದ ಸೀಸವನ್ನು ಹಾಕಿರಿ. ಅವನು ಒಂದು ಶ್ಲೋಕವನ್ನು ಉಚ್ಚರಿಸಿದರೆ ನಾಲಗೆಯನ್ನು ಕತ್ತರಿಸಿ. ಬ್ರಾಹ್ಮಣನನ್ನು 'ಎಲೈ ಬ್ರಾಹ್ಮಣನೇ' ಎಂದರೆ ಅವನ ನಾಲಗೆಯನ್ನು ಕತ್ತರಿಸಿ' ಇದೊಂದು ನಿಸ್ಸಂದೇಹವಾಗಿ ಅನಾಗರಿಕ ರಾಕ್ಷಸೀ ಕೃತ್ಯ... ಕೆಲವು ವೇಳೆ ಇಂತಹ ರಾಕ್ಷಸೀಯ ವ್ಯಕ್ತಿಗಳು ಪೂರ್ವಕಾಲದಲ್ಲಿ ಹುಟ್ಟಿದರು. ಹೆಚ್ಚು ಕಡಿಮೆ ಇಂತಹ ಅಸುರೀ ವ್ಯಕ್ತಿಗಳು ಎಲ್ಲಾ ಕಾಲದಲ್ಲಿಯೂ ಇದ್ದೇ ಇರುವರು. ಕ್ರಮೇಣ ಅವರು ಉಗ್ರತೆಯನ್ನು ಸ್ವಲ್ಪ ತಗ್ಗಿಸುವರು. 'ಶೂದ್ರರಿಗೆ ತೊಂದರೆ ಕೊಡ ಬೇಡಿ. ಆದರೆ ಉತ್ತಮ ವಿಷಯಗಳನ್ನು ಬೋಧಿಸಬೇಡಿ' ಎನ್ನುವರು.

ನಾನು ಉಗ್ರ ಪಥಗಾಮಿ. ಬುಡಮಟ್ಟ ತಿದ್ದುಪಡಿಯಾಗಬೇಕು ಎನ್ನುವವರ ಪಂಗಡಕ್ಕೆ ಸೇರಿದವನು. ಪೂರ್ವಾಚರ ಪರಾಯಣರಾಗಿ ಸ್ವಲ್ಪವೂ ಮುಂದುವರಿಯಬೇಕೆಂಬ ಆಸೆಯಿಲ್ಲದೆ, ಭೀಷಣ ರಾಶಿಯಾದ ಭರತಖಂಡಕ್ಕೆ ನಾನು ಹೊರಡುವುದರಲ್ಲಿರುವೆನು. (ಲಂಡನ್‌ನಿಂದ)

ತಿಳಿವಳಿಕೆ ಇಲ್ಲದವರಿಗೆ ಮತ್ತು ಬಡವರಿಗೆ ಸ್ವಾತಂತ್ರ್ಯ ಕೊಡುವುದು, ಅಂದರೆ, ತಮ್ಮ ದೇಹ, ಐಶ್ವರ್ಯ ಮುಂತಾದುವುಗಳ ಮೇಲೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು ಮತ್ತು ಅವರ ಮಕ್ಕಳಿಗೆ ಮೇಲುವರ್ಗದ ಮತ್ತು ಶ್ರೀಮಂತರಿಗಿರುವಂತೆಯೇ ತಮ್ಮ ಸ್ಥಿತಿಯನ್ನು ಉತ್ತಮಪಡಿಸಿ ವಿದ್ಯಾರ್ಜನೆ ಮಾಡುವುದಕ್ಕೆ ಅನುಕೂಲವಿರಬೇಕು ಎನ್ನುವರು. ಇದನ್ನು ಅವರು ಸಮಾಜದ ಹಿತಕ್ಕೆ ಹೇಳುವರೆ ಅಥವಾ ತಮ್ಮ ಸ್ವಾರ್ಥಪರತೆಯಿಂದ ಅಂಧರಾಗಿರುವರೆ? ಇಂಗ್ಲೆಂಡಿನಲ್ಲಿಯೂ ಕೂಡ ಈ ಕೆಳಗಿನ ದರ್ಜೆಯವರಿಗೆ ವಿದ್ಯೆ ದೊರೆತರೆ ಯಾರು ನಮಗೆ ದುಡಿಯುವರು ಎಂಬುದನ್ನು ಕೇಳಿರುವೆನು.

ಕೆಲವು ಮಂದಿ ಶ್ರೀಮಂತರ ಸೌಕರ್ಯಕ್ಕಾಗಿ ಲಕ್ಷಾಂತರ ಗಂಡಸರು ಮತ್ತು ಹೆಂಗಸರು ಬಡತನ, ಮೌಢ್ಯತೆಯ ನರಕದ ಗಾಢಾಂದಕಾರದಲ್ಲಿ ಮುಳುಗಿರಬೇಕೆ? ಬಡವರಿಗೆ ವಿದ್ಯೆ ಮತ್ತು ಐಶ್ವರ್ಯ ದೊರೆತರೆ ಸಮಾಜ ಮುಳುಗಿಹೋಗುವುದಂತೆ. ಯಾವುದು ಸಮಾಜ ? ಲಕ್ಷಾಂತರ ಜನರೋ ಅಥವಾ ನಾನು, ನೀನು ಮತ್ತು ಮೇಲಿನ ವರ್ಗದ ಕೆಲವರೋ ?

ಪುನಃ ಕೊನೆಯದೇ, ಮೇಲಿನ ವರ್ಗದ ಅಲ್ಪಮಂದಿ ಸತ್ಯವಾದರೂ ನಾವು ಮತ್ತೊಬ್ಬರಿಗೆ ದಾರಿತೋರುವವರು ಎಂಬ ಅಹಂಕಾರಕ್ಕೆ ಕಾರಣವೇನು?... ಸ್ವಾತಂತ್ರ್ಯದ ವಿಕಾಸಕ್ಕೆ ಅಡ್ಡಿ ಬರುವ ಸಾಮಾಜಿಕ ನಿಯಮಗಳು ಬಹಳ ಅಪಾಯಕರ. ಅವುಗಳನ್ನು ಸಾಧ್ಯವಾದಷ್ಟು ಬೇಗ ಧ್ವಂಸ ಮಾಡುವುದಕ್ಕೆ ಪ್ರಯತ್ನ ಪಡಬೇಕು. ಯಾವ ಸಂಘಗಳ ಮೂಲಕ ಮಾನವನು ಸ್ವಾತಂತ್ರ್ಯದೆಡೆಗೆ ಮುಂದುವರಿಯುವನೋ ಅವುಗಳನ್ನು ಪ್ರೋತ್ಸಾಹಿಸಬೇಕು. □

ಈ ಪ್ರಪಂಚವೇ ಒಂದು ಮೂಢನಂಬಿಕೆಯ ಸರಪಳಿಯಲ್ಲಿ ಬದ್ಧವಾಗಿರುವುದು. ಗಂಡಸಾಗಲೀ, ಹೆಂಗಸಾಗಲೀ ನಾನು ಪದದಳಿತರನ್ನು ನೋಡಿ ಕನಿಕರ ಪಡುವೆನು. ಯಾರು ಇವರನ್ನು ಈ ಸ್ಥಿತಿಗೆ ತರುತ್ತಾರೋ ಅವರನ್ನು ನೋಡಿ ಇನ್ನೂ ಹೆಚ್ಚು ಮನಕರಗುವೆನು. ಹಗಲಿನಷ್ಟು ಸ್ಫುಟವಾಗಿ ನನಗೆ ತಿಳಿಯುವ ಒಂದು ವಿಷಯ, ದುಃಖವೆಲ್ಲಾ ಅಜ್ಞಾನದಿಂದ ಜನಿಸುವುದು ಎಂಬುದು... ಅನಂತ ಪ್ರೇಮ ಮತ್ತು ಭೂತ ದಯೆಯಿಂದ ಕೂಡಿದ ನೂರಾರು ಬುದ್ಧರು ಬೇಕಾಗಿದ್ದಾರೆ. ಜಗದ ಧರ್ಮಗಳೆಲ್ಲ ನಿಸ್ತೇಜವಾಗಿ ನಗೆಗೀಡಾಗಿವೆ. ಜಗತ್ತಿಗೆ ಬೇಕಾಗಿರುವುದು ಶುದ್ಧ ಚಾರಿತ್ರ್ಯ... ನಮಗೆ ಇಂದು ಬೇಕಾಗಿರುವುಧು ಧೀರನುಡಿ, ಧೀರತರ ಕಾರ್ಯ. ಮಹಾ ವ್ಯಕ್ತಿಗಳೆ ಏಳಿ! ಜಾಗ್ರತರಾಗಿ! ಪ್ರಪಂಚ ದುಃಖದಲ್ಲಿ ಬೇಯುತ್ತಿದೆ.

'SAMVADA' Kannada Monthly. November 2004 RNI-KAR KAN/2002/9246 CPMG/KA/BGW-706/2003-

ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಸಮರ್ಥ ವಿಶ್ಲೇಷಣೆಗಾಗಿ

ವಿಚಾರಶೂನ್ಯವಾಗುತ್ತಿರುವ ಸಮಾಜದ ಜಾಗೃತಿಗಾಗಿ

ಎಲ್ಲ ಜನವರ್ಗಗಳ ಅಭಿವ್ಯಕ್ತಿ ವೇದಿಕೆಯಾಗಿ

ಇಂದೇ ಚಂದಾದಾರರಾಗಿ

ಸಂವಾದ

ಶೋಷಣೆ ಮುಕ್ತ ಸಮಾಜಕ್ಕಾಗಿ